ಬುಧವಾರ, ಜುಲೈ 7, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆಮಿಫೈನಲ್‌ಗೆ ಅರಿನಾ

ಲಂಡನ್‌ನಲ್ಲಿ ಮಂಗಳವಾರ ನಡೆದ ವಿಂಬಲ್ಡನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ವಿಜೇತರಾದ ಬೆಲಾರೂಸ್‌ನ ಅರಿನಾ ಸಬಲೆಂಕಾ ಅವರು ಸೆಮಿಫೈನಲ್ ಪ್ರವೇಶಿಸಿದರು

JGi JAIN DEEMED-TO-BE UNIVERSITY | ONLINE

30 Years of Educational Excellence

ಜೈನ್ ವಿಶ್ವವಿದ್ಯಾಲಯ

UGC Recognized Online Degree Programs

IT ALL ADDS UP

Live Online Sessions | Self Learning Material
Discussion Forums | Online Proctored Exams

MBA | M.Com | MCA | MA | BBA | B.Com

Rankings and Recognitions

National Assessment and Accreditation Council (NAAC) has awarded 'A+' Grade

JAIN (Deemed-to-be University) awarded Graded Autonomy by University Grants Commission (UGC)

nirf NATIONAL INSTITUTIONAL RANKING FRAME WORK
Ranked 85th in the Country

QS WORLD UNIVERSITY RANKINGS
Ranked 91-95 among the top Indian Universities

70+ Specializations | Accredited by Global Professional Bodies | Flexible Fee Payment | 2000+ Hiring Companies

Admissions Open
Scholarships Available
online.jainuniversity.ac.in
+91 88733 73316

ನಗರದಲ್ಲಿ 8.60 ಸೆಂ.ಮೀ ಮಳೆ • ತೇಲಿಹೋದ ಪೀಠೋಪಕರಣ, ವಾಹನಗಳು

ಮಳೆ ಅಬ್ಬರ: ತುಂಬಿ ಹರಿದ ಕಾಲುವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಗಾಲ ಆರಂಭವಾದ ದಿನದಿಂದಲೂ ಸಾಧಾರಣ ಪ್ರಮಾಣದಲ್ಲಿದ್ದ ಮಳೆಯ ಅಬ್ಬರ ಸೋಮವಾರ ರಾತ್ರಿ ಹೆಚ್ಚಾಗಿತ್ತು. ನಗರದ ಹಲವೆಡೆ ಕಾಲುವೆಗಳು ತುಂಬಿ ಹರಿದವು. ಕೆಲವೆಡೆ ಮನೆಗಳಿಗೂ ನೀರು ನುಗ್ಗಿ ನಿವಾಸಿಗಳು ತೊಂದರೆ ಅನುಭವಿಸಿದರು.

ನಗರದಲ್ಲಿ ಮೋಡ ಕವಿದ ವಾತಾವರಣ ಮುಂದುವರಿದಿದ್ದು, ಭಾನುವಾರ ರಾತ್ರಿಯೂ ಜೋರು ಮಳೆಯಾಗಿತ್ತು. ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಸೋಮವಾರ ರಾತ್ರಿ ಮಳೆ ಸುರಿದಿದೆ. ರಾತ್ರಿ ಶುರುವಾಗಿದ್ದ ಧಾರಾಕಾರ ಮಳೆ ಮಂಗಳವಾರ ಬೆಳಿಗ್ಗೆವರೆಗೂ ಇತ್ತು.

ಕಾಲುವೆ ಹಾಗೂ ರಾಜಕಾಲುವೆ ಹಾದುಹೋಗಿರುವ ಕೆಲ ಪ್ರದೇಶಗಳಲ್ಲಿ ನೀರು ಹೊಳೆಯಂತೆ ಹರಿಯಿತು. ರಸ್ತೆ ಮೇಲೂ ಅಪಾರ ಪ್ರಮಾಣದಲ್ಲಿ ನೀರು ನಿಂತಿತ್ತು. ರಾಜ್ಯ ಹೆದ್ದಾರಿಯಲ್ಲಿ ಹರಿಯುವ ನೀರಿನಲ್ಲೇ ವಾಹನಗಳು ಸಂಚರಿಸಿದವು.

ಮಲ್ಲೇಶ್ವರ, ರಾಜಾಜಿನಗರ, ವಿಜಯನಗರ, ಮೆಜೆಸ್ಟಿಕ್, ಗಾಂಧಿನಗರ, ಕೋರಮಂಗಲ, ಮಡಿವಾಳ, ಎಚ್‌ಎಸ್‌ಆರ್ ಲೇಔಟ್, ಜೆ.ಪಿ.ನಗರ, ಜಯನಗರ, ಬನಶಂಕರಿ, ಬಸವನಗುಡಿ, ಚಾಮರಾಜಪೇಟೆ, ಹೊಸಕೆರೆಹಳ್ಳಿ, ಕೆಂಗೇರಿ, ರಾಜರಾಜೇಶ್ವರಿನಗರ, ವಿದ್ಯಾರಣ್ಯಪುರ, ದೊಡ್ಡಬೊಮ್ಮಸಂದ್ರ, ಹೆಗ್ಗನಹಳ್ಳಿ, ನಾಗರಬಾವಿ, ಜ್ಞಾನಭಾರತಿ, ಯಲಹಂಕ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಆಗಿದೆ.

ನೆಲಕ್ಕುರುಳಿದ ಮರ, ಕೊಂಬೆಗಳು

ನಗರದ ವೈಟ್‌ಫೀಲ್ಡ್, ಎಚ್‌ಎಸ್‌ಆರ್ ಲೇಔಟ್, ಮಡಿವಾಳ, ವಿಜಯನಗರದಲ್ಲಿ ಮರಗಳು ನೆಲಕ್ಕುರುಳಿದ್ದವು. ರಾಜಾಜಿನಗರ, ಮಲ್ಲೇಶ್ವರ, ಯಶವಂತಪುರ, ಪೀಣ್ಯ, ದಾಸರಹಳ್ಳಿ, ರಾಜರಾಜೇಶ್ವರಿನಗರ, ಕೆಂಗೇರಿ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಮರದ ಕೊಂಬೆಗಳು ಬಿದ್ದಿದ್ದವು.

ಮರ ಹಾಗೂ ಕೊಂಬೆಗಳು ರಸ್ತೆ ಮೇಲೆಯೇ ಬಿದ್ದಿದ್ದರಿಂದ ಮಂಗಳವಾರ ನಸುಕಿನಲ್ಲಿ ವಾಹನಗಳ ಸಂಚಾರಕ್ಕೆ ತೊಂದರೆ ಆಗಿತ್ತು. ಸ್ಥಳೀಯರು ಮರ ಹಾಗೂ ಕೊಂಬೆ ತೆರವುಗೊಳಿಸಿ, ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟರು.

ಬೆಲ್ಲಾರ್ ಬಡಾವಣೆಯಲ್ಲಿ ಮನೆಗಳಿಗೆ ನುಗ್ಗಿದ ನೀರು: ದಾಸರಹಳ್ಳಿ, ಪೀಣ್ಯ, ಯಶವಂತಪುರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ನೀರು ಹರಿಯುವಿಕೆ ಕಂಡುಬಂತು. ಚೊಕ್ಕಸಂದ್ರ ವಾರ್ಡ್‌ನ ಬೆಲ್ಲಾರ್ ಬಡಾವಣೆಯಲ್ಲಿ ರಾಜಕಾಲುವೆ ಕಾಮಗಾರಿ ಪ್ರಗತಿಯಲ್ಲಿದೆ. ಅರ್ಧ ನಿರ್ಮಿಸಿದ್ದ ತಡೆಗೋಡೆ ಒಡೆದು, ಅದರ ನೀರು 15 ಮನೆಗಳಿಗೆ ನುಗ್ಗಿತು.

'ಕರೆಕೋಡಿ ಹಾಗೂ ನೆಲಗದರಹಳ್ಳಿ ಕಡೆಯಿಂದ ಎರಡು ಪ್ರತ್ಯೇಕ ರಾಜಕಾಲುವೆಗಳು ಬೆಲ್ಲಾರ್ ಬಡಾವಣೆ ಮೂಲಕ ಹರಿಯುತ್ತವೆ. ಈ ಪೈಕಿ ನೆಲಗದರಹಳ್ಳಿ ಕಡೆಯ ರಾಜಕಾಲುವೆ ಕಾಮಗಾರಿ ನಡೆಯುತ್ತಿದೆ' ಎಂದು ಸ್ಥಳೀಯ ನಿವಾಸಿ ರಂಗಸ್ವಾಮಿ ಹೇಳಿದರು.

'ಹಲವು ವರ್ಷಗಳಿಂದ ನಡೆಯುತ್ತಿರುವ ಕಾಮಗಾರಿ ಇದುವರೆಗೂ ಮುಗಿದಿಲ್ಲ. ಅರ್ಧ ನಿರ್ಮಿಸಿದ ತಡೆಗೋಡೆಯೂ ಒಡೆದುಹೋಗಿದೆ. ಬಿಬಿಎಂಪಿ ಅಧಿಕಾರಿಗಳ ನಿರ್ಲಕ್ಷ್ಯದಿಂದಲೇ ನೀರು ಮನೆಗಳಿಗೆ ನುಗ್ಗಿದೆ. ಕೆಲ ಮನೆಯ ಪೀಠೋಪಕರಣ ಹಾಗೂ ಇತರೆ ವಸ್ತುಗಳು ನೀರಿನಲ್ಲಿ ತೇಲಿ ಹೋಗಿವೆ' ಎಂದು ಅವರು ದೂರಿದರು.

ಮಂಗಳವಾರ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಆರ್. ಮಂಜುನಾಥ್, ಕಾಮಗಾರಿ ಬಗ್ಗೆ ಮಾಹಿತಿ ಪಡೆದುಕೊಂಡರು. ಆದಷ್ಟು ಬೇಗ ಕೆಲಸ ಮುಗಿಸುವಂತೆ ತಾಕೀತು ಮಾಡಿದರು.

ಬಿಬಿಎಂಪಿ ಅಧಿಕಾರಿಯೊಬ್ಬರು, 'ಕೆಲಸಕ್ಕೆ ಮಂಜೂರಾಗಿದ್ದ ಹಣ ಬಿಡುಗಡೆಯಾಗಿಲ್ಲ. ವಾಪಸು ಹೋಗಿದೆ. ಕೆಲ ತಾಂತ್ರಿಕ ಕಾರಣಗಳಿಂದ ಕಾಮಗಾರಿ ತಡವಾಗುತ್ತಿದೆ' ಎಂದರು.

ಆರ್. ಮಂಜುನಾಥ್, 'ರಾಜಕಾಲುವೆ ಕಾಮಗಾರಿಗೆ ಅಗತ್ಯ ಅನುದಾನ ನೀಡುವಂತೆ ಈ ಹಿಂದೆ ಮನವಿ ಮಾಡಿದ್ದೆ. ಬಿಬಿಎಂಪಿ ಆಯುಕ್ತರು ಸಹ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದರು. ದ್ವೇಷದ ರಾಜಕಾರಣದಿಂದ ಅನುದಾನ ಬಿಡುಗಡೆ ಮಾಡುತ್ತಿಲ್ಲ. ಈ ಬಗ್ಗೆ ಮತ್ತೊಮ್ಮೆ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದೇನೆ. ಅನುದಾನ ಬಿಡುಗಡೆ ಮಾಡದಿದ್ದರೆ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರ ನೇತೃತ್ವದಲ್ಲಿ ವಿಧಾನಸೌಧಕ್ಕೆ ಪಾದಯಾತ್ರೆ ಮಾಡಲಾಗುತ್ತದೆ' ಎಂದರು.

ಮೈಸೂರು ರಸ್ತೆಯಲ್ಲೂ ನೀರು: ರಾಜರಾಜೇಶ್ವರಿನಗರ, ಕೆಂಗೇರಿ, ದೀಪಾಂಜಲಿನಗರ, ನಾಯಂಡನಹಳ್ಳಿ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಜೋರು ಮಳೆ ಆಯಿತು. ವೃಷಭಾವತಿ ಕಾಲುವೆಯಲ್ಲಿ ನೀರು ಹೆಚ್ಚಿನ ಪ್ರಮಾಣದಲ್ಲಿ ಹರಿಯಿತು.

ರಾಜಕಾಲುವೆಗೆ ಸಂಪರ್ಕ ಕಲ್ಪಿಸುವ ಕಾಲುವೆಗಳಲ್ಲಿ ನೀರು ತುಂಬಿ ಹರಿಯಿತು. ಅಕ್ಕ- ಪಕ್ಕದ ಪ್ರದೇಶಗಳ ಮನೆಗಳಿಗೆ ನೀರು ನುಗ್ಗಿತ್ತು. ನಿವಾಸಿಗಳು ರಾತ್ರಿಯಿಡೀ ಮನೆಯೊಳಗಿನ ನೀರನ್ನು ಹೊರ ಹಾಕುವುದರಲ್ಲಿ ನಿರತರಾಗಿದ್ದರು. ಕೆಲ ರಸ್ತೆಗಳಲ್ಲಿ ಬೈಕ್, ಆಟೊ ಹಾಗೂ ಕಾರುಗಳು ಸಹ ನೀರಿನಲ್ಲಿ ಮುಳುಗಿದ್ದು ಕಂಡುಬಂತು.

'ರಸ್ತೆಯಲ್ಲಿ ಹರಿದ ನೀರು ಹಾಗೂ ಮನೆಗೆ ನುಗ್ಗಿದ ನೀರು ನೋಡಿ ಆತಂಕವಾಗಿತ್ತು. ಮಳೆಯ ನೀರು ಹರಿದುಹೋಗಲು ಕಾಲುವೆಯಲ್ಲಿ ಜಾಗವೇ ಇಲ್ಲ. ಹೀಗಾಗಿ, ನೀರು ಅಕ್ಕ-ಪಕ್ಕದ ಪ್ರದೇಶಗಳಿಗೆ ನುಗ್ಗುತ್ತಿದೆ' ಎಂದು ಸ್ಥಳೀಯರು ಹೇಳಿದರು.

'ಕಾಲುವೆಗಳ ಕಾಮಗಾರಿ ನಡೆಯುತ್ತಿದ್ದು, ಪೂರ್ಣಗೊಳ್ಳುವ ಲಕ್ಷಣಗಳು ಕಾಣಿಸುತ್ತಿಲ್ಲ. ಕೆಲವೆಡೆ, ಹೂಳು ತುಂಬಿಕೊಂಡಿದೆ' ಎಂದೂ ತಿಳಿಸಿದರು.

ವಾಹನಗಳಿಗೆ ಹುಡುಕಾಟ: ಕೆಂಗೇರಿ ಹಾಗೂ ರಾಜರಾಜೇಶ್ವರಿನಗರದಲ್ಲಿ ರಸ್ತೆ ಮೇಲೆ ನಿಲ್ಲಿಸಿದ್ದ ವಾಹನಗಳು ನೀರಿನೊಂದಿಗೆ ತೇಲಿ ಮುಂದಕ್ಕೆ ಹೋಗಿದ್ದವು. ನೀರಿನಲ್ಲಿ ನಿಂತಿದ್ದರಿಂದ ವಾಹನಗಳು ಕೆಟ್ಟಿದ್ದವು. ಅವುಗಳನ್ನು ತಳ್ಳಿಕೊಂಡೇ ನಿವಾಸಿಗಳು ದುರಸ್ತಿ ಕೇಂದ್ರಕ್ಕೆ ತೆಗೆದುಕೊಂಡು ಹೋದರು.

ಬೆಂಗಳೂರಿನಲ್ಲಿ ಸುರಿದ ಮಳೆ ಪ್ರಮಾಣ

(ಸೋಮವಾರ ರಾತ್ರಿ 8.30ರಿಂದ ಮಂಗಳವಾರ ಬೆಳಿಗ್ಗೆ 8.30ರವರೆಗೆ)



ಸುದ್ದಿ 2 ನಿಮಿಷ

ಮೆಹಬೂಬಾ ಮುಫ್ತಿ ತಾಯಿಗೆ ಜಾರಿ ನಿರ್ದೇಶನಾಲಯ ಸಮನ್ಸ್

ಶ್ರೀನಗರ (ಪಿಟಿಐ): ಅಕ್ರಮ ಹಣ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿದಂತೆ ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಅವರ ತಾಯಿ ಗುಲ್ಶನ್ ನಜೀರ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಸಮನ್ಸ್ ನೀಡಿದೆ. ಶ್ರೀನಗರದಲ್ಲಿರುವ ಕಚೇರಿಗೆ ಜುಲೈ 14ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಕ್ಷೇತ್ರಗಳ ಪುನರ್ ವಿಂಗಡಣಾ ಆಯೋಗವನ್ನು ಭೇಟಿ ಮಾಡದಿರಲು ಪಿಡಿಪಿ ನಿರ್ಧರಿಸಿದ ಬೆನ್ನಲ್ಲೇ ತಮ್ಮ ತಾಯಿಯವರಿಗೆ ಸಮನ್ಸ್ ನೀಡಿರುವ ಬಗ್ಗೆ ಮೆಹಬೂಬಾ ಮುಫ್ತಿ ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ಅಮಿತಾ ಪ್ರಸಾದ್ ನೇಮಕ

ಬೆಂಗಳೂರು: ಹುದ್ದೆ ನಿರೀಕ್ಷೆಯಲ್ಲಿದ್ದ ಹಿರಿಯ ಐಎಎಸ್ ಅಧಿಕಾರಿ ಡಾ. ಅಮಿತಾ ಪ್ರಸಾದ್ ಅವರನ್ನು ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಗೆ ನೇಮಿಸಲಾಗಿದೆ.

ವಂದಿತಾ ಶರ್ಮ ಅವರನ್ನು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯ ಹೆಚ್ಚುವರಿ ಪ್ರಭಾರದಿಂದ ಬಿಡುಗಡೆ ಮಾಡಲಾಗಿದೆ.

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ (ಕೆಯುಐಡಿಎಫ್‌ಸಿ) ವ್ಯವಸ್ಥಾಪಕ ಎಂ.ಟಿ. ರೇಜು ಅವರನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ (ಬಿಎಂಟಿಸಿ) ವ್ಯವಸ್ಥಾಪಕ ನಿರ್ದೇಶಕರನ್ನಾಗಿ ವರ್ಗಾವಣೆ ಮಾಡಲಾಗಿದೆ. ಸಿ. ಶಿಖಾ ಅವರನ್ನು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರ ಹೆಚ್ಚುವರಿ ಪ್ರಭಾರದಿಂದ ಬಿಡುಗಡೆ ಮಾಡಲಾಗಿದೆ. ರೇಜು ಅವರಿಗೆ ಕೆಯುಐಡಿಎಫ್‌ಸಿ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯ ಹೆಚ್ಚುವರಿ ಪ್ರಭಾರವನ್ನೂ ವಹಿಸಲಾಗಿದೆ.

ಸನ್ಮಾನ ರಾಷ್ಟ್ರೀಯ ವೈದ್ಯರ ದಿನದ ಅಂಗವಾಗಿ ಎಂಟನೇ ಮೈಲಿಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಾಸಕ ಆರ್.ಮಂಜುನಾಥ್ ಅವರು ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರನ್ನು ಸನ್ಮಾನಿಸಿದರು. ಬಿಬಿಎಂಪಿ ವಲಯ ಜಂಟಿ ಆಯುಕ್ತ ನರಸಿಂಹ ಮೂರ್ತಿ ಹಾಗೂ ಅಧಿಕಾರಿಗಳು ಇದ್ದರು.

ಕಾಂಗ್ರೆಸ್‌ನಿಂದ ಸೈಕಲ್ ಜಾಥಾ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಲೆ ಏರಿಕೆ ಸೇರಿದಂತೆ ಕೇಂದ್ರ ಹಾಗೂ ರಾಜ್ಯದ ಬಿಜೆಪಿ ಸರ್ಕಾರದ ಜನ ವಿರೋಧಿ ನೀತಿ ಖಂಡಿಸಿ ಬುಧವಾರ (ಜುಲೈ 7) ರಾಜ್ಯದ ಎಲ್ಲ 224 ಕ್ಷೇತ್ರಗಳಲ್ಲಿ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ 100 ನಾಟೌಟ್ ಎಂಬ ಕಾರ್ಯಕ್ರಮ ಹಮ್ಮಿಕೊಂಡಿದ್ದೆವು. ಈಗ ಸೈಕಲ್ ಜಾಥಾ ಹಮ್ಮಿಕೊಂಡಿದ್ದೇವೆ. ರಾಜ್ಯದ ಎಲ್ಲ ಭಾಗಗಳಲ್ಲೂ 5 ಕಿ.ಮೀಟರ್‌ನಷ್ಟು ದೂರ ಸೈಕಲ್ ತುಳಿಯುವ ಮೂಲಕ ಈ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ' ಎಂದರು.

'ಈ ಹಿಂದೆ ಬಿಜೆಪಿ ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ಪ್ರಧಾನಿ ನರೇಂದ್ರ ಮೋದಿಯವರಿಂದ ಹಿಡಿದು, ಸ್ಮೃತಿ ಇರಾನಿ, ಶೋಭಾ ಕರಂದ್ಲಾಜೆ ಸೇರಿದಂತೆ ರಾಜ್ಯ, ರಾಷ್ಟ್ರ ನಾಯಕರು ಸಿಲಿಂಡರ್ ತಲೆ ಮೇಲೆ ಇಟ್ಟುಕೊಂಡು ಬೀದಿ ಹೋರಾಟ ಮಾಡಿದ್ದರು. ವಾಜಪೇಯಿ ಒಮ್ಮೆ ಎತ್ತಿನ ಗಾಡಿಯಲ್ಲಿ ಸಂಸತ್‌ಗೆ ತೆರಳಿದ್ದರು. ಅವರು ಈ ಹಿಂದೆ ಏನು ಮಾಡಿದ್ದರು, ಈಗ ಅಧಿಕಾರಕ್ಕೆ ಬಂದ ಮೇಲೆ ಹೇಗೆ ನಡೆದುಕೊಳ್ಳುತ್ತಾರೆ ಎಂಬುದನ್ನು ಜನರಿಗೆ ತಿಳಿಸಬೇಕಾಗಿದೆ' ಎಂದು ಆಗ್ರಹಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ರಮೇಶ್ ಬಾಬು ಮಾತನಾಡಿ, 'ರಾಷ್ಟ್ರಪತಿ, ಪ್ರಧಾನಿ, ಸುಪ್ರೀಂ ಕೋರ್ಟ್ ಕಚೇರಿಗಳು ಮಾಹಿತಿ ಹಕ್ಕು ವ್ಯಾಪ್ತಿಗೆ ಬರುತ್ತವೆ. ವಜುಭಾಯಿ ವಾಲಾ ಅವರು ರಾಜ್ಯಪಾಲರಾದ ಬಳಿಕ ಆಗಿರುವ ವೆಚ್ಚದ ಬಗ್ಗೆ ಮಾಹಿತಿ ಹಕ್ಕಿನಡಿ ಅರ್ಜಿ ಹಾಕಿದ್ದೆವು. ಆದರೆ, ನಮ್ಮ ಅರ್ಜಿಗೆ ರಾಜ್ಯಪಾಲರ ಕಚೇರಿ, ರಾಜ್ಯಪಾಲರ ಪದ ಬಳಕೆ ಸಾರ್ವಜನಿಕ ಪರಿಭಾಷೆ ವ್ಯಾಪ್ತಿಯಲ್ಲಿ ಬರುತ್ತದೆಯೋ ಇಲ್ಲವೋ ಎಂಬ ವಿಚಾರವಾಗಿ ಕರ್ನಾಟಕ ಮಾಹಿತಿ ಹಕ್ಕಿನ ಆಯೋಗದಲ್ಲಿ ವಿಚಾರಣೆ ಬಾಕಿ ಇರುವುದರಿಂದ ಯಾವುದೇ ಮಾಹಿತಿ ನೀಡಲು ಸಾಧ್ಯವಿಲ್ಲವೆಂದು ಉತ್ತರಿಸಿದೆ' ಎಂದರು.

'ಯಾವುದೇ ಒಂದು ಪ್ರಕರಣ ವಿಲೇವಾರಿ ಮಾಡದೇ ಅದನ್ನು ಮುಂದಿಟ್ಟುಕೊಂಡು ರಾಜ್ಯಪಾಲರ ಕಚೇರಿಯನ್ನು ಮಾಹಿತಿ ಹಕ್ಕಿನ ವ್ಯಾಪ್ತಿಯಿಂದ ಹೊರಗಿಡುವ ಪ್ರಯತ್ನ ಮಾಡಬಾರದು ಎಂದು ರಾಜ್ಯ ಮಾಹಿತಿ ಹಕ್ಕು ಆಯೋಗಕ್ಕೆ ಮನವಿ ಮಾಡುತ್ತೇನೆ. ಇದಕ್ಕೆ ಅವಕಾಶ ಮಾಡಿಕೊಡದಿದ್ದರೆ ಹೈಕೋರ್ಟ್‌ನಲ್ಲಿ ಕಾನೂನು ಹೋರಾಟ ಮಾಡಲಾಗುವುದು' ಎಂದರು.

'ಪರಿಹಾರ ಮೊತ್ತದಲ್ಲಿ ಭೇದ ಮಾಡಲಾಗದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಾಮರಾಜನಗರ ಜಿಲ್ಲಾ ಆಸ್ಪತ್ರೆಯ ಆಮ್ಲಜನಕ ದುರಂತದಲ್ಲಿ ಮೃತಪಟ್ಟ ಕೋವಿಡ್ ಸೋಂಕಿತರ ಕುಟುಂಬಗಳಿಗೆ ಭಿನ್ನ ಮೊತ್ತದ ಪರಿಹಾರ ನೀಡುವುದನ್ನು ಒಪ್ಪಲಾಗದು' ಎಂದು ಹೈಕೋರ್ಟ್ ಹೇಳಿದೆ.

2021ರ ಮೇ 2ರ ರಾತ್ರಿ 10.30ರಿಂದ ಮೇ 3ರ ಬೆಳಗಿನ ಜಾವ 2.30 ಗಂಟೆಯ ಅವಧಿಯಲ್ಲಿ ಮೃತಪಟ್ಟ ಮೂವರ ಕುಟುಂಬಗಳಿಗೆ ಮಾತ್ರ ₹5 ಲಕ್ಷ ಪರಿಹಾರ ನೀಡಲಾಗುವುದು ಎಂದು ಸರ್ಕಾರ ನ್ಯಾಯಾಲಯಕ್ಕೆ ವಿವರಣೆ ಸಲ್ಲಿಸಿದೆ.

'ಮೇ 3 ರ ಬೆಳಗಿನ ಜಾವ 2.21 ರಿಂದ ಬೆಳಿಗ್ಗೆ 9 ಗಂಟೆಯ ಅವಧಿಯಲ್ಲಿ ಮೃತಪಟ್ಟ 10 ಸೋಂಕಿತರ ಕುಟುಂಬಗಳಿಗೆ ₹2 ಲಕ್ಷ. ಪರಿಹಾರವನ್ನಷ್ಟೇ ನೀಡಲು ನಿರ್ಧರಿಸಲಾಗಿದೆ. ಮೇ 2ರಂದು ರಾತ್ರಿ 10.30ಕ್ಕೂ ಮೊದಲು ಮೃತಪಟ್ಟ 11 ಜನರ ಕುಟುಂಬಕ್ಕೂ ಈಗಾಗಲೇ ₹2 ಲಕ್ಷ ಪಾವತಿಸಲಾಗಿದೆ. ನ್ಯಾಯಮೂರ್ತಿ ಬಿ.ಎ. ಪಾಟೀಲ ಅವರು ತನಿಖಾ ವರದಿ ಸಲ್ಲಿಸಿದ ಬಳಿಕ ಆ ಕುಟುಂಬಗಳಿಗೆ ಹೆಚ್ಚುವರಿ ಪರಿಹಾರ ನೀಡುವ ಬಗ್ಗೆ ನಿರ್ಧರಿಸಲಾಗುವುದು' ಎಂದು ಎಜಿ ಪ್ರಭುಲಿಂಗ ಕೆ. ನಾವಡಗಿ ವಿವರಿಸಿದರು.

'ಆಮ್ಲಜನಕ ಕೊರತೆಯಿಂದಲೇ ಸೋಂಕಿತರು ಮೃತಪಟ್ಟಿದ್ದಾರೆ ಎಂಬುದನ್ನು ಕಾನೂನು ಸೇವೆಗಳ ಪ್ರಾಧಿಕಾರದ ಸಮಿತಿ ಎತ್ತಿ ತೋರಿಸಿದೆ. ಪರಿಹಾರ ನೀಡುವಾಗ ಎಲ್ಲರನ್ನೂ ಸಮಾನವಾಗಿ ಪರಿಗಣಿಸಬೇಕಾಗುತ್ತದೆ' ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾಯಮೂರ್ತಿ ಅರವಿಂದ ಕುಮಾರ್ ಅವರಿದ್ದ ವಿಭಾಗೀಯ ಪೀಠ ಹೇಳಿತು.

ಸಿಬಿಎಸ್‌ಇ: 10, 12ನೇ ತರಗತಿ ಫಲಿತಾಂಶ ಸಿದ್ಧಪಡಿಸುವ ಶಾಲೆಗಳಲ್ಲಿ ಹಠಾತ್ ತಪಾಸಣೆ

ನವದೆಹಲಿ (ಪಿಟಿಐ): 10 ಮತ್ತು 12 ನೇ ತರಗತಿಗಳ ಫಲಿತಾಂಶ ಸಿದ್ಧಪಡಿಸುವ ಶಾಲೆಗಳಲ್ಲಿ ಹಠಾತ್ ತಪಾಸಣೆ ನಡೆಸುವಂತೆ ತನ್ನ ಪ್ರಾದೇಶಿಕ ಕಚೇರಿಗಳಿಗೆ ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) ನಿರ್ದೇಶನ ನೀಡಿದೆ. ಮೌಲ್ಯಮಾಪನ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಪ್ರಕ್ರಿಯೆ ಖಚಿತಪಡಿಸಿಕೊಳ್ಳುವಂತೆ ಅದು ಸೂಚಿಸಿದೆ.

'ಸಿಬಿಎಸ್‌ಇ ಹೊರಡಿಸಿದ ನೀತಿಯನ್ನು ಶಾಲೆಗಳು ಪರಿಣಾಮಕಾರಿಯಾಗಿ ಜಾರಿಗೊಳಿಸುತ್ತಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು, ತಮ್ಮ ವ್ಯಾಪ್ತಿಗೆ ಒಳಪಡುವ ಶಾಲೆಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಲು ಪ್ರಾದೇಶಿಕ ಕಚೇರಿಗಳ ಅಧಿಕಾರಿಗಳಿಗೆ ಪತ್ರ ಬರೆದು ಸೂಚಿಸಲಾಗಿದೆ' ಎಂದು ಸಿಬಿಎಸ್‌ಇ ಪರೀಕ್ಷಾ ನಿಯಂತ್ರಕ ಸನ್ಯಂ ಭಾರದ್ವಾಜ್ ತಿಳಿಸಿದ್ದಾರೆ.

ಕೆರೆ ಅಭಿವೃದ್ಧಿಗಾಗಿ ಆರ್ಥಿಕ ನೆರವು: ಕೇಂದ್ರಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ಗ್ರಾಮೀಣ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿರುವ ಕೆರೆಗಳ ಹೂಳೆತ್ತುವುದಕ್ಕೆ ವಿಶೇಷ ಆರ್ಥಿಕ ನೆರವು ನೀಡುವಂತೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ಕೇಂದ್ರ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಮಂಗಳವಾರ ಇಲ್ಲಿ ಕೇಂದ್ರದ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರನ್ನು ಭೇಟಿ ಮಾಡಿ ಈ ಕುರಿತ ಮನವಿ ಸಲ್ಲಿಸಿದ ಅವರು, ಬರ ಪೀಡಿತವಾದ ಈ ಜಿಲ್ಲೆಗಳಲ್ಲಿ ಫ್ಲೋರೈಡ್ ಯುಕ್ತ ಅಂತರ್ಜಲದ ಅವಲಂಬನೆಯನ್ನು ತಪ್ಪಿಸುವ ನಿಟ್ಟಿನಲ್ಲಿ ಮಳೆ ನೀರನ್ನು ಸಂಗ್ರಹಿಸಲು ನೆರವಾಗಬೇಕು ಎಂದರು.

ಈ ಜಿಲ್ಲೆಗಳ ಜನತೆಗೆ ಆಂಧ್ರದಿಂದ ಕೃಷ್ಣಾ ನದಿಯ ನೀರನ್ನು ಕುಡಿಯಲು ಪೂರೈಸುವುದಕ್ಕೆ ಕ್ರಮ ಕೈಗೊಳ್ಳಬೇಕು. ಗಡಿ ಜಿಲ್ಲೆಗಳ ಜನರ ನೆರವಿಗೆ ಬರುವಂತೆ ಆಂಧ್ರಪ್ರದೇಶ ಸರ್ಕಾರದೊಂದಿಗೆ ಅಗತ್ಯವಿರುವ ಮಾತುಕತೆಗೆ ಮಧ್ಯಸ್ಥಿಕೆ ವಹಿಸುವಂತೆಯೂ ಅವರು ಕೋರಿದರು.

ರಾಜ್ಯದ ನೀರಾವರಿ ಯೋಜನೆಗಳಿಗೆ ಹಣಕಾಸಿನ ನೆರವು ನೀಡಬೇಕು. ಬರಪೀಡಿತ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸಲು ಕೈಗೆತ್ತಿಕೊಳ್ಳಲಾದ ಎತ್ತಿನಹೊಳೆ ಯೋಜನೆಗೆ ರಾಷ್ಟ್ರೀಯ ಯೋಜನೆ ಸ್ಥಾನಮಾನ ನೀಡಬೇಕು ಎಂದು ಅವರು ಮನವಿ ಮಾಡಿದರು.

ನಂತರ ಕೇಂದ್ರದ ಆರೋಗ್ಯ ಸಚಿವ ಹರ್ಷವರ್ಧನ್ ಅವರನ್ನು ಭೇಟಿ ಮಾಡಿದ ಡಾ.ಸುಧಾಕರ್, ರಾಜ್ಯದ ವಿವಿಧೆಡೆ ನಿಮ್ಹಾನ್ಸ್ ಹಾಗೂ ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಗಳ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಲಸಿಕೆ ವಿತರಣೆಗೆ ಮನವಿ: ನೀತಿ ಆಯೋಗದ ಸದಸ್ಯ ವಿ.ಕೆ. ಪಾಲ್ ಅವರನ್ನು ನಂತರ ಭೇಟಿ ಮಾಡಿ ಸಾರ್ವಜನಿಕ ಆರೋಗ್ಯ ನೀತಿಯ ಕುರಿತು ಚರ್ಚಿಸಿದ ಸಚಿವರು, ರಾಜ್ಯಕ್ಕೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕೋವಿಡ್ ಲಸಿಕೆ ವಿತರಣೆಗೆ ಕ್ರಮ ಕೈಗೊಳ್ಳುವಂತೆ ಕೋರಿದರು.

ಕೆಂಪೇಗೌಡರ ಕಾಲದ 46 ಪಾರಂಪರಿಕ ತಾಣ

'₹ 223 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಂಪೇಗೌಡರ ಕಾಲದ 46 ಪಾರಂಪರಿಕ ತಾಣಗಳನ್ನು ₹223 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಂಗಳವಾರ ಮಾತನಾಡಿದ ಅವರು, 'ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಗಳಲ್ಲಿರುವ ಐತಿಹಾಸಿಕ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಪರಿಕಲ್ಪನಾ ಯೋಜನಾ ವರದಿ ಸಿದ್ಧಪಡಿಸಲಾಗಿದೆ' ಎಂದರು.

'ಮೂರು ಸರ್ಕ್ಯೂಟ್‌ಗಳಲ್ಲಿ ಈ ಸ್ಥಳಗಳನ್ನು ಗುರುತಿಸಲಾಗಿದ್ದು, ₹ 132 ಕೋಟಿ ವೆಚ್ಚದಲ್ಲಿ ಮಾಗಡಿ ಸರ್ಕ್ಯೂಟ್, ₹ 47 ಕೋಟಿ ವೆಚ್ಚದಲ್ಲಿ ಬೆಂಗಳೂರು ಸರ್ಕ್ಯೂಟ್, ₹ 44 ಕೋಟಿ ವೆಚ್ಚದಲ್ಲಿ ನಂದಿ ಸರ್ಕ್ಯೂಟ್ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದೆ' ಎಂದರು.

ಮುಖ್ಯಾಂಶಗಳು
- ಮೂರು ಸರ್ಕ್ಯೂಟ್‌ಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ
- ಐದು ಜಿಲ್ಲೆಗಳ ವ್ಯಾಪ್ತಿಯಲ್ಲಿ ಯೋಜನೆ ಜಾರಿ



ಯಡಿಯೂರಪ್ಪ

'ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ₹ 64 ಕೋಟಿ ವೆಚ್ಚದಲ್ಲಿ 108 ಅಡಿ ಎತ್ತರದ ಕೆಂಪೇಗೌಡರ ಕಂಚಿನ ಪ್ರತಿಮೆ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಈ ಪ್ರತಿಮೆಯ ಸುತ್ತ ಥೀಮ್ ಪಾರ್ಕ್ ನಿರ್ಮಿಸಲು ಯೋಜನೆ ರೂಪಿಸಲಾಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ರಾಮನಗರ ಜಿಲ್ಲೆಯ ಕೆಂಪಾಪುರ ಗ್ರಾಮದಲ್ಲಿ ಕೆಂಪೇಗೌಡರ ವೀರ ಸಮಾಧಿ ಅಭಿವೃದ್ಧಿಗೆ ಭೂಸ್ವಾಧೀನ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ₹32 ಕೋಟಿ ವೆಚ್ಚದಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದ್ದು, ಜಮೀನು ಕಳೆದುಕೊಳ್ಳುವ 46 ಕುಟುಂಬಗಳಿಗೆ ಪುನರ್ವಸತಿ, ರಸ್ತೆ ಅಭಿವೃದ್ಧಿ ಮತ್ತಿತರ ಮೂಲಸೌಕರ್ಯ ಒದಗಿಸಲು ವ್ಯವಸ್ಥಿತ ಯೋಜನೆ ರೂಪಿಸಬೇಕು' ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಲಹೆ ನೀಡಿದರು.

ಕೆಂಪೇಗೌಡರ ಜೀವನಾಧಾರಿತ ಪುಸ್ತಕ, ಕಿರುಚಿತ್ರ ಸಿದ್ಧಪಡಿಸಲು ಹಾಗೂ ಕೆಂಪೇಗೌಡರ ಆಡಳಿತಾವಧಿಯ ಕೋಟೆಗಳು, ಕೆರೆಗಳು ಮತ್ತು ಪಾರಂಪರಿಕ ತಾಣಗಳನ್ನು ಪ್ರವಾಸೋದ್ಯಮ ಇಲಾಖೆ, ಸಣ್ಣ ನೀರಾವರಿ, ಬಿಬಿಎಂಪಿ, ಲೋಕೋಪಯೋಗಿ ಇಲಾಖೆ, ಧಾರ್ಮಿಕ ದತ್ತಿ ಇಲಾಖೆ, ಅರಣ್ಯ, ತೋಟಗಾರಿಕೆ ಮತ್ತಿತರ ಇಲಾಖೆಗಳ ಸಹಯೋಗದೊಂದಿಗೆ ಪ್ರವಾಸಿ ತಾಣಗಳಾಗಿ ಅಭಿವೃದ್ಧಿಪಡಿಸಲು ಯೋಜನೆ ಸಿದ್ಧಪಡಿಸುವಂತೆಯೂ ಅವರು ಸೂಚಿಸಿದರು.

ಸಂತ್ರಸ್ತರ ಮನೆ ನಿರ್ಮಾಣಕ್ಕೆ ಹಣ ಬಿಡುಗಡೆ: ಅಶೋಕ

ಪ್ರಜಾವಾಣಿ ವಾರ್ತೆ

ಮಡಿಕೇರಿ: 'ರಾಜ್ಯದಲ್ಲಿ 2019 ಹಾಗೂ 2020ನೇ ಸಾಲಿನಲ್ಲಿ ಪ್ರವಾಹದಿಂದ ಸಂತ್ರಸ್ತರಾದವರ ಮನೆ ನಿರ್ಮಾಣಕ್ಕೆ ಎರಡು ಹಾಗೂ ಮೂರನೇ ಕಂತಿನ ಹಣ ಪಾವತಿಸಲು, ₹ 80 ಕೋಟಿಯನ್ನು ಈ ವಾರ ಬಿಡುಗಡೆ ಮಾಡಲಾಗುವುದು' ಎಂದು ಕಂದಾಯ ಸಚಿವ ಆರ್.ಅಶೋಕ ಇಲ್ಲಿ ಮಂಗಳವಾರ ಭರವಸೆ ನೀಡಿದರು.

'ಕಂದಾಯ ಇಲಾಖೆ ಮೂಲಕವೇ ಸಂತ್ರಸ್ತರ ಮನೆ ನಿರ್ಮಾಣಕ್ಕೆ ಹಣ ಪಾವತಿಸಲಾಗುತ್ತಿತ್ತು. ಆದರೆ, ಆಯಾ ಜಿಲ್ಲಾಧಿಕಾರಿಗಳಿಗೆ ಕೆಲಸದ ಒತ್ತಡವಿದ್ದ ಕಾರಣಕ್ಕೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಈ ಜವಾಬ್ದಾರಿ ವಹಿಸಲಾಗಿತ್ತು. ತಕ್ಷಣವೇ ನಿಗಮಕ್ಕೆ ಅನುದಾನ ಬಿಡುಗಡೆ ಮಾಡಲಾಗುವುದು' ಎಂದು ಪ್ರಗತಿ ಪರಿಶೀಲನಾ ಸಭೆಯಲ್ಲಿ ಹೇಳಿದರು.

'ಪ್ರಜಾವಾಣಿ'ಯ ಭಾನುವಾರದ ಸಂಚಿಕೆಯಲ್ಲಿ 'ಪ್ರಗತಿ ಕಾಣದ ಪುನರ್ವಸತಿ' ಹಾಗೂ 'ಇನ್ನೂ ಕೈಸೇರಿಲ್ಲ ಪರಿಹಾರ ಹಣ' ಎಂಬ ವರದಿಗಳು ಒಳನೋಟದಲ್ಲಿ ಪ್ರಕಟವಾಗಿದ್ದವು.

'ಭೂಪರಿವರ್ತನೆ ಕಡತ ವಿಲೇವಾರಿ ಮಾಡಲು ರಾಜ್ಯದ ಬಹುತೇಕ ಜಿಲ್ಲಾಧಿಕಾರಿಗಳು ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆ. ಭೂಪರಿವರ್ತನೆ ಮಾಡದಿರುವ ಕಾರಣಕ್ಕೆ ಆದಾಯವೂ ಬರುತ್ತಿಲ್ಲ. ಮೂರು ತಿಂಗಳ ಒಳಗೆ ಕಡತ ವಿಲೇವಾರಿ ಮಾಡಬೇಕು. ವಿಳಂಬ ಮಾಡುತ್ತಿರುವ ಕಾರಣಕ್ಕೆ ಕೈಗಾರಿಕೆಗಳೂ ಅನ್ಯ ರಾಜ್ಯದ ಪಾಲಾಗುತ್ತಿವೆ. ವಿಳಂಬ ಮಾಡಿದರೆ ಭೂಪರಿವರ್ತನೆ ಪದವನ್ನೇ ಬದಲಾವಣೆ ಮಾಡಬೇಕಾಗಬಹುದು' ಎಂದು ಆಕ್ರೋಶ ಹೊರಹಾಕಿದರು.

ಅಧಿಕಾರಿ ನೇಮಕ ಯಾವಾಗ: ದೆಹಲಿ ಹೈಕೋರ್ಟ್ ಪ್ರಶ್ನೆ

ನವದೆಹಲಿ (ಪಿಟಿಐ): ಮಾಹಿತಿ ತಂತ್ರಜ್ಞಾನದ ಹೊಸ ನಿಯಮಗಳ ಪ್ರಕಾರ, ಕುಂದುಕೊರತೆ ಅಧಿಕಾರಿಯನ್ನು (ಆರ್‌ಜಿಒ) ಯಾವಾಗ ನೇಮಕ ಮಾಡಿಕೊಳ್ಳಲಾಗುವುದು ಎಂಬ ಬಗ್ಗೆ ಗುರುವಾರದೊಳಗೆ (ಜುಲೈ 8) ಮಾಹಿತಿ ನೀಡುವಂತೆ ಟ್ವಿಟರ್ ಸಂಸ್ಥೆಗೆ ದೆಹಲಿ ಹೈಕೋರ್ಟ್ ಮಂಗಳವಾರ ಸೂಚನೆ ನೀಡಿದೆ. ಈ ಪ್ರಕ್ರಿಯೆ ಜಾರಿಯಲ್ಲಿದೆ ಎಂದು ಟ್ವಿಟರ್ ನೀಡಿದ ಹೇಳಿಕೆಗೆ ಹೈಕೋರ್ಟ್ ಈ ಪ್ರಶ್ನೆ ಕೇಳಿದೆ.

ತಾತ್ಕಾಲಿಕ ಆಧಾರದಲ್ಲಿ ಕುಂದುಕೊರತೆ ಅಧಿಕಾರಿ ನೇಮಕ ಮಾಡುವ ಮೂಲಕ ಟ್ವಿಟರ್ ಸಂಸ್ಥೆಯು ಕೋರ್ಟ್‌ಗೆ ತಪ್ಪು ಮಾಹಿತಿ ರವಾನಿಸಿದೆ ಎಂದು ಹೈಕೋರ್ಟ್ ಹೇಳಿತು.

'ಕುಂದುಕೊರತೆ ಅಧಿಕಾರಿಯನ್ನು ನೇಮಕ ಮಾಡಿದ ವಿಷಯವನ್ನು ಗಮನಕ್ಕೆ ತಂದಿದ್ದರೂ, ಆ ನೇಮಕಾತಿಯು ತಾತ್ಕಾಲಿಕ ಆಧಾರದಲ್ಲಿದೆ ಎಂಬ ಮಾಹಿತಿಯನ್ನು ನೀಡಿಲ್ಲ' ಎಂದು ಕೋರ್ಟ್ ಹೇಳಿತು. ಅಧಿಕಾರಿಯು ಈಗಾಗಲೇ ರಾಜೀನಾಮೆ ನೀಡಿದ್ದಾರೆ ಎಂಬ ವಿಷಯವನ್ನು ನ್ಯಾಯಮೂರ್ತಿ ರೇಖಾ ಪಲ್ಲಿ ಅವರು ಉಲ್ಲೇಖಿಸಿದರು.

'ಅಧಿಕಾರಿಯು ಜೂನ್ 21ರಂದು ರಾಜೀನಾಮೆ ನೀಡಿದರೆ, 15 ದಿನಗಳಲ್ಲಿ ಇನ್ನೊಬ್ಬ ಅಧಿಕಾರಿಯನ್ನು ಟ್ವಿಟರ್ ನೇಮಿಸಬಹುದಿತ್ತು. ಏಕೆಂದರೆ, ಈ ವಿಷಯವು ಜುಲೈ 6ರಂದು ವಿಚಾರಣೆಗೆ ಬರಲಿದೆ ಎಂಬುದು ನಿಮಗೆ ತಿಳಿದಿತ್ತು. ಐ.ಟಿ. ನಿಯಮ ಪಾಲನೆ ವಿಷಯದಲ್ಲಿ ನಮಗೆ ಕಳವಳವಿದೆ. ನಿಮ್ಮ ಪ್ರಕ್ರಿಯೆಯು ಎಷ್ಟು ಸಮಯ ತೆಗೆದುಕೊಳ್ಳುತ್ತದೆ? ಬಯಸಿದಷ್ಟು ಸಮಯ ತೆಗೆದುಕೊಳ್ಳಬಹುದು ಎಂದು ಟ್ವಿಟರ್ ಭಾವಿಸಿದರೆ, ನಾನು ಅದಕ್ಕೆ ಅನುಮತಿ ನೀಡುವುದಿಲ್ಲ' ಎಂದು ನ್ಯಾಯಮೂರ್ತಿ ಹೇಳಿದರು.

ನೇಮಕಾತಿ ಪ್ರಕ್ರಿಯೆಯಲ್ಲಿ ಟ್ವಿಟರ್ ತೊಡಗಿದ್ದರೂ, ಇಲ್ಲಿಯವರೆಗೆ ನಿಯಮ ಪಾಲನೆ ಅಧಿಕಾರಿ, ಆರ್‌ಜಿಒ ಮತ್ತು ನೋಡಲ್ ಸಂಪರ್ಕ ವ್ಯಕ್ತಿ ಇಲ್ಲ ಎಂಬುದು ನಿಜ ಎಂದು ಟ್ವಿಟರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಸಜನ್ ಪೂವಯ್ಯ ತಿಳಿಸಿದರು.

'ಹೌದು, ನ್ಯಾಯಾಲಯ ಹೇಳಿದಂತೆ, ಟ್ವಿಟರ್ ಸಂಸ್ಥೆಯು ನಿಯಮಗಳನ್ನು ಅನುಸರಿಸುತ್ತಿಲ್ಲ. ಆದರೆ ಅಧಿಕಾರಿಯನ್ನು ನೇಮಿಸುವ ಪ್ರಕ್ರಿಯೆಯಲ್ಲಿ ತೊಡಗಿದೆ. ಟ್ವಿಟರ್ ಸಂಸ್ಥೆಯು ನಿಯಮಗಳನ್ನು ಖಂಡಿತ ಅನುಸರಿಸುತ್ತದೆ. ದಯವಿಟ್ಟು ಒಂದಿಷ್ಟು ಸಮಯ ನೀಡಿ' ಎಂದು ಪೂವಯ್ಯ ಮನವಿ ಮಾಡಿದರು.

ಫೆಬ್ರವರಿ 25ರಂದು ನಿಯಮಗಳನ್ನು ಪ್ರಕಟಿಸಲಾಗಿತ್ತು. ಅವುಗಳನ್ನು ಪಾಲಿಸಲು ಮೂರು ತಿಂಗಳ ಕಾಲಾವಕಾಶ ನೀಡಲಾಗಿತ್ತು. ಇದು ಮೇ 25ಕ್ಕೆ ಮುಕ್ತಾಯಗೊಂಡಿದೆ ಎಂದು ಕೇಂದ್ರವನ್ನು ಪ್ರತಿನಿಧಿಸುವ ಹೆಚ್ಚುವರಿ ಸಾಲಿಸಿಟರ್ ಜನರಲ್ ಚೇತನ್ ಶರ್ಮಾ ಹೇಳಿದರು.

'ಇಂದು ಜುಲೈ 6. ಅಂದರೆ 42 ದಿನ ಕಳೆದರ ಮೇಲೂ ನಿಯಮ ಪಾಲನೆ ಆಗಿಲ್ಲ. ಭಾರತದಲ್ಲಿ ವ್ಯಾಪಾರ ಮಾಡಲು ಅವರಿಗೆ ಸ್ವಾಗತವಿದೆ. ಆದರೆ ಇಲ್ಲಿನ ಕಾನೂನುಗಳಿಗೆ ಗೌರವ ಕೊಡದ ಈ ವರ್ತನೆ ಸರಿಯಲ್ಲ' ಎಂದು ಅವರು ವಾದಿಸಿದರು.

ಅರ್ಜಿಗಳ ವರ್ಗಾವಣೆಗೆ ಮನವಿ

ಹೊಸ ಐಟಿ ನಿಯಮಗಳ ಸಿಂಧುತ್ವ ಪ್ರಶ್ನಿಸಿ ವಿವಿಧ ಹೈಕೋರ್ಟ್‌ಗಳಲ್ಲಿ ಸಲ್ಲಿಕೆಯಾಗಿರುವ ಎಲ್ಲ ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸುವಂತೆ ಕೋರಿ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

ಹೊಸ ನಿಯಮಗಳ ಪ್ರಕಾರ, ಭಾರತದಲ್ಲಿ ದೂರು ಪರಿಹಾರ ವ್ಯವಸ್ಥೆಯನ್ನು ಸಾಮಾಜಿಕ ಮಾಧ್ಯಮ ಸಂಸ್ಥೆಗಳು ಜಾರಿಗೆ ತರಬೇಕಾಗುತ್ತದೆ. ಕುಂದುಕೊರತೆ ಅಧಿಕಾರಿ ನೇಮಿಸಬೇಕಿದೆ. ಪ್ರತಿ ತಿಂಗಳು ದೂರು ಸ್ಪಂದನೆ ವರದಿಯನ್ನು ಕೇಂದ್ರಕ್ಕೆ ಸಲ್ಲಿಸಬೇಕಿದೆ.

ಸ್ಪಷ್ಟ ಸೂಚನೆಯೊಂದಿಗೆ ವಿಚಾರಣೆಗೆ ಬನ್ನಿ. ಇಲ್ಲದಿದ್ದರೆ ನೀವು (ಟ್ವಿಟರ್ ಸಂಸ್ಥೆ) ತೊಂದರೆಯಲ್ಲಿ ಸಿಲುಕಿಕೊಳ್ಳುವಿರಿ. ನಿಮ್ಮ ನಿಲುವು ಏನೆಂದು ತಿಳಿಸಿ

ದೆಹಲಿ ಹೈಕೋರ್ಟ್

ಸರ್ಕಾರಿ ಸ್ವತ್ತಿಗೆ ₹ 4.24 ಕೋಟಿ ಪರಿಹಾರ: ಸಿಸಿಬಿ ತನಿಖೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವತ್ತಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಟ್ರಸ್ಟ್ ಜಾಗವೆಂದು ಹೇಳಿ ₹ 4.24 ಕೋಟಿ ಪರಿಹಾರ ಪಡೆದು ಸರ್ಕಾರವನ್ನೇ ವಂಚಿಸಿರುವ ಆರೋಪ ಕೇಳಿಬಂದಿದ್ದು, ಈ ಬಗ್ಗೆ ನಗರದ ಸಿಸಿಬಿ ಪೊಲೀಸರು ತನಿಖೆ ಆರಂಭಿಸಿದ್ದಾರೆ.

'ವಂಚನೆ ಬಗ್ಗೆ ಅಮೃತಹಳ್ಳಿಯ ಎಚ್.ಜಿ. ಲಕ್ಷ್ಮಿ ಎಂಬುವರು ದೂರು ನೀಡಿದ್ದಾರೆ. ಚಿನ್ನಪ್ಪನಹಳ್ಳಿಯ ಪಿ. ಕಮಲಮ್ಮ, ಟಿ. ಮುರುಳೀಧರ್, ವಿ. ಲತಾ, ಟಿ. ವಿಜಯ್‌ಕುಮಾರ್, ಅನಿತಾ, ಟಿ. ಉಮಾಶಂಕರ್ ಹಾಗೂ ಟಿ. ಪ್ರತಿಭಾ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಕರಣವು ಗಂಭೀರವಾಗಿದ್ದು, ತನಿಖೆಯನ್ನು ಸಿಸಿಬಿಗೆ ವಹಿಸಲಾಗಿದೆ. ಸಿಸಿಬಿ ವಿಶೇಷ ತಂಡವೇ ತನಿಖೆ ಆರಂಭಿಸಿದೆ' ಎಂದೂ ತಿಳಿಸಿವೆ.

ಆಗಿದ್ದೇನು: 'ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿಯ ಚಿನ್ನಪ್ಪನಹಳ್ಳಿಯ ಸರ್ವೆ ನಂಬರ್ -35ರಲ್ಲಿ 14 ಗುಂಟೆ ಜಾಗವಿದ್ದು, ಅದೇ ಸ್ಥಳದಲ್ಲಿ ಆಂಜನೇಯ ದೇವಸ್ಥಾನವಿದೆ. ಅದರಲ್ಲಿ 3 ಗುಂಟೆ ಜಾಗವನ್ನು ಬಿಡಿಎ ಸ್ವಾಧೀನಪಡಿಸಿಕೊಂಡಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಇದೇ ಸ್ಥಳದಲ್ಲಿದ್ದ 161.99 ಚದರ ಮೀಟರ್ ಜಾಗವನ್ನು ಇತ್ತೀಚೆಗೆ ಕೆಲಸಗಾರರು ತೆರವು ಮಾಡುತ್ತಿದ್ದರು. ದೂರುದಾರರು ಹಾಗೂ ಇತರರು ಹೋಗಿ ವಿಚಾರಿಸಿದಾಗ, ಜಾಗವನ್ನು ಮೆಟ್ರೊ ಕಾಮಗಾರಿಗಾಗಿ ಕೆಐಎಡಿಬಿ ಸ್ವಾಧೀನಪಡಿಸಿಕೊಂಡಿದ್ದು ಗೊತ್ತಾಗಿತ್ತು. ಕೆಐಎಡಿಬಿ ಕಚೇರಿಗೆ ಹೋಗಿ ಪರಿಶೀಲಿಸಿದಾಗ, ಆಂಜನೇಯ ಸ್ವಾಮಿ ದೇವಸ್ಥಾನವಿದ್ದ ಸರ್ಕಾರಿ ಸ್ವತ್ತಿಗೆ ನಕಲಿ ದಾಖಲೆ ಸೃಷ್ಟಿಸಿ ಟ್ರಸ್ಟ್ ಜಾಗವೆಂದು ಹೇಳಿ ಆರೋಪಿಗಳು ₹ 4.24 ಕೋಟಿ ಪರಿಹಾರ ಪಡೆದಿರುವುದು ಬಯಲಾಗಿರುವುದಾಗಿ ದೂರುದಾರರು ಹೇಳಿದ್ದಾರೆ' ಎಂದೂ ತಿಳಿಸಿವೆ.

ರೇಬಿಸ್ ನಿರ್ಮೂಲನೆಗೆ ವಿಶೇಷ ಅಭಿಯಾನ • ಬಿಬಿಎಂಪಿ ಮುಖ್ಯ ಆಯುಕ್ತ ಚಾಲನೆ

ನಿತ್ಯ 800 ಬೀದಿ ನಾಯಿಗಳಿಗೆ ರೇಬಿಸ್ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಬಿಸ್ ನಿರ್ಮೂಲನೆಗಾಗಿ ಪಣತೊಟ್ಟಿರುವ ಬಿಬಿಎಂಪಿ, ಪ್ರತಿ ವಾರ್ಡ್‌ನಲ್ಲಿ ಕನಿಷ್ಠ ಪಕ್ಷ ಶೇ 70ರಷ್ಟು ಬೀದಿನಾಯಿಗಳಿಗೆ ಪ್ರತಿ ವರ್ಷವೂ ರೇಬಿಸ್ ನಿರೋಧಕ ಲಸಿಕೆ ಹಾಕಲು ಮುಂದಾಗಿದೆ. ಪ್ರತಿದಿನ ಕನಿಷ್ಠ 800 ಬೀದಿನಾಯಿಗಳಿಗೆ ಲಸಿಕೆ ಹಾಕಲು ಬಿಬಿಎಂಪಿ ಕ್ರಮ ಕೈಗೊಂಡಿದೆ.

ಒಂದೂವರೆ ವರ್ಷಗಳಲ್ಲಿ ಪಾಲಿಕೆ ಒಟ್ಟು 89,098 ಬೀದಿನಾಯಿಗಳಿಗೆ ರೇಬಿಸ್ ಲಸಿಕೆ ಹಾಕಿದೆ. ಬಿಬಿಎಂಪಿ ವ್ಯಾಪ್ತಿಯ 44 ವಾರ್ಡ್‌ಗಳಲ್ಲಿ ಬೀದಿ ನಾಯಿಗಳಿಗೆ ಲಸಿಕೆ ಹಾಕುವ ಕಾರ್ಯ ಪೂರ್ಣಗೊಂಡಿದೆ. ಇಷ್ಟರವರೆಗೆ ಬೀದಿನಾಯಿಗಳ ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆ ಕಾರ್ಯಕ್ರಮ ಹಾಗೂ ರೇಬಿಸ್ ನಿರೋಧಕ ಲಸಿಕೆ ಕಾರ್ಯಕ್ರಮಗಳಿಗೆ ಪ್ರತ್ಯೇಕ ವಾಹನದ ವ್ಯವಸ್ಥೆ ಇರಲಿಲ್ಲ. ಇನ್ನು ಪ್ರತಿ ವಲಯಕ್ಕೊಂದು ವಾಹನವನ್ನು ಈ ಉದ್ದೇಶಕ್ಕಾಗಿ ಬಳಸುವ ಮೂಲಕ ಈ ಕಾರ್ಯವನ್ನು ಇನ್ನಷ್ಟು ಚುರುಕುಗೊಳಿಸಲು ಬಿಬಿಎಂಪಿ ನಿರ್ಧರಿಸಿದೆ. ಪ್ರತಿ ವಾಹನದಲ್ಲೂ ಚಾಲಕ ಹಾಗೂ ನಾಯಿ ಹಿಡಿಯಲು ತಲಾ ಇಬ್ಬರು ನುರಿತ ಸಿಬ್ಬಂದಿ ಇರಲಿದ್ದಾರೆ.

ರೇಬಿಸ್ ನಿರೋಧಕ ಲಸಿಕೆ ಕಾರ್ಯಕ್ರಮಕ್ಕೆ ಸಜ್ಜಾದ ವಾಹನಗಳು

ವಿಶ್ವ ಪ್ರಾಣಿಜನ್ಯ ರೋಗ ತಡೆ ದಿನಾಚರಣೆ ಅಂಗವಾಗಿ ಪಾಲಿಕೆಯ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ರೇಬಿಸ್ ನಿರೋಧಕ ಲಸಿಕೆ ಕಾರ್ಯಕ್ರಮಕ್ಕಾಗಿ ಸಜ್ಜಾದ ಎಂಟು ವಾಹನಗಳಿಗೆ ಮಂಗಳವಾರ ಚಾಲನೆ ನೀಡಿದರು. 'ವಿವಿಧ ಪ್ರಾಣಿ ದಯಾ ಸಂಘಟನೆಗಳ ಸಹಕಾರದಿಂದ ರೇಬಿಸ್ ನಿರೋಧಕ ಲಸಿಕೆ ಕಾರ್ಯಕ್ರಮವನ್ನು ಬಿಬಿಎಂಪಿ ಯಶಸ್ವಿಯಾಗಿ ಜಾರಿಗೆ ತರಲಿದೆ' ಎಂದು ಗೌರವ್ ಗುಪ್ತ ತಿಳಿಸಿದರು. ಬಿಬಿಎಂಪಿ ವಿಶೇಷ ಆಯುಕ್ತ (ಪಶುಸಂಗೋಪನೆ) ಡಿ.ರಂದೀಪ್ ಉಪಸ್ಥಿತರಿದ್ದರು.

'ರೇಬಿಸ್ ಕುರಿತು ಮಾಹಿತಿ ನೀಡಲು ಬಿಬಿಎಂಪಿ 2020ರ ಆ. 15ರಂದು ಸಹಾಯವಾಣಿ (6364893322) ಆರಂಭಿಸಿದೆ. ರೇಬಿಸ್ ರೋಗ ಹೊಂದಿರುವ ಜಾನುವಾರುಗಳ ಬಗ್ಗೆ ಅಥವಾ ರೇಬಿಸ್‌ನ ಶಂಕೆ ಇರುವ ಜಾನುವಾರುಗಳ ಬಗ್ಗೆ ಈ ಸಹಾಯವಾಣಿಗೆ ಮಾಹಿತಿ ನೀಡಬಹುದು. ಅಂತಹ ಪ್ರಾಣಿಗಳನ್ನು ಪ್ರತ್ಯೇಕಿಸಿ ತೀವ್ರ ನಿಗಾ ಇಡಲು ಬಿಬಿಎಂಪಿ ಕ್ರಮಕೈಗೊಳ್ಳುತ್ತದೆ' ಎಂದು ಬಿಬಿಎಂಪಿ ಜಂಟಿ ನಿರ್ದೇಶಕ (ಪಶುಸಂಗೋಪನೆ) ಮಂಜುನಾಥ ಶಿಂಧೆ 'ಪ್ರಜಾವಾಣಿ'ಗೆ ತಿಳಿಸಿದರು.

ಅಂಕಿ ಅಂಶ

47,164 ಬಿಬಿಎಂಪಿ ವ್ಯಾಪ್ತಿಯಲ್ಲಿ ಬೀದಿನಾಯಿಗಳಿಗೆ 2020ರಲ್ಲಿ ನೀಡಲಾದ ರೇಬಿಸ್ ನಿರೋಧಕ ಲಸಿಕೆಗಳು

41,934 ಬಿಬಿಎಂಪಿ ವ್ಯಾಪ್ತಿಯ ಬೀದಿನಾಯಿಗಳಿಗೆ 2021ರ ಮೊದಲ 6 ತಿಂಗಳುಗಳಲ್ಲಿ ನೀಡಲಾದ ಲಸಿಕೆಗಳು

ಬುಧವಾರ, ಜುಲೈ 7, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 188 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

5ಜಿ ತಂತ್ರಜ್ಞಾನ ಮಾರುಕಟ್ಟೆಗೆ ಬಹುಶಃ 2024ರಲ್ಲಿ ಬರಬಹುದು. ಈಗ ಅತಿ ಕಡಿಮೆಯ ದರದ 5ಜಿ ಸ್ಮಾರ್ಟ್‌ಫೋನ್ ಎಂದು ಹೇಳಿಕೊಳ್ಳುವ ಸ್ಮಾರ್ಟ್‌ಫೋನ್‌ಗಳು ಇನ್ನು ನಾಲ್ಕು ವರ್ಷಗಳಲ್ಲಿ ವೃದ್ಧಾಪ್ಯಕ್ಕೆ ತೆರಳಬಹುದು...



ಆಳ-ಅಗಲ

ಹಳ್ಳಿ ಆಸ್ಪತ್ರೆಗಳು ಹಾಸಿಗೆ ಹಿಡಿದಿವೆ ಸೋಮಿ!

ಬಾದಾಮಿಯಿಂದಲೇ ಕಣಕ್ಕೆ: ಸಿದ್ದರಾಮಯ್ಯ ಭರವಸೆ 5

ಲಸಿಕೆ ಕಾರ್ಯಕ್ರಮ ಮತ್ತೆ ಕುಂಠಿತ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,861 ▼	15,818 ▼	₹49,580 (ಬೆಂಗಳೂರು)	₹72,600 (ಬೆಂಗಳೂರು)	74.55 ▼

ರಾಜ್ಯ ಕೋವಿಡ್ ಅಂಕಿ-ಅಂಶ

28,59,595 ▲	ಒಟ್ಟು ಸೋಂಕಿತರು (28,56,491 ನಿನ್ನೆಯ ವಿವರ)
40,016 ▼	ಸಕ್ರಿಯ ಪ್ರಕರಣಗಳು
27,84,030 ▲	ಗುಣಮುಖರಾದವರು
35,526 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	3,104	▲
ಗುಣಮುಖ	4,992	▼
ಸಾವು	92	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಡಿಸಿಎಂ ಸವದಿ ಪುತ್ರನ ಕಾರು ಡಿಕ್ಕಿ: ರೈತ ಸಾವು 5

ಇಂದಿನ ಪಾಡ್‌ಕಾಸ್ಟ್ ವಿಶೇಷ

ಝಣ ಝಣ ಕಾಂಚಾಣ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಕೇಂದ್ರ ಸಂಪುಟ ಪುನರ್‌ರಚನೆ ಸುದ್ದಿಗೆ ಪುಷ್ಟಿ: ರಾಜಧಾನಿ ತಲುಪಿದ ಹಲವು ಮುಖಂಡರು

ಸಂಪುಟಕ್ಕೆ ಸರ್ಜರಿ ಇಂದು ಸಂಜೆ

ನವದೆಹಲಿ (ಪಿಟಿಐ): ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟದ ಪುನರ್‌ರಚನೆಯು ಬುಧವಾರ ಸಂಜೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ. ಅದಕ್ಕೆ ಪೂರಕವಾದ ಚಟುವಟಿಕೆಗಳಿಗೆ ರಾಜಧಾನಿಯು ಮಂಗಳವಾರ ಸಾಕ್ಷಿಯಾಗಿದೆ.

ಸಚಿವ ಸಂಪುಟಕ್ಕೆ ಸೇರ್ಪಡೆ ಆಗಲಿದ್ದಾರೆ ಎಂದು ಹೇಳಲಾಗುತ್ತಿರುವ ಬಿಜೆಪಿ ಮುಖಂಡರಾದ ಸರ್ವಾನಂದ ಸೋನೊವಾಲ್, ಜ್ಯೋತಿರಾದಿತ್ಯ ಸಿಂಧಿಯಾ ಮತ್ತು ನಾರಾಯಣ ರಾಣೆ ಅವರು ಮಂಗಳವಾರ ದೆಹಲಿ ತಲುಪಿದ್ದಾರೆ. ಬಿಜೆಪಿಯ ಮಿತ್ರ ಪಕ್ಷಗಳ ಪ್ರತಿನಿಧಿಗಳಾಗಿ ಸಂಪುಟ ಸೇರಲಿದ್ದಾರೆ ಎಂದು ಬಿಂಬಿತವಾಗಿರುವ ಜೆಡಿಯುನ ಆರ್‌.ಸಿ.ಪಿ.ಸಿಂಗ್ ಮತ್ತು ಎಲ್‌ಜೆಪಿಯ ಪಶುಪತಿ ಕುಮಾರ್ ಪಾರಸ್ ಅವರೂ ದೆಹಲಿಗೆ ಬಂದಿದ್ದಾರೆ.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆಯ ಸಚಿವ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಕರ್ನಾಟಕದ ರಾಜ್ಯಪಾಲರನ್ನಾಗಿ ನೇಮಕ ಮಾಡಿರುವುದು, ಸಚಿವ ಸಂಪುಟ ಪುನರ್‌ರಚನೆ ಆಗಲಿದೆ ಎಂಬ ವಾದಕ್ಕೆ ಪುಷ್ಟಿ ಕೊಟ್ಟಿದೆ.

ಆದರೆ, ಸಚಿವ ಸಂಪುಟ ವಿಸ್ತರಣೆ ಬಗ್ಗೆ ಸಂಭಾವ್ಯ ಸಚಿವರು ಎಂದು ಬಿಂಬಿತವಾದ ಯಾರೂ ಬಾಯಿಬಿಟ್ಟಿಲ್ಲ. ಸರ್ಕಾರ ಸೇರುವಂತೆ ತಮಗೆ ಯಾವುದೇ ಕರೆ ಬಂದಿಲ್ಲ ಎಂದು ರಾಣೆ ಹೇಳಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಂದ ಸೋಮವಾರವೇ ಕರೆ ಬಂದಿದೆ.

6ನೇ ಪುಟ ನೋಡಿ

ಎ.ನಾರಾಯಣಸ್ವಾಮಿಗೆ ಅವಕಾಶ

ನವದೆಹಲಿ: ಬುಧವಾರ ಸಂಜೆಗೆ ನಿಗದಿಯಾಗಿರುವ ಕೇಂದ್ರ ಸಂಪುಟ ಪುನರ್ ರಚನೆಯ ವೇಳೆ ರಾಜ್ಯದ ಚಿತ್ರದುರ್ಗ ಸಂಸದ ಎ.ನಾರಾಯಣಸ್ವಾಮಿ ಸಚಿವರಾಗುವುದು ಖಚಿತವಾಗಿದೆ.

ಪ್ರಧಾನಿ ಕಚೇರಿಯಿಂದ ಮಂಗಳವಾರ ನಾರಾಯಣಸ್ವಾಮಿ ಅವರಿಗೆ ಈ ಸಂಬಂಧ ಕರೆ ಬಂದಿದೆ. ರಾಜ್ಯದಿಂದ ಇನ್ನೂ ಒಬ್ಬ ಸಂಸದರಿಗೆ ಸಚಿವ ಸ್ಥಾನದ ಅವಕಾಶ ದೊರೆಯುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಕುಟುಂಬ ಸಮೇತ ಸಂಜೆ ದೆಹಲಿಗೆ ದೌಡಾಯಿಸಿರುವ ನಾರಾಯಣಸ್ವಾಮಿ, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರ ನಿವಾಸಕ್ಕೆ ತೆರಳಿ ಚರ್ಚಿಸಿದರಲ್ಲದೆ, ಸಂಪುಟ ಸೇರ್ಪಡೆ ಕುರಿತು ಸುದ್ದಿಗಾರರಿಗೆ ಖಚಿತಪಡಿಸಿದರು.

6ನೇ ಪುಟ ನೋಡಿ

ಸಾಧ್ಯತೆಗಳು

- ಮುಂದಿನ ವರ್ಷ ವಿಧಾನಸಭೆ ಚುನಾವಣೆ ನಡೆಯಲಿರುವ ಉತ್ತರ ಪ್ರದೇಶ, ಉತ್ತರಾಖಂಡ, ಗೋವಾ, ಮಣಿಪುರ ಮತ್ತು ಪಂಜಾಬ್‌ಗೆ ಹೆಚ್ಚು ಪ್ರಾತಿನಿಧ್ಯ
- ಇತ್ತೀಚೆಗಷ್ಟೇ ವಿಧಾನಸಭೆ ಚುನಾವಣೆ ನಡೆದ ಪಶ್ಚಿಮ ಬಂಗಾಳ ಮತ್ತು ಈಶಾನ್ಯ ರಾಜ್ಯಗಳ ಬಿಜೆಪಿ ಸಂಸದರಿಗೆ ಹೆಚ್ಚು ಅವಕಾಶ

3ನೇ ಪುಟ ನೋಡಿ

ನೂತನ ಸಹಕಾರ ಸಚಿವಾಲಯ ರಚನೆ ನಿರ್ಧಾರ

ನವದೆಹಲಿ (ಪಿಟಿಐ): ದೇಶದಲ್ಲಿ ಸಹಕಾರ ಚಳವಳಿಯನ್ನು ಗಟ್ಟಿಗೊಳಿಸುವ ಸಲುವಾಗಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹೊಸದಾಗಿ 'ಸಹಕಾರ ಸಚಿವಾಲಯ' ರಚಿಸಲು ನಿರ್ಧರಿಸಿದೆ.

3ನೇ ಪುಟ ನೋಡಿ

ಥಾವರ್ ಚಂದ್ ಗೆಹ್ಲೋಟ್ ರಾಜ್ಯದ ನೂತನ ರಾಜ್ಯಪಾಲ

ನವದೆಹಲಿ: ಕೇಂದ್ರದ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಖಾತೆ ಸಚಿವ, ಬಿಜೆಪಿಯ ಹಿರಿಯ ಮುಖಂಡ ಥಾವರ್‌ಚಂದ್ ಗೆಹ್ಲೋಟ್ ಅವರು ಕರ್ನಾಟಕದ ನೂತನ ರಾಜ್ಯಪಾಲರಾಗಿ ನೇಮಕಗೊಂಡಿದ್ದಾರೆ.

ಉಳಿದಂತೆ ಏಳು ರಾಜ್ಯಗಳಿಗೆ ರಾಜ್ಯಪಾಲರನ್ನು ನೇಮಿಸಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಮಂಗಳವಾರ ಆದೇಶ ಹೊರಡಿಸಿದ್ದಾರೆ.

'ಪಕ್ಷ ವಹಿಸಿರುವ ಹೊಸ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುವೆ' ಎಂದು ಥಾವರ್‌ಚಂದ್ ಗೆಹ್ಲೋಟ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ. ಹಾಲಿ ರಾಜ್ಯಪಾಲ ವಜುಭಾಯಿ ವಾಲಾ ಅವರ ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಈ ನೇಮಕ ಆಗಿದೆ.

ಇತರ ಏಳು ರಾಜ್ಯಗಳ ರಾಜ್ಯಪಾಲರ ವಿವರ (ಇವರಲ್ಲಿ ಕೆಲವರನ್ನು ಬೇರೆ ರಾಜ್ಯಗಳಿಗೆ ವರ್ಗಾವಣೆ ಮಾಡಲಾಗಿದೆ)

ಹೆಸರು	ಎಲ್ಲಿಂದ	ಎಲ್ಲಿಗೆ
ಎಸ್‌.ಪಿ. ಶ್ರೀಧರನ್ ಪಿಳ್ಳೈ	ಮಿಜೋರಾಂ	ಗೋವಾ
ಸತ್ಯದೇವ ನಾರಾಯಣ	ಹರಿಯಾಣ	ತ್ರಿಪುರಾ
ರಮೇಶ ಬೈಸ್	ತ್ರಿಪುರಾ	ಜಾರ್ಖಂಡ್
ಬಂಡಾರು ದತ್ತಾತ್ರೇಯ	ಹಿಮಾಚಲ ಪ್ರದೇಶ	ಹರಿಯಾಣ
ಕೆ.ಹರಿಬಾಬು	–	ಮಿಜೋರಾಂ
ಮಂಗುಭಾಯಿ ಛಗನ್‌ಭಾಯಿ ಪಟೇಲ್	–	ಮಧ್ಯಪ್ರದೇಶ
ರಾಜೇಂದ್ರ ವಿಶ್ವನಾಥ ಅರಳೇಕರ್	–	ಹಿಮಾಚಲ ಪ್ರದೇಶ

ಕಡಲತಡಿಯ ಮಕ್ಕಳು...

ತಿಂಗಳಾಂತ್ಯಕ್ಕೆ ಮತ್ತೆ ಆಳ ಸಮುದ್ರ ಮೀನುಗಾರಿಕೆ ಆರಂಭವಾಗಲಿದ್ದು, ಮಂಗಳೂರಿನ ಕಸಬಾ ಬೆಂಗ್ರೆಯಲ್ಲಿ ಪರ್ಸಿನ್ ಬೋಟ್‌ಗಳಿಗೆ ಬಣ್ಣ ಬಳಿಯುವ ಕೆಲಸದಲ್ಲಿ ಕಾರ್ಮಿಕರು ಮಂಗಳವಾರ ನಿರತರಾಗಿದ್ದರು ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್

ಮುರಿದುಬಿದ್ದ ಮಾತುಕತೆ, ಕಚ್ಚಾತೈಲ ಬೆಲೆ ಹೆಚ್ಚಳ

ಲಂಡನ್ (ರಾಯಿಟರ್ಸ್/ಎಎಫ್‌ಪಿ): ಕಚ್ಚಾ ತೈಲ ಉತ್ಪಾದನೆ ಹೆಚ್ಚಿಸುವ ವಿಚಾರವಾಗಿ ಒಮ್ಮತಕ್ಕೆ ಬರುವಲ್ಲಿ 'ಒಪೆಕ್ +' (ಪೆಟ್ರೋಲಿಯಂ ಉತ್ಪನ್ನಗಳ ರಫ್ತುದಾರ ರಾಷ್ಟ್ರಗಳ ಒಕ್ಕೂಟ ಹಾಗೂ ಆ ಒಕ್ಕೂಟದ ಮಿತ್ರದೇಶಗಳು) ಸಂಘಟನೆಯು ವಿಫಲವಾಗಿದೆ. ಇದರಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯಲ್ಲಿ ತೀವ್ರ ಹೆಚ್ಚಳ ಆಗಿದೆ.

ಬ್ರೆಂಟ್ ಕಚ್ಚಾ ತೈಲದ ಬೆಲೆಯು 2018ರ ಅಕ್ಟೋಬರ್‌ನಲ್ಲಿ ಇದ್ದ ಮಟ್ಟಕ್ಕೆ ತಲುಪಿ (ಪ್ರತಿ ಬ್ಯಾರೆಲ್‌ಗೆ 77.84 ಡಾಲರ್), ದಿನದ ಕೊನೆಯಲ್ಲಿ 76.91 ಡಾಲರ್‌ಗೆ ಇಳಿದಿದೆ. ಆಗಸ್ಟ್‌ನಲ್ಲಿ ಪೂರೈಕೆ ಆಗಬೇಕಿರುವ ಡಬ್ಲ್ಯುಟಿಐ ಕಚ್ಚಾ ತೈಲದ ಬೆಲೆಯು 2014ರ ನವೆಂಬರ್ ಮಟ್ಟಕ್ಕೆ (ಬ್ಯಾರೆಲ್‌ಗೆ 76.98 ಡಾಲರ್) ಏರಿಕೆ ಕಂಡಿತ್ತು.

ತೈಲ ಉತ್ಪಾದನೆ ಹೆಚ್ಚಿಸುವ ವಿಚಾರವಾಗಿ ಮುಂದಿನ ಮಾತುಕತೆ ಯಾವಾಗ ನಡೆಯಲಿದೆ ಎಂಬುದನ್ನು 'ಒಪೆಕ್ +' ಪ್ರಕಟಿಸಿಲ್ಲ. ತಾನು ಕಚ್ಚಾ ತೈಲ ಉತ್ಪಾದನೆಯನ್ನು ಜಾಸ್ತಿ ಮಾಡುವುದಾಗಿ ಯುಎಇ (ಸಂಯುಕ್ತ ಅರಬ್ ಸಂಸ್ಥಾನ) ಹೇಳಿದೆ. 'ಮಾತುಕತೆ ಮುರಿದುಬಿದ್ದಿರುವುದು ಅನಿಶ್ಚಿತತೆಯನ್ನು ಸೃಷ್ಟಿಸಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಬ್ಯಾರೆಲ್‌ಗೆ 80 ಡಾಲರ್‌ಗೆ ತಲುಪಬಹುದು' ಎಂದು ಗೋಲ್ಡ್‌ಮನ್ ಸ್ಯಾಚ್ಸ್ ಸಂಸ್ಥೆ ಅಂದಾಜಿಸಿದೆ.

'ಜಗತ್ತಿನ ಹಲವೆಡೆ ಕಂಡುಬರುತ್ತಿರುವ ಸ್ಥಿರವಾದ ಆರ್ಥಿಕ ಚೇತರಿಕೆ ಗಮನಿಸಿದರೆ, ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 100 ಡಾಲರ್ ಗಡಿಯನ್ನು ದಾಟಿದರೂ ಆಶ್ಚರ್ಯವಿಲ್ಲ' ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಭಾರತದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಮೇಲೆ ಪರಿಣಾಮ ಬೀರುತ್ತದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

'ಆ.9 ರ ಬಳಿಕ ಕಾಲೇಜು ಪುನರಾರಂಭಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಲೇಜು ವಿದ್ಯಾರ್ಥಿಗಳಿಗೆ ಕೋವಿಡ್ ಲಸಿಕೆ ಪ್ರಕ್ರಿಯೆ ಶೀಘ್ರದಲ್ಲೇ ಮುಗಿಯಲಿದ್ದು, ಆಗಸ್ಟ್ 9ರ ನಂತರ ಕಾಲೇಜುಗಳ ಪುನರಾರಂಭಕ್ಕೆ ಯಾವುದೇ ಅಡಚಣೆ ಇಲ್ಲ' ಎಂದು ಸರ್ಕಾರದ ಶಿಕ್ಷಣ ಸುಧಾರಣೆಗಳ ಸಲಹೆಗಾರ ಎಂ.ಆರ್.ದೊರೆಸ್ವಾಮಿ ಸಲಹೆ ನೀಡಿದ್ದಾರೆ.

ಈ ಸಂಬಂಧ ಅವರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

'ಜುಲೈ ಎರಡನೇ ವಾರದಲ್ಲಿ ದ್ವಿತೀಯ ಪಿಯು ಫಲಿತಾಂಶ ಹೊರ ಬೀಳುವ ಸಾಧ್ಯತೆ ಇದೆ. ಮುಂದಿನ ಪ್ರವೇಶಾತಿ ಪ್ರಕ್ರಿಯೆಗೆ ಕನಿಷ್ಠ ಎರಡು ಅಥವಾ ಮೂರು ವಾರಗಳ ಕಾಲಾವಕಾಶ ನೀಡಿ, ಪದವಿ ಕಾಲೇಜುಗಳ ಪ್ರವೇಶ ಪ್ರಕ್ರಿಯೆ ಆರಂಭಿಸಬಹುದು' ಎಂದು ತಿಳಿಸಿದ್ದಾರೆ.

'ಎಸ್ಸೆಸ್ಸೆಲ್ಸಿ ಪರೀಕ್ಷೆಗಳನ್ನು ಜು.15ರ ನಂತರ ನಡೆಸುವುದು ಸೂಕ್ತ. ಶಾಲೆಗಳ ಪುನರಾರಂಭ ಸಂಬಂಧ ಡಾ. ದೇವಿಶೆಟ್ಟಿ ನೇತೃತ್ವದ ಕಾರ್ಯಪಡೆ ಸೂಚಿಸಿರುವ ಶಿಫಾರಸುಗಳ ಅನ್ವಯ ಪ್ರಾರಂಭಿಸಬಹುದು. ಈ ಪ್ರಕ್ರಿಯೆಯನ್ನು ಇಡೀ ರಾಜ್ಯಕ್ಕೆ ಅನುಷ್ಠಾನಗೊಳಿಸುವ ಬದಲು ಆಯಾ ಜಿಲ್ಲಾಧಿಕಾರಿಗಳಿಗೆ ಜವಾಬ್ದಾರಿ ವಹಿಸಬೇಕು. ಶಿಕ್ಷಣ ಸಂಸ್ಥೆಗಳೂ ಶಿಫಾರಸುಗಳನ್ನು ತಪ್ಪದೇ ಪಾಲಿಸುವುದು ಕ್ಷೇಮ' ಎಂದೂ ಸಲಹೆ ನೀಡಿದ್ದಾರೆ.

ಜೆಇಇ (ಮೇನ್ಸ್): ಜು.20ರಿಂದ ಬಾಕಿ ಪರೀಕ್ಷೆಗಳು

ನವದೆಹಲಿ (ಪಿಟಿಐ): ಜೆಇಇ (ಮೇನ್ಸ್)ಯ ಬಾಕಿ ಉಳಿದಿರುವ ಪರೀಕ್ಷೆಗಳನ್ನು ಜುಲೈ 20ರಿಂದ ಎರಡು ಹಂತಗಳಲ್ಲಿ ನಡೆಸಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ಮಂಗಳವಾರ ಹೇಳಿದ್ದಾರೆ.

'ಮೂರನೇ ಆವೃತ್ತಿಯ ಪರೀಕ್ಷೆಗಳನ್ನು ಜುಲೈ 20 ರಿಂದ 25ರ ವರೆಗೆ, ನಾಲ್ಕನೇ ಆವೃತ್ತಿ ಪರೀಕ್ಷೆಗಳನ್ನು ಜುಲೈ 27–ಆಗಸ್ಟ್ 2ರ ವರೆಗೆ ನಡೆಸಲಾಗುವುದು' ಎಂದು ಅವರು ತಿಳಿಸಿದ್ದಾರೆ. ಈಗಾಗಲೇ ಮುಕ್ತಾಯಗೊಂಡಿರುವ ಎರಡನೇ ಮತ್ತು ಮೂರನೇ ಆವೃತ್ತಿಯ ಪರೀಕ್ಷೆಗಳ ಫಲಿತಾಂಶ ಆಗಸ್ಟ್‌ನಲ್ಲಿ ಘೋಷಣೆಯಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.



ಬುಧವಾರದ ಉಷ್ಣಾಂಶ 30° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ. ಬೆಂಗಳೂರು– ಮಂಗಳೂರು ಹೆದ್ದಾರಿಯಲ್ಲಿ ಅಲ್ಲಲ್ಲಿ ಮಳೆ ಸಾಧ್ಯತೆ.

ಹವಾಮಾನ	ಗುರುವಾರ	ಶುಕ್ರವಾರ	ಶನಿವಾರ
	28° 20°	29° 20°	27° 20°

ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಬಿಬಿಎಂಪಿ ಸೇರಿದ 28 ಹಳ್ಳಿಗಳ ಚಿತ್ರಣ

ಡಾಂಬರಿಗಾಗಿ ಕಾದಿರುವ ರಸ್ತೆಗಳು

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಒಂದೆಡೆ ಮುಗಿಯದ ಒಳಚರಂಡಿ ಮತ್ತು ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ, ಇನ್ನೊಂದೆಡೆ ಕಾಮಗಾರಿ ಮುಗಿದರೂ ನಲ್ಲಿಗಳಲ್ಲಿ ಬಾರದ ಕಾವೇರಿ ನೀರು, ಡಾಂಬರಿಗಾಗಿ ಕಾದಿರುವ ರಸ್ತೆಗಳು...

ಇದು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ 28 ಹಳ್ಳಿಗಳ ಸ್ಥಿತಿ. 2007ರಲ್ಲಿ ಬಿಬಿಎಂಪಿ ಸೇರ್ಪಡೆಗೊಂಡ ಈ ಹಳ್ಳಿಗಳಲ್ಲಿ ಮೂಲಸೌಕರ್ಯ ಕಾಮಗಾರಿ ಪೂರ್ಣಗೊಳ್ಳದೆ ಜನರು ರೋಸಿ ಹೋಗಿದ್ದಾರೆ.

ದಕ್ಷಿಣ ಬೆಂಗಳೂರು ಎಂದ ಕೂಡಲೇ ಸುಸಜ್ಜಿತ ಬಡಾವಣೆಗಳು ಎಂಬ ಕಲ್ಪನೆ ಕಣ್ಣೆದುರು ಬರುತ್ತದೆ. ಆದರೆ, ಈ ವಿಧಾನಸಭಾ ಕ್ಷೇತ್ರದ ಚಿತ್ರಣವೇ ಬೇರೆ ಇದೆ. ಬಿಬಿಎಂಪಿ ಸೇರ್ಪಡೆಗೊಂಡ 110 ಹಳ್ಳಿಗಳಲ್ಲಿ 28 ಹಳ್ಳಿಗಳನ್ನು ಇದೊಂದೇ ಕ್ಷೇತ್ರ ಒಳಗೊಂಡಿದೆ. ಈ ಹಳ್ಳಿಗಳ ಸುತ್ತಲೂ ಹೊಸ ಹೊಸ ಬಡಾವಣೆಗಳು ಹೆಣೆದುಕೊಂಡಿವೆ.

ಕೆಲವು ಹಳ್ಳಿಗಳಲ್ಲಿ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಂಡಿದ್ದರೂ, ಕಾವೇರಿ ನೀರಿನ ಸಂಪರ್ಕ ಇನ್ನೂ ಲಭ್ಯವಾಗಿಲ್ಲ. ಒಳಚರಂಡಿ ಕಾಮಗಾರಿ ಬಹುತೇಕ ಹಳ್ಳಿಗಳಲ್ಲಿ ಮುಗಿದಿಲ್ಲ.

110 ಹಳ್ಳಿ ಯೋಜನೆಯ ಕಾಮಗಾರಿ ನಡೆಯುತ್ತಿರುವ ಪ್ರದೇಶಕ್ಕೆ ಭೇಟಿ ನೀಡಿದ 'ಪ್ರಜಾವಾಣಿ' ತಂಡಕ್ಕೆ ದರ್ಶನವಾಗಿದ್ದು ಧೂಳು ತುಂಬಿದ ರಸ್ತೆಗಳು. ಬಸಾಪುರ ಮುಖ್ಯ ರಸ್ತೆಯಲ್ಲಿ ಹಾದು ಹೋಗಬೇಕೆಂದರೆ ಗಂಡೆದೆ ಬೇಕು ಎನ್ನುತ್ತಾರೆ ನಿವಾಸಿಗಳು. ಅಗೆದು ಬಿಟ್ಟಿರುವ ಈ ರಸ್ತೆಯೇ ಸುತ್ತಮುತ್ತಲ ಬಡಾವಣೆಗಳ ನಿವಾಸಿಗಳಿಗೆ ಇರುವ ಪ್ರಮುಖ ಸಂಚಾರ ಮಾರ್ಗ.

'ಕಾರಿನ ಚಾಲಕರು ಕಿಟಕಿ ಗಾಜು ಏರಿಸಿಕೊಂಡು ಜೋರಾಗಿ ಹೊರಟರೆ, ದ್ವಿಚಕ್ರ ವಾಹನ ಚಾಲಕರು ಮತ್ತು ಪಾದಚಾರಿಗಳು ಧೂಳು ಮುಕ್ಕದೆ ಬೇರೆ ದಾರಿ ಇಲ್ಲ. ಈ ರಸ್ತೆಯಲ್ಲಿ ಹೋಗುವಾಗ ಬೆನ್ನಿಗೊಂದು ಆಮ್ಲಜನಕ ಸಿಲಿಂಡರ್ ಕಟ್ಟಿಕೊಳ್ಳುವುದು ಸೂಕ್ತ' ಎಂದು ಪಾದಚಾರಿಗಳು ಹೇಳುತ್ತಾರೆ.

ಈ ಧೂಳು ಸೀಳಿಕೊಂಡು ಮುಂದೆ ಸಾಗಿದಾಗ ಚರಂಡಿ ಸ್ವಚ್ಛಗೊಳಿಸುವ ಕೆಲಸ ನೋಡಿಕೊಳ್ಳುತ್ತಿದ್ದ ಬಿಬಿಎಂಪಿ ಸಿಬ್ಬಂದಿ ಎದುರಾದರು. 'ದಯವಿಟ್ಟು ಈ ರಸ್ತೆ ಬಗ್ಗೆ ಬರೆಯಿರಿ, ಜನ ಧೂಳು ಕುಡಿಯಲು ಆರಂಭವಾಗಿ ವರ್ಷವೇ ಕಳೆದಿದೆ. ಈ ಕಲ್ಪನೆಯನ್ನೇ ಬಿಡಬೇಕೆಂಬ ಯೋಜನೆ ಮುಖ್ಯವಾಗಿದ್ದೇ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಕಿರಿಯ ಅಧಿಕಾರಿಯೊಬ್ಬರು ಅಸಹಾಯಕತೆ ತೋಡಿಕೊಂಡರು.

'ಒಂದೆಡೆ ಬೇಗೂರಿನಿಂದ ಚಿಕ್ಕಬೇಗೂರಿಗೆ ಹೋಗುವ ರಸ್ತೆಯ ಸಂಪರ್ಕವೇ ಕಡಿತಗೊಂಡಿದೆ. ಮಳೆಯಲ್ಲಿ ಕೊಚ್ಚಿಹೋದ ಸೇತುವೆ ದುರಸ್ತಿ ಕಾರ್ಯ ಸ್ಥಗಿತಗೊಂಡಿದೆ. ಇನ್ನೊಂದೆಡೆ, ಚಿಕ್ಕಬೇಗೂರಿನ ಮುಖ್ಯ ರಸ್ತೆಯಲ್ಲಿ ಒಳಚರಂಡಿ ಕೆಲಸ ಮಾಡಿದ ಬಳಿಕ ರಸ್ತೆ ಅಭಿವೃದ್ಧಿ ಕಾಣದಾಗಿದೆ. ಅದನ್ನು ವರ್ಷಗಳಿಂದ ಇದೇ ಸ್ಥಿತಿ ಎದುರಿಸುತ್ತಿದ್ದೇವೆ' ಎಂದು ನಿವಾಸಿಗಳು ಅಳಲು ತೋಡಿಕೊಂಡರು.

ಚಿಕ್ಕತೋಗೂರು, ಬೆರಟೇನ ಅಗ್ರಹಾರ, ಪರಪ್ಪನ ಅಗ್ರಹಾರ ಸೇರಿ 110 ಹಳ್ಳಿ ಯೋಜನೆ ಕಾಮಗಾರಿ ನಡೆಯುತ್ತಿರುವ ಬಡಾವಣೆಗಳ ಸ್ಥಿತಿ ಇದಕ್ಕೆ ಹೊರತಾಗಿಲ್ಲ.

ಚಿಕ್ಕತೋಗೂರು ರಸ್ತೆಯ ಪ್ರಗತಿನಗರದಲ್ಲಿ 110 ಹಳ್ಳಿ ಯೋಜನೆ ಕಾಮಗಾರಿ ನಡೆಯುತ್ತಿರುವ ದೃಶ್ಯ –ಪ್ರಜಾವಾಣಿ ಚಿತ್ರಗಳು/ ಎಂ.ಎಸ್ ಮಂಜುನಾಥ್

110 ಹಳ್ಳಿ
ಸಿಗದ ಅನುದಾನ ಬಿಬಿಎಂಪಿಗೆ ಅವಮಾನ

ಚಿಕ್ಕ ಬೇಗೂರು ಮುಖ್ಯ ರಸ್ತೆ ಡಾಂಬರಿಗಾಗಿ ಕಾದಿರುವುದು

'ಹೆಚ್ಚುವರಿ ಅನುದಾನ ನಿರೀಕ್ಷೆ'

'ನಮ್ಮ ಕ್ಷೇತ್ರದ 28 ಹಳ್ಳಿಗಳೂ ಗ್ರಾಮ ಪಂಚಾಯಿತಿಯಿಂದ ನೇರವಾಗಿ ಬಿಬಿಎಂಪಿಗೆ ಸೇರ್ಪಡೆಯಾದವು. ಹೀಗಾಗಿ, ಸಮಸ್ಯೆಗಳು ಹೆಚ್ಚಿಗೆ ಇವೆ' ಎಂದು ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ ಹೇಳಿದರು.

ಗ್ರಾಮ ಪಂಚಾಯಿತಿಯಿಂದ ಪುರಸಭೆ, ನಗರಸಭೆಯಾಗಿ ಮೇಲ್ದರ್ಜೆಗೇರಿ ಬಳಿಕ ಬಿಬಿಎಂಪಿಗೆ ಸೇರ್ಪಡೆಯಾದರೆ ಮೂಲ ಸೌಕರ್ಯ ಇರುತ್ತದೆ. ಆದರೆ, ಈ ಕ್ಷೇತ್ರದ ಪರಿಸ್ಥಿತಿ ಬೇರೆಯೇ ಇದೆ. ಒಳಚರಂಡಿ ಕಾಮಗಾರಿಯನ್ನು ಸಂಪೂರ್ಣ ಹೊಸದಾಗಿ ಮಾಡಲಾಗುತ್ತಿದೆ. ಇನ್ನೂ ಕೆಲವೆಡೆ ಒಳಚರಂಡಿ ಕಾಮಗಾರಿ ಪೂರ್ಣಗೊಳ್ಳಬೇಕಿದೆ ಎಂದರು.

'ಅಗೆದಿರುವ ರಸ್ತೆಗಳ ದುರಸ್ತಿಗೆ ಈಗ ನೀಡಿರುವ ಅನುದಾನ ಸಾಕಾಗುವುದಿಲ್ಲ. ಬೇರೆ ಕ್ಷೇತ್ರಗಳಿಗೆ ಎಷ್ಟು ಅನುದಾನ ಕೊಟ್ಟಿದ್ದಾರೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಹೆಚ್ಚು ಹಳ್ಳಿಗಳಿರುವ ಕಾರಣ ಹೆಚ್ಚುವರಿ ಅನುದಾನ ಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದ್ದೇನೆ' ಎಂದು ಹೇಳಿದರು.

28 ಹಳ್ಳಿಗಳು

ಪಿಲ್ಲಗಾನಹಳ್ಳಿ, ಅಂಜನಾಪುರ, ಗೊಲ್ಲಹಳ್ಳಿ, ಕೆಂಬತ್ತಹಳ್ಳಿ, ತಿಪ್ಪಸಂದ್ರ, ಕಮ್ಮನಹಳ್ಳಿ, ಬಸವಾಪುರ, ಕಾಳೇನ ಅಗ್ರಹಾರ, ಬೇಗೂರು, ಎಲೇನಹಳ್ಳಿ, ಚಂದ್ರಶೇಖರಪುರ, ಅಲಹಳ್ಳಿ, ದೊಡ್ಡಕಲ್ಲಸಂದ್ರ, ಬಸಾಪುರ, ಚಿಕ್ಕತೋಗೂರು, ದೊಡ್ಡತೋಗೂರು, ಗೊಟ್ಟಿಗೆರೆ, ಬೆರಟೇನ ಅಗ್ರಹಾರ, ನಾಗನಾಥಪುರ, ಪರಪ್ಪನ ಅಗ್ರಹಾರ, ಕೂಡ್ಲು, ಗುಬ್ಬಲಾಳು, ವಸಂತಪುರ, ಸುಬ್ರಹ್ಮಣ್ಯಪುರ, ವಡ್ಡರಪಾಳ್ಯ, ಉತ್ತರಹಳ್ಳಿ, ಅರೇಹಳ್ಳಿ ಮತ್ತು ತುರಹಳ್ಳಿ.

ಇಂದಿನಿಂದ ಇಸ್ಕಾನ್ ದೇವಸ್ಥಾನಕ್ಕೆ ಪ್ರವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಸ್ಕಾನ್ ದೇವಸ್ಥಾನಕ್ಕೆ ಬುಧವಾರದಿಂದ (ಜು.7) ಸಾರ್ವಜನಿಕರ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ.

ಬೆಳಿಗ್ಗೆ 8.30ರಿಂದ ಮಧ್ಯಾಹ್ನ 12.30 ಹಾಗೂ ಸಂಜೆ 4ರಿಂದ 8 ಗಂಟೆಯವರೆಗೆ ದೇವಸ್ಥಾನಕ್ಕೆ ಪ್ರವೇಶ ಇರಲಿದ್ದು, ದರ್ಶನ ಹಾಗೂ ಪ್ರಾರ್ಥನೆಗೆ ಮಾತ್ರ ಅವಕಾಶ ಇರಲಿದೆ.

ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು ಸೇರಿದಂತೆ ಸರ್ಕಾರ ಸೂಚಿಸಿರುವ ನಿಯಮಗಳ ಪಾಲನೆ ಕಡ್ಡಾಯ. ದೇವಸ್ಥಾನಕ್ಕೆ ಬರುವವರ ಸ್ಯಾನಿಟೈಸ್ ಹಾಗೂ ಥರ್ಮಲ್ ಸ್ಕ್ಯಾನಿಂಗ್ ಮಾಡಲಾಗುತ್ತದೆ.

ಭಕ್ತರಿಗೆ ಉಚಿತ ಪ್ರಸಾದ ವಿತರಿಸಲಾಗುವುದು.

ದೇವಸ್ಥಾನದಲ್ಲಿರುವ ಕಲ್ಯಾಣ ಮಂಟಪದಲ್ಲಿ ವಿವಾಹ ಸಮಾರಂಭಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ.

ಭಕ್ತರು www.iskconbangalore.org ಮೂಲಕವೂ ಪ್ರತಿದಿನದ ದರ್ಶನ ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	18.51 ಕೋಟಿ ▲	3.06 ಕೋಟಿ
ಸಕ್ರಿಯ ಪ್ರಕರಣ	1.16 ಕೋಟಿ ▼	4.54 ಲಕ್ಷ ▼
ಗುಣಮುಖ	16.94 ಕೋಟಿ ▲	2.97 ಕೋಟಿ
ಸಾವು	40.04 ಲಕ್ಷ ▲	4.04 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.40 ಲಕ್ಷ ▲	43,344 ▲
ಗುಣಮುಖ	3.76 ಲಕ್ಷ ▼	46,241 ▲
ಸಾವು	6,218 ▲	909 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)
27,187 ▼ ಬ್ರಿಟನ್; 22,703 ▼ ಬ್ರೆಜಿಲ್; 24,353 ▲ ರಷ್ಯಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)
48.65 ▼ ಅಮೆರಿಕ; 11.15 ▼ ಬ್ರೆಜಿಲ್; 4.64 ಬ್ರಿಟನ್

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)
1.23 ಲಕ್ಷ ಮಹಾರಾಷ್ಟ್ರ; 25,001 ▲ ದೆಹಲಿ; 33,132 ▲ ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)
61.13 ಮಹಾರಾಷ್ಟ್ರ ▲; 29.96 ಕೇರಳ ▲; 25.03 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಜು.7ರಿಂದ 11ರವರೆಗೆ ಬೆಳಿಗ್ಗೆ 10ರಿಂದ ಮಧ್ಯಾಹ್ನ 3 ಗಂಟೆ ವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯ ಸ್ಥಳಗಳು: ಜು.7ರಂದು ಕಮ್ಮನಹಳ್ಳಿ, ಗೊಟ್ಟಿಗೆರೆ, ಎಚ್‌ಎಸ್‌ಆರ್ ಬಡಾವಣೆ 1ನೇ ಹಂತ, ಕೂಡ್ಲು, 8ರಂದು ಮಂಗಮ್ಮನಪಾಳ್ಯ, ಎಂ.ಎಂ.ಪಾಳ್ಯ, ನೀಲಕಂಠೇಶ್ವರ ಬಡಾವಣೆ, ಕಸವನಹಳ್ಳಿ, 9ರಂದು ನೀಲಾದ್ರಿ ನಗರ, 10ರಂದು ಬಿಡಿಎ ಬಡಾವಣೆ, ಗಾಣಿಗರಪಾಳ್ಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

₹ 712 ಕೋಟಿ ವಂಚನೆ; ನಿತೇಶ್ ಸಂಸ್ಥೆ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೆಸ್ ಬ್ಯಾಂಕ್‌ನಿಂದ ₹ 712 ಕೋಟಿ ಸಾಲ ಪಡೆದು ವಂಚಿಸಿರುವ ಆರೋಪದಡಿ ನಗರದ ನಿತೇಶ್ ಸಮೂಹ ಸಂಸ್ಥೆಗಳ ವಿರುದ್ಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಯೆಸ್ ಬ್ಯಾಂಕ್‌ನ ಕಸ್ತೂರ್‌ಬಾ ರಸ್ತೆಯಲ್ಲಿರುವ ಶಾಖೆಯ ವ್ಯವಸ್ಥಾಪಕ ಆಶಿಷ್ ವಿನೋದ್ ಜೋಷಿ ಅವರು ದೂರು ನೀಡಿದ್ದಾರೆ. ನಿತೇಶ್ ಸಮೂಹ ಸಂಸ್ಥೆಗಳು ಸೇರಿ 11 ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಿತೇಶ್ ಎಸ್ಟೇಟ್ಸ್, ನಿತೇಶ್ ಹೌಸಿಂಗ್ ಡೆವಲಪರ್ಸ್, ನಿತೇಶ್ ಅರ್ಬನ್ ಡೆವಲಪ್‌ಮೆಂಟ್, ನಿತೇಶ್ ಶೆಟ್ಟಿ ಪ್ರಮೋಟರ್ಸ್ ಆಡಳಿತ ಮಂಡಳಿ ಸದಸ್ಯರನ್ನು ಆರೋಪಿಗಳನ್ನಾಗಿ ಮಾಡಲಾಗಿದೆ.

ಸಪ್ತ ಋಷಿ ವೈದ್ಯನಾಥನ್, ಕುಮಾರ್ ನೆಲ್ಲೂರು ಗೋಪಾಲಕೃಷ್ಣನ್, ಸುಬ್ರಮಣ್ಯನ್ ಅನಂತ ನಾರಾಯಣ್, ಪ್ರದೀಪ್ ನಾರಾಯಣ್, ಮಹೇಶ್ ಭೂಪತಿ, ಚಂದ್ರಶೇಖರ್ ಪ್ರಶಾಂತ್ ಕುಮಾರ್ ಹಾಗೂ ಇತರರ ಹೆಸರು ಆರೋಪಿಗಳ ಪಟ್ಟಿಯಲ್ಲಿದೆ' ಎಂದೂ ಮೂಲಗಳು ತಿಳಿಸಿವೆ.

'ಎಂ.ಜಿ. ರಸ್ತೆಯಲ್ಲಿ ನಿತೇಶ್ ಸಮೂಹ ಸಂಸ್ಥೆಗಳ ಕಚೇರಿ ಇದೆ. ಪ್ರಕರಣ ದಾಖಲಾಗುತ್ತಿದ್ದಂತೆ ದಾಖಲೆಗಳನ್ನು ಪರಿಶೀಲಿಸಿ ಆರೋಪಿಗಳಿಗೆ ನೋಟಿಸ್ ನೀಡಲಾಗಿದೆ. ವಿಚಾರಣೆಯಲ್ಲಿ ಮತ್ತಷ್ಟು ಮಾಹಿತಿ ಸಿಗಲಿದೆ' ಎಂದೂ ಹೇಳಿವೆ.

ಯೋಜನೆಗಳಿಗಾಗಿ ಸಾಲ: 'ಹೈಡ್ ಪಾರ್ಕ್, ಕೊಲಂಬಸ್ ಸ್ಕ್ವೇರ್, ನಾಪವ್ಯಾಲಿ, ಪಿಷರ್ ದ್ವೀಪ, ಮೆಲ್ಬೋರ್ನ್ ಪಾರ್ಕ್, ನ್ಯೂ ಥಣಿಸಂದ್ರ, ಗ್ರಾಂಡ್ ಕ್ಯಾನಿಯನ್, ಕೇಪ್ ಕಾರ್ಡ್, ಪಾಲೋ ಹಾಲ್ಟೊ, ಶಾಂತಕ್ಲಾರ, ನಿತೇಶ್ ಪ್ಲಾಜಾ ಹಾಗೂ ನಿತೇಶ್ ಸಾಹೋ ಯೋಜನೆಗಳ ಅಭಿವೃದ್ಧಿಗಾಗಿ ಆರೋಪಿಗಳು ಬ್ಯಾಂಕ್‌ನಿಂದ ₹ 712 ಕೋಟಿ ಸಾಲ ಪಡೆದಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿಗಳು, ಇದುವರೆಗೂ ಸಾಲ ಮರು ಪಾವತಿಸಿಲ್ಲ. ಅಪರಾಧ ಸಂಚು ರೂಪಿಸಿದ್ದ ಆರೋಪಿಗಳು ನಂಬಿಕೆ ದ್ರೋಹವೆಸಗಿ ವಂಚಿಸಿರುವುದಾಗಿ ದೂರುದಾರರು ಆರೋಪಿಸಿದ್ದಾರೆ' ಎಂದೂ ಮೂಲಗಳು ಹೇಳಿವೆ.

ಒಂದೇ ರೀತಿಯ ಬೈಕ್ ಕದಿಯುತ್ತಿದ್ದ

ಬೆಂಗಳೂರು: ಟಿವಿಎಸ್ ಎಕ್ಸ್‌ಎಲ್ ಗಾಡಿಗಳನ್ನೇ ಹೆಚ್ಚಾಗಿ ಕದಿಯುತ್ತಿದ್ದ ಆರೋಪಿಯನ್ನು ಜ್ಞಾನಭಾರತಿ ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡಿನ ಅರೆಸ್ವಾಜಾ ಅಲಿಯಾಸ್ ರಘುರಾಮ್ ಬಂಧಿತ ಆರೋಪಿ. ಈತ ಬೆಂಗಳೂರಿಗೆ ಬಂದು ಗಾಡಿ ಕದಿಯುತ್ತಿದ್ದ. ಕಳ್ಳತನ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಅದನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

'ಎಕ್ಸ್‌ಎಲ್ ಗಾಡಿ ಮಾತ್ರ ಚಾಲನೆ ಮಾಡಲು ಗೊತ್ತಿದ್ದರಿಂದ ಅದೇ ವಾಹನಗಳನ್ನು ಹೆಚ್ಚಾಗಿ ಕದಿಯುತ್ತಿದ್ದೆ. ಬೇರೆ ಬೈಕ್‌ಗಳ ಚಾಲನೆ ಬರುತ್ತಿರಲಿಲ್ಲ' ಎಂದು ವಿಚಾರಣೆ ವೇಳೆ ತಿಳಿಸಿರುವುದಾಗಿ ಪೊಲೀಸರು ಮಾಹಿತಿ ನೀಡಿದರು. ಆರೋಪಿಯಿಂದ ₹3 ಲಕ್ಷ ಬೆಲೆಬಾಳುವ ಏಳು ಟಿವಿಎಸ್ ಎಕ್ಸ್‌ಎಲ್ ಗಾಡಿಗಳನ್ನು ವಶಪಡಿಸಿಕೊಳ್ಳಲಾಗಿದೆ.

ನಗರದ ಕೋವಿಡ್ ಅಂಕಿ–ಅಂಶ

12,16,896 ▲	ಒಟ್ಟು ಪ್ರಕರಣಗಳು (12,16,181 ನಿನ್ನೆಯ ವಿವರ)
14,232 ▼	ಸಕ್ರಿಯ ಪ್ರಕರಣಗಳು
11,86,973 ▲	ಗುಣಮುಖರಾದವರು
15,690 ▲	ಒಟ್ಟು ಸಾವು

ಮಂಗಳವಾರದ ಏರಿಕೆ

ಹೊಸ ಪ್ರಕರಣ	715 ▲
ಗುಣಮುಖ	1,863 ▼
ಸಾವು	15 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಲಾಕ್‌ಡೌನ್ ಸಂಕಷ್ಟ; ನಿರ್ದೇಶಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಮೈಸೂರು: ಲಾಕ್‌ಡೌನ್‌ನಿಂದ ಆರ್ಥಿಕ ಸಂಕಷ್ಟಕ್ಕೆ ಒಳಗಾದ ಕಿರುನಾಟಕ ನಿರ್ದೇಶಕ ನವೀನ್‌ಕುಮಾರ್ (32) ಇಲ್ಲಿನ ತಮ್ಮ ನಿವಾಸದಲ್ಲಿ ಸೋಮವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಇವರು ತಮ್ಮದೇ ಆದ ಒಂದು ತಂಡ ಕಟ್ಟಿಕೊಂಡು ಮೈಸೂರು ಮತ್ತು ಬೆಂಗಳೂರಿನಲ್ಲಿ ಸಾಕಷ್ಟು ಕಿರು ನಾಟಕ ಪ್ರದರ್ಶಿಸಿದ್ದರು. ಲಾಕ್‌ಡೌನ್‌ನಿಂದ ಆರ್ಥಿಕ ಸಂಕಷ್ಟಕ್ಕೊಳಗಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಕ್ಕಳ ಸುರಕ್ಷತೆಯ ಅಧ್ಯಯನ ನಡೆಸಲು ತಜ್ಞರ ಸಮಿತಿ ರಚನೆ

ಕೋವಿಡ್ ಮೂರನೇ ಅಲೆ ಎದುರಿಸಲು ಬಿಬಿಎಂಪಿ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಮೂರನೇ ಅಲೆ ಸಂದರ್ಭದಲ್ಲಿ ಮಕ್ಕಳನ್ನು ಹೇಗೆ ಸುರಕ್ಷಿತವಾಗಿ ಇಡಬಹುದು ಎಂಬ ಕುರಿತು ನಗರಮಟ್ಟದಲ್ಲಿ ಅಧ್ಯಯನ ನಡೆಸಲು ತಜ್ಞರ ಸಮಿತಿ ರಚಿಸಿದ್ದೇವೆ. ಈ ಸಮಿತಿ ಶಿಫಾರಸಿನ ಆಧಾರದಲ್ಲಿ ಮಕ್ಕಳ ಬಗ್ಗೆ ಕಾಳಜಿ ವಹಿಸಲಿದ್ದೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಕೋವಿಡ್ ಮೂರನೇ ಅಲೆ ಸಂದರ್ಭದಲ್ಲೂ ಮಕ್ಕಳಿಗಿಂತ ವಯಸ್ಸಾದವರಿಗೆ ಹೆಚ್ಚಿನ ಸಮಸ್ಯೆ. ಹಾಗಾಗಿ ಲಸಿಕಾ ಕಾರ್ಯಕ್ರಮದಲ್ಲೂ ವಯಸ್ಕರಿಗೆ ಆದ್ಯತೆ ನೀಡಲಾಗಿದೆ. ಹಿರಿಯರೆಲ್ಲರೂ ಲಸಿಕೆ ಪಡೆದರೆ ಮಕ್ಕಳೂ ಸುರಕ್ಷಿತವಾಗಿರುತ್ತಾರೆ. ನಮ್ಮ ಆದ್ಯತೆ ಅರ್ಹತೆ ಹೊಂದಿರುವ ಎಲ್ಲರಿಗೂ ಕೋವಿಡ್ ಲಸಿಕೆ ನೀಡುವುದು' ಎಂದರು.

'ನಗರದಲ್ಲಿ ಎಷ್ಟು ಜನ ಕೋವಿಡ್ ವೈರಾಣುವಿಗೆ ಪ್ರತಿಕಾಯ ಬೆಳೆಸಿಕೊಂಡಿದ್ದಾರೆ ಎಂಬುದರ ಬಗ್ಗೆ ಅಧ್ಯಯನ ನಡೆಸಲಾಗುತ್ತದೆ. ಬಿಬಿಎಂಪಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ಕೋವಿಡ್ ಆರೈಕೆ ಕೇಂದ್ರಗಳು, ಚಿಕಿತ್ಸೆ ನಿರ್ಧಾರ ಕೇಂದ್ರಗಳು ಸಕ್ರಿಯವಾಗಿವೆ' ಎಂದರು.

ಜೀನೋಮ್ ಸೀಕ್ವೆಂನ್ಸಿಂಗ್ ವರದಿ ಬರುವಾಗ ವಿಳಂಬವಾಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯ ಆಯುಕ್ತರು, 'ಬಹುತೇಕ ಜೀನೋಮ್ ಸೀಕ್ವೆನ್ಸಿಂಗ್ ಅಧ್ಯಯನಗಳನ್ನು ರಾಜ್ಯ ಮಟ್ಟದಲ್ಲಿ ನಡೆಸಲಾಗುತ್ತಿದೆ. ಇದಕ್ಕೆ ಬಿಬಿಎಂಪಿ ಪೂರಕ ನೆರವು ನೀಡುತ್ತಿದೆ. ಬಿಬಿಎಂಪಿ ಮಟ್ಟದಲ್ಲಿ ನಡೆಸುವ ಅಧ್ಯಯನ ವರದಿ ತ್ವರಿತವಾಗಿ ಸಿಗುವಂತೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಿದ್ದೇವೆ' ಎಂದರು.

1.5 ಕೋಟಿ ಡೋಸ್ ಲಸಿಕೆ ಪೂರೈಕೆಗೆ ಮನವಿ

ಬೆಂಗಳೂರು: ರಾಜ್ಯಕ್ಕೆ ಪ್ರತಿ ತಿಂಗಳಿಗೆ 1.5 ಕೋಟಿ ಡೋಸ್ ಕೋವಿಡ್ ಲಸಿಕೆ ಪೂರೈಸುವಂತೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ಕೇಂದ್ರ ಆರೋಗ್ಯ ಸಚಿವ ಡಾ. ಹರ್ಷವರ್ಧನ್ ಅವರಿಗೆ ಮನವಿ ಮಾಡಿದ್ದಾರೆ.

ದೆಹಲಿಯಲ್ಲಿ ಮಂಗಳವಾರ ಕೇಂದ್ರ ಆರೋಗ್ಯ ಸಚಿವರನ್ನು ಭೇಟಿಮಾಡಿದ್ದ ಅವರು, 'ರಾಜ್ಯದಲ್ಲಿ ಕೋವಿಡ್ ಲಸಿಕೆ ವಿತರಣೆ ಚುರುಕಾಗಿ ನಡೆಯುತ್ತಿದೆ. ಸರ್ವರಿಗೂ ಲಸಿಕೆ ನೀಡಲು ಮಾಸಿಕ 1.5 ಕೋಟಿ ಡೋಸ್ ಲಸಿಕೆ ಪೂರೈಸಬೇಕು' ಎಂದು ಕೋರಿದ್ದಾರೆ.

ರಾಜ್ಯದಲ್ಲಿ 250 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ಇನ್ನೂ 250 ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಅನುದಾನ ನೀಡಬೇಕು. ಕೇಂದ್ರ ಮಂಜೂರಾತಿ ನೀಡಿರುವ ಹೊಸ ವೈದ್ಯಕೀಯ ಕಾಲೇಜುಗಳಿಗೆ ಅನುದಾನ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

'ಡೀಮ್ಡ್ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರಿ ಕೋಟಾ ಸೀಟು ಹಂಚಿಕೆಗೆ ಕ್ರಮ ಕೈಗೊಳ್ಳಲು ಕೋರಲಾಗಿದೆ. ವೈದ್ಯಕೀಯ ಕಾಲೇಜು ಇಲ್ಲದ ಜಿಲ್ಲೆಗಳಲ್ಲಿ ಸರ್ಕಾರಿ– ಖಾಸಗಿ ಸಹಭಾಗಿತ್ವದಡಿ ವೈದ್ಯಕೀಯ ಕಾಲೇಜು ಆರಂಭಿಸಲು ಕೋರಿದೆ. ರೂಪಾಂತರಿ ಕೊರೊನಾ ವೈರಾಣು ಪತ್ತೆಗೆ ಜೀನೋಮ್ ಸೀಕ್ವೆನ್ಸ್ ಪರೀಕ್ಷೆಗೆ ನೆರವು ನೀಡಲು ಹಾಗೂ ಹೆಚ್ಚಿನ ಪ್ರಮಾಣದಲ್ಲಿ ದ್ರವರೂಪದ ವೈದ್ಯಕೀಯ ಆಮ್ಲಜನಕ ಹಂಚಿಕೆಗೆ ಬೇಡಿಕೆ ಸಲ್ಲಿಸಲಾಗಿದೆ' ಎಂದು ತಿಳಿಸಿದ್ದಾರೆ.

ಐಜಿಐಸಿಎಚ್‌ನಲ್ಲಿ 100 ಹಾಸಿಗೆಗಳ ಐಸಿಯು

ಬೆಂಗಳೂರು: ಕಾಗ್ನಿಜೆಂಟ್ ಫೌಂಡೇಷನ್ ನೆರವಿನಿಂದ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ (ಐಜಿಐಸಿಎಚ್) ಸ್ಥಾಪಿಸಿರುವ 100 ಹಾಸಿಗೆಗಳ ತೀವ್ರ ನಿಗಾ ಘಟಕವನ್ನು (ಐಸಿಯು) ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಮಂಗಳವಾರ ವರ್ಚುವಲ್ ವೇದಿಕೆಯಲ್ಲಿ ಉದ್ಘಾಟಿಸಿದರು.

'ಮಕ್ಕಳಿಗಾಗಿಯೇ ₹1.32 ಕೋಟಿ ವೆಚ್ಚದಲ್ಲಿ ಐಸಿಯು ಘಟಕ ನಿರ್ಮಿಸಲಾಗಿದೆ. ಕಾಗ್ನಿಜೆಂಟ್ ಸಂಸ್ಥೆಯ ಈ ಕಾರ್ಯ ಇತರರಿಗೂ ಮಾದರಿಯಾಗುವಂತಹದ್ದು. ಕೊರೊನಾ ಸೋಂಕು ಕಾಣಿಸಿಕೊಂಡ ಮಕ್ಕಳು ಹಾಗೂ ಶಿಶುಗಳಿಗೆ ಇಲ್ಲಿ ಗುಣಮಟ್ಟದ ಚಿಕಿತ್ಸೆ ಲಭ್ಯವಾಗಲಿದೆ. ಮಕ್ಕಳಿಗೆ ಬೇಕಿರುವ ಪಿಪಿಇ ಕಿಟ್, ಆಮ್ಲಜನಕ ಸೌಲಭ್ಯದ ಹಾಸಿಗೆ, ವೆಂಟಿಲೇಟರ್, ಮಲ್ಟಿ ಪ್ಯಾರಾಮಾನಿಟರ್‌ಗಳೂ ಇಲ್ಲಿ ಇವೆ' ಎಂದು ತಿಳಿಸಿದರು.

ಕಾಗ್ನಿಜೆಂಟ್ ಇಂಡಿಯಾ ಅಧ್ಯಕ್ಷ ರಾಜೇಶ್ ನಂಬಿಯಾರ್, ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ನಿರ್ದೇಶಕ ಡಾ.ಕೆ.ಎಸ್.ಸಂಜಯ್ ಇದ್ದರು.

ಲಸಿಕೆ: 2 ಕೋಟಿ ಜನರಿಗೆ ಮೊದಲ ಡೋಸ್

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ ಒಂದೇ ದಿನ 2.81 ಲಕ್ಷ ಡೋಸ್ ಕೋವಿಡ್ ಲಸಿಕೆಯನ್ನು ವಿತರಿಸಲಾಗಿದೆ. ಈವರೆಗೆ ಮೊದಲ ಡೋಸ್ ಪಡೆದವರ ಸಂಖ್ಯೆ 2 ಕೋಟಿ ಗಡಿ ದಾಟಿದೆ.

ರಾಜ್ಯದಲ್ಲಿ ಕಳೆದ ಜ.16ರಂದು ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಲಾಗಿತ್ತು. ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಲಸಿಕೆಯ ಬೇಡಿಕೆ ಮತ್ತು ಪೂರೈಕೆ ನಡುವೆ ವ್ಯತ್ಯಯ ಉಂಟಾದ ಕಾರಣ ಅಭಿಯಾನಕ್ಕೆ ಹಿನ್ನಡೆಯಾಗಿತ್ತು. ಕೆಲ ದಿನಗಳಿಂದ ಪ್ರತಿ ನಿತ್ಯ ಎರಡು ಲಕ್ಷಕ್ಕೂ ಅಧಿಕ ಮಂದಿಗೆ ಲಸಿಕೆ ನೀಡಲಾಗುತ್ತಿದೆ. ಇದರಿಂದಾಗಿ ಐದೂವರೆ ತಿಂಗಳಲ್ಲಿ 2.01 ಕೋಟಿ ಮಂದಿ ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ. ಅವರಲ್ಲಿ 43.06 ಲಕ್ಷ ಮಂದಿ ಎರಡೂ ಡೋಸ್ ಪೂರ್ಣಗೊಳಿಸಿದ್ದಾರೆ.

'ರಾಜ್ಯದಾದ್ಯಂತ 2 ಕೋಟಿ ಜನರಿಗೆ ಕನಿಷ್ಠ ಒಂದು ಡೋಸ್ ಲಸಿಕೆ ನೀಡುವ ಮೂಲಕ ಕರ್ನಾಟಕ ಕೊರೊನಾ ಲಸಿಕೆ ವಿತರಣೆಯಲ್ಲಿ ಮತ್ತೊಂದು ಮೈಲಿಗಲ್ಲು ಸಾಧಿಸಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಟ್ವೀಟ್ ಮಾಡಿದ್ದಾರೆ.

ನೈರುತ್ಯ ರೈಲ್ವೆ
E–TENDER NOTICE No. 09 UBL 2021-22 Dt: 02.07.2021
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕಾಮಗಾರಿಯ ಹೆಸರು	ಅಂದಾಜು ವೆಚ್ಚ
1	ಹುಬ್ಬಳ್ಳಿ ವಿಭಾಗ: ಗುರುತಿಸಲಾದಪ್ರಮುಖ ಸೇತುವೆ ಅಂದರೆ ಲೋಂಡಾ–ಮಿರಜ್ ವಿಭಾಗದ ನಡುವೆ ಕಿ.ಮೀ 664/100–700ರಲ್ಲಿ 45x12.20 ಮೀ ಸ್ಪ್ಯಾನ್‌ನ ಸೇತುವೆ ಸಂಖ್ಯೆ 125ರಲ್ಲಿ ಒಟ್ಟು ವಾರ್ಷಿಕ 24 ತಿಂಗಳ ಅವಧಿಯ ನಿರ್ವಹಣೆ ಸೇರಿದಂತೆ ನೀರಿನ ಮಟ್ಟದ ಮೇಲ್ವಿಚಾರಣಾ ವ್ಯವಸ್ಥೆಯನ್ನು ಒದಗಿಸುವುದು.	Rs. 12,65,172/-
2	ಹುಬ್ಬಳ್ಳಿ ವಿಭಾಗ: ಹಿರಿಯ ವಿಭಾಗೀಯ ಇಂಜಿನೀಯರ್ / ಪೂರ್ವ ನ್ಯಾಯವ್ಯಾಪ್ತಿಯಲ್ಲಿ ಆರ್‌ಯುಬಿಗಳಲ್ಲಿ ಮತ್ತು ಎಲ್‌ಸಿ ಗೇಟ್‌ಗಳಲ್ಲಿ ಪ್ರಮಾಣಿತ ಎತ್ತರ ಮಾಪಕಗಳು ಮತ್ತು ಅಪ್ರೋಚ್ ರಸ್ತೆಯನ್ನು ಒದಗಿಸುವುದು.	Rs. 1,70,51,225/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30–07–2021, 11:00 ಗಂಟೆಯವರೆಗೆ
ಮಾಹಿತಿಗಾಗಿ www.ireps.gov.in ಗೆ ಲಾಗಾನ್ ಆಗಿ
ವಿಭಾಗೀಯ ರೈಲ್ವೆ ವ್ಯವಸ್ಥಾಪಕರು/ಕಾಮಗಾರಿಗಳು ಹುಬ್ಬಳ್ಳಿ
PUB/96/AASP/PRB/SWR/2021-22
S.W.Railways SWRRLY SWRRLY

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, 2ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು – 560002
ದೂ.: 080–22480297 ಇ–ಮೇಲ್:kla.karnataka@gmail.com
ವೆಬ್‌ಸೈಟ್: lalitkala.karnataka.gov.in
ಸಂಖ್ಯೆ: ಕಲಕಅ:ವಾ.ಬಾ/14/2021–22 ದಿನಾಂಕ: 05.07.2021
ಟೆಂಡರ್ ಪ್ರಕಟಣೆ
ದಿ. 01.08.2021 ರಿಂದ 31.07.2022ರ ವರೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರ ಸ್ಥಳೀಯ ಓಡಾಟಕ್ಕೆ ಮಾಸಿಕ ಆಧಾರದಲ್ಲಿ ತಿಂಗಳ ಬಾಡಿಗೆ, ವಾಹನ ಬಾಡಿಗೆ ಪಡೆಯಲು ದ್ವಿ–ಲಕೋಟೆ ಮಾದರಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ತಿಂಗಳ ಬಾಡಿಗೆ ಆಧಾರದ ಮೇಲೆ ವಾಹನ ಸೇವೆ ನೀಡಲು ಇಚ್ಛಿಸುವ ವಾಹನ ಮಾಲೀಕರು / ನೋಂದಾಯಿತ ಟ್ರಾವೆಲ್ಸ್‌ರವರು ಟೆಂಡರ್‌ನ್ನು ಸಲ್ಲಿಸಬಹುದಾಗಿದೆ. ಟೆಂಡರ್ ಅರ್ಜಿ ಪಡೆಯುವ ದಿನಾಂಕ: **07.07.2021.** ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **23.07.2021 (ಸಂಜೆ 5:00 ಗಂಟೆ).** ಸದರಿ ಟೆಂಡರು ತಾಂತ್ರಿಕ ಹಾಗೂ ಆರ್ಥಿಕ ಬಿಡ್ಡನ್ನು ಪ್ರತ್ಯೇಕ ಲಕೋಟೆಯಲ್ಲಿ ಇಟ್ಟು ಮೊಹರು ಮಾಡಿ ದಿನಾಂಕ: **23.07.2021ರ ಸಂಜೆ 5:00 ಗಂಟೆ** ಒಳಗೆ ಈ ಕಛೇರಿಯಲ್ಲಿ ಇರುವ ಟೆಂಡರ್ ಬಾಕ್ಸ್‌ನಲ್ಲಿ ಹಾಕುವುದು. ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ: **27.07.2021 (ಮಧ್ಯಾಹ್ನ 03:00 ಗಂಟೆ).** ಹೆಚ್ಚಿನ ವಿವರಗಳಿಗೆ ಟೆಂಡರ್ ನಿಬಂಧನೆ ಮತ್ತು ಷರತ್ತುಗಳನ್ನು ನೋಡಿಕೊಳ್ಳಬಹುದಾಗಿದೆ.
(1) ಬಾಡಿಗೆ ವಾಹನದ ಅಂದಾಜು ಮೊತ್ತ: **ತಲಾ ರೂ. 30,000/–,** (2) ಟೆಂಡರ್‌ಗೆ ನಿಗದಿಪಡಿಸಿದ ಅಂದಾಜು ಮೊತ್ತ: **3,60,000/–.** (3) ಸಲ್ಲಿಸಬೇಕಾದ ಇಎಂಡಿ ಮೊತ್ತ: **10,000/– (ಹತ್ತು ಸಾವಿರ ರೂಪಾಯಿ ಮಾತ್ರ).** (4) ಟೆಂಡರ್ ಅರ್ಜಿ ನಮೂನೆ ದೊರೆಯುವ ಹಾಗೂ ಟೆಂಡರ್ ತೆರೆಯುವ ಸ್ಥಳ: **ಕರ್ನಾಟಕ ಲಲಿತಕಲಾ ಅಕಾಡೆಮಿ, 2ನೇ ಮಹಡಿ, ಚಾಲುಕ್ಯ ವಿಭಾಗ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–02.**
ಸಹಿ/–, ರಿಜಿಸ್ಟ್ರಾರ್
ವಾಸಾಸಂಇ/ಉನಿನ/ಎಲ್‌ಸಿ/750/2021–22 ಕರ್ನಾಟಕ ಲಲಿತಕಲಾ ಅಕಾಡೆಮಿ
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕೆಂಗೇರಿ ವಿಭಾಗ, ರಾಜರಾಜೇಶ್ವರಿನಗರ ವಲಯ, # 144, 2ನೇ ಮುಖ್ಯರಸ್ತೆ, ಜಗಜ್ಯೋತಿ ಲೇಔಟ್, ಬೆಂಗಳೂರು – 560 056
ಸಂಖ್ಯೆ: ಕಾಪಾಅ/ಕೆಂಗೇರಿ/ಟೆಂಡರ್/05/2021–22 ದಿನಾಂಕ: 06.07.2021
ಟೆಂಡರ್ ಪ್ರಕಟಣೆಗಾಗಿ ಆಹ್ವಾನ (ಐಎಫ್‌ಟಿ) – (ಏಕಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ) 1ನೇ ಕರೆ
ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ ಕೆಳಗೆ ತಿಳಿಸಿರುವ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಕಾಮಗಾರಿಯ ಅಂದಾಜು ಮೊತ್ತ (₹.ಲಕ್ಷಗಳಲ್ಲಿ)
1.	ವಾರ್ಡ್ ಸಂಖ್ಯೆ–40ರ ದೊಡ್ಡಬಿದರಕಲ್ಲು, ಲಕ್ಷ್ಮಣನಗರ, ಓಂಕಾರನಗರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳನ್ನು ಅಭಿವೃದ್ಧಿ ಹಾಗೂ ಇತರೆ ಕಾಮಗಾರಿಗಳನ್ನು ಮಾಡುವುದು.	50.00
2.	ವಾರ್ಡ್ ಸಂಖ್ಯೆ–40 ದೊಡ್ಡಬಿದರಕಲ್ಲು, ತುಂಗಾನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು.	30.00
3.	ವಾರ್ಡ್ ಸಂಖ್ಯೆ–40 ದೊಡ್ಡಬಿದರಕಲ್ಲು, ತಿಗಳರಪಾಳ್ಯ ಪ.ಜಾ, ಪ.ಪಂಗಡದ ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆಯನ್ನು ಒದಗಿಸುವುದು.	5.00
ಇಎಂಡಿ (₹.ಗಳಲ್ಲಿ)	ಇಎಂಡಿ ಘೋಷಣೆ ಪ್ರಮಾಣ ಪತ್ರ	

<u>ಟೆಂಡರ್ ವೇಳಾಪಟ್ಟಿ:</u> (1) ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 15.07.2021ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: 26.07.2021ರ ಸಂಜೆ 4:00 ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ ಕೆಂಗೇರಿ ವಿಭಾಗ ಇಲ್ಲಿ ದಿನಾಂಕ: 27.07.2021ರ ಸಂಜೆ 4:00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು – ಕೆಂಗೇರಿ ವಿಭಾಗ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಭಾರತ ಸರ್ಕಾರ
ಅಣುಶಕ್ತಿ ಇಲಾಖೆ
ಅಣು ಖನಿಜಗಳ ಆವಿಷ್ಕಾರ ಮತ್ತು ಸಂಶೋಧನಾ ನಿರ್ದೇಶನಾಲಯ
1–10–153/156, ಎಎಂಡಿ ಕಾಂಪ್ಲೆಕ್ಸ್, ಬೇಗಮ್‌ಪೇಟ್, ಹೈದರಾಬಾದ್
ಇ–ಟೆಂಡರ್ ಆಹ್ವಾನ ಪ್ರಕಟಣೆ
ಎನ್‌ಐಟಿ ನಂ. ಎಎಂಡಿ/ಸಿ&ಇಎಸ್‌ಜಿ/ಎಸ್‌ಆರ್/ಇಟಿ–23/2020–21 ದಿನಾಂಕ: 30.06.2021
ಭಾರತದ ರಾಷ್ಟ್ರಪತಿಗಳ ಪರವಾಗಿ ನಿರ್ದೇಶಕರು, ಎಎಂಡಿ, ಡಿಎಇ ರವರು "ಎಸ್‌ಆರ್, ಬೆಂಗಳೂರು ಇಲ್ಲಿನ ಕಚೇರಿ ಮತ್ತು ವಸತಿ ಸಮುಚ್ಚಯಗಳಲ್ಲಿ ಮಳೆ ನೀರು ಕೊಯ್ಲು ವ್ಯವಸ್ಥೆ ಅಳವಡಿಕೆ" ಕಾಮಗಾರಿಗಾಗಿ ಪ್ರತಿಷ್ಠಿತ, ಅರ್ಹ, ಅನುಭವಿ, ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಸಮರ್ಥವಾಗಿರುವ ಏಜೆನ್ಸಿಗಳಿಂದ ಇ–ಟೆಂಡರಿಂಗ್ ಮುಖಾಂತರ ಆನ್‌ಲೈನ್ ಐಟಂ ದರ ಟೆಂಡರ್ (ದ್ವಿಬಿಡ್) ಆಹ್ವಾನಿಸಿದ್ದಾರೆ. ಅಂದಾಜು ವೆಚ್ಚ: **ರೂ.1,25,62,528/–,** ಇಎಂಡಿ: **ಶೂನ್ಯ.** ಅದಾಗ್ಯೂ ಬಿಡ್ ಸೆಕ್ಯೂರಿಟಿ ಡಿಕ್ಲರೇಶನ್ ಫಾರ್ಮ್‌ನ್ನು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಬಿಡ್‌ನ್ನು ತಿರಸ್ಕರಿಸಲಾಗುತ್ತದೆ. ಪೂರ್ಣಗೊಳಿಸುವ ಅವಧಿ: 06 ತಿಂಗಳು, ಟೆಂಡರ್ ಸಂಸ್ಕರಣಾ ಶುಲ್ಕ **ರೂ. 5900/–** ಇ–ಪಾವತಿ ರೂಪದಲ್ಲಿ. ಟೆಂಡರ್ ಪ್ರಕಟಣೆಯ ವಿವರಣೆಗಳು ಇನ್ನಿತರ ದಾಖಲಾತಿಗಳ ಸಮೇತ www.tenderwizard.com/DAE ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ. ಟೆಂಡರ್ ದಸ್ತಾವೇಜುಗಳು **07.07.2021 (11:00 ಗಂಟೆ)** ರಿಂದ **16.07.2021 (17:00)** ಗಂಟೆವರೆಗೆ ವೀಕ್ಷಣೆಗೆ/ಡೌನ್‌ಲೋಡ್‌ಗೆ ಲಭ್ಯವಿರುತ್ತವೆ. ಬಿಡ್–ಪೂರ್ವ ವಿಚಾರಣೆ **07.07.2021 ರಿಂದ 17.07.2021 (17:00)** ಗಂಟೆ ಬಿಡ್ ಪೂರ್ವ ವಿಚಾರಣೆಗಳನ್ನು ಅಪ್‌ಲೋಡ್ ಮಾಡುವ ದಿನಾಂಕ: 20.07.2021. ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ **21.07.2021 ರಂದು 17:00** ಗಂಟೆ. ಆನ್‌ಲೈನ್ ಟೆಂಡರ್ ತೆರೆಯುವಿಕೆ (ತಾಂತ್ರಿಕ ಬಿಡ್‌ಗಳು) **22.07.2021 ರಂದು 15:30** ಗಂಟೆ. ಅರ್ಹ ಬಿಡ್‌ದಾರರ ಆರ್ಥಿಕ ಬಿಡ್‌ಗಳನ್ನು ಮುಂದಿನ ದಿನಗಳಲ್ಲಿ ತೆರೆಯಲಾಗುತ್ತದೆ ಮತ್ತು ತೆರೆಯುವ ದಿನಾಂಕವನ್ನು ಪ್ರತ್ಯೇಕವಾಗಿ ತಿಳಿಸಲಾಗುತ್ತದೆ. ವಿವರವಾದ ಎನ್‌ಐಟಿ ಪ್ರಕಟಣೆಯು www.amd.gov.in ವೆಬ್‌ಸೈಟ್‌ನಲ್ಲಿ ಕೂಡ ಕೇವಲ ವೀಕ್ಷಣೆಗಾಗಿ ಮಾತ್ರ ಲಭ್ಯವಿರುತ್ತದೆ. ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ ದಯವಿಟ್ಟು ಸಂಪರ್ಕಿಸಿ 040–27776320/246.

ನಗರಸಭಾ ಕಾರ್ಯಾಲಯ, ಗೌರಿಬಿದನೂರು
ಚಿಕ್ಕಬಳ್ಳಾಪುರ ಜಿಲ್ಲೆ
ಸಂಖ್ಯೆ: ನಸಗೌ/ತಾಶಾ/ಸಿಆರ್/13/2021–22 ದಿನಾಂಕ: 30.06.2021
ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಪೌರಾಯುಕ್ತರು, ನಗರಸಭೆ ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 14ನೇ ಹಣಕಾಸು ಯೋಜನೆಯಲ್ಲಿ ಉಳಿಕೆಯಾದ ಅನುದಾನದಡಿ ಹಾಗೂ ನಗರಸಭಾ ನಿಧಿಯಡಿ ಐಟಂವಾರು ಟೆಂಡರ್‌ಗಳನ್ನು standard bidding documents KW-1 & KC-1 ಟೆಂಡರ್ ದಸ್ತಾವೇಜಿನಲ್ಲಿ (ಇಂಡೆಂಟ್ ನಂಬರ್: (Indent No. 117163, 117164, 117166, 117167, 117168, 117169, 117570, 117575, CMC/GBD/ENVI/CR/01/2021-22 & CMC/TS/CR/04/2021-22) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. (1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಂತೆ. (2) ಟೆಂಡರ್ ತೆರೆಯುವ ದಿನಾಂಕ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಂತೆ. (3) ಹೆಚ್ಚಿನ ಮಾಹಿತಿಗಾಗಿ ವಿವರಗಳನ್ನು **www.eproc.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಕಛೇರಿಯ ಸಮಯದಲ್ಲಿ ನಗರಸಭೆಯ ಪೌರಾಯುಕ್ತರು/ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/– ಪೌರಾಯುಕ್ತರು, ನಗರಸಭೆ, ಗೌರಿಬಿದನೂರು — ಸಹಿ/– ಅಧ್ಯಕ್ಷರು, ನಗರಸಭೆ, ಗೌರಿಬಿದನೂರು
ವಾ.ಸಾ.ಸಂ.ಇ./ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 73/ಎಂಸಿಎ/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

‘ಅಮೃತಮತಿ’ ಚಿತ್ರದಲ್ಲಿನ ಪಾತ್ರಕ್ಕಾಗಿ ಸಂದ ಗೌರವ

ಚಿತ್ರವು ಶೀಘ್ರದಲ್ಲೇ ಮುಂಬೈ ಸಂಸ್ಥೆಯೊಂದರ ಮೂಲಕ ಕರ್ನಾಟಕದ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

ಹರಿಪ್ರಿಯಾಗೆ ಹಾಲಿವುಡ್ ಪ್ರಶಸ್ತಿ

ಬೆಂಗಳೂರು: ಇತ್ತೀಚೆಗೆ ನಡೆದ ಹಾಲಿವುಡ್ ಅಂತರರಾಷ್ಟ್ರೀಯ ಗೋಲ್ಡನ್ ಏಜ್ ಚಿತ್ರೋತ್ಸವದಲ್ಲಿ ‘ಅಮೃತಮತಿ’ ಚಿತ್ರದಲ್ಲಿನ ಪಾತ್ರಕ್ಕಾಗಿ ನಟಿ ಹರಿಪ್ರಿಯಾ ಅವರಿಗೆ ಶ್ರೇಷ್ಠ ನಟಿ ಪ್ರಶಸ್ತಿ ಲಭಿಸಿದೆ.

ಇದಕ್ಕೂ ಮುನ್ನ ನೋಯ್ಡಾದ ಎರಡು ಸಂಸ್ಥೆಗಳು ನಡೆಸಿದ ಎರಡು ಪ್ರತ್ಯೇಕ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲೂ ಹರಿಪ್ರಿಯಾ ಅವರು ಶ್ರೇಷ್ಠ ನಟಿ ಪ್ರಶಸ್ತಿಗೆ ಭಾಜನರಾಗಿದ್ದರು. ಹೀಗಾಗಿ ಒಟ್ಟು ಮೂರು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಅವರು ಶ್ರೇಷ್ಠ ನಟಿ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.



ಇಂಚರ ಪುಟ್ಟಣ್ಣ ಪ್ರೊಡಕ್ಷನ್ಸ್ ಮೂಲಕ ನಿರ್ಮಾಣಗೊಂಡು ಬರಗೂರು ರಾಮಚಂದ್ರಪ್ಪನವರು ನಿರ್ದೇಶಿಸಿದ ‘ಅಮೃತಮತಿ’ ಚಿತ್ರವು ಅಟ್ಲಾಂಟ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ‘ಶ್ರೇಷ್ಠ ವಿದೇಶಿ ಭಾಷಾ ಚಿತ್ರ’ ಪ್ರಶಸ್ತಿ ಗಳಿಸಿತ್ತು. ಲಾಸ್ ಏಂಜಲಿಸ್ ಸನ್ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಶ್ರೇಷ್ಠ ಚಿತ್ರ ಮತ್ತು ಬರಗೂರರಿಗೆ ಶ್ರೇಷ್ಠ ಚಿತ್ರಕಥೆ ಪ್ರಶಸ್ತಿ ಲಭಿಸಿತ್ತು.

ಇಲ್ಲಿಯವರೆಗೆ ಈ ಚಿತ್ರವು ಹತ್ತಕ್ಕೂ ಅಧಿಕ ಅಂತರ ರಾಷ್ಟ್ರೀಯ ಚಿತ್ರೋತ್ಸವಗಳಿಗೆ ಆಯ್ಕೆಯಾಗಿ ಪ್ರದರ್ಶನ ಕಂಡಿದೆ. ‘ಇಂತಹ ಮನ್ನಣೆಗೆ ಪಾತ್ರವಾಗುತ್ತಿರುವ ಈ ಚಿತ್ರವು ಕನ್ನಡದ ಪ್ರಾಚೀನ ಕೃತಿಯಾದ ‘ಯಶೋಧರ ಚರಿತೆ’ಯ ಪ್ರಸಂಗವನ್ನು ಆಧರಿಸಿ ಮರುವ್ಯಾಖ್ಯಾನಗೊಂಡ ಚಿತ್ರವೆನ್ನುವುದು ಒಂದು ವಿಶೇಷ’ ಎನ್ನುತ್ತಾರೆ ಬರಗೂರು ರಾಮಚಂದ್ರಪ್ಪ.

ಚಿತ್ರದಲ್ಲಿ ಯಶೋಧರನ ಪಾತ್ರದಲ್ಲಿ ಬಹುಭಾಷಾ ನಟ ಕಿಶೋರ್ ಅವರು ನಟಿಸಿದ್ದು, ಸುಂದರರಾಜ್, ಪ್ರಮೀಳಾ ಜೋಷಾಯ್ ತಿಲಕ್, ಸುಪ್ರಿಯಾರಾವ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಸಾಧ್ಯತೆಗಳು

ಒಂದನೇ ಪುಟದಿಂದ

- ಹೊಸ ತಲೆಮಾರಿನ ಮುಖಂಡರನ್ನು ಮುನ್ನೆಲೆಗೆ ತರಲು ಹೊಸ ಮುಖಗಳು ಮತ್ತು ಯುವ ಜನರಿಗೆ ಮನ್ನಣೆ
- ಜಾತಿ ಮತ್ತು ಪ್ರಾದೇಶಿಕ ಸಮತೋಲನಕ್ಕೆ ಒತ್ತು
- ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಕೆಲವು ಮುಖಂಡರಿಗೆ ಸಚಿವ ಸ್ಥಾನ
- ಗೆಹ್ಲೋಟ್ ಅವರಲ್ಲದೆ, ಇತರ ಕೆಲವು ಸಚಿವರ ತಲೆದಂಡ
- ಒಂದಕ್ಕಿಂತ ಹೆಚ್ಚು ಖಾತೆಗಳನ್ನು ಹೊಂದಿರುವವರು ಹೆಚ್ಚುವರಿ ಖಾತೆ ಕಳೆದುಕೊಳ್ಳಬಹುದು

ನಿಧನ ವಾರ್ತೆ

ಸದಾನಂದ ಕೆ.ಸಿ.

ಬೆಂಗಳೂರು: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರ ಮಾಧ್ಯಮ ಕಾರ್ಯದರ್ಶಿಯಾಗಿದ್ದ ಪತ್ರಕರ್ತ ಸದಾನಂದ ಕೆ.ಸಿ. (49) ಹೃದಯಾಘಾತದಿಂದ ಸೋಮವಾರ ರಾತ್ರಿ ನಿಧನರಾದರು.

ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಕೆಲಗೆರೆ ಗ್ರಾಮದವರಾದ ಸದಾನಂದ, ವಿವಿಧ ಪತ್ರಿಕೆಗಳಲ್ಲಿ ವರದಿಗಾರರಾಗಿ ಕಾರ್ಯನಿರ್ವಹಿಸಿದ್ದರು. ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿಯವರ ಮಾಧ್ಯಮ ಸಮನ್ವಯಕಾರರಾಗಿ ನೇಮಕಗೊಂಡಿದ್ದರು. ಸರ್ಕಾರ ಪತನದ ಬಳಿಕ ಖಾಸಗಿಯಾಗಿ, ಕುಮಾರಸ್ವಾಮಿ ಅವರ ಮಾಧ್ಯಮ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು.

ಮೃತರಿಗೆ ತಂದೆ, ಇಬ್ಬರು ಸಹೋದರರು, ಪತ್ನಿ ಮತ್ತು ಮಗ ಇದ್ದಾರೆ. ಹರಿಶ್ಚಂದ್ರ ಘಾಟ್‌ನಲ್ಲಿ ಮಂಗಳವಾರ ಮಧ್ಯಾಹ್ನ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ವಾಸುದೇವಮೂರ್ತಿ



ಮೈಸೂರು: ಮಹಾಜನ ಎಜುಕೇಷನ್ ಸೊಸೈಟಿ ಸಂಸ್ಥಾಪಕ ಅಧ್ಯಕ್ಷ ಆರ್.ವಾಸುದೇವಮೂರ್ತಿ (93) ಇಲ್ಲಿನ ಜಯಲಕ್ಷ್ಮಿಪುರಂನ ತಮ್ಮ ನಿವಾಸದಲ್ಲಿ ವಯೋಸಹಜ ಕಾರಣಗಳಿಂದ ಮಂಗಳವಾರ ನಿಧನರಾದರು.

ಅವರಿಗೆ ಪತ್ನಿ ಹಾಗೂ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಗೋಕುಲಂ ಅನಿಲ ಚಿತಾಗಾರದಲ್ಲಿ ನಡೆಯಿತು.

ಟ್ವಿಟರ್ ಎಂ.ಡಿಗೆ ನೋಟಿಸ್ ಹೈಕೋರ್ಟ್ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೃದ್ಧನ ಮೇಲಿನ ಹಲ್ಲೆ ಪ್ರಕರಣ ವಿಡಿಯೊ ವೈರಲ್ ಆದ ಪ್ರಕರಣದ ಸಂಬಂಧ ಟ್ವಿಟರ್ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕ ಮನಿಶ್ ಮಹೇಶ್ವರಿ ಅವರನ್ನು ನಿರಂತರವಾಗಿ ಪ್ರಶ್ನೆ ಮಾಡುವ ಮೂಲಕ ಉತ್ತರ ಪ್ರದೇಶ ಪೊಲೀಸರು ತನಿಖೆಯನ್ನು ಯಾವ ದಿಕ್ಕಿಗೆ ಕೊಂಡೊಯ್ಯಲು ಪ್ರಯತ್ನಿಸುತ್ತಿದ್ದಾರೆ’ ಎಂದು ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಉತ್ತರ ಪ್ರದೇಶದ ಗಾಜಿಯಾಬಾದ್ ಜಿಲ್ಲೆಯ ಲೋನಿ ಬಾರ್ಡರ್ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣ ಸಂಬಂಧ ನೀಡಿರುವ ನೋಟಿಸ್ ರದ್ದುಪಡಿಸುವಂತೆ ಕೋರಿ ಬೆಂಗಳೂರಿನ ನಿವಾಸಿ ಆಗಿರುವ ಮನಿಶ್ ಮಹೇಶ್ವರಿ ಅರ್ಜಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ಜಿ. ನರೇಂದ್ರ ಅವರಿದ್ದ ಪೀಠ, ‘ಐ.ಟಿ ಕಾಯ್ದೆಯ 76ನೇ ಸೆಕ್ಷನ್ ಅನ್ನು ಈ ಪ್ರಕರಣಕ್ಕೆ ಅನ್ವಯಿಸಲು ಹೊರಟಿರುವುದು ಆಶ್ಚರ್ಯ ಎನಿಸಿದೆ. ಟ್ವಿಟರ್ ಇಂಡಿಯಾ ಮಧ್ಯವರ್ತಿ ಎಂದು ಹೇಳಿಕೊಂಡಿದೆಯೇ ಅಥವಾ ಮಧ್ಯವರ್ತಿ ಎಂಬುದನ್ನು ಖಚಿತಪಡಿಸಲು ನಿಮ್ಮಿಂದ ಸಾಧ್ಯವಿದೆಯೇ’ ಎಂದು ಪ್ರಶ್ನಿಸಿತು.

‘ಮನಿಶ್ ಅವರನ್ನು ಬಂಧಿಸುವ ಉದ್ದೇಶ ಪೊಲೀಸರಿಗೆ ಇಲ್ಲ. ತನಿಖೆ ಅನುಕೂಲ ಆಗುವಂತೆ ವಿಚಾರಣೆ ನಡೆಸುವ ಉದ್ದೇಶವಷ್ಟೇ ಇದೆ’ ಎಂದು ಪೊಲೀಸರ ಪರ ವಕೀಲರು ಹೇಳಿದರು.

‘ವಿಚಾರಣೆಗೆ ಹಾಜರಾಗಿ ತನಿಖೆಗೆ ಸಹಕರಿಸಲು ಅರ್ಜಿದಾರರು ಸಿದ್ಧರಿದ್ದಾರೆ. ಆದರೆ, ಸಿಆರ್‌ಪಿಸಿ ಸೆಕ್ಷನ್ 41ಎ ಅಡಿಯಲ್ಲಿ ನೋಟಿಸ್ ನೀಡಿರುವುದನ್ನು ಗಮನಿಸಿದರೆ ಬಂಧಿಸುವ ಸಾಧ್ಯತೆ ಇದೆ’ ಎಂದು ಅರ್ಜಿದಾರರ ಪರ ವಕೀಲ ಸಿ.ವಿ. ನಾಗೇಶ್ ವಾದಿಸಿದರು.

ಮನಿಶ್ ಅವರನ್ನು ವಿಚಾರಣೆ ನಡೆಸಲೇಬೇಕೆಂದರೆ ಅದಕ್ಕೆ ವರ್ಚುವಲ್ ಮಾದರಿಯಲ್ಲಿ ಅವಕಾಶ ಇದೆ. ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆಸುವಂತೆ ಉತ್ತರ ಪ್ರದೇಶ ಪೊಲೀಸರಿಗೆ ಹೈಕೋರ್ಟ್ ಜೂನ್ 24ರಂದು ಮಧ್ಯಂತರ ಆದೇಶ ನೀಡಿತ್ತು.

‘ಮಠದ ಹೆಸರು ಬಳಸಿದರೆ ಕಾನೂನು ಕ್ರಮ’

ಚಿತ್ರದುರ್ಗ: ‘ಶಿವಮೊಗ್ಗ ಜಿಲ್ಲೆಯ ಕೂಡಲಿ ಶೃಂಗೇರಿ ಮಠದ ಹೆಸರು ದುರ್ಬಳಕೆ ಮಾಡಿಕೊಂಡು ಭಕ್ತರಲ್ಲಿ ಗೊಂದಲ ಸೃಷ್ಟಿಸಿದರೆ ನ್ಯಾಯಾಲಯದ ಮೊರೆಹೋಗಲಿದ್ದು, ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಕೂಡಲಿ ಶೃಂಗೇರಿ ಮಠದ ವಿದ್ಯಾಭಿನವ ವಿದ್ಯಾರಣ್ಯ ಭಾರತೀ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಅವರು, ‘ನಮ್ಮದು ಮೂಲ ಮಠ. ಸಂಬಂಧಿಸಿದ ಪ್ರಕರಣ ನ್ಯಾಯಾಲಯದಲ್ಲಿ ಇತ್ಯರ್ಥವಾಗಿದೆ. ಬೆಂಗಳೂರಿನ ಚಾಮರಾಜಪೇಟೆಯ ಅವಿಚ್ಛಿನ್ನ ಮಠ ಮತ್ತೆ ವಿವಾದ ಸೃಷ್ಟಿಸುವ ಕೆಲಸ ಮಾಡುತ್ತಿದೆ. ಅವಿಚ್ಛಿನ್ನ ಮಠಕ್ಕೂ ಕೂಡಲಿ ಶೃಂಗೇರಿ ಪೀಠಕ್ಕೂ ಯಾವುದೇ ಸಂಬಂಧವಿಲ್ಲ’ ಎಂದು ಹೇಳಿದರು.

ಟೋಕಿಯೋ ಒಲಂಪಿಕ್ ಸಮಾರಂಭಕ್ಕೆ ಅಧಿಕೃತ ಧ್ವಜ ಧಾರಕರು

ಕಲಾ ತಪಸ್ವಿ ಪ್ರೊ. ರಾವ್ 90ನೇ ಜನ್ಮ ದಿನ ವರ್ಷವಿಡೀ ಆಚರಣೆ: ಬಿ.ಎಲ್. ಶಂಕರ್

ಬೆಂಗಳೂರು: 'ಚಿತ್ರಕಲಾ ಪರಿಷತ್ತಿನ ಸಂಸ್ಥಾಪಕ ಕಾರ್ಯದರ್ಶಿಯಾಗಿದ್ದ ಪ್ರೊ. ಎಂ.ಎಸ್. ನಂಜುಂಡರಾವ್ ಅವರ 90ನೇ ಜನ್ಮ ದಿನಾಚರಣೆಯನ್ನು ವಿವಿಧ ಕಾರ್ಯಕ್ರಗಳೊಂದಿಗೆ ಇಡೀ ವರ್ಷ ಆಚರಿಸಲಾಗುವುದು' ಎಂದು ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್ ತಿಳಿಸಿದ್ದಾರೆ.

‘1960ರಲ್ಲಿ ಸ್ಥಾಪನೆಯಾದ ಚಿತ್ರಕಲಾ ಪರಿಷತ್ ಹಲವಾರು ಕಲಾ ವಿದ್ಯಾರ್ಥಿಗಳಿಗೆ ಕಲಾವಿದರಿಗೆ, ಕಲಾ ಸಂಗ್ರಹಗಾರರಿಗೆ ಮತ್ತು ಕಲಾ ಪೋಷಕರ ಕಲಾರ್ಜನೆಗೆ ಅಗ್ರ ಸಂಸ್ಥೆಯಾಗಿ ಬೆಳೆಯುವಂಥ ಅವಕಾಶ ಮತ್ತು ವಾತಾವರಣವನ್ನು ಪ್ರೊ. ರಾವ್ ಕಲ್ಪಿಸಿಕೊಟ್ಟಿದ್ದರು. ಕಲಾ ಶಿಬಿರ, ಸಮ್ಮೇಳನಗಳು ಮತ್ತು ಸೆಮಿನಾರ್ ಚಟುವಟಿಕೆ ನಡೆಸಲು ಉತ್ತೇಜನ ನೀಡಿ ಕಲಾ ಸಂಶೋಧಕರು ಮತ್ತು ಕಲಾ ವಿಮರ್ಶಕರನ್ನು ಪರಿಷತ್ತಿಗೆ ಆಹ್ವಾನಿಸುತ್ತಿದ್ದರು’ ಎಂದೂ ಅವರು ವಿವರಿಸಿದ್ದಾರೆ. ರಾವ್ ಅವರು ಸಂಗ್ರಹಿಸಿರುವ ಆಯ್ದ ಕಲಾ ಕೃತಿಗಳ ಪ್ರದರ್ಶನ ಪರಿಷತ್ತಿನ ಕಲಾ ಗ್ಯಾಲರಿಯಲ್ಲಿ ನಡೆಯಲಿದೆ

ನಿಮ್ಹಾನ್ಸ್‌ಗೆ ವೈದ್ಯಕೀಯ ಉಪಕರಣ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಪರಿಹಾರ ಟ್ರಸ್ಟ್ ಹಾಗೂ ಸಿನೊಪ್ಸಿಸ್ ಇಂಡಿಯಾ ಪ್ರೈ.ಲಿ. ನೀಡಿದ ಆರ್ಥಿಕ ಪರಿಹಾರವನ್ನು ಬಳಸಿಕೊಂಡು, ರೋಟರಿ ಕ್ಲಬ್ ನೈರುತ್ಯ ವಿಭಾಗ ಹಾಗೂ ಪ್ರಾಜೆಕ್ಟ್ ಸ್ಟೆಪ್ ಒನ್ ₹ 8.5 ಲಕ್ಷ ಮೌಲ್ಯದ ವೈದ್ಯಕೀಯ ಉಪಕರಣಗಳನ್ನು ನಿಮ್ಹಾನ್ಸ್‌ಗೆ ಹಸ್ತಾಂತರಿಸಿವೆ.

ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಮ್ಲಜನಕ ಹಾಗೂ ತೀವ್ರ ನಿಗಾ ಘಟಕಕ್ಕೆ ಮೂಲಸೌಕರ್ಯ ಒದಗಿಸುವ ಕಾರ್ಯವನ್ನು ರೋಟರಿ ಕ್ಲಬ್ ನೈರುತ್ಯ ವಿಭಾಗ ಹಾಗೂ ಪ್ರಾಜೆಕ್ಟ್ ಸ್ಟೆಪ್ ಒನ್ ಮುಂದುವರೆಸಿವೆ. ಮೂಲಸೌಕರ್ಯ ವೃದ್ಧಿಗೆ ಈವರೆಗೆ ₹ 50 ಲಕ್ಷ ಮೌಲ್ಯದ ವಿವಿಧ ವೈದ್ಯಕೀಯ ಉಪಕರಣಗಳನ್ನು ದಾನ ನೀಡಿವೆ.

ರೋಟರಿ ಕ್ಲಬ್ ನೈರುತ್ಯ ವಿಭಾಗದ ಅಧ್ಯಕ್ಷ ಅಮರಚಂದ್ ರಾಂಧರ್ ಅವರು ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ಅವರಿಗೆ ವೈದ್ಯಕೀಯ ಉಪಕರಣಗಳನ್ನು ಹಸ್ತಾಂತರಿಸಿದರು

ರೋಟರಿ ಕ್ಲಬ್ ನೈರುತ್ಯ ವಿಭಾಗದ ಅಧ್ಯಕ್ಷ ಅಮರಚಂದ್ ರಾಂಧರ್ ಅವರು ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ಅವರಿಗೆ 5 ಬೈಪಾಸ್ ಯಂತ್ರಗಳು, 2 ಎಚ್‌ಎನ್‌ಎಫ್‌ಸಿ ಯಂತ್ರಗಳನ್ನು ಹಸ್ತಾಂತರಿಸಿದರು.

ಸಹಕಾರ ಸಚಿವಾಲಯ ರಚನೆ ನಿರ್ಧಾರ

ಒಂದನೇ ಪುಟದಿಂದ

‘ಸಹಕಾರದಿಂದ ಸಮೃದ್ಧಿ (ಸಹಕಾರ್ ಸೇ ಸಮೃದ್ಧಿ)’ ಎಂಬ ಧ್ಯೇಯದೊಂದಿಗೆ ಸಚಿವಾಲಯ ಕಾರ್ಯ ನಿರ್ವಹಿಸುವುದು. ದೇಶದಲ್ಲಿ ಸಹಕಾರ ಚಳವಳಿಯನ್ನು ಬಲಪಡಿಸಲು ಪ್ರತ್ಯೇಕ ಆಡಳಿತ, ಕಾನೂನು ಮತ್ತು ನೀತಿ ಚೌಕಟ್ಟನ್ನು ನೂತನ ಸಚಿವಾಲಯ ರೂಪಿಸಲಿದೆ’ ಎಂದು ಮೂಲಗಳು ಹೇಳಿವೆ.

ಕೇಂದ್ರ ಸಚಿವ ಸಂಪುಟವನ್ನು ಬುಧವಾರ ಪುನರ್‌ರಚಿಸಲಾಗುತ್ತಿದೆ. ಈ ಸಂದರ್ಭದಲ್ಲಿಯೇ, ಸರ್ಕಾರ ಈ ಮಹತ್ವದ ನಿರ್ಧಾರ ಕೈಗೊಂಡಿದೆ. ಅಲ್ಲದೇ, ಅದೇ ದಿನವೇ ಈ ಖಾತೆಯ ನೂತನ ಸಚಿವರ ಹೆಸರನ್ನು ಘೋಷಿಸುವ ಸಾಧ್ಯತೆಗಳಿವೆ ಎಂದು ಇವೇ ಮೂಲಗಳು ಹೇಳಿವೆ.

‘ದೇಶದ ಅಭಿವೃದ್ಧಿಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಗೆ ಕೇಂದ್ರ ಸರ್ಕಾರ ಒತ್ತು ನೀಡಿದೆ. ಸಹಕಾರ ಸಚಿವಾಲಯವನ್ನು ರಚಿಸುವ ಬಗ್ಗೆ ಹಣಕಾಸು ಸಚಿವರು ಬಜೆಟ್‌ನಲ್ಲಿ ಮಾಡಿದ್ದ ಘೋಷಣೆಯನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ’ ಎಂದು ಇವೇ ಮೂಲಗಳು ಹೇಳಿವೆ.

‘ಸಹಕಾರದಿಂದ ಸಮೃದ್ಧಿ’ ಎಂಬ ಧ್ಯೇಯದೊಂದಿಗೆ ಸಹಕಾರ ಸಚಿವಾಲಯ ಸ್ಥಾಪಿಸಲಾಗಿದೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಟ್ವೀಟ್ ಮಾಡಿದ್ದಾರೆ.

‘ಪ್ರಧಾನಿ ಮೋದಿ ಅವರು ಮೊದಲು ಜಲ ಶಕ್ತಿ ಸಚಿವಾಲಯವನ್ನು ರಚಿಸಿದರು. ಈಗ ಸಹಕಾರ ಸಚಿವಾಲಯವನ್ನು ರಚಿಸಿದ್ದಾರೆ. ಗ್ರಾಮೀಣ ಪ್ರದೇಶದ ಆರ್ಥಿಕತೆಯನ್ನು ಬಲಪಡಿಸುವಲ್ಲಿ ಈ ಕ್ರಮ ದೀರ್ಘಾವಧಿ ಪರಿಣಾಮ ಬೀರುವುದು’ ಎಂದೂ ಅವರು ಟ್ವೀಟ್ ಮಾಡಿದ್ದಾರೆ.



ಡ್ರಗ್ಸ್ ಮಾರಾಟ ದಂಧೆ: ಹಲವು ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಷ್ಠಿತ ಕಾಲೇಜು ವಿದ್ಯಾರ್ಥಿಗಳಿಗೆ ಕೊಕೇನ್ ಹಾಗೂ ಎಂಡಿಎಂಎ ಸೇರಿದಂತೆ ಡ್ರಗ್ಸ್ ಪೂರೈಸುತ್ತಿದ್ದ ವಿದೇಶಿ ಪ್ರಜೆ ಹಾಗೂ ದಂಧೆಯಲ್ಲಿ ಭಾಗಿಯಾಗಿದ್ದ 10 ಮಂದಿ ವಿದ್ಯಾರ್ಥಿಗಳನ್ನು ಉತ್ತರ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಡ್ರಗ್ಸ್ ಮಾರಾಟ ದಂಧೆಯ ಮೇಲೆ ಜೆ.ಸಿ.ನಗರ ಹಾಗೂ ಸಂಜಯನಗರ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿದ್ದರು.

'ಜೆ.ಸಿ.ನಗರ ಠಾಣಾ ವ್ಯಾಪ್ತಿಯ ಗ್ಯಾರೇಜುವೊಂದರ ಬಳಿ ಗಾಂಜಾ ಮಾರುತ್ತಿದ್ದ ಮೂವರು ಕಾಲೇಜು ವಿದ್ಯಾರ್ಥಿಗಳನ್ನು ಬಂಧಿಸಲಾಯಿತು. ಇವರು ಡಾರ್ಕ್‌ವೆಬ್ ಹಾಗೂ ವಿಕ್ಕರ್ ಮೆಸೆಂಜರ್ ಮುಖಾಂತರ ಗಾಂಜಾ ಹಾಗೂ ವೀಡಾಯಿಲ್ ತರಿಸಿಕೊಂಡು, ಸ್ನೇಹಿತರಿಗೆ ಮಾರಾಟ ಮಾಡುತ್ತಿರುವುದಾಗಿ ವಿಚಾರಣೆ ವೇಳೆ ತಿಳಿಸಿದರು'.

'ಇವರ ಮಾಹಿತಿ ಮೇರೆಗೆ ಮತ್ತೆ ಮೂವರು ವಿದ್ಯಾರ್ಥಿಗಳನ್ನು ಬಂಧಿಸಲಾಯಿತು. ಇವರಿಂದ ಒಂದು ಕೆ.ಜಿ ಗಾಂಜಾ, ಲ್ಯಾಪ್‌ಟಾಪ್, ಮೊಬೈಲ್, ಕಾರು ಹಾಗೂ ಜಪ್ತಿ ಮಾಡಲಾಯಿತು' ಎಂದು ಪೊಲೀಸರು ತಿಳಿಸಿದರು. ಆದರೆ, ಆರೋಪಿಗಳ ವಿವರಗಳನ್ನು ಪೊಲೀಸರು ಬಹಿರಂಗ ಪಡಿಸಲಿಲ್ಲ.

ಡ್ರಗ್ಸ್ ಪೂರೈಸುತ್ತಿದ್ದ ವಿದೇಶಿ ಪ್ರಜೆ: ವಿದ್ಯಾರ್ಥಿಯೊಬ್ಬನಿಗೆ ಕೊಕೇನ್ ಹಾಗೂ ಎಂಡಿಎಂಎ ಡ್ರಗ್ಸ್ ಪೂರೈಸುತ್ತಿದ್ದ ಆರೋಪದ ಮೇರೆಗೆ ಕಮ್ಮನಹಳ್ಳಿಯ ಲಿಂಗರಾಜಪುರದಲ್ಲಿ ವಾಸವಿದ್ದ ಪ್ರದೀಪ್ ಕುಮಾರ್ (24) ಎಂಬ ವ್ಯಕ್ತಿಯನ್ನು ಬಂಧಿಸಲಾಗಿದೆ.

ಪೊಲೀಸರು ಜಪ್ತಿ ಮಾಡಿರುವ ಮಾದಕ ವಸ್ತುಗಳು.

ವಾಯುವಿಹಾರದ ವೇಳೆ ಸರಗಳವು: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಯುವಿಹಾರಕ್ಕೆ ಬರುವ ಮಹಿಳೆಯರನ್ನು ಹಿಂಬಾಲಿಸಿ ಸರಗಳ್ಳತನ ಮಾಡುತ್ತಿದ್ದ ಇಬ್ಬರನ್ನು ರಾಜರಾಜೇಶ್ವರಿ ನಗರದ ಪೊಲೀಸರು ಬಂಧಿಸಿದ್ದಾರೆ.

'ತಲಘಟ್ಟಪುರ ನಿವಾಸಿಗಳಾದ ರವಿ ಹಾಗೂ ರಾಹುಲ್ ಬಂಧಿತರು. ಮಹಿಳೆಯೊಬ್ಬರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಇವರು ಕದ್ದಿದ್ದ ಚಿನ್ನಾಭರಣ, ಬೈಕ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಮಂಡ್ಯದ ರವಿ ಕತ್ರಿಗುಪ್ಪೆಯಲ್ಲಿ ಮೊಬೈಲ್ ಅಂಗಡಿ ನಡೆಸುತ್ತಿದ್ದ. ಇವನಿಗೆ ಪರಿಚಯವಿದ್ದ ರಾಹುಲ್, ನೀರಿನ ಕ್ಯಾನ್‌ಗಳನ್ನು ಪೂರೈಸುವ ಕೆಲಸ ಮಾಡುತ್ತಿದ್ದ. ಲಾಕ್‌ಡೌನ್‌ನಿಂದಾಗಿ ಇಬ್ಬರೂ ನಷ್ಟ ಅನುಭವಿಸಿದ್ದರು. ಅಕ್ರಮವಾಗಿ ಹಣ ಗಳಿಸುವ ಉದ್ದೇಶದಿಂದ ಕೃತ್ಯಕ್ಕೆ ಇಳಿದಿದ್ದರು'.

'ಜೂ. 27ರಂದು ವಿವೇಕಾನಂದ ಪಾರ್ಕ್ ಬಳಿ ಮಹಿಳೆಯೊಬ್ಬರು ವಾಯುವಿಹಾರಕ್ಕೆ ಬಂದಿದ್ದರು. ನಡಿಗೆದಾರರ ಸೋಗಿನಲ್ಲಿ ಬಂದಿದ್ದ ಆರೋಪಿಗಳು, ಆಕೆಯ ಸರ ಕಸಿದು ಬೈಕ್‌ನಲ್ಲಿ ಪರಾರಿಯಾಗಿದ್ದರು. ಸಿಸಿಟಿವಿ ದೃಶ್ಯಾವಳಿಗಳನ್ನು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು. ಇವರು ಎಟಿಎಂ ದರೋಡೆಗೂ ಯತ್ನಿಸಿದ್ದರು' ಎಂದೂ ಹೇಳಿದರು.

ಲಸಿಕೆ... ನಗರದ ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಮಂಗಳವಾರ ನಡೆದ ಕೋವಿಡ್ ಲಸಿಕೆ ವಿತರಣಾ ಅಭಿಯಾನದಲ್ಲಿ ವಿದ್ಯಾರ್ಥಿಗಳು ಲಸಿಕೆ ಪಡೆದುಕೊಂಡರು — ಪ್ರಜಾವಾಣಿ ಚಿತ್ರ

ಆರ್‌ಟಿಇ: ಅಂತಿಮ ದಿನ ವಿಸ್ತರಿಸಲು ಮನವಿ

ಬೆಂಗಳೂರು: 'ಆರ್‌ಟಿಇ ಅಡಿ ವಿದ್ಯಾರ್ಥಿಗಳ ದಾಖಲಾತಿಗೆ ಪ್ರಸಕ್ತ ಸಾಲಿನಲ್ಲಿ (2021–22) ನಿಗದಿಪಡಿಸಿರುವ ಕೊನೆಯ ದಿನವನ್ನು ವಿಸ್ತರಿಸಬೇಕು' ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಆರ್‌ಟಿಇ ವಿದ್ಯಾರ್ಥಿಗಳು ಮತ್ತು ಪೋಷಕರ ಸಂಘಟನೆ ಮನವಿ ಸಲ್ಲಿಸಿದೆ.

ಆರ್‌ಟಿಇ ಅಡಿ ಅನುದಾನರಹಿತ ಶಾಲೆಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳು ದಾಖಲಾಗಲು ಇದೇ 9 ಕೊನೆಯ ದಿನ. ಕೋವಿಡ್ ಕಾರಣದಿಂದ ತಮ್ಮ ಊರಿಗೆ ಮರಳಿರುವ ಪೋಷಕರು ಲಾಕ್‌ಡೌನ್ ತೆರವುಗೊಳ್ಳುತ್ತಿದ್ದಂತೆ ಈಗಷ್ಟೆ ತಮ್ಮ ಮನೆಗಳಿಗೆ ವಾಪಾಗುತ್ತಿದ್ದಾರೆ. ಪೋಷಕರು ಊರಿಗೆ ಮರಳಿದ್ದರಿಂದ ನಗರ ಪ್ರದೇಶಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಆರ್‌ಟಿಇ ವಿದ್ಯಾರ್ಥಿಗಳ ದಾಖಲಾತಿ ಸಾಧ್ಯ ಆಗಿಲ್ಲ. ಆದ್ದರಿಂದ ದಾಖಲಾತಿ ದಿನವನ್ನು ಒಂದು ವಾರ ಅವಧಿಗೆ ವಿಸ್ತರಿಸಬೇಕು ಎಂದು ಸಂಘಟನೆಯ ಪ್ರಧಾನ ಕಾರ್ಯದರ್ಶಿ ಬಿ.ಎನ್. ಯೋಗಾನಂದ ಅವರು ಮನವಿ ಮಾಡಿದ್ದಾರೆ .

'ನಾಲ್ಕು ವರ್ಷಗಳ ಪದವಿ ಬೇಡ'

ಬೆಂಗಳೂರು: 'ಹೊಸ ಶಿಕ್ಷಣ ನೀತಿ ಅನ್ವಯ ಪದವಿ ವ್ಯಾಸಂಗವನ್ನು ಮೂರು ವರ್ಷದಿಂದ ನಾಲ್ಕು ವರ್ಷಕ್ಕೆ ವಿಸ್ತರಿಸಲಾಗಿದೆ. ಕನ್ನಡ ಭಾಷೆ ಕಲಿಕೆಯನ್ನು ಒಂದು ವರ್ಷಕ್ಕೆ ಸೀಮಿತಗೊಳಿಸಲಾಗಿದೆ. ವಿದ್ಯಾರ್ಥಿ ಹಾಗೂ ಭಾಷಾ ವಿರೋಧಿ ಕ್ರಮಗಳನ್ನು ಕೂಡಲೇ ಹಿಂಪಡೆಯಬೇಕು' ಎಂದು ಎಐಎಸ್‌ಎಫ್, ಎಸ್‌ಎಫ್‌ಐ, ಎಐಡಿಎಸ್‌ಒ, ಕೆವಿಎಸ್ ಸಂಘಟನೆಗಳನ್ನು ಒಳಗೊಂಡ ಎಡ ವಿದ್ಯಾರ್ಥಿ ಒಕ್ಕೂಟವು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

'ಪದವಿ ಪಡೆಯುವವರ ಸಂಖ್ಯೆ ಹೆಚ್ಚುತ್ತಿದ್ದು, ನಿರುದ್ಯೋಗ ಪ್ರಮಾಣವೂ ಏರುತ್ತಿದೆ. 'ನಿರುದ್ಯೋಗಿಗಳ ಸೈನ್ಯ' ಸೇರುವವರನ್ನು ಒಂದು ವರ್ಷದ ಮಟ್ಟಿಗಾದರೂ ತಡೆಯಬಹುದು ಎಂಬ ದುರುದ್ದೇಶದಿಂದ ಪದವಿ ವ್ಯಾಸಂಗವನ್ನು 4 ವರ್ಷಗಳಿಗೆ ವಿಸ್ತರಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಹೊರೆಯಾಗಲಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಲೂಟಿಗೆ ಅನುವು ಮಾಡಿಕೊಡುವುದು ಇದರ ಹಿಂದಿನ ಉದ್ದೇಶ' ಎಂದು ಆರೋಪಿಸಿದೆ.

ಸಂಸದ ಪ್ರಸಾದ್ ನಡೆಗೆ ಬೇಸರ

ಮಳವಳ್ಳಿ (ಮಂಡ್ಯ): 'ಕೇಂದ್ರ ಸಚಿವ ಸಂಪುಟ ಪುನರ್ ರಚನೆ ಸಂದರ್ಭದಲ್ಲಿ ದಲಿತರ ಕೋಟಾದಲ್ಲಿ ಅನ್ಯ ಜಿಲ್ಲೆಯ ಸಂಸದರನ್ನು ಸಂಪುಟಕ್ಕೆ ತೆಗೆದುಕೊಳ್ಳುವಂತೆ ಸಂಸದ ವಿ.ಶ್ರೀನಿವಾಸಪ್ರಸಾದ್ ಸಲಹೆ ನೀಡಿರುವುದು ದುರದೃಷ್ಟಕರ' ಎಂದು ಬಿಜೆಪಿ ಮುಖಂಡ, ಮಾಜಿ ಸಚಿವ ಬಿ.ಸೋಮಶೇಖರ್ ಹೇಳಿದರು.

ಸೋಮಶೇಖರ್

'ಸಚಿವ ಸಂಪುಟ ವಿಸ್ತರಿಸಿ ದಲಿತರ ಕೋಟಾದಲ್ಲಿ ಸಂಸದ ಉಮೇಶ್ ಜಾಧವ್ ಅವರನ್ನು ಸಂಪುಟಕ್ಕೆ ತೆಗೆದುಕೊಳ್ಳುವಂತೆ ಪ್ರಸಾದ್ ಸಲಹೆ ನೀಡಿದ್ದಾರೆ. ಮೈಸೂರು ಭಾಗದವರಿಗೆ ಅಥವಾ ತಮಗೇ ಅವಕಾಶ ನೀಡುವಂತೆ ಕೇಳಬಹುದಾಗಿತ್ತು' ಎಂದರು.

'ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಅನಾರೋಗ್ಯದ ಕಾರಣ ನೀಡಿ ಸ್ಪರ್ಧೆ ನಿರಾಕರಿಸಿದ್ದರು, ಕೊನೆಯ ಕ್ಷಣದಲ್ಲಿ ಕಣಕ್ಕಿಳಿದು ಗೆದ್ದರು. ಆಗಲೇ ದಲಿತ ಸಮುದಾಯದ ಇತರ ನಾಯಕರಿಗೆ ಅವಕಾಶ ನೀಡಬಹುದಿತ್ತು. ಈಗ ಸಂಪುಟ ಪುನರ್ ರಚನೆ ವೇಳೆಯೂ ಅನಾರೋಗ್ಯದ ಕಾರಣ ನೀಡುತ್ತಿರುವುದು ಸರಿಯಲ್ಲ. ಜೊತೆಗೆ ಮೈಸೂರು ಭಾಗದವರಿಗೆ ಸಿಗುವ ಅವಕಾಶವನ್ನು ಬೇರೆ ಭಾಗದವರಿಗೆ ನೀಡುವಂತೆ ಹೇಳುವುದೂ ಸರಿಯಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಸಂಸದರು ಎಲ್ಲದಕ್ಕೂ ಅನಾರೋಗ್ಯ ಕಾರಣ ನೀಡುತ್ತಿದ್ದಾರೆ' ಎಂದು ಆರೋಪಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED: EXPERIENCED LECTURERS M.Com,M.Sc, (Physics), MCA,M.Sc (Computer Science), MA (History) Attractive salary. Contact Principal with original Certificates between 10.00 am to 1.00 pm SREE-VENKATESHWARA PU COLLEGE, Krishnarajapuram, Bangalore-36. Contact:9036068144, 7411135627

REQUIRES LADY Teachers for English (MA.BEd)walk-in Interview with the Secretary, Srikrishna International School, ITI-Layout, BSK 3rd Stage, Bangalore-85, Phone: 65365824

HERITAGE PUBLIC SCHOOL, Srinidhi Layout, Konanakunte, Urgently Requires Hindi and Chemistry/ Biology TEACHERS For High School. Contact: 9901733776.

WANTED LECTURERS in Mathematics, Computer science, Kannada. English. History. Economics Hindi and Commerce Lecturers for Vidyavana PU College, Tirumalashettyhalli, Whitfield, Bengaluru Email: vidyavanahr@gmail.com Mob.9663389388,

Om Sai Ram
NEW BALDWIN GROUP OF INTERNATIONAL SCHOOLS
• BANASWADI • MANDUR • T C PALYA • ANEKAL • ANEKAL TOWN • CHANDAPURA
About us: NBGI are the Pioneers in providing quality education since 1990. Our campuses are well facilitated in providing education of International Standards. We are collaborated with ICSE CBSE & Cambridge (IGCSE) Boards. We cater to Day schooling and on campus Boarding facilities.
CAREER OPTIONS
PRINCIPALS / VICE PRINCIPALS
Candidate should possess PG Certificate with a Diploma or Degree in Education. Should have experience working in Reputed Institutions as a Academic Co-ordinator, Sr. Teacher, Lecturer, HOD. Should have excellent communication. Keen interest in implementing Creative Teaching and Learning Practices.
KINDERGARTEN, PRIMARY & HIGH SCHOOL TEACHERS - ALL SUBJECTS
Candidate should possess Bachelors degree / Master in relevant subject with a Degree / Diploma in Education. Excellent communication skills, In depth knowledge of the subject. Vision, creativity and originality of approach to innovative teaching is necessary
ADMIN OFFICERS/IT TECHNICIAN/PRO
Renumeration : at par with the institutional standard, with additional facilities like food & transport in the Gross Package.
On campus Accomodation available @ Anekal Campus for Anekal applicants only
APPLY IMMEDIATELY
If you are passionate about teaching and would like to be a part of educators community, please send us you detailed resume, a passport size photo, a covering letter with details such Branch chosen, Subject & position applied for and skills that you possess.
Ph : 91080 62731, 95919 60947
email : hr.nbgi@gmail.com

B.B.U.L. JAIN VIDYALAYA, 84, K.R.Road, Shankarapuram, Bangalore-4 Phone: 22422936/ 41554379 Requires Qualified, Trained, Experienced, Young & Dynamic TEACHERS for High School- PHYSICS, CHEMISTRY, MATHS and LIBRARIAN. Good Salary. Walk-in interview on 9-07-2021 and 10-07-2021 from 10am to 12noon

GURUKULA INTERNATIONAL School requires English Social, Maths Teachers for Primary and High school and Lady Accountant with Kannada Typing. Near Magadi Road, Metro Station, Bangalore-23. 7829338292, 7676676629.

VLS VIDYASAGARA ENGLISH-MEDIUM SCHOOL, #58/22, Sharada Colony, Basaveshwaranagar, Bangalore-79. Ph:080-23586050/ 23282029. REQUIRED LADY TEACHERS-CLASS I TO X STD; ENGLISH/SOCIAL-B.A,M.A, B.Ed, M.Ed .

WANTED ENGLISH MEDIUM TRAINED LADY TEACHERS B.A /M.A., B.Ed to teach English/ Social Science/ Hindi, B.Sc., B.Ed. to teach Maths/ Science for Primary Sections/ N.T.T/ B.Sc Computer Science faculty. Contact in person (10.00 am-3.00 pm on all working days) -Secretary, Deccan Educational Society, No.95, 3rd Cross, Srirampuram, Bengaluru– 560 021 (Near Sampige Theater, Malleswaram)

DH Classifieds
BOOK YOUR AD FOR SATURDAY & GET 50% OFF ON SUNDAY AD
For more information contact:
9880856233
9731810277 | 9901641752
9845114560 | 9886213331
*condition apply

II Jai Sri Gurudev II
SRI ADICHUNCHANAGIRI SHIKSHANA TRUST (R)
S J C INSTITUTE OF TECHNOLOGY
Estd. 1986, VTU Affiliated, AICTE Approved
Accredited by NAAC & NBA (CSE, ECE & MED)
P.B. No.20, B.B. Road, Chickballapur - 562101, Karnataka
Applications are invited for the posts of
Professor/Associate Professor/Assistant Professor
In the Departments of CSE, ECE & MBA
Qualifications, Experience & Salary will be as per AICTE norms
Interested eligible competent candidates may apply online at https://forms.gle.swS1pDSfxPso73jk8 by making online payment of Rs.200/- towards application fee and also send your resume along with necessary Academic Credentials to careers@sjcit.ac.in within 15 days from the date of this notification.
Note: Candidates with Ph.D from reputed Institutions are preferable. The Institution reserves the rights of processing Application (Accept/Reject). Only eligible and short-listed candidates will be intimated for selection process.
Admissions Open for 2021-22
Contact: 9731292555 / 9901653915
www.sjcit.ac.in PRINCIPAL

WANTED TEACHERS to teach English, Social Studies, Maths, Science, Biology, Computer Science, Attender, Peon, Security Guard, Aya. Walk-in between 10am to 1pm with resume & certificates. CAMLIN HIGH SCHOOL, 6th 'C' Main, 4th Cross, Hampinagar, Vijayanagar 2nd Stage, Bangalore. Call: 080-23301363

General

Panasonic BUSINESS
Systems Networks Division requires for their Distributors
1) Service Engineer with 3 – 4 yrs Experience
2) Marketing Executive - 2
3) Tele Marketing (F)
4) Technician - 2
2 wheeler must for 1 & 2. 1 to 2 years of working exp. must for 2 & 3. Fresher is okay for 4.
Send your resume to kamath@idltek.com
Call : +91 98450 49796

REQUIRED MARKETING Executives For Petroleum Products Qualification Any Degree Salary Rs 35,000/- on Target Based & Accountant well Versed with Tally Qualification B.com Salary Rs 20,000/- old Airport Road Call:7338084555 9880727889 Email: glprojects7889@gmail.com

WANTED HELPERS- 7th/10th Pass/ITI Holderfor Diesel Generator Services. Also Wanted MarketingExecutive for Kirloskar Generators. Contact: 080-26893606/07 [M]: 7760998655

WANTED OFFICE ASSISTANTS (Male) & DRIVER. HSR Layout (Bangalore) Ph: 08025631755/ 25631756 Email: starsilks@gmail.com

WANTED FOR Reputed Company, Graduates Age- 30-70, Bangalore only, Earn: 30,000- 50,000. Contact: 9008305194/ 9880441530.

Engg/ Production Technical

WE REQUIRES: 1.SR.QUALITY MANAGER (Preferable Retired), 2.SR.MARKETING MANAGER (Preferable Retired), 3.PURCHASE EXECUTIVE, 4.ITI/DIPLOMA MECHANICAL'S, 5.ACCOUNT ASSISTANT, For our special Pumps-Manufacturing-Unit at Devarachikkanahalli, Bannergatta Road, Bangalore. Email:flowoilpumps@hotmail.com

REQUIRED TECHNICIAN for Diesel Generator maintenance with 3 or 4 years Minimum Experience. Qualification Dip/ BE. Contact:- 8553606634,Mail ID:- drb2302@gmail.com

WANTED EXECUTIVE IN ENVIRONMENTAL, HEALTH and SAFETY (EHS) CHEMICAL ENGINEER Education Qualification: 1.Diploma/Degree/BE in Environmental Science. 2.Diploma/BE in Chemical Experience:2 to 5 years and similar field.for E-Parisaraa Pvt Ltd, Job location: Dobaspet. Apply to: hr@ewasteindia.com

Part-Time Jobs

***VACANCY IN** MNC* Company, Age 30-55, PUC+ pay 30-80k P/m.Contact: Srilatha-8431104300/ 7090022176

Hospital & Medical Jobs

MBBS / BAMS Doctors with experience for day duty at Nightingales Center for Ageing & Alzheimer's at Kasturinagar, Bengaluru. Mail resume to hr@nightingaleselderc are.com or contact : 9243100560

REPUTED SKIN Centre #36,1st Floor, 2nd Main Road, Vayalikaval, Required Experienced Female STAFF NURSES, Fluent in English. Good Salary+ Perks. 9845535763/ 9845002024

Manager

ELCITA
ELECTRONICS CITY INDUSTRIAL TOWNSHIP AUTHORITY
No. 7 (P), West Phase, Electronics City, Bangalore : 560 100
Website : www.elcita.in
Phone : 080-4660 2222
Position : Purchase Manager
ELCITA invites applications from suitable candidates for the position of Purchase Manager. Candidate should be a graduate, preferably in Civil / Electrical / Mechanical Engineering. Postgraduate degree/diploma in business administration is desirable. Minimum 0f 8 years of work experience in handling procurement and contracts is essential. Must be thorough with KTPP Act and e-tendering process of the Government of Karnataka.
Knowledge of Kannada is essential. For details refer to: www.elcita.in
Last date for receipt of applications with CV and supporting documents 20-07-2021 before 5PM
email id : office.elcita@elcita.in

WANTED BRANCH MANAGERS For All Over Karnataka For a Reputed Gold Buying Company. Candidates With Commerce Background and Experienced in Gold Loan Business may send CV to: swarnagold9999@gmail.com

Multiple Vacancy

WANTED (1) OFFICE ASSISTANT with Computer knowledge, (2) MARKETING EXECUTIVE with experience, 2 Wheeler must, (3) TECHNICAL TEAM, Good Salary with Incentives. Contact: ZEENITH ELEVATORS, Bangalore-60, Mobile: 6361367703

Wanted

WANTED EXPERIENCED VMC Machine Operators with Master Cam 3D Programming for a Private Limited Company In Prakash Nagar. 9448481947/ 9448376584: magraa@magraa.in

WANTED EXPERIENCED Graduates from IAS coaching centers, send resume to ceo@vxplore.co.in Mob: 9740191676

WANTED EXPERIENCED Graduates from IAS coaching centers, send resume to ceo@vxplore.co.in Mob: 9740191676

BUSINESS

Business Offers

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

EDUCATIONAL

Admission

ONE SITTING: B.TECH/ M.TECH/MBA/MCA/M.Sc/ BBA/BCA/B.Com/BA/B.Ed/ LLB/B.Pharm/ D.Pharm. All courses Recognised by UGC/Govt of India. Last Date: 10-07-2021. Asha Institute: Bangalore- 560085. Ph: 9448460103/ 7093438248.

Colleges

A NEW PU & DEGREE COLLEGE affiliated to Bangalore university, with complete infrastructure, available in Hessargatta, on lease/ outright purchase. Intersted parties Call: +91 9972542889

PUBLIC NOTICE

TRADE MARK WARNING
My client Mr. SUNIL SAMSUKHA carrying on business At No. 25, 8th Main, 5th Cross, B and ASO Association Layout, RPC Layout, Vijayanagar, Bangalore North, Hampinagar, Bangalore North Bengaluru, Karnataka-560104 is the Registered Proprietor of Trade Mark "GOLDCHEF" covered under Registered Trade Mark No.3555246 in Class 11 in respect of Stoves. Trade Mark GOLDCHEF used and adopted by my client is depicted hereunder:-
Goldchef® Delicious Starts Here...
Any one using similar or identical trade mark or with minor changes shall cause confusion and deception among buyers. Hence infringers shall be sternly dealt with under the various provision of THE TRADE MARKS ACT, 1999.
ASHOK KUMAR.J.DAGA, ADVOCATE,
Mobile : 9841069123
E.mail : adaga65@yahoo.com
Advocate for Mr. SUNIL SAMSUKHA

ಸಾರ್ವಜನಿಕರ ಗಮನಕ್ಕೆ
ಕಾರ್ಡ್ ರೋಡ್ ಆಸ್ಪತ್ರೆ ಪ್ರೈ.ಲಿಮಿಟೆಡ್
100/101 ಎಲ್.ಐ.ಸಿ. ಕಾಲೋನಿ, ಪಶ್ಚಿಮ ಕಾರ್ಡ್ ರಸ್ತೆ, ಬಸವೇಶ್ವರನಗರ, ಬೆಂಗಳೂರು–79
Ph: 080–67192222
ಸಾರ್ವಜನಿಕರ ಗಮನಕ್ಕೆ ನಮ್ಮ ಆಸ್ಪತ್ರೆಯು ದಿನಾಂಕ 31–3–2015 ರವರೆಗಿನ ನಮ್ಮ ಎಲ್ಲಾ ವೈದ್ಯಕೀಯ ಒಳರೋಗಿಗಳ ಕೇಸ್ ಶೀಟ್, ಎಕ್ಸ್–ರೆ, ಹಾಗೂ ಇತರೆ ದಾಖಲೆಗಳನ್ನು ನಾಶಪಡಿಸುತ್ತಿದ್ದೇವೆ. ಈ ಸಮಯದ ನಿಗದಿಯಲ್ಲಿ ಯಾರಿಗಾದರೂ ತಮ್ಮ ವೈದ್ಯಕೀಯ ದಾಖಲೆ ಬೇಕಾದ್ದಲ್ಲಿ ಆಸ್ಪತ್ರೆಯನ್ನು ಒಂದು ತಿಂಗಳೊಳಗಾಗಿ ಸಂಪರ್ಕಿಸ ತಕ್ಕದ್ದು.
ಸಹಿ/–
ಕಾರ್ಡ್ ರೋಡ್ ಆಸ್ಪತ್ರೆ ಪ್ರೈ.ಲಿಮಿಟೆಡ್
ಸ್ಥಳ: ಬೆಂಗಳೂರು
ದಾಖಲೆ ನಾಶಮಾಡುವ ದಿನಾಂಕ 10–8–2021

CONNECT

ಕಾಂಚೀಪುರಂ
ಎ.ಜಿ. ಬಾಬು ಸಾಹ್
ರೇಷ್ಮೆ ಸೀರೆ ವ್ಯಾಪಾರಿಗಳು
ವರಮಹಾಲಕ್ಷ್ಮೀ ಹಬ್ಬದ ಮಾರಾಟ
ತೆರಿಗೆ ಭವನ
6/9, 11ನೇ ಬ್ಲಾಕ್, ನಾಗರಭಾವಿ 2ನೇ ಹಂತ, ನಾಗರಭಾವಿ, ಬೆಂಗಳೂರು–560 072. ಮೊ. : 7904413982
ದಿನಾಂಕ: 8,9,10,11,12 & 13 ಜುಲೈ 2021
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ – ಹಿಂತಿರಿಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
ಒಂದು ಬಾರಿಗೆ 50 ಜನರಿಗೆ ಮಾತ್ರ ಪ್ರವೇಶ
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ

REAL ESTATE SELLING

Sites

Kumaraswamy Layout

BDA 30X40 Intermediate Vacant 2nd Stage, Near 15F/G Bus Stop, ISKCON South, Genuine Buyers Call 9972095359 Brokers Excuse.

Lingarajapuram

SITE FOR SALE KSFC Layout Corner Site East Facing A-KHATHA No.58 Lingarajapura (Total Sqft Area-2860) Contact 9986258271

Sarjapur Road

SARJAPUR ROAD near Wipro Site 30x47 for sale, Clear Titles, Going cheap Phone: 8660514834 /9342410224

PERSONAL

Change of Name

I, AMARTYA SHANKAR JHA S/o. Akhila Ramachandran Jha, with his address at #C-2023, Sobha Aster, Vijaya Bank Layout, Bannergatta Road, Bengaluru-560076Karnataka, India have changed my name to MARTY DAMON for all purposes. Vide Affidavit Dated: 05.07.2021 Sworn Before Notary H.S.Sakalesh Aradhya, Bangalore-40.

RAMDAS F/O 14847016N- Sep/MT- MAHARNOR LAHANBHAU RAMDAS, R/a Mangrul, Ashti, Beed, Maharashtra changed name from RAMDAS to MAHARNOR RAMDAS BHAGUJI notary KV Mani Bangalore.

JC673360W, NB/SUB, Dateer Sanjay Bhausaheb, 2ATC my son name service record NACHIKET instead of NACHIKET SANJAY DATEER notary KV Mani, Bangalore.

I, SUGANYA D/O late Rev, R.M Jayapaul Daniel, Residing at no 231/1, LJKES Campus, Chikkabanavara Post, Abbigere, Bangalore-560090, changed my name to J.Sylvania Suganya Daniel vide Original Affidavit dtd 28-02-1996 before. C.P Suresh & Re-notified dtd 02-07-2021 before R.Ramesh notary for all purpose

I, SOPHIE @ Crena Sobidambal W/o. Late. R.J. Devdass Residing at No.#28, Cement Lane, Austin Town, Viveknagar, Bengaluru South-560047, have changed my name to SOPHIE CRENA vide affidavit dated 23/04/2016 sworn to before me xx addl. chief Metropolitan Magistrate, Bangalore-02

I, CHIDAMBARAM s/o Saravanan S r/@ Flat no 308, 2nd Floor, Rathna Deepaka Residency Apartments, Vasanthapura, Bengaluru-560061 have changed my name to CHIDAMBARAM HARIKESHAV vide affidavit dated 05-07-2021 before notary H.G. Padmanabha Rao, Bengaluru- 70

SHEWANTA M/O 14847016N- Sep/MT- MAHARNOR LAHANBHAU RAMDAS, R/a Mangrul, Ashti, Beed, Maharashtra changed name from SHEWANTA to MAHARNOR SHEVANTABAI RAMDAS notary KV Mani Bangalore.

JYOTI THORAT W/o 14847016N- Sep/MT- MAHARNOR LAHANBHAU RAMDAS, R/a Mangrul, Ashti, Beed, Maharashtra changed name from JYOTI THORAT to JYOTI LAHANBHAU MAHARNOR notary KV Mani Bangalore.

I, SIDDAPPA N. Malager S/o Late. Nimbappa Residing at. No.#601, 14th wing, Shriram Summitt, Gollahalli road, Electronic city Phase-01, Bengaluru- 560100, wrongly mentioned my name as Shiddappa Malager in the Passport No. J8289840 & SSLC Markscard reg no.112971. Here declaring that my correct name is Siddappa N. Malager vide affidavit dated 06/07/2021 before notary K.N. Ramadevi, Bangalore

14824152X- HAV/MT- C SUBRAMANI at MT Wing, ASC Trg Centre (South) 2ATC, changed my Minor Son's name from RUTHRAN to RUTHRAN S notary KV Mani Bangalore.

I, SHUAIB Ulla Khan S/o. Shafi Ulla Khan R/at. #784, 2nd cross, R K Hegde Nagar, Dr. Shivarama Karanth Nagar, Blr-77, have changed my name to MUHAMMED SHUAIB ULLA KHAN vide affidavit dated 18/03/2021 before notary L.Gopalakrishna, Bangalore.

I, SOBHA d/o Udairaj Lunawat Residing at No #17, Thambuchetty road, Cox Town, Bengaluru- 560005, have changed my name to SHOBA. J vide affidavit dated 06/07/2021 before notary C.V. Earappa, Bangalore.

KRISHNA KAWAR W/o. JC674478K, NB/SUB, Rajendra Singh Rathore, #P-14, Cutline CMP Centre School, Bangalore my name KRISHNA KAWAR to KRISHNA RATHORE notary Meer Hassan, Banglore.

MANISHA DATEER W/O. JC673360W, NB/SUB, Dateer Sanjay Bhausaheb, Vill/Post: Ekrukhe Rahata Ahmdnagar Mahashtre my name MANISHA DATEER TO MANISHA SANJAY DATEER notary KV Mani, Bangalore.

JC673360W, NB/SUB, Dateer Sanjay Bhausaheb, 2ATC my daughter name service record JAYSHRI instead of DATEER JAYSHREE SANJAY notary KV Mani, Bangalore.

SOCIAL SERVICES

Others

HOME NURSING SERVICES available 24/7 @ Bangalore for Diabetic wound care, Gediatric Baby-Care, Physiotherapy, Senior-Care and all services at Home/Hospital 24/7. Contact: 6366883838, 7022399993

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ತಂತ್ರಜ್ಞಾನ



5ಜಿ ಸ್ಮಾರ್ಟ್‌ಫೋನ್ ಕೂಸು ಹುಟ್ಟುವ ಮೊದಲಿನ ಕುಲಾವಿ!

ಕೃಷ್ಣ ಭಟ್

ಪ್ರತಿ 5 ವರ್ಷಕ್ಕೊಮ್ಮೆ ಎಲ್ಲ ಕ್ಷೇತ್ರದಲ್ಲೂ ಹೊಸ ಹೊಸ ತಂತ್ರಜ್ಞಾನ ಬರುತ್ತಲೇ ಇರುತ್ತದೆ. ಈಗ ಎಲ್ಲೆಡೆ 5ಜಿ ಜಮಾನ. ಮಾರುಕಟ್ಟೆಗೆ ಬರುವ ಹಲವು ಹೊಸ ಸ್ಮಾರ್ಟ್‌ಫೋನ್‌ಗಳು ಈಗ 5ಜಿ ಟ್ಯಾಗ್ ಹೊತ್ತು ಬರುತ್ತವೆ.

ಆದರೆ, ಬಹಳಷ್ಟು ಜನರಿಗೆ ಇರುವ ಗೊಂದಲವೇನೆಂದರೆ, ನಾವು 5ಜಿ ಸ್ಮಾರ್ಟ್‌ಫೋನ್ ಕೊಳ್ಳಬೇಕೆ ಅಥವಾ 4ಜಿ ಸ್ಮಾರ್ಟ್‌ಫೋನ್ ಸಾಕೇ? ಇತ್ತೀಚೆಗೆ ಮಾರುಕಟ್ಟೆಗೆ ಬರುತ್ತಿರುವ 5ಜಿ ಸ್ಮಾರ್ಟ್‌ಫೋನ್‌ಗಳೆಲ್ಲವೂ ಚೆನ್ನಾಗಿಯೇ ಇವೆ. ಬಹುತೇಕ ಎಲ್ಲವೂ ಅತಿ ಕಡಿಮೆ ದರದ 5ಜಿ ಸ್ಮಾರ್ಟ್‌ಫೋನ್‌ಗಳು ಎಂದೇ ಹೇಳಿಕೊಳ್ಳುತ್ತವೆ. ಆದರೆ, ಇದರಲ್ಲಿನ 5ಜಿ ಎಂಬ ಒಂದು ಸಂಗತಿಯನ್ನು ತೆಗೆದರೆ ಇವು ಸಾಮಾನ್ಯ 4ಜಿ ಸ್ಮಾರ್ಟ್‌ಫೋನ್‌ಗಿಂತ ಕಡಿಮೆ ದರ್ಜೆಯವೇ ಆಗಿರುತ್ತವೆ. ಅಪವಾದಗಳೂ ಇರಬಹುದು.

ಇನ್ನೂ ಬಂದಿಲ್ಲ 5ಜಿ ಟವರ್‌ಗಳು!

ಬಹುತೇಕ ಟೆಲಿಕಾಂ ಕಂಪನಿಗಳು ಇನ್ನೂ 5ಜಿ ಉಪಕರಣಗಳನ್ನು ಪ್ರಯೋಗ ಮಾಡುತ್ತಿವೆ. ಟ್ರಾಯ್ ಇನ್ನೂ 5ಜಿ ತರಂಗಾಂತರಗಳನ್ನು ಹರಾಜು ಹಾಕಿಲ್ಲ. ಎಲ್ಲ ಕಂಪನಿಗಳೂ ನಾವು 5ಜಿ ತರಂಗಾಂತರ ಖರೀದಿಗೆ ಸಿದ್ಧವಾಗಿದ್ದೇವೆ ಹಾಗೂ 5ಜಿ ಗೆ ಅಪ್‌ಗ್ರೇಡ್ ಆಗಲು ಸಿದ್ಧವಿದ್ದೇವೆ ಎಂದು ಹೇಳಿಕೊಂಡಿವೆ.

ಹೀಗೆ ನೋಡಿದರೆ, ತರಂಗಾಂತರ ಹರಾಜಾಗಿ, ಟೆಲಿಕಾಂ ಕಂಪನಿಗಳು ಅದನ್ನು ಖರೀದಿ ಮಾಡಿ, ದೇಶದಾದ್ಯಂತ ಇರುವ ತಮ್ಮ ಟವರ್‌ಗಳನ್ನು 5ಜಿಗೆ ಅಪ್‌ಗ್ರೇಡ್ ಮಾಡುವ ವೇಳೆಗೆ ಕನಿಷ್ಠ ಇನ್ನೂ 3-4 ವರ್ಷಗಳು ಬೇಕಾಗುವುದು ಖಚಿತ. ಅಷ್ಟಕ್ಕೂ, 3-4 ವರ್ಷಗಳಲ್ಲಿ ಇಡೀ ದೇಶಕ್ಕೆಲ್ಲ 5ಜಿ ತಂತ್ರಜ್ಞಾನ ಸಿಗುತ್ತದೆ ಎಂದು ಹೇಳಲೂ ಆಗದು. ಏಕೆಂದರೆ, 4ಜಿ ನೆಟ್‌ವರ್ಕ್ ಮೊದಲ ಬಾರಿಗೆ ಅಸ್ತಿತ್ವಕ್ಕೆ ಬಂದಿದ್ದು, 2013ರಲ್ಲಿ. ಆದರೆ, ಜಿಯೋದಂತಹ ಕಂಪನಿಗಳು 2017ರ ವೇಳೆಗೆ ಎಲ್ಲ ಮೆಟ್ರೋ ನಗರಗಳಲ್ಲೂ 4ಜಿ ಟವರ್‌ಗಳನ್ನು ಹಾಕಲು ಸಾಧ್ಯವಾಗಿತ್ತು.

> 5ಜಿ ತಂತ್ರಜ್ಞಾನ ಮಾರುಕಟ್ಟೆಗೆ ಬಹುಶಃ 2024ರಲ್ಲಿ ಬರಬಹುದು. ಅಲ್ಲಿಯವರೆಗೆ 5ಜಿ ಸ್ಮಾರ್ಟ್‌ಫೋನ್ ತಂತ್ರಜ್ಞಾನದಲ್ಲಿ ಯಾವ ಬದಲಾವಣೆ ಆಗುತ್ತದೆಯೋ ಗೊತ್ತಿಲ್ಲ. ಈಗ ಅತಿ ಕಡಿಮೆಯ ದರದ 5ಜಿ ಸ್ಮಾರ್ಟ್‌ಫೋನ್ ಎಂದು ಹೇಳಿಕೊಳ್ಳುವ ಸ್ಮಾರ್ಟ್‌ಫೋನ್‌ಗಳು ಇನ್ನು ನಾಲ್ಕು ವರ್ಷಗಳಲ್ಲಿ ವೃದ್ಧಾಪ್ಯಕ್ಕೆ ತೆರಳಬಹುದು...

ಭಾರತದಲ್ಲಿ 2025ರ ವೇಳೆಗೆ 19 ಕೋಟಿ 5ಜಿ ಸಂಪರ್ಕಗಳನ್ನು ಕೊಡಬೇಕು ಎಂಬುದು ಸದ್ಯದ ಗುರಿ. ಭಾರತದಲ್ಲಿ ಸುಮಾರು 6 ಲಕ್ಷ ಟವರ್‌ಗಳು ಇವೆ. ಈ ಆರು ಲಕ್ಷ ಟವರ್‌ಗಳೆಲ್ಲವನ್ನೂ 5ಜಿ ಗೆ ಪರಿವರ್ತಿಸಲು ವರ್ಷಗಟ್ಟಲೆ ಸಮಯ ಬೇಕಾದೀತು. 5ಜಿ ಟವರ್‌ಗಳಿಗೆ ಬಹುಮುಖ್ಯವಾಗಿ ಬೇಕಾದ್ದು ಫೈಬರ್ ನೆಟ್‌ವರ್ಕ್ ಆಗಿದ್ದು, ಇದರ ಪ್ರಮಾಣ ಈಗ ನಮ್ಮಲ್ಲಿ ತುಂಬ ಕಡಿಮೆ ಇದೆ. ಶೇ. 30ರಷ್ಟು ಫೈಬರ್ ನೆಟ್‌ವರ್ಕ್ ಇದ್ದು, ಇದು ಶೇ. 60ಕ್ಕೆ ಏರಿಕೆಯಾದರೆ 5ಜಿ ವೇಗ ಸಿಗುತ್ತದೆ.

ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ನೋಡುವುದಾದರೆ, 5ಜಿ ತಂತ್ರಜ್ಞಾನ ಮಾರುಕಟ್ಟೆಗೆ ಬರಲು ಕನಿಷ್ಠ 2024 ಆಗಬಹುದು. ಅಲ್ಲಿಯವರೆಗೆ 5ಜಿ ಸ್ಮಾರ್ಟ್‌ಫೋನ್ ತಂತ್ರಜ್ಞಾನದಲ್ಲಿ ಯಾವ ಬದಲಾವಣೆ ಆಗುತ್ತದೆಯೋ ಗೊತ್ತಿಲ್ಲ. ಈಗ ಅತಿ ಕಡಿಮೆಯ ದರದ 5ಜಿ ಸ್ಮಾರ್ಟ್‌ಫೋನ್ ಎಂದು ಹೇಳಿಕೊಳ್ಳುವ ಸ್ಮಾರ್ಟ್‌ಫೋನ್‌ಗಳು ಇನ್ನು ನಾಲ್ಕು ವರ್ಷಗಳಲ್ಲಿ ವೃದ್ಧಾಪ್ಯಕ್ಕೆ ತೆರಳಬಹುದು.

ಏಕೆಂದರೆ, ಕೇವಲ ಎರಡು ವರ್ಷಗಳ ಹಿಂದೆ ಬಿಡುಗಡೆಯಾದ ಹಲವು ಫೋನ್‌ಗಳಲ್ಲಿರುವ ಫೀಚರ್ ಈಗ ಹಳೆಯದಾಗಿ ಬಿಟ್ಟಿವೆ. ಅದೇ ಬೆಲೆಗೆ ಈಗ ಮೂರು ಕ್ಯಾಮೆರಾವೋ ಅಥವಾ ಮತ್ತಿನ್ನೇನೋ ಹೊಸ ಹೊಸ ಫೀಚರ್ ಇರುವ ಫೋನ್‌ಗಳು ನಮಗೆ ಸಿಗುತ್ತಿವೆ. 5ಜಿ ಸ್ಮಾರ್ಟ್‌ಫೋನ್‌ಗಳ ಪರಿಸ್ಥಿತಿಯೂ ಹೀಗೆಯೇ ಆಗುತ್ತವೆ. ನಿಜವಾದ 5ಜಿ ಟವರ್‌ಗಳು ಬರುವ ಹೊತ್ತಿಗೆ 5ಜಿ ಸ್ಮಾರ್ಟ್‌ಫೋನ್‌ಗಳ ಪರಿಸ್ಥಿತಿಯೇ ಬದಲಾಗಬಹುದು.

ಈ ದೃಷ್ಟಿಯಲ್ಲಿ ನೋಡುವುದಾದರೆ, ಕೂಸು ಹುಟ್ಟುವ ಮೊದಲೇ ಕುಲಾವಿ ಖರೀದಿ ಮಾಡುವ ಬಗ್ಗೆ ಎಚ್ಚರಿಕೆ ಇರಲಿ. 15 ಸಾವಿರಕ್ಕಿಂತ ಕಡಿಮೆ ದರದ ಫೋನ್‌ಗಳು ಎರಡು ವರ್ಷಕ್ಕಿಂತ ಹೆಚ್ಚು ಬಾಳಿಕೆ ಬರುವ ಸಾಧ್ಯತೆ ಕಡಿಮೆ ಇರುತ್ತದೆ. ಎರಡು ವರ್ಷದ ನಂತರ ಸ್ಮಾರ್ಟ್‌ಫೋನ್‌ಗಳಲ್ಲಿ ಒಂದಲ್ಲ ಒಂದು ಸಮಸ್ಯೆಗಳು ಕಾಣಿಸಲು ಆರಂಭವಾಗುತ್ತವೆ. ಆಗ ಸ್ಮಾರ್ಟ್‌ಫೋನ್ ಬದಲಿಸುವುದೇ ಅನಿವಾರ್ಯವಾಗುತ್ತದೆ. ಹೀಗಾಗಿ, 2 ವರ್ಷದಾಚೆಗೆ ಬರುವ 5ಜಿ ಫೀಚರ್ ಇರುವ ಸ್ಮಾರ್ಟ್‌ಫೋನ್ ಖರೀದಿ ಮಾಡುವುದು ಅನಗತ್ಯ. ಯಾಕೆಂದರೆ, 5ಜಿ ಟವರ್ ನಮ್ಮ ಫೋನ್‌ಗೆ ಸಿಗ್ನಲ್ ಕಳುಹಿಸುವ ಹೊತ್ತಿಗೆ ನಮ್ಮ ಸ್ಮಾರ್ಟ್‌ಫೋನ್‌ಗಳು ಸರ್ವೀಸ್ ಶಾಪ್‌ಗಳಿಗೆ ಅಲೆದಾಟ ಆರಂಭಿಸಿರುತ್ತವೆ. ಹಾಗೆಂದ ಮಾತ್ರ, ದೊಡ್ಡ ಮೊತ್ತದ ಸ್ಮಾರ್ಟ್‌ಫೋನ್‌ಗಳ ವಿಚಾರದಲ್ಲಿ ಇದೇ ಮಾತನ್ನು ಹೇಳಲಾಗದು. ಅವು ಸ್ವಲ್ಪ ಹೆಚ್ಚು ಕಾಲ ಬಾಳಿಕೆ ಬರುತ್ತಿರುತ್ತವೆ. ❖

ಏಳಿ ಏರಿರಿ ಎಲೆಕ್ಟ್ರಿಕ್ ಸೈಕಲ್

ಪೃಥ್ವಿರಾಜ್

ಇಂಧನ ಬೆಲೆ ಗಗನಕ್ಕೇರುತ್ತಿರುವುದರಿಂದ ಹಲವರಿಗೆ ಪ್ರಯಾಣದರದ್ದೇ ಸಮಸ್ಯೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಅಗ್ಗ ಎನಿಸುತ್ತಿರುವ ವಾಹನ ಸೈಕಲ್ ಒಂದೇ. ಆದರೆ ಸೈಕಲ್ ಪೆಡಲ್ ತುಳಿಯಬೇಕಾದ ಕಷ್ಟ ಸಹಜ. ಬ್ಯಾಟರಿ ಚಾಲಿತ ಎಲೆಕ್ಟ್ರಿಕ್ ಸೈಕಲ್‌ಗಳಲ್ಲಿ ಈ ಸಮಸ್ಯೆ ಇಲ್ಲ. ಪರಿಸರಮಾಲಿನ್ಯವೂ ಇರದು, ಜತೆಗೆ ಆರೋಗ್ಯವೃದ್ಧಿಗೂ ನೆರವಾಗುತ್ತವೆ. ಹೆಚ್ಚು ದೂರ ಕ್ರಮಿಸಬೇಕೆಂದಾಗ ಬ್ಯಾಟರಿ ಚಾಲು ಮಾಡಿ ಚಲಾಯಿಸಬಹುದು. ಕಡಿಮೆ ದೂರದ ಪ್ರಯಾಣಕ್ಕೆ ಪೆಡಲ್ ತುಳಿದುಕೊಂಡು ಹೋಗಬಹುದು. ಪ್ರಸ್ತುತ ಮಾರುಕಟ್ಟೆಯಲ್ಲಿರುವ ನೂತನ ತಂತ್ರಜ್ಞಾನ ಅಳವಡಿಸಿರುವ ಕೆಲವು ಎಲೆಕ್ಟ್ರಿಕ್ ಸೈಕಲ್‌ಗಳ ಮಾಹಿತಿ ಇಲ್ಲಿದೆ.

ಸೂಚನೆ: ಬೆಲೆಗಳಲ್ಲಿ ವ್ಯತ್ಯಾಸಗಳಿರಬಹುದು.

ಅರಿಟಾ ಬೈಕ್ಸ್ ಇನ್‌ಫಿನಿಟಿ

ಈ ಸೈಕಲ್ ಕೇವಲ ಸಂಚಾರಕ್ಕಷ್ಟೇ ಅಲ್ಲದೆ ಗರಿಷ್ಠ 130 ಕೆ.ಜಿ. ಸಾಮರ್ಥ್ಯದ ವಸ್ತು, ಉಪಕರಣಗಳನ್ನು ಸಾಗಿಸುವುದಕ್ಕೂ ನೆರವಾಗುತ್ತದೆ. ಇಬ್ಬರು ಕುಳಿತು ಪ್ರಯಾಣಿಸುವುದಕ್ಕೂ ಅನುಕೂಲ. ಇದು ಸಿಂಗಿಲ್ ಸ್ಪೀಡ್ ಗೇರ್ ಸೈಕಲ್ ಆಗಿದ್ದರೂ 7 ಸ್ಪೀಡ್ ಗೇರ್ ವರೆಗೆ ಅಪ್‌ಗ್ರೇಡ್ ಮಾಡಿಕೊಳ್ಳಬಹುದು. 48v 250w ಸಾಮರ್ಥ್ಯದ ಬಿಎಲ್‌ಡಿಸಿ ಹಬ್ ಮೋಟರ್ ಅಳವಡಿಸಲಾಗಿದ್ದು, ಬೇರ್ಪಡಿಸಿ ಚಾರ್ಜ್ ಮಾಡಬಹುದಾದಂತಹ ಲೀಥಿಯಂ ಐಯಾನ್ ಬ್ಯಾಟರ್ ಇದೆ. ಒಮ್ಮೆ ಚಾರ್ಜ್ ಮಾಡಿದರೆ 45 ಕಿ.ಮೀ. ವರೆಗೆ ಕ್ರಮಿಸುತ್ತದೆ. ವಿವಿಧ ಸಾಮರ್ಥ್ಯದ ಬ್ಯಾಟರಿಗಳಲ್ಲಿ ಇದು ಲಭ್ಯವಿದೆ. ಬ್ಯಾಟರಿ ಶಕ್ತಿಗೆ ತಕ್ಕಂತೆ ಕ್ರಮಿಸುವ ವೇಗವೂ ಹೆಚ್ಚಾಗಿರುತ್ತದೆ. ಪೆಡಲ್ ಅಸಿಸ್ಟ್, ಟೆಲಿಸ್ಕೋಪಿಕ್ ಸಸ್ಪೆನ್ಷನ್, ಎಲ್‌ಇಡಿ ಡಿಸ್‌ಪ್ಲೇ ಸೌಲಭ್ಯಗಳಿವೆ. ಇದರ ತೂಕ 25 ಕೆ.ಜಿ. ಹೆಚ್ಚಿನ ಮಾಹಿತಿಗೆ: https://www.auritabikes.com

ಗರಿಷ್ಠ ವೇಗ: 25 ಕಿ.ಮೀ./ಗಂಟೆಗೆ

ಆರಂಭಿಕ ಬೆಲೆ: ₹ 39,999

ಹೀರೊ ಲೆಕ್ಟ್ರೊ ಕಿಂಜಾ 27.5ಟಿ

ವಾಹನ ತಯಾರಿಕಾ ಕಂಪನಿ ಹೀರೊ, ಮಾರುಕಟ್ಟೆಗೆ ಪರಿಚಯಿಸಿರುವ ಈ ಸೈಕಲ್ ಸಂಸ್ಥೆಯ ಬೇಸಿಕ್ ಮಾಡಲ್‌ಗಳಲ್ಲಿ ಒಂದು. 250 ವಾಟ್ ಶಕ್ತಿಯ ಲೀಥಿಯಂ ಐಯಾನ್ ಬ್ಯಾಟರಿಯನ್ನು ಇದರಲ್ಲಿ ಅಳವಡಿಸಲಾಗಿದೆ. ಒಮ್ಮೆ ಚಾರ್ಜ್ ಮಾಡಿದರೆ ಸುಮಾರು 25 ಕಿ.ಮೀ. ವರೆಗೆ ಕ್ರಮಿಸುತ್ತದೆ. ಪೆಡಲಿಕ್ ಮೋಡ್‌ನಲ್ಲಿ ಗರಿಷ್ಠ 40 ಕಿ.ಮೀ. ವರೆಗೆ ಹೋಗಬಹುದು. ಇದರ ಗರಿಷ್ಠ ವೇಗ ಪ್ರತಿ ಗಂಟೆಗೆ 25 ಕಿ.ಮೀ. ಇದರ ತೂಕ 25 ಕೆ.ಜಿ. ಅಮೇಜಾನ್ ಸೇರಿದಂತೆ ವಿವಿಧ ಆನ್‌ಲೈನ್ ಮಾರುಕಟ್ಟೆ ತಾಣಗಳಲ್ಲಿ ಖರೀದಿಗೆ ಲಭ್ಯವಿದೆ.

ಗರಿಷ್ಠ ವೇಗ: 25 ಕಿ.ಮೀ./ಗಂಟೆಗೆ, **ಬೆಲೆ:** ₹ 24.999

ಟೊರಾಯಿಡ್ ರುದ್ರ

ಇದು ಸಿಂಗಲ್ ಸ್ಪೀಡ್ ಎಲೆಕ್ಟ್ರಿಕ್ ಸೈಕಲ್. ಇದರಲ್ಲಿ 36v 250W ಬಿಎಲ್‌ಡಿಸಿ ಹಬ್ ಮೋಟಾರ್ ಇದ್ದು, ಲೀಥಿಯಂ ಅಯಾನ್ ಬ್ಯಾಟರಿ ಅಳವಡಿಸಲಾಗಿದೆ. ಚಾರ್ಜ್ ಮಾಡಬೇಕೆಂದಾಗ ಸುಲಭವಾಗಿ ಬ್ಯಾಟರಿ ಬೇರ್ಪಡಿಸಿ ಚಾರ್ಜ್ ಮಾಡಬಹುದು. ಒಮ್ಮೆ ಚಾರ್ಜ್ ಮಾಡಿದರೆ ಬ್ಯಾಟರಿ ಶಕ್ತಿಗೆ ಅನುಗುಣವಾಗಿ 40ರಿಂದ 90 ಕಿ.ಮೀ. ವರೆಗೆ ಕ್ರಮಿಸಬಹುದು. ಪೆಡಲ್ ಅಸಿಸ್ಟ್, ಎಲ್‌ಡಿ ಡಿಸ್‌ಪ್ಲೇ, ಫ್ರಂಟ್ ಸಸ್‌ಪೆನ್ಷನ್‌ನಂತಹ ಸೌಲಭ್ಯಗಳೂ ಇದರಲ್ಲಿವೆ. ಇದರ ತೂಕ 25 ಕೆ.ಜಿ. ಹೆಚ್ಚಿನ ಮಾಹಿತಿಗೆ: https://toroid.in

ಗರಿಷ್ಠ ವೇಗ: 25 ಕಿ.ಮೀ./ ಗಂಟೆಗೆ,

ಬೆಲೆ: ₹ 36,000ದಿಂದ ಆರಂಭ

ಪ್ಯೂರ್ ಇವಿ ಎಟ್ರಾನ್ ಪ್ಲಸ್

7ಸ್ಪೀಡ್ ಗೇರ್‌ಗಳ ಸೌಲಭ್ಯವಿರುವ ಈ ಎಲೆಕ್ಟ್ರಿಕ್ ಸೈಕಲ್‌ನಲ್ಲಿ 14ಎಚ್ ಲೀಥಿಯಂ ಐಯಾನ್ ಬ್ಯಾಟರಿ ಅಳವಡಿಸಲಾಗಿದ್ದು, ಒಮ್ಮೆ ಚಾರ್ಜ್ ಮಾಡಿದರೆ ಸುಮಾರು 60 ಕಿ.ಮೀ. ವರೆಗೆ ಕ್ರಮಿಸುತ್ತದೆ. ಪೆಡಲ್ ಅಸಿಸ್ಟ್, ಡಿಜಿಟಲ್ ಡಿಸ್‌ಪ್ಲೇ, ಟೆಲಿಸ್ಕೋಪಿಕ್ ಸಸ್ಪೆನ್‌ಷನ್ ಸೇರಿದಂತೆ ಇನ್ನೂ ಕೆಲವು ಸೌಲಭ್ಯಗಳಿವೆ. ಇದರ ತೂಕ 24 ಕೆ.ಜಿ. ಹೆಚ್ಚಿನ ಮಾಹಿತಿಗೆ: https://pureev.in/etron

ಗರಿಷ್ಠ ವೇಗ: 20 ಕಿ.ಮೀ./ಗಂಟೆಗೆ

ಬೆಲೆ: ₹ 39,999

ಎಲೆಕ್ಟ್ರಾನ್ ಎ05ಎಕ್ಸ್

ಚಾರಣಪ್ರಿಯರಿಗೆ ಹೇಳಿ ಮಾಡಿಸಿದಂತಿದೆ ಈ ಸೈಕಲ್. ಇದಕ್ಕಾಗಿಯೇ ದಡೂತಿ ಗಾಲಿಗಳನ್ನು ಅಳವಡಿಸಲಾಗಿದೆ. ಇದರಲ್ಲಿ 7ಸ್ಪೀಡ್ ಗೇರ್ ಸೌಲಭ್ಯವಿದೆ. 250 ವಾಟ್ ಸಾಮರ್ಥ್ಯದ ಬಿಎಲ್‌ಡಿಸಿ ಹಬ್ ಮೋಟರ್ ಅಳವಡಿಸಲಾಗಿದೆ. 36ವಿ 15ಎಚ್ ಲೀಥಿಯಂ ಐಯಾನ್ ಬ್ಯಾಟರಿ ಇದೆ. ಬ್ಯಾಟರಿಯನ್ನು ಬೇರ್ಪಡಿಸಿ ಚಾರ್ಜ್ ಮಾಡಿಕೊಳ್ಳಬಹುದು. ಒಮ್ಮೆ ಚಾರ್ಜ್ ಮಾಡಿದರೆ 70 ಕಿ.ಮೀ. ವರೆಗೆ ಕ್ರಮಿಸುತ್ತದೆ. ಸುರಕ್ಷತಾ ದೃಷ್ಟಿಯಿಂದ ಟಾರ್ಕ್ ಸೆನ್ಸರ್, ಕ್ರೂಯಿಸ್ ಕಂಟ್ರೋಲ್, ಆನ್-ಆಫ್ ಕೀ ಸ್ವಿಚ್, ಪೆಡಲ್ ಅಸಿಸ್ಟ್‌ನಂತಹ ಹಲವು ಸೌಲಭ್ಯಗಳನ್ನು ಅಳವಡಿಸಲಾಗಿದೆ. ಇದರ ತೂಕ 28 ಕೆ.ಜಿ. ಹೆಚ್ಚಿನ ಮಾಹಿತಿಗೆ: https://elektroncycles.in/products/m5x

ಗರಿಷ್ಠ ವೇಗ: 25 ಕಿ.ಮೀ./ಗಂಟೆಗೆ

ಬೆಲೆ: ₹ 64,999

ಎಸ್ಸೆಸ್ಸೆಲ್ಸಿ ದಿಕ್ಸೂಚಿ

ವಿಷಯ: ಗಣಿತ

21. ವರ್ಗಸಮೀಕರಣದ ಆದರ್ಶರೂಪ

A) $ax^2 + bx + c = 0$

B) $ax + b = c$

C) $ax^3 + bx^2 + c = 0$

D) $ax - b = 0$

22. $2x^2 - 4x + 3 = 0$ ಸಮೀಕರಣದ ಶೋಧಕದ ಬೆಲೆ

A) -8 B) 8 C) 0 D) 1

23. $x^2 + 4x + 4 = 0$ ಸಮೀಕರಣದ ಮೂಲಗಳ ಸ್ವಭಾವ

A) ವಾಸ್ತವ ಮತ್ತು ಸಮ

B) ವಾಸ್ತವ ಮತ್ತು ಬೇರೆ ಬೇರೆ

C) ವಾಸ್ತವವಲ್ಲ

D) ವಾಸ್ತವ ಮತ್ತು ವಿಭಿನ್ನ

24. ವರ್ಗ ಸಮೀಕರಣ $2x^2 + px - 15 = 0$ ದ ಒಂದು ಮೂಲ -5 ಆದರೆ p ಬೆಲೆ

A) 3 B) 5 C) 7 D) 1

25. $2\sin 2\theta = \sqrt{3}$ ಆದಾಗ 'θ' ಅಳತೆ ....

A) 90^0 B) 60^0 C) 30^0 D) 45^0

26. $\tan A = \frac{4}{3}$ ಆದರೆ $\cot A$ = ...

A) $\frac{4}{3}$ B) $\frac{3}{4}$ C) $\frac{4}{5}$ D) $\frac{5}{3}$

27. $\frac{\sin 18^\circ}{\cos 72^\circ}$ ರ ಬೆಲೆ

A) 0 B) 1 C) 2 D) 3

28. $13\sin\theta = 12$ ಆದರೆ $\text{cosec}\,\theta$ = ...

A) $\frac{5}{12}$ B) $\frac{13}{5}$ C) $\frac{12}{13}$ D) $\frac{13}{12}$

29. $\tan A = \cot B$ ಆದಾಗ $A + B$ = ...

A) 90^0 B) 60^0 C) 30^0 D) 0^0

30. $\sin\theta + \sin^2\theta$ ಆದರೆ $\cos^2\theta + \cos^4\theta$ = ...

A) -1 B) 1 C) 0 D) 2

ವಿಷಯ: ವಿಜ್ಞಾನ

21. ಪರಾಗಸ್ಪರ್ಶದ ನಂತರ ಹೂವಿನ ಯಾವ ಭಾಗ ಹಣ್ಣಾಗಿ ಬೆಳೆಯುತ್ತದೆ?

ಎ) ಅಂಡಾಣು ಬಿ) ಅಂಡಾಶಯ

ಸಿ) ಪುಷ್ಪ ಪಾತ್ರೆ ಡಿ) ಪುಂಕೇಸರ

22. ನಮ್ಮ ಸಮಾಜದ ಕೆಲವು ಭಾಗಗಳಲ್ಲಿ ಮಕ್ಕಳ ಲಿಂಗಾನುಪಾತವು ತೀವ್ರಗತಿಯಲ್ಲಿ ಕುಸಿಯುತ್ತದೆ. ಇದಕ್ಕೆ ಕಾರಣ

ಎ) ಸಂತಾನ ಹರಣ ಶಸ್ತ್ರಚಿಕಿತ್ಸೆ

ಬಿ) ಮಾತ್ರೆಗಳು (ಹಾರ್ಮೋನ್ ನಿಯಂತ್ರಿಸುವ)

ಸಿ) ವಂಕಿ ಅಳವಡಿಸುವುದು

ಡಿ) ಹೆಣ್ಣುಭ್ರೂಣ ಹತ್ಯೆ

23. ಈ ಕೆಳಗಿನ ಯಾವ ವಿಧಾನದಲ್ಲಿ ವಂಶವಾಹಿಗಳ ಅದಲು ಬದಲು ಉಂಟಾಗುತ್ತದೆ?

ಎ) ಕಾಯಜ ಸಂತಾನೋತ್ಪತ್ತಿ

ಬಿ) ಅಲೈಂಗಿಕ ಸಂತಾನೋತ್ಪತ್ತಿ

ಸಿ) ಲೈಂಗಿಕ ಸಂತಾನೋತ್ಪತ್ತಿ

ಡಿ) ಅಂಕುರ

24. ದುಂಡನೆಯ ಹಸಿರು ಬೀಜ (RRyy)ಹೊಂದಿರುವ ಬಟಾಣಿ ಸಸ್ಯವನ್ನು, ಸುಕ್ಕಾದ ಹಳದಿ ಬೀಜ (rrYY) ಹೊಂದಿರುವ ಬಟಾಣಿ ಸಸ್ಯದೊಂದಿಗೆ ಪರಕೀಯ ಪರಾಗಸ್ಪರ್ಶಕ್ಕೊಳಪಡಿಸಿ ಪಡೆದ F1 ಸಂತತಿಯ ಬೀಜದ ಲಕ್ಷಣಗಳು

ಎ) ದುಂಡನೆಯ ಹಳದಿ ಬೀಜ

ಬಿ) ದುಂಡನೆಯ ಹಸಿರು ಬೀಜ

ಸಿ) ಸುಕ್ಕಾದ ಹಸಿರು ಬೀಜ

ಡಿ) ಸುಕ್ಕಾದ ಹಳದಿ ಬೀಜ

25. ಜೀವಿಯ ಪಳೆಯುಳಿಕೆ ಭೂಮಿಯ ಒಳಪದರಗಳಲ್ಲಿ ಕಂಡುಬಂದಾಗ, ನಾವು ಈ ರೀತಿ ಊಹಿಸಬಹುದು

ಎ) ಜೀವಿಯು ಇತ್ತೀಚೆಗೆ ನಶಿಸಿಹೋಗಿದೆ

ಬಿ) ಜೀವಿಯು ಸಾವಿರಾರು ವರ್ಷಗಳ ಹಿಂದೆ ನಶಿಸಿಹೋಗಿದೆ

ಸಿ) ಪಳೆಯುಳಿಕೆ ಕಂಡುಬಂದ ಭೂಪದರಕ್ಕೂ ಹಾಗೂ ಜೀವಿ ನಶಿಸಿಹೋಗಿರುವ ಸಮಯಕ್ಕೂ ಸಂಬಂಧವಿಲ್ಲ

ಡಿ) ಜೀವಿ ನಶಿಸಿಹೋದ ಸಮಯವನ್ನು ಕಂಡುಹಿಡಿಯಲಾಗುವುದಿಲ್ಲ

26. ಒಂದು ಜೀವಿಯಲ್ಲಿನ ಗುಣಲಕ್ಷಣಗಳು ಪ್ರಭಾವಿತಗೊಂಡಿರುವುದು

ಎ) ಪಿತೃ ವಂಶವಾಹಿಗಳಿಂದ ಮಾತ್ರ

ಬಿ) ಮಾತೃ ವಂಶವಾಹಿಗಳಿಂದ ಮಾತ್ರ

ಸಿ) ಮಾತೃ ಮತ್ತು ಪಿತೃ ವಂಶವಾಹಿಗಳೆರಡರಿಂದಲೂ

ಡಿ) ಮಾತೃ ಅಥವಾ ಪಿತೃ ವಂಶವಾಹಿಗಳಿಂದ ಅಲ್ಲ

27. ಸಂಯುಕ್ತ ರಾಷ್ಟ್ರಗಳ ಪರಿಸರ ಕಾರ್ಯಕ್ರಮ ಸಿಎಫ್‌ಸಿಗಳ ಉತ್ಪಾದನೆಯನ್ನು ಯಾವ ವರ್ಷದ ಮಟ್ಟಕ್ಕೆ ಸ್ಥಗಿತಗೊಳಿಸುವಂಥ ಒಪ್ಪಂದ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು?

ಎ) 1987 ಬಿ) 1986

ಸಿ) 1985 ಡಿ) 1988

28. ಪೀನ ಮಸೂರದ ಸಂಗಮ ದೂರವು 15 cm ಆಗಿದ್ದು, ವಸ್ತುವಿನ ಗಾತ್ರದಷ್ಟೆ ಪ್ರತಿಬಿಂಬ ಪಡೆಯಲು, ಪೀನ ಮಸೂರದಿಂದ ವಸ್ತುವಿನ ಸ್ಥಾನ

ಎ) 15 cm ಬಿ) 10 cm

ಸಿ) 20 cm ಡಿ) 30 cm

29. ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ?

ಎ) 0.25m ಸಂಗಮದೂರ ಹೊಂದಿರುವ ಪೀನ ಮಸೂರದ ಸಾಮರ್ಥ್ಯ 4D

ಬಿ) 0.25m ಸಂಗಮದೂರ ಹೊಂದಿರುವ ಪೀನ ಮಸೂರದ ಸಾಮರ್ಥ್ಯ -4D

ಸಿ) 0.25m ಸಂಗಮದೂರ ಹೊಂದಿರುವ ನಿಮ್ನ ಮಸೂರದ ಸಾಮರ್ಥ್ಯ -4D

ಡಿ) 0.25m ಸಂಗಮದೂರ ಹೊಂದಿರುವ ನಿಮ್ನ ಮಸೂರದ ಸಾಮರ್ಥ್ಯ 4D

30. ಪೀನ ಮಸೂರದಲ್ಲಿ ವಸ್ತುವಿನ ಸ್ಥಾನ F1 ಮತ್ತು 2F1 ನಡುವೆ ಇದ್ದರೆ. ಪ್ರತಿಬಿಂಬದ ಸ್ವಭಾವ

ಎ) $2F_2$ ಗಿಂತ ದೂರದಲ್ಲಿ, ದೊಡ್ಡದಾದ, ಸತ್ಯ ಮತ್ತು ತಲೆಕೆಳಗಾದ

ಬಿ) $2F_2$ ನಲ್ಲಿ, ಸಮಾನ ಗಾತ್ರ, ಸತ್ಯ ಮತ್ತು ತಲೆಕೆಳಗಾದ

ಸಿ) F2 ಮತ್ತು $2F_2$ ನಡುವೆ, ಚಿಕ್ಕದಾದ, ಸತ್ಯ ಮತ್ತು ತಲೆಕೆಳಗಾದ

ಡಿ) $2F_2$ ಗಿಂತ ದೂರದಲ್ಲಿ, ಚಿಕ್ಕದಾದ, ಸತ್ಯ ಮತ್ತು ತಲೆಕೆಳಗಾದ

Subject : Second Language English

21. "Are you ok?", said Baleshwar. But there was no response as Roma

A. was unconscious. B. could not speak.

C. never spoke to strangers. D. she was feeling breathless.

22. "Friend, I don't like to have you speak to me in this manner." Here 'I' refers to

A. children of the village B. the narrator

C. the Americans D. Don Anselmo

23. Don Anselmo did not sell the trees because

A. the land was very fertile.

B. he wanted to protect the environment.

C. he had promised to give them to the children of the village.

D. the Americans did not want them.

24. It took months of negotiation to come to an understanding with the old man because

A. the land was not ready for sale.

B. the children of the village were objecting the sale.

C. the Americans had to learn Spanish.

D. the old man was in no hurry to sell his land.

25. 'He had an insatiable thirst for books'. Here 'He' refers to

A. Mahatma Gandhiji B. Mahatma Phule

C. Buddha D. Dr. B R Ambedkar

26. Nehru described Dr. Ambedkar as

A. Modern Manu

B. political grammarian

C. leader of the depressed

D. a symbol of revolt

27. 'He actually raised himself up without help' she said with a catch in her throat. The underlined phrase shows that

A. the speaker had cold and cough

B. someone had caught her by the throat

C. she was filled with grief

D. she had tied something round her throat

28. "We perform for the boy." This was said by

A. Pandit Ravishankar.

B. aunt Sushila

C. Ustad Allah Rakha

D. Zakeer Hussain

29. "Why are you speaking so softly?" This was asked by

A. Satish's father B. brother Inder

C. Surender D. Satish

30. The bird's eyes kept moving here and there, its body was ready for flight. This shows that the bird

A. was afraid that it would fall off

B. was full of energy

C. wanted Satish to come out

D. was showing its beauty

(ಪ್ರಶ್ನೆಪತ್ರಿಕೆ ಸಂಯೋಜನೆ: ಸ್ವಾಮಿ ಎಚ್‌.ಆರ್‌./ ಎ. ಶ್ರೀನಿವಾಸ್/ ಎಂ.ಎಸ್. ವರ್ಧಿನಿ)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ -19

256. ಪ್ರಸ್ತುತ ಮಹಾರಾಷ್ಟ್ರದ ಮುಖ್ಯಮಂತ್ರಿ ಯಾರು?

ಎ) ಬಾಳಾಸಾಹೇಬ್ ಠಾಕ್ರೆ

ಬಿ) ದೇವೇಂದ್ರ ಫಡಣವೀಸ್

ಸಿ) ಏಕನಾಥ ಖಡ್ಸೆ

ಡಿ) ಉದ್ಧವ್ ಠಾಕ್ರೆ

257. ಇತ್ತೀಚೆಗೆ ಕರ್ನಾಟಕದ ಕರಾವಳಿಯನ್ನು ಬಾಧಿಸಿದ ಚಂಡಮಾರುತ ಯಾವುದು?

ಎ) ಕತ್ರಿನಾ ಬಿ) ಆಂಫನ್

ಸಿ) ಹುಡ್ಹುಡ್ ಡಿ) ತೌತೆ

258. 'ಸ್ವಚ್ಛ ಭಾರತ ಅಭಿಯಾನ' ಎಂದು ಆರಂಭವಾಯಿತು?

ಎ) ಅಕ್ಟೋಬರ್ 2, 2014

ಬಿ) ಅಕ್ಟೋಬರ್ 12, 2014

ಸಿ) ಅಕ್ಟೋಬರ್ 22, 2014

ಡಿ) ಅಕ್ಟೋಬರ್ 14, 2014

259. 'ಬಸವ ಸಾಗರ' ಜಲಾಶಯವನ್ನು ಯಾವ ನದಿಗೆ ಕಟ್ಟಲಾಗಿದೆ?

ಎ) ಕೃಷ್ಣಾ ಬಿ) ಕಾವೇರಿ

ಸಿ) ಮಹಾನದಿ ಡಿ) ಗೋದಾವರಿ

260. ಈ ಕೆಳಗಿನವುಗಳಲ್ಲಿ ಯಾವುದರಿಂದ ಗಾಳಿಯ ವೇಗವನ್ನು ಅಳೆಯುತ್ತಾರೆ?

ಎ) ಅನಿಮೋಮೀಟರ್

ಬಿ) ಹೈಗ್ರೋಮೀಟರ್

ಸಿ) ಗ್ಯಾಲ್ವನೋಮೀಟರ್

ಡಿ) ಸ್ಪೆಕ್ಟ್ರೋಮೀಟರ್

261. ಜೀವಕೋಶದಲ್ಲಿ ಪ್ರೊಟೀನ್ ಸಂಯೋಜನೆ ನಡೆಯುವುದು ಎಲ್ಲಿ?

ಎ) ಸ್ರಾವಕ ಕಣಗಳು

ಬಿ) ಮೇದಸ್ಸಿನ ಬಿಂದುಗಳು

ಸಿ) ರಿಬೋಸೋಮ್

ಡಿ) ಮೈಟೋಕಾಂಡ್ರಿಯ

262. ಮಸಿ ಹೀರುವ ಕಾಗದದಲ್ಲಿ, ಮಸಿಯನ್ನು ಹೀರುವ ಕ್ರಿಯೆಯು

ಎ) ಮಸಿಯ ಸ್ನಿಗ್ಧತೆಯನ್ನು ಒಳಗೊಂಡಿರುತ್ತದೆ

ಬಿ) ಲೋಮನಾಳದ ಕ್ರಿಯೆಯನ್ನು ಒಳಗೊಂಡಿರುತ್ತದೆ

ಸಿ) ಮಸಿ ಹೀರುವ ಕಾಗದದಲ್ಲಿ ಮಸಿಯ ಹರಡುವಿಕೆಯಿಂದ ಆಗುತ್ತದೆ

ಡಿ) ಸ್ಟೆಫನ್ ಪೇಪರ್

263. ಕಾಮನಬಿಲ್ಲು ಉಂಟಾಗಲು ಕಾರಣ

ಎ) ಬೆಳಕಿನ ಪ್ರತಿಬಿಂಬದಿಂದ

ಬಿ) ಬೆಳಕಿನ ವಕ್ರೀಭವನದಿಂದ

ಸಿ) ಬೆಳಕಿನ ಹರಡುವಿಕೆಯಿಂದ

ಡಿ) ಮೇಲಿನ ಎಲ್ಲದರಿಂದ

264. ಸೂರ್ಯನ ಕಿರಣಗಳು ಸೂರ್ಯನಿಂದ ಭೂಮಿಯನ್ನು ತಲುಪಲು ಎಷ್ಟು ಸಮಯ ತೆಗೆದುಕೊಳ್ಳುತ್ತವೆ?

ಎ) 8.0 ನಿಮಿಷ ಬಿ) 8.2 ನಿಮಿಷ

ಸಿ) 8.7 ನಿಮಿಷ ಡಿ) 8.3 ನಿಮಿಷ

265. 'ಕ್ಯೂಸೆಕ್' ಎಂದರೆ

ಎ) ಕ್ಯೂಬಿಕ್ ಮೀಟರ್ (1000 ಮೀ.) ಪರ್ ಸೆಕೆಂಡ್

ಬಿ) ಕ್ಯೂಬಿಕ್ ಲೀಟರ್ (1000 ಲೀ.) ಪರ್ ಸೆಕೆಂಡ್

ಸಿ) ಕ್ಯೂಬಿಕ್ ಗ್ರಾಂ (1000 ಗ್ರಾಂ) ಪರ್ ಸೆಕೆಂಡ್

ಡಿ) ಮೇಲಿನ ಯಾವುದೂ ಅಲ್ಲ

266. ಸಂಚಾರ ನಿಯಂತ್ರಣ ದೀಪಗಳಲ್ಲಿ ಕೆಂಪು ಬಣ್ಣವನ್ನು ಬಳಸಲು ಕಾರಣವೇನು?

ಎ) ಆಕರ್ಷಕವಾಗಿರುವುದರಿಂದ

ಬಿ) ಕೆಂಪು ಬಣ್ಣದ ಕಿರಣಗಳು ಹೆಚ್ಚು ತರಂಗ ದೂರ ಒಳಗೊಂಡಿದ್ದರಿಂದ ದೂರದಿಂದಲೇ ಗುರುತಿಸುವುದು ಸುಲಭ

ಸಿ) ದೃಷ್ಟಿ ದೋಷವುಳ್ಳವರು ಸುಲಭವಾಗಿ ಗುರುತಿಸುತ್ತಾರೆ

ಡಿ) ಹಲವರ ಅಚ್ಚುಮೆಚ್ಚಿನ ಬಣ್ಣ

267. ಈ ಕೆಳಗಿನವುಗಳಲ್ಲಿ ಸಂಪತ್ತಿನ ಸಮಾನ ಹಂಚಿಕೆಯು ಯಾವ ಮೌಲ್ಯವನ್ನು ಸೂಚಿಸುತ್ತದೆ?

ಎ) ಪ್ರಜಾಪ್ರಭುತ್ವ ಬಿ) ರಾಜಪ್ರಭುತ್ವ

ಸಿ) ಸರ್ವಾಧಿಕಾರ ಡಿ) ಸಮಾಜವಾದ

268. ಪಂಚಶೀಲ ತತ್ವಗಳು ಯಾವ ಮೌಲ್ಯವನ್ನು ಆಧರಿಸಿವೆ?

ಎ) ರಾಜ್ಯ ನಿರ್ದೇಶಕ ತತ್ವಗಳ ಮೌಲ್ಯ

ಬಿ) ರಾಷ್ಟ್ರೀಯ ಮೌಲ್ಯ

ಸಿ) ಅಂತರರಾಷ್ಟ್ರೀಯ ಸಹಭಾಗಿತ್ವ

ಡಿ) ಸಮಾಜವಾದಿ ಮೌಲ್ಯ

269. ರಾಷ್ಟ್ರೀಯ ಹಬ್ಬಗಳ ಆಚರಣೆಯು ಏನನ್ನು ಸಾಧಿಸುತ್ತದೆ?

ಎ) ರಾಷ್ಟ್ರೀಯ ಭಾವೈಕ್ಯ

ಬಿ) ರಾಷ್ಟ್ರೀಯ ಭದ್ರತೆ

ಸಿ) ಸಾಂಸ್ಕೃತಿಕ ಅಭಿವೃದ್ಧಿ

ಡಿ) ವಿಶ್ವಾಸಾರ್ಹತೆ

270. ಭಾರತವು ಜಗತ್ತಿನ ಭೂವಿಸ್ತೀರ್ಣದಲ್ಲಿ 7ನೇ ದೊಡ್ಡ ದೇಶ. ಇದರ ವಿಸ್ತೀರ್ಣವು ಜಗತ್ತಿನ ವಿಸ್ತೀರ್ಣದಲ್ಲಿ ಎಷ್ಟಿದೆ?

ಎ) ಶೇ 2.9 ಬಿ) ಶೇ 2.8

ಸಿ) ಶೇ 2.6 ಡಿ) ಶೇ 2.4

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 18ರ ಉತ್ತರಗಳು

241. ಬಿ, 242. ಡಿ, 243. ಬಿ, 244. ಬಿ, 245. ಡಿ, 246. ಸಿ, 247. ಡಿ, 248. ಎ, 249. ಸಿ, 250. ಬಿ, 251. ಸಿ, 252. ಬಿ, 253. ಡಿ, 254. ಬಿ, 255. ಎ

ಆಸ್ಪತ್ರೆಗೆ ದಾಖಲಿಸದೇ ತೆರಳಿದರು: ಸಂಬಂಧಿಗಳ ಆಕ್ರೋಶ • ಕಾರಿನಲ್ಲಿ ಪುತ್ರ ಇರಲಿಲ್ಲ– ಸವದಿ

ಡಿಸಿಎಂ ಸವದಿ ಪುತ್ರನ ಕಾರು ಡಿಕ್ಕಿ: ರೈತ ಸಾವು

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಹುನಗುಂದ ತಾಲ್ಲೂಕಿನ ಕಳಸದ ಮಾರ್ಗ ಬಳಿ ರಾಷ್ಟ್ರೀಯ ಹೆದ್ದಾರಿ 50ರಲ್ಲಿ ಸೋಮವಾರ ಮುಸ್ಸಂಜೆ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಪುತ್ರ ಚಿದಾನಂದ ಅವರ ಕಾರು ಡಿಕ್ಕಿ ಹೊಡೆದು ಬಾಗಲಕೋಟೆ ತಾಲ್ಲೂಕು ಚಿಕ್ಕ ಹಂಡರಗಲ್ ಗ್ರಾಮದ ನಿವಾಸಿ ಕೂಡ್ಲೆಪ್ಪ ಹನುಮಪ್ಪ ಬೋಳಿ (55) ಸಾವಿಗೀಡಾಗಿದ್ದಾರೆ.

ಕೂಡ್ಲೆಪ್ಪ ಹೊಲಕ್ಕೆ ತೆರಳಿ ವಾಪಸ್ ಬೈಕ್‌ನಲ್ಲಿ ಮನೆಗೆ ಮರಳುವಾಗ ಕಾರು ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ತೀವ್ರ ಗಾಯಗೊಂಡ ಅವರನ್ನು ಆಂಬುಲೆನ್ಸ್‌ನಲ್ಲಿ ಬಾಗಲಕೋಟೆಯ ಗುಳೇದ ಆಸ್ಪತ್ರೆಗೆ ಒಯ್ದಿದ್ದು, ಚಿಕಿತ್ಸೆಗೆ ಸ್ಪಂದಿಸದೇ ರಾತ್ರಿಯೇ ಮೃತಪಟ್ಟರು. ಕಾರು ಕೊಪ್ಪಳ ಜಿಲ್ಲೆ ಆನೆಗುಂದಿಯಿಂದ ವಿಜಯಪುರ ಮಾರ್ಗವಾಗಿ ಅಥಣಿಗೆ ಹೊರಟಿತ್ತು.

‘ಕಾರನ್ನು ಚಿದಾನಂದ ಸವದಿ ಅವರೇ ಚಲಾಯಿಸುತ್ತಿದ್ದರು. ಅಪಘಾತದ ನಂತರ ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸದೇ ಪೊಲೀಸರು ಸ್ಥಳಕ್ಕೆ ಬರುವ ಮುನ್ನವೇ ಅವರು ಅಲ್ಲಿಂದ ತೆರಳಿದರು’ ಎಂದು ಮೃತ ಕೂಡ್ಲೆಪ್ಪ ಅವರ ಸಂಬಂಧಿಕರು ಹಾಗೂ ಪ್ರತ್ಯಕ್ಷದರ್ಶಿಗಳು ಆರೋಪಿಸಿದ್ದಾರೆ.

‘ಅಪಘಾತದ ಸುದ್ದಿ ತಿಳಿದು ಸ್ಥಳಕ್ಕೆ ಬಂದೆವು. ಡಿಕ್ಕಿ ಹೊಡೆದ ಕಾರಿನಲ್ಲಿ ಚಿದಾನಂದ ಸವದಿ ಸೇರಿ ನಾಲ್ವರಿದ್ದರು. ಮತ್ತೊಂದು ಇನ್ನೋವಾ ಕಾರು ಹಿಂದೆ ಬರುತ್ತಿತ್ತು. ಅಪಘಾತದ ದೃಶ್ಯಾವಳಿಯ ವಿಡಿಯೊ ಮಾಡಿದಾಗ ಕಾರಿನಲ್ಲಿದ್ದವರು ಫೋನ್ ಕಸಿದುಕೊಂಡು ಡಿಲೀಟ್ ಮಾಡಿಸಿದರು’ ಎಂದು ಕೂಡ್ಲೆಪ್ಪ ಸಹೋದರಿಯ ಪತಿ ಸಿದ್ದಪ್ಪ ಬಳಬಟ್ಟಿ ತಿಳಿಸಿದರು.

> **ಅಪಘಾತ ನಡೆದಾಗ ಚಿದಾನಂದ ಸವದಿ ಸ್ಥಳದಲ್ಲಿಯೇ ಇದ್ದರು. ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಿದ ನಂತರ ಬೇರೊಂದು ವಾಹನದಲ್ಲಿ ತೆರಳಿದ್ದಾರೆ**
> **ಲೋಕೇಶ ಜಗಲಾಸರ್**
> ಬಾಗಲಕೋಟೆ ಜಿಲ್ಲಾ ಎಸ್ಪಿ

ಕೂಡ್ಲೆಪ್ಪ ಬೋಳಿ

‘ಅಪಘಾತಕ್ಕೀಡಾದ ಕಾರಿನ ನಂಬರ್ ಪ್ಲೇಟ್ (KA-22, MC-5151) ಕಿತ್ತುಕೊಂಡು, ದಾಖಲೆಗಳನ್ನು ತೆಗೆದುಕೊಂಡು ಬೇರೊಂದು ಕಾರಿನಲ್ಲಿ ಚಿದಾನಂದ ತೆರಳಿದರು. ನಾವೇ 108 ಆಂಬುಲೆನ್ಸ್‌ಗೆ ಕರೆ ಮಾಡಿ ಗಾಯಾಳುವನ್ನು ಬಾಗಲಕೋಟೆ ಆಸ್ಪತ್ರೆಗೆ ಕರೆದೊಯ್ದೆವು’ ಎಂದರು.

ಚಕ್ರದ ಹವಾ ತೆಗೆದೆವು: ‘ಅಪಘಾತದ ಶಬ್ದ ಕೇಳಿ ಹೊಲದಿಂದ ಓಡಿ ಬಂದೆ. ಅಕ್ಕಪಕ್ಕದ ಹೊಲದವರೂ ಜೊತೆಯಾದರು. ಕಾರಿನಲ್ಲಿದ್ದವರು ನಂಬರ್ ಪ್ಲೇಟ್ ಕೀಳುವುದು ಕಾಣಿಸಿತು. ಪರಾರಿ ಆಗಬಹುದು ಎಂದು ಕಾರು ಅಡ್ಡ ಹಾಕಿ, ಮುಂದಿನ ಚಕ್ರದ ಹವಾ ತೆಗೆದೆವು. ಫೋನ್ ಮಾಡಿ ನಮ್ಮೂರಿನವರನ್ನು ಕರೆಸಿಕೊಂಡೆವು’ ಎಂದು ಪ್ರತ್ಯಕ್ಷದರ್ಶಿ ಹನುಮಂತ ದೊಡ್ಡಮನಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಾರಿನಲ್ಲಿದ್ದವರು ಲಕ್ಷ್ಮಣ ಸವದಿ ಅವರ ಮಗನೆಂದು ಗೊತ್ತಿರಲಿಲ್ಲ. ಕಾರು ಅಡ್ಡ ಹಾಕಿದಾಗ ನಮ್ಮನ್ನು ಹೆದರಿಸಲು ಅವರೇ ಹೇಳಿಕೊಂಡರು. ತಮ್ಮೊಂದಿಗೆ ಇದ್ದ ಮೂವರನ್ನು ಅಲ್ಲಿಯೇ ಬಿಟ್ಟು ಇನ್ನೊಂದು ಕಾರಿನಲ್ಲಿ ತೆರಳಿದರು’ ಎಂದು ಹನುಮಂತ ತಿಳಿಸಿದರು.

‘ಕಾರಿನಲ್ಲಿ ಚಿದಾನಂದ ಸವದಿ ಇದ್ದರೋ, ಇಲ್ಲವೋ ಗೊತ್ತಿಲ್ಲ. ಚಾಲಕ ಹನುಮಂತ ಸಿಂಗ್ ರಜಪೂತ್ ವಿರುದ್ಧ ಎಫ್‌ಐಆರ್ ದಾಖಲಿಸಿದ್ದೇವೆ’ ಎಂದು ಹುನಗುಂದ ಸರ್ಕಲ್ ಇನ್‌ಸ್ಪೆಕ್ಟರ್ ಹೊಸಕೇರಪ್ಪ ಕೊಳ್ಳೂರ ತಿಳಿಸಿದರು.

‘ಕಾರು ನನ್ನದೇ, ಅದರಲ್ಲಿ ನಾನಿರಲಿಲ್ಲ’

ಚಿದಾನಂದ ಸವದಿ

ಅಥಣಿ (ಬೆಳಗಾವಿ ಜಿಲ್ಲೆ): ‘ಅಪಘಾತವಾಗಿರುವುದು ನನ್ನದೇ ಕಾರು. ಆದರೆ, ಅದರಲ್ಲಿ ನಾನಿರಲಿಲ್ಲ’ –ಅಪಘಾತ ಕುರಿತು ಚಿದಾನಂದ ಸವದಿ ಅವರ ಪ್ರತಿಕ್ರಿಯೆ ಇದು.

‘ನಾನು ಸ್ನೇಹಿತರ ಕಾರಲ್ಲಿದ್ದೆ. ನನ್ನ ಕಾರಿನಲ್ಲಿ ಚಾಲಕನಲ್ಲದೆ ಮೂವರು ಸ್ನೇಹಿತರಿದ್ದರು. ದ್ವಿಚಕ್ರವಾಹನ ಸವಾರ ಏಕಾಏಕಿ ಅಡ್ಡ ಬಂದಿದ್ದರಿಂದ ಅಪಘಾತವಾಗಿದೆ ಎಂದು ಚಾಲಕ ತಿಳಿಸಿದ. ಆಗ ನಾನಿದ್ದ ಕಾರು 30 ಕಿ.ಮೀ. ದೂರದಲ್ಲಿತ್ತು. ಮಾಹಿತಿ ತಿಳಿದಂತೆ ಆಂಬುಲೆನ್ಸ್‌ಗೆ ವ್ಯವಸ್ಥೆ ಮಾಡಿಸಿದೆ. ಪೊಲೀಸರಿಗೂ ಮಾಹಿತಿ ನೀಡಿದ್ದೆ. ವೈದ್ಯರ ಜೊತೆಗೂ ಮಾತನಾಡಿದ್ದೆ. ಬೇರೆ ಆಸ್ಪತ್ರೆಯಲ್ಲಿ ಆಮ್ಲಜನಕ ವ್ಯವಸ್ಥೆ ಮಾಡಬೇಕಾಗುತ್ತದೆ ಎಂದು ವೈದ್ಯರು ಹೇಳಿದ್ದರು. ರಾತ್ರಿ 8ಕ್ಕೆ ಕರೆ ಮಾಡಿದಾಗ ವ್ಯಕ್ತಿ ಸಾವಿಗೀಡಾದ ಸುದ್ದಿಯನ್ನು ವೈದ್ಯರು ತಿಳಿಸಿದರು’ ಎಂದು ಹೇಳಿದರು.

‘ಕಾರಿನ ನಂಬರ್ ಪ್ಲೇಟ್ ಬದಲಿಸಿದ ವಿಷಯ ನನಗೆ ಗೊತ್ತಿಲ್ಲ. ‘ಯಾರಿಗೂ ಧಮಕಿ ಹಾಕುವ ಪ್ರಶ್ನೆಯೇ ಇಲ್ಲ. ಯಾರೊಂದಿಗೂ ವಾಗ್ವಾದ ನಡೆಸಿಲ್ಲ. ಆರೋಪಿಸಿದವರು ದಾಖಲೆಗಳಿದ್ದರೆ ಬಿಡುಗಡೆ ಮಾಡಲಿ. ಮೃತನಕುಟುಂಬದವರ ಮನೆಗೆ ಹೋಗಿ ಸಾಂತ್ವನ ಹೇಳುತ್ತೇನೆ’ ಎಂದರು.

‘ಕಷ್ಟದಲ್ಲಿದ್ದರೆ ಸಹಾಯ’

ಮೈಸೂರು: ‘ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕಳಸದ ಮಾರ್ಗ ಬಳಿ ಸೋಮವಾರ ಸಂಜೆ ಅಪಘಾತ ಸಂಭವಿಸಿದ ಕಾರಿನಲ್ಲಿ ನನ್ನ ಪುತ್ರ ಇರಲಿಲ್ಲ. ಆತ ಮುಂದಿನ ಕಾರಿನಲ್ಲಿದ್ದ’ ಎಂದು ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಮಂಗಳವಾರ ಇಲ್ಲಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ಯಾರು ಯಾರು ಚಾಲನೆ ಮಾಡುತ್ತಿದ್ದರು ಎನ್ನುವುದು ಮುಖ್ಯ. ಕಾರಿನಲ್ಲಿ ಯಾರಿದ್ದರು ಎಂಬುದಲ್ಲ. ಮುಂದಿನ ಕಾರಿನಲ್ಲಿದ್ದ ನನ್ನ ಪುತ್ರ, ಅಪಘಾತ ನಡೆದ ತಕ್ಷಣವೇ ವಾಪಸ್ ಬಂದು ಗಾಯಾಳುವನ್ನು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಸೇರಿಸಿದ್ದಾನೆ’ ಎಂದರು.

‘ಮೃತಪಟ್ಟ ವ್ಯಕ್ತಿಯ ಕುಟುಂಬದವರನ್ನು ಎರಡು ದಿನಗಳ ನಂತರ ಭೇಟಿಯಾಗಿ ಸಾಂತ್ವನ ಹೇಳಲಾಗುವುದು. ಅವರು ಕಷ್ಟದಲ್ಲಿದ್ದರೆ ಸಹಾಯ ಮಾಡಲಾಗುವುದು’ ಎಂದು ನುಡಿದರು.

‘ಕೆಆರ್‌ಎಸ್‌ನಲ್ಲಿ ಬಿರುಕು ಇಲ್ಲ’

ಮಂಡ್ಯ: ಕೆಆರ್‌ಎಸ್ ಜಲಾಶಯ ಸುರಕ್ಷತೆ ಕುರಿತು ಎಚ್.ಡಿ.ಕುಮಾರಸ್ವಾಮಿ ಹಾಗೂ ಸಂಸದೆ ಸುಮಲತಾ ನಡುವೆ ವಾಗ್ವಾದ ನಡೆದಿರುವಂತೆಯೇ ಕಾವೇರಿ ನೀರಾವರಿ ನಿಗಮದ ಅಧೀಕ್ಷಕ ಎಂಜಿನಿಯರ್ ವಿಜಯ್‌ಕುಮಾರ್ ಜಲಾಶಯ ಸುರಕ್ಷತೆ ಕುರಿತು ಮಂಗಳವಾರ ಸ್ಪಷ್ಟನೆ ನೀಡಿದ್ದಾರೆ.

‘ಕೆಆರ್‌ಎಸ್ ಜಲಾಶಯದಲ್ಲಿ ಯಾವುದೇ ರೀತಿ ಬಿರುಕು ಕಂಡು ಬಂದಿಲ್ಲ. ಸರ್ಕಾರಕ್ಕೆ ಸಮಗ್ರ ವರದಿ ನೀಡಲಾಗಿದೆ. ನಿಗಮದ ತಂತ್ರಜ್ಞರು ನಿತ್ಯ ಜಲಾಶಯದ ಸುರಕ್ಷತೆ ಪರಿಶೀಲನೆ ನಡೆಸುತ್ತಾರೆ’ ಎಂದು ಹೇಳಿದ್ದಾರೆ.

‘ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆ ವೇಳೆ ಸಂಸದೆ ಸುಮಲತಾ ಅವರಿಗೂ ಇದೇ ಮಾಹಿತಿ ನೀಡಲಾಗಿದೆ. ಜಲಾಶಯದಲ್ಲಿ ಕ್ರೆಸ್ಟ್ ಗೇಟ್ ಬದಲಾವಣೆ ಕಾಮಗಾರಿ ನಡೆಯುತ್ತಿದೆ. ಬದಲಿ ಗೇಟ್ ಅಳವಡಿಸುವಾಗ ಕಲ್ಲುಗಳನ್ನು ತೆರೆಯಲಾಗಿದೆ. ಕೆಲ ಕಿಡಿಗೇಡಿಗಳು ಅದರ ವಿಡಿಯೊ ತೆಗೆದು ಸುಳ್ಳು ಸುದ್ದಿ ಹರಡಿಸಿದ್ದಾರೆ’ ಎಂದರು.

ಕ್ಯಾನ್ಸರ್: ಮಗುವಿಗೆ ಮರಳಿದ ದೃಷ್ಟಿ

ಬೆಂಗಳೂರು: ರಕ್ತದ ಕ್ಯಾನ್ಸರ್ ಕಾಯಿಲೆಯಿಂದ ದೃಷ್ಟಿ ಕಳೆದುಕೊಂಡಿದ್ದ 3 ವರ್ಷದ ಮಗುವಿಗೆ ಬನ್ನೇರುಘಟ್ಟದ ಫೋರ್ಟಿಸ್ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿದ್ದು, ಮಗುವಿಗೆ ದೃಷ್ಟಿ ಮರಳಿದೆ.

ದುಬೈನಲ್ಲಿ ವಾಸವಿದ್ದ ಹೆಣ್ಣು ಮಗು ‘ಅಕ್ಯುಟ್ ಲಿಂಫೋಬ್ಲಾಸ್ಟಿಕ್ ಲ್ಯುಕೇಮಿಯಾ’ ಎಂಬ ರಕ್ತ ಸಂಬಂಧಿ ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದಳು.

Dayananda Sagar Institutions
Bengaluru

ENGINEERING & ARCHITECTURE
ADMISSIONS NOW OPEN

Engineers and Architects from DSCE, DSATM and DSCA is what industry is looking for. Will you be there when placement season starts; one year before graduation!

To help you decide on your choice colleges and preferred programs here is a great opportunity to seek admissions under the non CET/non-COMEDK seats. Admissions are now open in the online and offline format. Candidates with Class 10 & 11 academic scores please visit our website/ walk into our campuses for on-the-spot admissions.

Dayananda Sagar College of Engineering (DSCE)	Dayananda Sagar Academy of Technology & Management (DSATM) International Centre	Dayananda Sagar College of Architecture (DSCA)
BE / MTech, MBA, MCA	BE, BArch, MBA, MCA*	B.Arch (NATA scores are mandatory) M.Arch (Proposed) B Voc: 3 Years (Proposed)
• Autonomous; affiliated to VTU • NIRF: 126 Ranking • Accredited by NAAC • All UG programs Accredited by NBA • Great placement • Internship Rankings DSCE placed as 8th best in All India Rank out of 2,000+ participating colleges across India and placed 2nd best in the Zonal Rankings out of 207 participating colleges	• Affiliated to VTU • All Engineering programs are NBA Accredited • Great placement • Ranked as the 68th Best Engineering College in the country by India Today 2021	• Affiliated to VTU
Shavige Malleshwara Hills, Kumaraswamy, Layout, Bengaluru-560 111	Opp Art of Living Udayapura, Kanakapura Road, Bengaluru-560082 - Free Transport from Silk Institute Metro Station to DSATM campus	Shavige Malleshwara Hills, Kumaraswamy Layout, Bengaluru-560 111
Email: rajtm01@gmail.com	Email: vishuknv@yahoo.com	Email: admissions2021@gmail.com
www.dsce.edu.in	www.dsatm.edu.in	www.dsca.edu.in
Ph: 98440 78858	Ph: 98800 59065	Ph: 080- 4217 1117

Avail assistance to education loans from Saraswat Bank.
*Awaiting official approvals

Dayananda Sagar Institutions
Shavige Malleshwara Hills, Kumara Swamy Layout, Bengaluru - 560111
Hall of Admissions: 9916075170/9741882324/9741214448/9741889394/(080)-42161750
Email: admissions@dayanandasagar.edu | www.dayanandasagar.edu

Requirements: BE: Eligibility as per VTU/AICTE norms. Provisional admissions would be offered now based on Class 10/11 scores. The admission would be confirmed on production of the Class 12 results. In addition ranks from any one of the following: CET/COMEDK/JEE/DSI Entrance Scores are mandatory.

‘ಕೈಗೆಟುಕುವ ದರದಲ್ಲಿ ಪೌಷ್ಟಿಕಾಂಶ ಆಹಾರ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮರ್ಥವಾಗಿ ಕೋವಿಡ್ ಮೂರನೇ ಅಲೆ ಎದುರಿಸಲು ಪೌಷ್ಟಿಕಯುಕ್ತ ಆಹಾರಗಳನ್ನು ಜನರಿಗೆ ಕೈಗೆಟುಕುವ ದರಗಳಲ್ಲಿ, ಅಗತ್ಯ ಇರುವವರೆಗೆ ಉಚಿತವಾಗಿ ಒದಗಿಸಬೇಕು’ ಎಂದು ಒತ್ತಾಯಿಸಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

‘ಆರೋಗ್ಯ ವ್ಯವಸ್ಥೆ ಸಿದ್ಧವಾಗಿಟ್ಟುಕೊಳ್ಳುವ ಜೊತೆಯಲ್ಲೇ ಜನರ ರೋಗ ನಿರೋಧಕ ಶಕ್ತಿಯನ್ನು ಸುಧಾರಿಸುವ ಕ್ರಮಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಕಾರ್ಯೋನ್ಮುಖರಾಗಬೇಕು’ ಎಂದು ಆಗ್ರಹಿಸಿದ್ದಾರೆ.

‘ಬಾದಾಮಿಯಿಂದಲೇ ಕಣಕ್ಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ನಾನು ಬಾದಾಮಿಯಿಂದಲೇ ಕಣಕ್ಕಿಳಿಯುತ್ತೇನೆ. ನಿಮ್ಮ ಅಭಿಪ್ರಾಯ ಪಡೆದೇ ಬೇರೆ ಯಾವುದೇ ತೀರ್ಮಾನ ಕೈಗೊಳ್ಳುತ್ತೇನೆ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ತಾವು ಪ್ರತಿನಿಧಿಸುತ್ತಿರುವ ಕ್ಷೇತ್ರದ ಅಭಿಮಾನಿಗಳಿಗೆ ಭರವಸೆ ನೀಡಿದ್ದಾರೆ.

ಬಾದಾಮಿ ಕ್ಷೇತ್ರದಿಂದ ನೂರಾರು ಸಂಖ್ಯೆಯಲ್ಲಿ ಬಂದಿದ್ದ ಅಭಿಮಾನಿಗಳು ಮಂಗಳವಾರ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಬಾದಾಮಿ ಕ್ಷೇತ್ರದಿಂದಲೇ ಮತ್ತೆ ಸ್ಪರ್ಧಿಸುವಂತೆ ಮನವಿ ಮಾಡಿದರು. ಬಾದಾಮಿಯಿಂದಲೇ ಗೆದ್ದು ಶಾಸಕರಾಗಬೇಕು. ಮುಖ್ಯಮಂತ್ರಿಯೂ ಆಗಬೇಕು ಎಂದೂ ಹಾರೈಸಿದರು.

‘ತಮ್ಮ ಕ್ಷೇತ್ರದಿಂದ ಸ್ಪರ್ಧಿಸುವಂತೆ ಹಲವರು ಅಭಿಮಾನದಿಂದ ಕರೆಯುತ್ತಿದ್ದಾರೆ. ಆದರೆ, ಬಾದಾಮಿ ಕ್ಷೇತ್ರದ ಜನರು ಒಳ್ಳೆಯವರು. ಚುನಾವಣೆ ವೇಳೆ ನಾಮಪತ್ರ ಸಲ್ಲಿಸಿ ಒಂದು ದಿನ ಮಾತ್ರ ಪ್ರಚಾರ ಕೈಗೊಂಡಿದ್ದೆ. ಆದರೂ ಕ್ಷೇತ್ರದ ಮತದಾರರು ಅಭಿಮಾನದಿಂದ ಗೆಲ್ಲಿಸಿದ್ದಾರೆ. ಅವರ ಈ ಋಣ ಮರೆಯಲು ಸಾಧ್ಯವೇ ಇಲ್ಲ’ ಎಂದರು.

‘ಕ್ಷೇತ್ರದ ಶಾಸಕನಾಗಿ ನನ್ನ ಕರ್ತವ್ಯ ನಿಭಾಯಿಸುತ್ತಿದ್ದೇನೆ. ಯಾವುದೇ ಕಾರಣಕ್ಕೂ ಅಭಿವೃದ್ಧಿ ವಿಷಯದಲ್ಲಿ ಹಿಂದೆ ಬೀಳುವುದಿಲ್ಲ. ಸಾವಿರಾರು ಕೋಟಿ ರೂಪಾಯಿ ವೆಚ್ಚದ ಕಾಮಗಾರಿಗಳು ಕ್ಷೇತ್ರದಲ್ಲಿ ನಡೆಯುತ್ತಿವೆ. ಶಾಶ್ವತ ಕುಡಿಯುವ ನೀರಿನ ಯೋಜನೆ ಹಾಗೂ ಕೆರೂರು ಏತ ನೀರಾವರಿ ಯೋಜನೆ ಇದರಲ್ಲಿ ಪ್ರಮುಖವಾದದ್ದು. ಇನ್ನೂ ಎರಡು ವರ್ಷಗಳ ಅವಧಿ ಇದೆ. ಈ ಸಂದರ್ಭದಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಇನ್ನಷ್ಟು ಶ್ರಮ ವಹಿಸುತ್ತೇನೆ’ ಎಂದು ಹೇಳಿದರು.

ಬಾದಾಮಿ ಕ್ಷೇತ್ರದ ಅಭಿಮಾನಿಗಳ ಜೊತೆ ಸಿದ್ದರಾಮಯ್ಯ

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಪಿಯುಸಿ ಪರೀಕ್ಷೆ ಕೈಬಿಟ್ಟು ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸುವ ಔಚಿತ್ಯ ಏನು?
ಸಂವಾದ
ಸಂವಾದದಲ್ಲಿ ಭಾಗವಹಿಸುವವರು

ವಿ.ಪಿ.ನಿರಂಜನಾರಾಧ್ಯ
ಅಭಿವೃದ್ಧಿ ಶಿಕ್ಷಣ ತಜ್ಞ

ಬಸವರಾಜ ಗುರಿಕಾರ್
ಉಪಾಧ್ಯಕ್ಷ, ಅಖಿಲ ಭಾರತ ಶಿಕ್ಷಕರ ಫೆಡರೇಷನ್

ಎನ್.ಇಸ್ಮಾಯಿಲ್
ಶಿಕ್ಷಣ ತಜ್ಞ
ನಿವೃತ್ತ ಪ್ರಾಂಶುಪಾಲ

ಮಲ್ಲಿಗೆ ಸಿರಿಮನೆ
ಸಮಾನ ಶಿಕ್ಷಣಕ್ಕಾಗಿ ಜನಾಂದೋಲನದ ಕಾರ್ಯಕರ್ತೆ

ಗುರುವಾರ, 8-7-2021 ಸಮಯ- ಬೆಳಿಗ್ಗೆ 11 ರಿಂದ 12

ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ನಿಯೋಗ

ಚಿತ್ರಮಂದಿರಗಳನ್ನು ತೆರೆಯಲು ಅನುಮತಿ ಕೋರಿ ಸಿ.ಎಂಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ಸಡಿಲಿಕೆಯ ಮೂರನೇ ಹಂತದಲ್ಲೂ ಚಿತ್ರಮಂದಿರಗಳನ್ನು ತೆರೆಯಲು ಸರ್ಕಾರ ಅವಕಾಶ ನೀಡದ ಕಾರಣ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ನಿಯೋಗವು ಮಂಗಳವಾರ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿಯಾಗಿ ಚಿತ್ರಮಂದಿರಗಳ ಪುನರಾರಂಭ ಹಾಗೂ ಒಳಾಂಗಣ ಚಿತ್ರೀಕರಣಕ್ಕೆ ಅವಕಾಶ ಕೋರಿ ಮನವಿ ಸಲ್ಲಿಸಿದೆ.

‘ಕೋವಿಡ್–19 ಮೊದಲ ಹಾಗೂ ಎರಡನೇ ಅಲೆಯ ಸಂದರ್ಭದಲ್ಲಿ ಚಿತ್ರರಂಗವು ಸಾಕಷ್ಟು ಸಂಕಷ್ಟ ಅನುಭವಿಸಿದೆ. ಸುಮಾರು 1 ವರ್ಷ ಚಿತ್ರಮಂದಿರಗಳು ಸ್ಥಗಿತಗೊಂಡು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರೂ ಸರ್ಕಾರದಿಂದ ಯಾವುದೇ ರೀತಿಯ ಆರ್ಥಿಕ ಸಹಾಯ ದೊರಕಿಲ್ಲ’ ಎಂದು ಮಂಡಳಿಯ ಅಧ್ಯಕ್ಷ ಡಿ.ಆರ್.ಜೈರಾಜ್ ಅವರ ನೇತೃತ್ವದ ನಿಯೋಗವು ಮುಖ್ಯಮಂತ್ರಿಗಳಿಗೆ ನೀಡಿದ ಮನವಿಯಲ್ಲಿ ಉಲ್ಲೇಖಿಸಿದೆ.

‘ಇತ್ತೀಚೆಗೆ ನೆರೆ ರಾಜ್ಯಗಳಾದ ತೆಲಂಗಾಣ, ಆಂಧ್ರಪ್ರದೇಶ ಹಾಗೂ ಗುಜರಾತ್‌ನಲ್ಲಿ ಚಿತ್ರಮಂದಿರಗಳ ಪುನರಾರಂಭಕ್ಕೆ ಅವಕಾಶ ಕಲ್ಪಿಸಲಾಗಿದೆ. ಜೊತೆಗೆ ಗುಜರಾತ್ ಮತ್ತು ಇತರೆ ರಾಜ್ಯಗಳಲ್ಲಿ ಕೋವಿಡ್‌ನಿಂದ ಉಂಟಾದ ನಷ್ಟಕ್ಕೆ ಅಲ್ಲಿನ ಸರ್ಕಾರಗಳು ಚಿತ್ರಮಂದಿರಗಳಿಗೆ ವಿದ್ಯುತ್, ನೀರಿನ ಶುಲ್ಕ ಮತ್ತು ಆಸ್ತಿ ತೆರಿಗೆಯಲ್ಲಿ ವಿನಾಯಿತಿ ನೀಡಿದೆ. ಆದ್ದರಿಂದ ನಮ್ಮ ಮನವಿಯನ್ನು ಪರಿಗಣಿಸಿ, ಕರ್ನಾಟಕ ರಾಜ್ಯದಾದ್ಯಂತ ಚಲನಚಿತ್ರಮಂದಿರಗಳನ್ನು ಪುನರಾರಂಭಗೊಳಿಸಲು ಹಾಗೂ ಒಳಾಂಗಣ ಚಿತ್ರೀಕರಣಕ್ಕೆ ಅವಕಾಶ ಮತ್ತು ಚಿತ್ರಮಂದಿರಗಳಿಗೆ ವಿದ್ಯುತ್ ಶುಲ್ಕ ಮತ್ತು ಆಸ್ತಿ ತೆರಿಗೆಯಲ್ಲಿ ಸಂಪೂರ್ಣ ವಿನಾಯಿತಿ ನೀಡಬೇಕು’ ಎಂದು ನಿಯೋಗವು ತಿಳಿಸಿದೆ.

ಪ್ರಜಾವಾಣಿ facebook LIVE
FB.com/prajavani.net
ಎಸ್ಸೆಸ್ಸೆಲ್ಸಿ ಪರೀಕ್ಷಾ ಸಿದ್ಧತೆಗೆ ಸಲಹೆಗಳು

ಈ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ವಿಧಾನ ಬದಲಾಗಿದೆ. ತಯಾರಿಯನ್ನೂ ಕಡಿಮೆ ಸಮಯದಲ್ಲಿ ಮಾಡಿಕೊಳ್ಳಬೇಕಿದೆ. ಈ ಬಗ್ಗೆ ಮಾಹಿತಿ, ಸಿದ್ಧತೆಗೆ ಟಿಪ್ಸ್, ಉತ್ತರ ಬರೆಯುವ ಸುಲಭ ವಿಧಾನ ಹಂಚಿಕೊಳ್ಳಲಿದ್ದಾರೆ
ವೆಂಕಟ ಸುಬ್ಬರಾವ್ ವಿ. ನಿರ್ದೇಶಕರು, ಸ್ಮಾರ್ಟ್ ಸೆರೆಬ್ರಂ, ಬೆಂಗಳೂರು

ಸಂದರ್ಶಕರು: ಸ್ವಾಮಿ ಎಚ್.ಆರ್., ಸಹಾಯಕ ಶಿಕ್ಷಕರು, ಸರ್ಕಾರಿ ಗರ್ಲ್ಸ್ ಹೈಸ್ಕೂಲ್, ದೇವನಹಳ್ಳಿ
ನೀವೂ ಪ್ರಶ್ನೆಗಳನ್ನು ಕೇಳಬಹುದು
ಇಂದು ಸಂಜೆ 4ಕ್ಕೆ

ಖಾಸಗಿ ಕಂಪನಿಯೊಂದಿಗೆ ಕೃಷಿ ವಿವಿ ಒಡಂಬಡಿಕೆ: ಗರಿಷ್ಠ 5 ವರ್ಷ ಬೆಳೆಸಲು ಅನುಮತಿ

25 ವರ್ಷದ ಬಳಿಕ ಬಣ್ಣದ ಹತ್ತಿಗೆ ಮಾರುಕಟ್ಟೆ

• ಇ.ಎಸ್. ಸುಧೀಂದ್ರ ಪ್ರಸಾದ್

ಧಾರವಾಡ: ಇಲ್ಲಿನ ಕೃಷಿ ವಿಶ್ವವಿದ್ಯಾಲಯ 1995ರಲ್ಲಿ ಅಭಿವೃದ್ಧಿಪಡಿಸಿದ್ದ ದೇಸಿ ತಳಿ ಬಣ್ಣದ ಹತ್ತಿಯು (ಡಿಡಿಸಿಸಿ–1) ಈಗ ವಾಣಿಜ್ಯ ಬಳಕೆಗೆ ಮುಕ್ತವಾಗಿದ್ದು, ಈ ಬಗ್ಗೆ ಖಾಸಗಿ ಕಂಪನಿ ಜೊತೆಗೆ ವಿಶ್ವವಿದ್ಯಾಲಯ ಒಪ್ಪಂದಕ್ಕೆ ಸಹಿ ಹಾಕಿದೆ.

ಕೃಷಿ ವಿಜ್ಞಾನಿ ಡಾ.ಬಿ.ಎಂ.ಖಾದಿ ಅವರು ಇಲ್ಲಿನ ಹೆಬ್ಬಳ್ಳಿ ಫಾರ್ಮ್‌ನಲ್ಲಿ 25 ವರ್ಷಗಳ ಹಿಂದೆ ಕಂದು ಬಣ್ಣದ ಹತ್ತಿ ತಳಿ ಅಭಿವೃದ್ಧಿಪಡಿಸಿದ್ದು, ವಿ.ವಿ ಇದನ್ನು 1999ರಲ್ಲಿ ಬಿಡುಗಡೆಮಾಡಿತ್ತು. ಈವರೆಗೆ ವಾಣಿಜ್ಯ ಬಳಕೆಗೆ ಮುಕ್ತವಾಗಿರಲಿಲ್ಲ.

ಈಗ ಭಾರತೀಯ ಕೃಷಿ ಅನುಸಂಧಾನ ಪರಿಷತ್ (ಐಸಿಎಆರ್) ಮಾನ್ಯತೆ ಪಡೆದ ಅಗ್ರಿ ಇನ್ನೋವೇಟಿವ್ ಇಂಡಿಯಾ ಸಂಸ್ಥೆ ಜೊತೆಗೆ ಬೆಂಗಳೂರಿನ ರಿಜಿಸ್ಟ್ರೀ ಆಫ್ ಸ್ಯಾರೀಸ್ ಸಂಸ್ಥೆ ಬಣ್ಣದ ಹತ್ತಿ ಬೆಳೆಯಲು ಒಪ್ಪಂದ ಮಾಡಿಕೊಂಡಿದೆ.

> **ಮುಖ್ಯಾಂಶಗಳು**
> - 1995ರಲ್ಲಿ ಡಾ. ಬಿ.ಎಂ.ಖಾದಿ ಅಭಿವೃದ್ಧಿಪಡಿಸಿದ್ದ ತಳಿ
> - ಕಂದು ಬಣ್ಣದ ಡಿಡಿಸಿಸಿ–1 ತಳಿಯಿಂದ 1.3ಪಟ್ಟು ಹೆಚ್ಚು ಇಳುವರಿ
> - ಐದು ವರ್ಷದ ಅವಧಿಗೆ 25ಕೆ.ಜಿ. ಬೀಜ ಬಳಕೆಗೆ ₹3 ಲಕ್ಷ

ಒಡಂಬಡಿಕೆಯನ್ವಯ ₹3 ಲಕ್ಷಕ್ಕೆ 25 ಕೆ.ಜಿ. ಬೀಜವನ್ನು ಬಳಸಿ ಗರಿಷ್ಠ ಐದು ವರ್ಷ ಬೆಳೆಸಲು ವಿಶ್ವವಿದ್ಯಾಲಯ ಅನುಮತಿ ನೀಡಿದೆ. ಒಟ್ಟು ಇಳುವರಿಯಲ್ಲಿ ಮುಂದಿನ ವರ್ಷಕ್ಕೆ ಅಗತ್ಯವುಳ್ಳ ಬೀಜವನ್ನು ಇಟ್ಟುಕೊಂಡು, ಉಳಿದದ್ದನ್ನು ವಿ.ವಿಗೆ ಮರಳಿಸಬೇಕು, ಇಲ್ಲವೇ ನಾಶಪಡಿಸಬೇಕು ಎಂದು ಕರಾರು ವಿಧಿಸಿದೆ.



ಧಾರವಾಡ ಕೃಷಿ ವಿಶ್ವವಿದ್ಯಾಲಯವು ಅಭಿವೃದ್ಧಿಪಡಿಸಿ ವಾಣಿಜ್ಯ ಬಳಕೆಗೆ ಮುಕ್ತಗೊಳಿಸಿರುವ ಡಿಡಿಸಿಸಿ–1 ಕಂದು ಬಣ್ಣದ ಹತ್ತಿ

ಈ ಕುರಿತು ಮಾಹಿತಿ ನೀಡಿದ ವಿವಿಯ ಸಂಶೋಧನಾ ನಿರ್ದೇಶಕ ಡಾ. ಪಿ.ಎಲ್.ಪಾಟೀಲ, ‘ಬಣ್ಣದ ಹತ್ತಿಯನ್ನು ವಿಶ್ವವಿದ್ಯಾಲಯದ ತಜ್ಞರ ಮೇಲ್ವಿಚಾರಣೆಯಲ್ಲೇ ಬೆಳೆಸಬೇಕು. ಇದನ್ನು ಬೆಳೆಯುವ 100 ಮೀಟರ್ ಅಂತರದಲ್ಲಿ ಬಿಳಿ ಹತ್ತಿ ಇರುವಂತಿಲ್ಲ. ಬೆಳೆದ ಹತ್ತಿಯನ್ನು ವಾಣಿಜ್ಯವಾಗಿ ಬಳಸಬಹುದು. ಒಟ್ಟು ಲಾಭಾಂಶದಲ್ಲಿ ವಿ.ವಿಗೆ ಶೇ 70ರಷ್ಟು, ಅಗ್ರಿ ಇನ್ನೋವೇಟಿವ್ ಇಂಡಿಯಾಗೆ ಶೇ 20ರಷ್ಟು ಮತ್ತು ಐಸಿಎಆರ್‌ಗೆ ಶೇ 10ರಷ್ಟು ಹಂಚಿಕೆಯಾಗಲಿದೆ’ ಎಂದರು.

‘ದಕ್ಷಿಣ ಭಾರತದಲ್ಲಿ ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡುನಲ್ಲಿ ಕಪ್ಪು ಎರೆ ಮಣ್ಣಿನ ಜಮೀನು ಮುಂಗಾರಿನಲ್ಲಿ ಡಿಡಿಸಿಸಿ–1 ಬೆಳೆಯಲು ಸೂಕ್ತ. ಬಿಳಿ ಹತ್ತಿ ತಳಿಗೆ ಹೋಲಿಸಿದಲ್ಲಿ ಇದು 1.3ಪಟ್ಟು ಇಳುವರಿ ಅಧಿಕ ಮತ್ತು ಕೀಟ, ರೋಗ ನಿರೋಧಕ ಗುಣವನ್ನು ಹೊಂದಿದೆ. ರಿಜಿಸ್ಟ್ರೀ ಆಫ್ ಸ್ಯಾರೀಸ್ ಸಂಸ್ಥೆ ಸದ್ಯ ಇದನ್ನು ಬೆಂಗಳೂರು ಭಾಗದಲ್ಲಿ ಬೆಳೆಯಲಿದೆ’ ಎಂದು ಹತ್ತಿ ವಿಭಾಗದ ಹಿರಿಯ ವಿಜ್ಞಾನಿ ಡಾ. ರಾಜೇಶ್ ಎಸ್. ಪಾಟೀಲ ವಿವರಿಸಿದರು.

75 ಆಜಾದಿ ಕಾ ಅಮೃತ ಮಹೋತ್ಸವ
ಬೆಳೆ ವಿಮೆ ಸಪ್ತಾಹ 1 – 7 ಜುಲೈ, 2021 ಪಿಎಮ್‌ಎಫ್‌ಬಿವೈ

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆ ಮುಂಗಾರು 2021 (Revamped PMFBY) (ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ)

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆ
ಸಣ್ಣ ಪ್ರೀಮಿಯಂ ದೊಡ್ಡ ಸುರಕ್ಷೆ

ಮುಂಗಾರು 2021			
ಕ್ರಮ ಸಂಖ್ಯೆ	ಜಿಲ್ಲೆ	ಬೆಳೆ	ಮಾಡಿಸಿಕೊಳ್ಳುವ ಕೊನೆಯ ದಿನಾಂಕ
1)	ಬೆಳಗಾವಿ	ಭತ್ತ (ಮ.ಆ) ನೆಲಗಡಲೆ (ಮ.ಆ) ಸೋಯಾ (ಮ.ಆ) ಮುಸುಕಿನ ಜೋಳ (ಮೆಕ್ಕೆ) ನೀರಾವರಿ (ಮ.ಆ)	31/07/2021
2)	ಬೀದರ್	ಸೋಯಾ (ಮ.ಆ) ತೊಗರಿ (ಮ.ಆ) ಉದ್ದು (ಮ.ಆ) ಹೆಸರು (ಮ.ಆ) ಸೂರ್ಯಕಾಂತಿ (ಮ.ಆ)	31/07/2021 31/07/2021 16/08/2021
3)	ಚಿತ್ರದುರ್ಗ	ನೆಲಗಡಲೆ (ಮ.ಆ) ಸೂರ್ಯಕಾಂತಿ (ಮ.ಆ) ಮುಸುಕಿನ ಜೋಳ (ಮೆಕ್ಕೆ) (ಮ.ಆ)	31/07/2021
4)	ದಕ್ಷಿಣ ಕನ್ನಡ	ಭತ್ತ (ಮ.ಆ)	16/08/2021
5)	ದಾವಣಗೆರೆ	ಭತ್ತ ನೀರಾವರಿ ಮುಸುಕಿನ ಜೋಳ ಮೆಕ್ಕೆ (ಮ.ಆ)	31/07/2021
6)	ಕೋಲಾರ	ನೆಲಗಡಲೆ (ಮ.ಆ) ರಾಗಿ (ಮ.ಆ)	31/07/2021 16/08/2021
7)	ಯಾದಗಿರಿ	ಭತ್ತ (ಮ.ಆ) ಭತ್ತ (ನೀರಾವರಿ) ತೊಗರಿ (ಮ.ಆ) ಉದ್ದು (ಮ.ಆ) ಹೆಸರು (ಮ.ಆ)	16/08/2021 16/08/2021 31/07/2021
8)	ಕಲಬುರಗಿ	ತೊಗರಿ (ಮ.ಆ) ಮುಸುಕಿನ ಜೋಳ (ಮೆಕ್ಕೆ) (ಮ.ಆ) ಉದ್ದು (ಮ.ಆ) ಹೆಸರು (ಮ.ಆ)	31/07/2021
9)	ರಾಮನಗರ	ರಾಗಿ – (ಮ.ಆ) ಹುರಳಿ (ಮ.ಆ)	16/08/2021

- ಆಲಿಕಲ್ಲು, ಭೂ ಕುಸಿತ ಮತ್ತು ಜಲಾವೃತ ಕಾರಣಗಳಿಂದ ಬಿತ್ತನೆಯಿಂದ ಕೊಯ್ಲಿನ ತನಕ ಇರುವ ಬೆಳೆಗೆ ವಿಮೆ ಪರಿಹಾರ ಪಾವತಿಸಲಾಗುತ್ತದೆ.
- ಬೆಳೆಯ ಕಟಾವು ಮಾಡಿದ ನಂತರ ಮುಂದಿನ 14 ದಿನಗಳ ತನಕ ಹೊಲದಲ್ಲಿ ಒಣಗುವ ಸಲುವಾಗಿ ಹಾಕಿದ ಕಟಾವು ಮಾಡಿದ ಬೆಳೆಗೆ ಹವಾಮಾನ/ವೈಪರೀತ್ಯ/ಸುಂಟರಗಾಳಿಯಿಂದ ಕೂಡಿದ ಮಳೆ ಮತ್ತು ಅಕಾಲಿಕ ಮಳೆಯಿಂದ ಹಾನಿಯಾದರೆ ನಷ್ಟದ ಪ್ರಮಾಣಕ್ಕನುಗುಣವಾಗಿ ವಿಮೆ ಪಾವತಿಸಲಾಗುತ್ತದೆ. ದೂರನ್ನಾಧರಿಸಿ ರೈತರ ತಾಕುಗಳನ್ನು ಜಂಟಿಯಾಗಿ ಪರಿಶೀಲಿಸಿ ವಿಮೆ ಪರಿಹಾರ ಪಾವತಿಸಲು ಕ್ರಮವಹಿಸಲಾಗುವುದು.
- ಈ ಮೇಲೆ ನೀಡಲಾದ ಎರಡೂ ಪರಿಸ್ಥಿತಿಗಳಲ್ಲೂ ವಿಮೆಗೆ ಒಳಪಟ್ಟ ರೈತರು 72 ತಾಸುಗಳೊಳಗೆ ವಿಮಾ ಕಂಪನಿ, ಬ್ಯಾಂಕ್ ಅಥವಾ ಕೃಷಿ ಇಲಾಖೆ ಮೂಲಕ ದೂರು ದಾಖಲಿಸುವುದು ಕಡ್ಡಾಯವಾಗಿದೆ.
- ವಿಮಾ ಘಟಕದಲ್ಲಿ ಅಧಿ ಸೂಚಿತ ಬೆಳೆಯ ಸರಾಸರಿ ಇಳುವರಿಯು ಪ್ರಾರಂಭಿಕ ಇಳುವರಿಗಿಂತ ಕಡಿಮೆಯಾದರೆ ಇಳುವರಿ ಕೊರತೆ ಅನುಗುಣವಾಗಿಸದರಿ ವಿಮಾ ಘಟಕದಲ್ಲಿ ಬೆಳೆ ವಿಮೆಗೆ ಒಳಪಟ್ಟ ರೈತರು ವಿಮಾ ಪರಿಹಾರ ಮೊತ್ತ ಪಡೆಯಲು ಅರ್ಹರಾಗುತ್ತಾರೆ.
- ಯೋಜನೆಯು ಸಾಲ ಪಡೆದ ರೈತರಿಗೆ ಹಾಗೂ ಸಾಲ ಪಡೆಯದ ರೈತರಿಗೆ ಐಚ್ಛಿಕವಾಗಿದೆ.
- ಸಾಲ ಪಡೆದ ರೈತರು ತಮ್ಮ ಬ್ಯಾಂಕ್‌ನ ಶಾಖೆಯನ್ನು ಸಂಪರ್ಕಿಸಿ ಕೊನೆಯ ದಿನಾಂಕದ ಮೊದಲು ತಮ್ಮ ಖಾತೆಯಿಂದ ವಿಮೆಯ ಮೊತ್ತವನ್ನು ಕಡಿತ ಮಾಡಲಾಗಿದೆ ಎಂಬುದನ್ನು ಖಚಿತ ಮಾಡಿಕೊಳ್ಳಬೇಕು
- ಸಾಲ ಪಡೆಯದ ರೈತರು ವಿಮೆ ಮಾಡಿಸಿಕೊಳ್ಳಲು ಕಂಪನಿಯ ಪ್ರತಿನಿಧಿ, ಏಜೆಂಟ್, ಸಿಎಸ್‌ಸಿಸೆಂಟರ್ ಅಥವಾ ಬ್ಯಾಂಕ್ ಶಾಖೆಯನ್ನು ಸಂಪರ್ಕಿಸತಕ್ಕದ್ದು.
- ವಿಮೆ ಮಾಡಿಸಲು 31/07/2021 ಮತ್ತು 16/08/2021 ಅಂತಿಮ ದಿನಾಂಕವಾಗಿರುತ್ತದೆ (ಬೆಳೆವಾರು ಅಂತಿಮ ದಿನಾಂಕ ಬೇರೆಯಿರುತ್ತದೆ)

ಟೋಲ್ ಫ್ರೀ ನಂ. 1800-200-5142 | ಯುನಿವರ್ಸಲ್ ಸೋಂಪೊ ಜನರಲ್ ಇನ್‌ಶ್ಯೂರೆನ್ಸ್ ಕಂ. ಲಿಮಿಟೆಡ್.

Universal Sompo General Insurance Co. Ltd.
Suraksha, Hamesha Aapke Saath

ವಿಮೆಯು ಆಗ್ರಹದ ವಿಷಯವಸ್ತುವಾಗಿದೆ. ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಪ್ರಧಾನ ಮಂತ್ರಿ ಫಸಲು ಬಿಮಾ ಯೋಜನ ಹಾಗೂ ಅದಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ನೋಡಿರಿ. ರಿಜಿ ನಂ. 134 | CIN U66010MH2007PLC166770 | UIN:IRDAN134CP0001V01201617 | KAN/NEWS PAPER /CROP/KAR/KHARIF2021/021/2021

ಕೆಪಿಎಸ್‌ಸಿ: ಅಂಕ ತಿರುಚಿದ ಆರೋಪ • ಹೈಕೋರ್ಟ್‌ನಿಂದ ಕೆಎಟಿಗೆ ಪ್ರಕರಣ ವರ್ಗಾವಣೆ

90 ದಿನದಲ್ಲಿ 'ವ್ಯಾಜ್ಯ' ವಿಲೇಗೆ ನಿರ್ದೇಶನ

• ರಾಜೇಶ್ ರೈ ಚಟ್ಲ

ಬೆಂಗಳೂರು: ಮುಖ್ಯ ಪರೀಕ್ಷೆಯ ಡಿಜಿಟಲ್ ಮೌಲ್ಯಮಾಪನದ ಅಂಕಗಳನ್ನು ತಿರುಚುವ ಮೂಲಕ 2015ನೇ ಸಾಲಿನ 428 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಆಯ್ಕೆಯಲ್ಲಿ ವ್ಯಾಪಕ ಅಕ್ರಮ ಎಸಗಲಾಗಿದೆ ಎಂಬ ಗಂಭೀರ ಆರೋಪದ ಪ್ರಕರಣವನ್ನು ರಾಜ್ಯ ಹೈಕೋರ್ಟ್ ಪೀಠ, ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಗೆ (ಕೆಎಟಿ) ವರ್ಗಾಯಿಸಿದೆ. ಈ ವ್ಯಾಜ್ಯದ ವಿಚಾರಣೆಯನ್ನು ಜುಲೈ 6 ರಿಂದ ಆರಂಭಿಸಿ 90 ದಿನಗಳ ಒಳಗೆ ಮುಕ್ತಾಯಗೊಳಿಸಲೂ ನಿರ್ದೇಶಿಸಿದೆ.

ಮುಖ್ಯ ಪರೀಕ್ಷೆಯ ಅಂಕಗಳನ್ನು ತಿರುಚಲಾಗಿದೆ ಎಂದು ದೂರಿ ಹುದ್ದೆ ವಂಚಿತ ಅಭ್ಯರ್ಥಿ ಸುಧನ್ವ ಭಾಂಡೋಳ್ಕರ್ ಸೇರಿ 52 ಅಭ್ಯರ್ಥಿಗಳು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಪ್ರಕರಣದ ಮೇಲ್ಮನವಿ ವ್ಯಾಪ್ತಿ ಕೆಎಟಿ ಆಗಿರುವುದರಿಂದ, ಅಲ್ಲಿಗೇ ಪ್ರಕರಣವನ್ನು ವರ್ಗಾಯಿಸಿ, ಜುಲೈ 12ರಿಂದ ವಿಚಾರಣೆ ಆರಂಭಿಸುವಂತೆ ಕೋರ್ಟ್ ನಿರ್ದೇಶನ ನೀಡಿದೆ.

ಮುಖ್ಯ ಪರೀಕ್ಷೆಯ ಮೌಲ್ಯಮಾಪನ ನಡೆಸಿದ್ದ ಹೊರಗುತ್ತಿಗೆ ಸಂಸ್ಥೆ ಮುಂಬೈಯ ಟಾಟಾ ಕನ್ಸಲ್ಟೆನ್ಸಿ ಸರ್ವೀಸ್‌ನಿಂದ (ಟಿಸಿಎಸ್) ಯಾವ ಮಾದರಿಯಲ್ಲಿ ದತ್ತಾಂಶಗಳನ್ನು ಪಡೆಯಲಾಗಿತ್ತು ಎಂಬ ಬಗ್ಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಹೈಕೋರ್ಟ್‌ಗೆ ಸೋಮವಾರ (ಜುಲೈ 5ರಂದು) ಪ್ರಮಾಣಪತ್ರ ಸಲ್ಲಿಸಿದೆ.

ಮುಖ್ಯಾಂಶಗಳು

- 2015ನೇ ಸಾಲಿನ ನೇಮಕಾತಿ 428 ಗೆಜೆಟೆಡ್ ಪ್ರೊಬೇಷನರಿ ಹುದ್ದೆ
- ಟಿಸಿಎಸ್‌ನಿಂದ ಮುಖ್ಯ ಪರೀಕ್ಷೆಯ ಮೌಲ್ಯಮಾಪನ
- ಜುಲೈ 12ರಿಂದ ವಿಚಾರಣೆ ಆರಂಭಿಸಲು ನಿರ್ದೇಶನ

ಪ್ರಜಾವಾಣಿ ವಿಶೇಷ

ಮಾರ್ಚ್ 23 ರಂದು ಪ್ರಕರಣದ ವಿಚಾರಣೆ ನಡೆಸಿದ್ದ ಹೈಕೋರ್ಟ್, ಪರೀಕ್ಷೆಯ ಫಲಿತಾಂಶ ಸಿದ್ಧಪಡಿಸಲು ಟಿಸಿಎಸ್‌ನಿಂದ ದತ್ತಾಂಶಗಳನ್ನು ಹೇಗೆ ಪಡೆದಿತ್ತು ಎಂಬ ಬಗ್ಗೆ ಪ್ರಮಾಣಪತ್ರ ಸಲ್ಲಿಸುವಂತೆ ಕೆಪಿಎಸ್‌ಸಿಗೆ ನಿರ್ದೇಶಿಸಿತ್ತು. ಆದರೆ, ಕೆಪಿಎಸ್‌ಸಿಯ ಪರೀಕ್ಷಾ ನಿಯಂತ್ರಕರಾಗಿದ್ದ ದಿವ್ಯಾ ಪ್ರಭು ಅವರು ಮಾರ್ಚ್ 24ರಿಂದ ಮೇ 1ರವರೆಗೆ ರಜೆಯ ಮೇಲೆ ತೆರಳಿದ್ದರು. ಈ ಮಧ್ಯೆ, ಅವರನ್ನು ಸರ್ಕಾರ (ಏ. 29ರಂದು) ವರ್ಗಾವಣೆ ಮಾಡಿತ್ತು, ಹೀಗಾಗಿ, ರೇಷ್ಮೆ ಕೈಗಾರಿಕೆ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಎಂ. ಕನಗವಲ್ಲಿ ಅವರಿಗೆ ಪರೀಕ್ಷಾ ನಿಯಂತ್ರಕರ ಹೆಚ್ಚುವರಿ ಹೊಣೆ ನೀಡಲಾಗಿತ್ತು. ಇದೀಗ ಕನಗವಲ್ಲಿ ಅವರನ್ನು ಈ ಹುದ್ದೆಗೇ ವರ್ಗಾವಣೆ ಮಾಡಲಾಗಿದೆ. 2015ರ ಮುಖ್ಯ ಪರೀಕ್ಷೆಯ ಸಂದರ್ಭದಲ್ಲಿ ಪರೀಕ್ಷಾ ನಿಯಂತ್ರಕರಾಗಿದ್ದ ಕೃಷ್ಣ ಬಾಜಪೇಯಿ ಅವರಿಂದ ಮಾಹಿತಿ ಪಡೆದು ಕನಗವಲ್ಲಿ ಅವರು ಪ್ರಮಾಣಪತ್ರ ಸಲ್ಲಿಸಿದ್ದಾರೆ.

'ಇಡೀ ಮೌಲ್ಯಮಾಪನ ನಡೆಸಿ, ವ್ಯಕ್ತಿತ್ವ ಪರೀಕ್ಷೆಯ (ಸಂದರ್ಶನ) ಅಂಕಗಳನ್ನು ಸೇರಿಸಿ ಟಿಸಿಎಸ್ ಫಲಿತಾಂಶ ನೀಡಬೇಕಿತ್ತು. ಆದರೆ, ಕೆಪಿಎಸ್‌ಸಿ ಸಲ್ಲಿಸಿರುವ ಪ್ರಮಾಣಪತ್ರದ ಪ್ರಕಾರ, ಮುಖ್ಯ ಪರೀಕ್ಷೆಯ ಮೌಲ್ಯಮಾಪನವನ್ನು ಮಾತ್ರ ಟಿಸಿಎಸ್ ನಡೆಸಿದೆ. ವ್ಯಕ್ತಿತ್ವ ಪರೀಕ್ಷೆಯ ಅಂಕಗಳನ್ನು ಲಿಖಿತ ಪರೀಕ್ಷೆಯ ಅಂಕಗಳಿಗೆ ಸೇರಿಸಿ ಅಂತಿಮ ಫಲಿತಾಂಶವನ್ನು ಮಾನವ ಮಧ್ಯಪ್ರವೇಶ ಇಲ್ಲದೆ ಸ್ವಯಂಚಾಲಿತ ಫಲಿತಾಂಶ ಪದ್ಧತಿಯನ್ನು ಅನುಸರಿಸಬೇಕಾಗಿತ್ತು. ಆದರೆ, ಈ ಬಗ್ಗೆ ಯಾವುದೇ ಉಲ್ಲೇಖ ಇಲ್ಲ' ಎಂದು ಅರ್ಜಿದಾರರು ಹೇಳಿದ್ದಾರೆ.

ಸೋಮವಾರ ನಡೆದ ವಿಚಾರಣೆ ವೇಳೆ ಪ್ರಕರಣವನ್ನು ಕೆಎಟಿಗೆ ವರ್ಗಾಯಿಸಿರುವ ಹೈಕೋರ್ಟ್, ಈ ಪ್ರಕರಣದಲ್ಲಿ ಸದ್ಯ ಇರುವ ಪ್ರತಿವಾದಿಗಳು ಯಥಾಸ್ಥಿತಿ ಮುಂದುವರಿಯಲಿದ್ದಾರೆ. ಹೊಸತಾಗಿ ನೋಟಿಸ್ ನೀಡುವ ಅಗತ್ಯ ಇಲ್ಲ. ಅಲ್ಲದೆ, ಪ್ರಕರಣದಲ್ಲಿ ಈವರೆಗೆ ನೀಡಿರುವ ಎಲ್ಲ ಮಧ್ಯಂತರ ಆದೇಶಗಳೂ ಅನ್ವಯ ವಾಗಲಿದೆ. ಅರ್ಜಿದಾರರು ಕೇಳುವ ಯಾವುದೇ ಮಾಹಿತಿಯನ್ನು ನೀಡಲು ಕೆಪಿಎಸ್‌ಸಿ ಮತ್ತು ಟಿಸಿಎಸ್ ನಿರಾಕರಿಸುವಂತಿಲ್ಲ' ಎಂದು ನಿರ್ದೇಶಿಸಿದೆ.

2015 ನೇ ಸಾಲಿನ 428 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕೆಪಿಎಸ್‌ಸಿ 2019ರ ಡಿ. 23 ರಂದು ಪ್ರಕಟಿಸಿತ್ತು. ಅದರ ಬೆನ್ನಲ್ಲೇ, ಮುಖ್ಯ ಪರೀಕ್ಷೆಯ ಡಿಜಿಟಲ್ ಮೌಲ್ಯಮಾಪನ ಪಾರದರ್ಶಕವಾಗಿ ನಡೆದಿಲ್ಲ ಎಂದು ಶಂಕೆ ವ್ಯಕ್ತಪಡಿಸಿ 262 ಅಭ್ಯರ್ಥಿಗಳು ಕೆಪಿಎಸ್‌ಸಿಗೆ ಆಕ್ಷೇಪಣೆ ಸಲ್ಲಿಸಿದ್ದರು.

ಪ್ರಮಾಣಪತ್ರದಲ್ಲಿ ಏನಿದೆ?

ಮುಖ್ಯ ಪರೀಕ್ಷೆಯ ಪ್ರಶ್ನೆ ಮತ್ತು ಉತ್ತರಗಳನ್ನು ಒಳಗೊಂಡ ಬುಕ್‌ಲೆಟ್‌ಗಳನ್ನು ಸ್ಕ್ಯಾನ್ ಮಾಡಿ ಟಿಸಿಎಸ್ ಮೌಲ್ಯಮಾಪನ ಪ್ರಕ್ರಿಯೆ ನಡೆಸಿದೆ. ಟಿಸಿಎಸ್‌ಗೆ ನೀಡುವ ಮೊದಲು ಬುಕ್‌ಲೆಟ್‌ನ ಬಲ ಭಾಗದಲ್ಲಿರುವ ಬಾರ್‌ಕೋಡ್‌ಗಳನ್ನು (ಪರೀಕ್ಷಾರ್ಥಿಗೆ ಸಂಬಂಧಿಸಿದ ಮಾಹಿತಿ) ಪ್ರತ್ಯೇಕಿಸಲಾಗಿತ್ತು. ಮೌಲ್ಯಮಾಪನದ ಬಳಿಕ ದತ್ತಾಂಶಗಳನ್ನು ಕ್ಯಾಬಿನೆಟ್ (ಸಂಪುಟವಾಗಿ) ವೆಬ್ ಮೂಲಕ ಟಿಸಿಎಸ್ ನೀಡಿದೆ. ಅದನ್ನು ತೆರೆಯಲು ಲಾಗಿನ್ ಮತ್ತು ಪಾಸ್‌ವರ್ಡ್ ಅನ್ನು ಪರೀಕ್ಷಾ ನಿಯಂತ್ರಕರಿಗೆ ಟಿಸಿಎಸ್ ನೀಡಿತ್ತು. ಟಿಸಿಎಸ್‌ನ ಬಾರ್‌ಕೋಡ್‌ಗಳನ್ನು ಹೊಂದಿದ್ದ ಎಲ್ಲ ಉತ್ತರ ಪತ್ರಿಕೆಗಳ ಅಂಕಗಳನ್ನು ಒಳಗೊಂಡ ಎಕ್ಸೆಲ್ ಫೈಲ್ ಡೌನ್‌ಲೋಡ್ ಮಾಡಿಕೊಂಡು, ಪರೀಕ್ಷೆಯ ಫಲಿತಾಂಶ ನೀಡಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಮೌಲ್ಯಮಾಪನ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಒಡಂಬಡಿಕೆಯಂತೆ (ಎಂಒಯು) ಎಲ್ಲ ದತ್ತಾಂಶಗಳನ್ನು ಸುರಕ್ಷಿತವಾಗಿ ಟಿಸಿಎಸ್ ತನ್ನ ಬಳಿ ಇಟ್ಟುಕೊಂಡಿತ್ತು ಎಂದು ಪ್ರಮಾಣಪತ್ರದಲ್ಲಿ ಕೆಪಿಎಸ್‌ಸಿ ವಿವರಿಸಿದೆ.

ಸುದ್ದಿ 2 ನಿಮಿಷ

ಸಾಲ ಮನ್ನಾ: ಮೃತ ರೈತರ ಮಾಹಿತಿ ಸಂಗ್ರಹ

ಮೈಸೂರು: 'ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಬ್ಯಾಂಕ್‌ಗಳಲ್ಲಿ ಬೆಳೆಸಾಲ ಪಡೆದಿದ್ದು, ಕೋವಿಡ್‌ನಿಂದ ಮೃತಪಟ್ಟಿರುವ ರೈತರ ಸಾಲಮನ್ನಾಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಚಿಂತಿಸಿದ್ದಾರೆ. ಇಂತಹ ರೈತರ ಮಾಹಿತಿ ನೀಡಲು ಅಪೆಕ್ಸ್ ಬ್ಯಾಂಕ್‌ಗೆ ಸೂಚಿಸಲಾಗಿದೆ' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಮಂಗಳವಾರ ತಿಳಿಸಿದರು.

ನಗರದಲ್ಲಿ ನಡೆದ 'ರೈತ ಸ್ಪಂದನೆ' ಸಮಾರಂಭ ಉದ್ಘಾಟಿಸಿ ಮಾತನಾಡಿ, 'ರೈತರ ಮಾಹಿತಿ ಸಂಗ್ರಹಿಸಿದ ಬಳಿಕ ಮುಖ್ಯಮಂತ್ರಿ ಜೊತೆ ಚರ್ಚಿಸಿ, ಈ ಬಗ್ಗೆ ಸಕಾರಾತ್ಮಕ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದರು.

'ವಿಜಯಪುರ ಡಿಸಿಸಿ ಬ್ಯಾಂಕ್‌ನ ಶತಮಾನೋತ್ಸವಕ್ಕಾಗಿ ಮೀಸಲಿಟ್ಟಿದ್ದ ನಿಧಿಯನ್ನೇ ಬಳಸಿ ಕೋವಿಡ್‌ನಿಂದ ಮೃತಪಟ್ಟ ಸಾಲಗಾರ ರೈತರ ಕುಟುಂಬಗಳಿಗೆ ವಿತರಿಸಲು ನಿರ್ಧರಿಸಲಾಗಿದೆ' ಎಂದು ಹೇಳಿದರು.

'ರಾಜ್ಯದ 21 ಡಿಸಿಸಿ ಬ್ಯಾಂಕ್‌ಗಳು ಲಾಭದಲ್ಲಿವೆ. ಶಿವಮೊಗ್ಗ, ಕಲಬುರ್ಗಿ ಡಿಸಿಸಿ ಬ್ಯಾಂಕ್‌ಗಳ ಸಮಸ್ಯೆ ಬಗೆಹರಿದಿದೆ. ಶಿವಮೊಗ್ಗದಲ್ಲಿ ಅಧಿಕಾರಿ ವರ್ಗವನ್ನೇ ಬದಲಿಸಲಾಗಿದೆ. ಕಲಬುರ್ಗಿಯಲ್ಲಿ ಸ್ಥಗಿತವಾಗಿದ್ದ ₹ 195 ಕೋಟಿ ಸಾಲವನ್ನು ಮರುಪಾವತಿಸಿದ್ದು, ಜುಲೈ 10ರಂದು ಹೊಸದಾಗಿ ₹ 50 ಕೋಟಿ ಸಾಲ ಕೊಡಲಾಗುವುದು' ಎಂದರು.

ಒಗ್ಗಟ್ಟಿನ ದುರುಪಯೋಗಕ್ಕೆ ಬಿಡುವುದಿಲ್ಲ: ಸ್ವಾಮೀಜಿ

ಚಾಮರಾಜನಗರ: 'ಕೂಡಲಸಂಗಮ ಹಾಗೂ ಹರಿಹರ ಪಂಚಮಸಾಲಿ ಪೀಠಗಳಿಗೆ ಪರ್ಯಾಯವಾಗಿ ಮೂರನೇ ಶಕ್ತಿಯನ್ನು ನಿರ್ಮಾಣ ಮಾಡಲು ಹೊರಟವರು ಯಾರೆಂದು ನನಗೆ ಗೊತ್ತಿಲ್ಲ. ಈ ವಿಚಾರವೇ ನನಗೆ ತಿಳಿದಿಲ್ಲ' ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಮಂಗಳವಾರ ಇಲ್ಲಿ ಹೇಳಿದರು.

ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಬನಗೂಳಿ ಮಠದಲ್ಲಿ ಸೋಮವಾರ ನಡೆದ 40ಕ್ಕೂ ಹೆಚ್ಚು ಮಠಾಧೀಶರು ಸಭೆಯ ಬಗ್ಗೆ ಪ್ರತಿಕ್ರಿಯಿಸಿ, 'ತಾಲ್ಲೂಕಿಗೊಂದು ಮಠ ಕಟ್ಟಲು ಇವರು ಹೊರಟಿದ್ದಾರೆ. ನನಗೂ ಇದಕ್ಕೂ ಸಂಬಂಧ ಇಲ್ಲ. ಈ ಬಗ್ಗೆ ತಲೆಯೂ ಕೆಡಿಸಿಕೊಳ್ಳುವುದಿಲ್ಲ' ಎಂದರು.

'ಪಂಚಮಸಾಲಿಗಳಿಗೆ 2 ಎ ಮೀಸಲಾತಿ ದೊರಕಿಸಿಕೊಡುವುದು ನನ್ನ ಗುರಿ. 702 ಕಿ.ಮೀ ಪಾದಯಾತ್ರೆ ಮಾಡಿ ಪಂಚಮಶಾಲಿಗಳನ್ನು ಒಗ್ಗೂಡಿಸಿದ್ದೇನೆ. ಒಗ್ಗಟ್ಟಿನ ಮಹಾ ಅಡುಗೆ ಮಾಡಿದ್ದೇನೆ. ಒಗ್ಗಟ್ಟಿನ ಮಹಾಪ್ರಸಾದ ದುರುಪಯೋಗಪಡಿಸಿಕೊಳ್ಳಲು ಅವಕಾಶ ಕೊಡುವುದಿಲ್ಲ' ಎಂದು ತಿಳಿಸಿದರು.

ಎಸ್ಸೆಸ್ಸೆಲ್ಸಿ: ಇದೇ 15 ಮತ್ತು 17ರಂದು ಅಣಕು ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲ ಅಧಿಕಾರಿಗಳು, ಶಿಕ್ಷಕರು ಮತ್ತು ಸಿಬ್ಬಂದಿ ಲಸಿಕೆ ನೀಡಲಾಗಿದ್ದು, ಸುರಕ್ಷಿತ ವಾತಾವರಣದಲ್ಲಿ ಪರೀಕ್ಷೆ ನಡೆಸಲು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದರು.

ಜಿಲ್ಲಾ ಶೈಕ್ಷಣಿಕ ಉಪನಿರ್ದೇಶಕರು ಮತ್ತು ಬಿಇಒ ಜೊತೆ ವಿಡಿಯೊ ಸಂವಾದ ನಡೆಸಿ ಸಿದ್ಧತೆಯ ಪರಿಶೀಲನೆ ನಡೆಸಿದ ಅವರು, 'ಇದೇ 15 ಮತ್ತು 17ರಂದು ಆಯಾ ಪರೀಕ್ಷಾ ಕೇಂದ್ರಗಳಲ್ಲಿ ಅಣಕು ಪರೀಕ್ಷೆ ನಡೆಸಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಮಕ್ಕಳು ಅಂತರ ಕಾಪಾಡಿಕೊಳ್ಳುವಂತೆ ನಿಗಾವಹಿಸಬೇಕು' ಎಂದು ಅಧಿಕಾರಿಗಳಿಗೆ ಸಲಹೆ ನೀಡಿದರು.

ಪರೀಕ್ಷಾ ಸಿದ್ಧತೆ, ಸಿಬ್ಬಂದಿ ಲಸಿಕೆ ಪಡೆದಿರುವುದು, ಸ್ಥಳೀಯ ಹಂತದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದ ಸಭೆಗಳ ಮಾಹಿತಿ, ಸ್ವಯಂ ಸೇವಕರ ನೇಮಕ, ಮಾಸ್ಕ್, ಸ್ಯಾನಿಟೈಜರ್ ವ್ಯವಸ್ಥೆ, ಎಸ್‌ಒಪಿ ಪಾಲನೆ ಕುರಿತು ಎಲ್ಲ 34 ಶೈಕ್ಷಣಿಕ ಜಿಲ್ಲೆಗಳ ಡಿಡಿಪಿಐಗಳಿಂದ ಸಚಿವರು ಮಾಹಿತಿ ಪಡೆದರು.

ಬಳಿಕ ಮಾತನಾಡಿದ ಅವರು, 'ಶೇ 95ಕ್ಕಿಂತ ಹೆಚ್ಚು ಪರೀಕ್ಷಾ ಸಿಬ್ಬಂದಿ ಈಗಾಗಲೇ ಲಸಿಕೆ ಪಡೆದುಕೊಂಡಿದ್ದಾರೆ. ಉಳಿದವರು ಇನ್ನೆರಡು ದಿನಗಳಲ್ಲಿ ಲಸಿಕೆ ಪಡೆಯಲಿದ್ದಾರೆ' ಎಂದರು.

ಮಣ್ಣೆತ್ತಿನ ರಂಗು ಮಣ್ಣೆತ್ತಿನ ಅಮಾವಾಸ್ಯೆ ಸಮೀಪಿಸಿರುವುದರಿಂದ ಕಲಬುರ್ಗಿಯ ಶರಣಬಸವೇಶ್ವರ ಕೆರೆ ಬಳಿ ವ್ಯಾಪಾರಿಗಳು ಮಂಗಳವಾರ ಎತ್ತಿನ ಪಿಒಪಿ ಮೂರ್ತಿಗಳಿಗೆ ಬಣ್ಣ ಹಚ್ಚುತ್ತಿರುವ ದೃಶ್ಯ ಕಂಡುಬಂತು ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಕೋವಿಡ್: ಪ್ರಕರಣ ಮತ್ತೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಒಂದೂವರೆ ಸಾವಿರದ ಆಸುಪಾಸಿಗೆ ಇಳಿಕೆ ಕಂಡಿದ್ದ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಮಂಗಳವಾರ 3,104ಕ್ಕೆ ಏರಿಕೆ ಕಂಡಿದೆ.

ಭಾನುವಾರ ಹೊಸ ಪ್ರಕರಣಗಳು 1,564ಕ್ಕೆ ಇಳಿದಿತ್ತು. ಸಂಖ್ಯೆ ಎರಡು ದಿನಗಳಿಂದ ಏರುಗತಿ ಪಡೆದಿದೆ. ಒಂದು ದಿನದಲ್ಲಿ 1.16 ಲಕ್ಷ ಮಾದರಿಗಳ ಪರೀಕ್ಷೆ ಮಾಡಲಾಗಿದ್ದು, ಸೋಂಕು ದೃಢಪ್ರಮಾಣ ಶೇ 2.65ರಷ್ಟಿದೆ.

ಬೆಂಗಳೂರಿನಲ್ಲಿ 715 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ರ ಗಡಿಯೊಳಗಿವೆ. 12 ಜಿಲ್ಲೆಗಳಲ್ಲಿ ಈ ಸಂಖ್ಯೆ ಎರಡಂಕಿ ಹಾಗೂ 6 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 28.59 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 40 ಸಾವಿರಕ್ಕೆ ಇಳಿಕೆಯಾಗಿದೆ.

ಪ್ರಜಾವಾಣಿ ಗ್ರೀನ್ ಟಾಕ್ | ಪ್ರಕೃತಿ ಮಡಿಲ ಮಾತು

ಕೆರೆಗಾಗಿ ಪೊಲೀಸರ ಶ್ರಮದಾನ

ಪೊಲೀಸರು ಶ್ರಮದಾನದ ಮೂಲಕ ಕೆರೆಯೊಂದನ್ನು ಶುಚಿಗೊಳಿಸಿದರು. ಅದು ಪೊಲೀಸ್ ಕೆರೆಯಾಯಿತು. ಇದರಿಂದ ಸ್ಫೂರ್ತಿಗೊಂಡ ಕಲ್ಲುಬಾಳು ಗ್ರಾ.ಪಂ. ಸದಸ್ಯರು ಇನ್ನೂ ಐದು ಕೆರೆಗಳ ಅಭಿವೃದ್ಧಿ ಮಾಡಿದರು...

https://bit.ly/3hkzRL7

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	90.30	1,591	4,562
ಹಾರಂಗಿ	2,859	2,842.44	375	80
ಕಬಿನಿ	2284.00	2,276.03	1,040	700
ಹೇಮಾವತಿ	2,922	2,896.10	1,306	1,000
ಲಿಂಗನಮಕ್ಕಿ	1,819	1,784.35	1,312	-
ಸೂಪಾ (ಮೀ)	564	528.55	2,007.05	26,331.50
ಮಾಣಿ	594.36	573.66	342	-
ತುಂಗಭದ್ರಾ	1,633	1,609.50	2,083	350
ಮಲಪ್ರಭಾ	2079.50	2,063.00	692	194
ಘಟಪ್ರಭಾ	2175	2,135.83	1,736	130
ಭದ್ರಾ	186	155.4	914	80
ಆಲಮಟ್ಟಿ (ಮೀ)	519.60	517.430	5,666	10,048
ನಾರಾಯಣಪುರ (ಮೀ)	492.25	490.63	100	-

* ನೆಲಮಟ್ಟದಿಂದ

ಬಿಎಸ್‌ವೈ–ಎಚ್‌ಡಿಕೆ ಒಳ ಒಪ್ಪಂದ: ಯೋಗೇಶ್ವರ್

ಮದ್ದೂರು (ಮಂಡ್ಯ): 'ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಒಳ ಒಪ್ಪಂದ ಮಾಡಿಕೊಂಡಿದ್ದಾರೆ. ಆದ್ದರಿಂದ ಕೆಲ ಜಿಲ್ಲೆಗಳಲ್ಲಿ ಬಿಜೆಪಿ ಸಂಘಟನೆ ಮಾಡಲು ಸಮಸ್ಯೆಯಾಗುತ್ತಿದೆ' ಎಂದು ಸಚಿವ ಸಿ.ಪಿ. ಯೋಗೇಶ್ವರ್ ಮಂಗಳವಾರ ಇಲ್ಲಿ ಆರೋಪಿಸಿದರು.

ಬಿಜೆಪಿ ತಾಲ್ಲೂಕು ಘಟಕದ ಸಭೆಯಲ್ಲಿ ಅವರು, 'ರಾಮನಗರ, ಮಂಡ್ಯ, ಮೈಸೂರು, ಹಾಸನ ಜಿಲ್ಲೆಗಳಲ್ಲಿ ಯಡಿಯೂರಪ್ಪ ಅವರು ಕುಮಾರಸ್ವಾಮಿ ಜೊತೆ ಹೊಂದಾಣಿಕೆ ರಾಜಕಾರಣ ಮಾಡುತ್ತಿದ್ದು, ಪಕ್ಷ ಸಂಘಟನೆ ಸಾಧ್ಯವಾಗುತ್ತಿಲ್ಲ. ಇದರಿಂದ ನನಗೂ ಸೇರಿದಂತೆ ಅನೇಕರಿಗೆ ಮುಜುಗರವಾಗುತ್ತಿದೆ. ಮುಂದೆ ಯಾದರೂ ಪಕ್ಷದ ಮುಖಂಡರು ಹಾಗೂ ಹೈಕಮಾಂಡ್ ಈ ಬಗ್ಗೆ ಕ್ರಮವಹಿಸಬಹುದೆಂಬ ವಿಶ್ವಾಸವಿದೆ' ಎಂದರು.

ವನವಾಸ–ಅಜ್ಞಾತವಾಸ ಮುಗಿಯುತ್ತಿದೆ: ಪಟ್ಟಾಭಿಷೇಕ ನಡೆಯಬೇಕಿದೆ–ಯತ್ನಾಳ

'ಏಕಾಂಗಿ ಹೋರಾಟವಲ್ಲ: ಬ್ರಹ್ಮಾಸ್ತ್ರವಿದೆ'

ಪ್ರಜಾವಾಣಿ ವಾರ್ತೆ

ಮೈಸೂರು/ಚಾಮರಾಜನಗರ: 'ನನ್ನ ರಾಜಕೀಯ ಜೀವನ ಅಂತ್ಯವಾದರೂ; ಭ್ರಷ್ಟಾಚಾರ, ಕುಟುಂಬ ರಾಜಕಾರಣ ವಿರುದ್ಧದ ಹೋರಾಟ ನಿಲ್ಲಲ್ಲ. ನನ್ನದು ಏಕಾಂಗಿ ಹೋರಾಟವಲ್ಲ. ಹಲವು ಸಚಿವರೇ ನನ್ನ ಬೆಂಬಲಕ್ಕಿದ್ದಾರೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಂಗಳವಾರ ಇಲ್ಲಿ ತಿಳಿಸಿದರು.

ಬಸನಗೌಡ ಪಾಟೀಲ ಯತ್ನಾಳ

ಸುದ್ದಿಗಾರರೊಂದಿಗೆ ಮಾತನಾಡಿ, 'ಏಕಾಂಗಿಯಾಗಲು ನಾನು ಅಭಿಮನ್ಯುವಲ್ಲ; ಅರ್ಜುನ. ನಮ್ಮ ವನವಾಸ, ಅಜ್ಞಾತವಾಸ ಎಲ್ಲವೂ ಮುಗಿದಿವೆ. ಪಟ್ಟಾಭಿಷೇಕ ಬಾಕಿಯಿದೆಯಷ್ಟೇ. ಅದೂ ಒಳ್ಳೆಯವರಿಗೆ ಆಗಲಿದೆ' ಎಂದರು.

'ಮುಖ್ಯಮಂತ್ರಿ ಬದಲಾವಣೆಗೆ ಸಂಬಂಧಿಸಿ ಈ ಹಿಂದೆ ನಡೆದದ್ದು ಮೂರು ದಿನದ ನಾಟಕ. ಬುಧವಾರ ಕೇಂದ್ರ ಸಚಿವ ಸಂಪುಟ ವಿಸ್ತರಣೆಯಾಗಬಹುದು. ಪ್ರಧಾನಿ ಮೋದಿ ಮೇಲೆ ವಿಶ್ವಾಸವಿದೆ. ವಿಶ್ವಾಸಾರ್ಹ ರಾಷ್ಟ್ರೀಯ ನಾಯಕರಿಬ್ಬರನ್ನು ರಾಜ್ಯಕ್ಕೆ ಕಳುಹಿಸಿಕೊಡಿ. ಶಾಸಕಾಂಗ ಪಕ್ಷದ ಸಭೆ ನಡೆಸಿ. ಪ್ರತಿಯೊಬ್ಬ ಶಾಸಕರಿಂದಲೂ ವೈಯಕ್ತಿಕ ಅಭಿಪ್ರಾಯ ಸಂಗ್ರಹಿಸಿ. ಆಗ ಸತ್ಯ ಬೆಳಕಿಗೆ ಬರಲಿದೆ' ಎಂದು ಹೇಳಿದರು.

'ಯಾರೂ ನಿರೀಕ್ಷೆ ಮಾಡದ, ಪ್ರಾಮಾಣಿಕ ಹಾಗೂ ಹಿಂದುತ್ವದ ಪರ ಇರುವವರು ಮುಖ್ಯಮಂತ್ರಿಯಾಗುತ್ತಾರೆ. ಹೈಕಮಾಂಡ್ ನನಗೆ ಜವಾಬ್ದಾರಿ ಕೊಟ್ಟರೆ ಬೇಡ ಎನ್ನುವುದಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಭ್ರಷ್ಟಾಚಾರದ ಬಗ್ಗೆ ನಾನು ಸುಮ್ಮನೆ ಆರೋಪ ಮಾಡುತ್ತಿಲ್ಲ. ದೊಡ್ಡ ಕರ್ಮಕಾಂಡವೇ ನಡೆದಿದೆ, ದಾಖಲೆಗಳಿವೆ. ಮುಖ್ಯಮಂತ್ರಿ, ಸಚಿವನಾಗಬೇಕು ಎಂಬ ಕಾರಣಕ್ಕೆ ದೂರುತ್ತಿಲ್ಲ. ನನ್ನ ಹೋರಾಟ ನಿಸ್ವಾರ್ಥದ್ದು. ಸತ್ಯ–ಪ್ರಾಮಾಣಿಕವಾದದ್ದು' ಎಂದರು.

'ಯಡಿಯೂರಪ್ಪ ಪರ ಮಾತನಾಡುತ್ತಿರುವ ಮಠಾಧೀಶರ ಹೇಳಿಕೆ ಲಿಂಗಾಯತ ಸಮುದಾಯಕ್ಕೆ ಅವಮಾನ. ಅವರ ಪರ ಬ್ಯಾಟಿಂಗ್ ಮಾಡುತ್ತಿರುವ ಮಠಾಧೀಶರಿಗೆ ಎಚ್ಚರ ವಿರಲಿ. ನನ್ನ ಬಳಿಯಿರುವ ಬ್ರಹ್ಮಾಸ್ತ್ರ ಪ್ರಯೋಗಿಸಿದರೆ; ಈ ಎಲ್ಲ ಮಠಾಧೀಶರು ಮಠ ಬಿಟ್ಟು ಓಡಬೇಕಾಗುತ್ತದೆ. ಅಂತಹ ಕರ್ಮಕಾಂಡ ನಡೆದಿದೆ' ಎಂದು ತಿಳಿಸಿದರು.

'ಸಹಿ ಹಾಕೋ ಶಕ್ತಿಯಿಲ್ಲ: 'ಮುಖ್ಯಮಂತ್ರಿಯ ಸಹಿಗಾಗಿ ಬರುವ ಕಡತಗಳಿಗೆ, ಸಹಿಯನ್ನು ಹಾಕೋ ಶಕ್ತಿ ಯಡಿಯೂರಪ್ಪನಿಗಿಲ್ಲ. ಮಗನ ಒತ್ತಾಯಕ್ಕೆ ವಿಧಾನಸೌಧಕ್ಕೆ ಹೋಗುತ್ತಿದ್ದಾರಷ್ಟೇ. ಕಾವೇರಿಯಲ್ಲಿ ಎಂಟು ಖುರ್ಚಿ ಹಾಕಿಕೊಂಡು ಅರ್ಧಗಂಟೆ ಸಭೆ ನಡೆಸುತ್ತಿದ್ದಾರಷ್ಟೇ. ಬಿಎಸ್‌ವೈ ನಿಷ್ಕ್ರಿಯರಾಗಿದ್ದಾರೆ' ಎಂದು ಯತ್ನಾಳ ಗುಡುಗಿದರು.

ಬಿಜೆಪಿ ಒಡೆಯುವ ಷಡ್ಯಂತ್ರ

'ವಿಜಯೇಂದ್ರ ಬಿಜೆಪಿ ಒಡೆಯುವ ಷಡ್ಯಂತ್ರ ನಡೆಸಿದ್ದಾನೆ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದಾನೆ. ಕ್ಲಬ್‌ವೊಂದರಲ್ಲಿ ಈ ಹುನ್ನಾರದ ಭಾಗವಾಗಿಯೇ ಸೋಮವಾರ ಸಭೆಯೊಂದನ್ನು ನಡೆಸಿದ್ದಾನೆ' ಎಂದು ಯತ್ನಾಳ ಆರೋಪಿಸಿದರು.

'ಕೆಲ ಶಾಸಕರನ್ನು ನನ್ನ ವಿರುದ್ಧ ಛೂ ಬಿಡಲಾಗಿದೆ. ಅವರು ಫೇಸ್‌ಬುಕ್, ಟ್ವಿಟರ್‌ನಲ್ಲಿ ಅವಹೇಳನಕಾರಿಯಾಗಿ ಬರೆಯುತ್ತಿದ್ದಾರೆ. ಇದಕ್ಕೆಲ್ಲಾ ಅಂಜಲ್ಲ' ಎಂದು ಕಿಡಿಕಾರಿದರು.

ಸಚಿವ ಸೋಮಶೇಖರ್ ಹೇಳಿಕೆಗೆ ಪ್ರತಿಕ್ರಿಯಿಸಿ, 'ನಾನೆಂದೂ ಭ್ರಷ್ಟರು, ಅಯೋಗ್ಯರ ಕಾಲಿನ ದೂಳಾಗಲ್ಲ. ಪವಿತ್ರಾತ್ಮದ ದೂಳಾಗೋನು' ಎಂದು ತಿರುಗೇಟು ನೀಡಿದರು.

ಯತ್ನಾಳ ಕಾರಿಗೆ ಮುತ್ತಿಗೆ

ಗೌಡ ಲಿಂಗಾಯತ ಸಮುದಾಯದ ಸಭೆಯಲ್ಲಿ ಭಾಗವಹಿಸಲು ಚಾಮರಾಜನಗರಕ್ಕೆ ಬಂದಿದ್ದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಕಾರಿಗೆ ಮುತ್ತಿಗೆ ಹಾಕಿದ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಮುಖಂಡರು ಹಾಗೂ ಬಿಜೆಪಿ ಕಾರ್ಯಕರ್ತರು ಘೋಷಣೆ ಕೂಗಿದರು.

'ಸಮುದಾಯದ ಸ್ವಾಮೀಜಿಗಳ ಬಗ್ಗೆ ಅವಹೇಳನಕಾರಿಯಾಗಿ ಹೇಳಿಕೆ ನೀಡಿ, ಸಮಾಜ ಒಡೆಯುವ ಕೆಲಸವನ್ನು ಯತ್ನಾಳ ಮಾಡುತ್ತಿದ್ದಾರೆ. ಮುಖ್ಯಮಂತ್ರಿ ವಿರುದ್ಧ ಪದೇಪದೇ ಹೇಳಿಕೆ ನೀಡಿ, ಪಕ್ಷ ವಿರೋಧಿ ಕೆಲಸದಲ್ಲಿ ತೊಡಗಿಸಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಗೆ ಪ್ರತಿಕರಿಯಿಸಿದ ಯತ್ನಾಳ, 'ಪ್ರತಿಭಟನೆ ಯಾರು ನಡೆಸುತ್ತಿದ್ದಾರೆ ಎಂಬುದೂ ಗೊತ್ತಿದೆ. ಅವರಿಗೆ ನನ್ನ ಬಗ್ಗೆ ಭಯ ಬಂದಿದೆ' ಎಂದರು.

ಸಂಪುಟ ಸರ್ಜರಿಗೆ ಕ್ಷಣಗಣನೆ?

ಒಂದನೇ ಪುಟದಿಂದ...

ಆದರೆ, ಅದು ಎಲ್‌ಜೆಪಿ ಸಂಸ್ಥಾಪಕ ರಾಮ್ ವಿಲಾಸ್ ಪಾಸ್ವಾನ್ ಅವರ ಜನ್ಮದಿನಕ್ಕೆ ಸಂಬಂಧಿಸಿಯೇ ಹೊರತು ಸಂಪುಟ ಸೇರ್ಪಡೆ ಬಗ್ಗೆ ಅಲ್ಲ ಎಂದು ಪಾರಸ್ ಸ್ಪಷ್ಟಪಡಿಸಿದ್ದಾರೆ.

ಸಂಪುಟ ಪುನರ್‌ರಚನೆ ಬಗ್ಗೆ ಅಧಿಕೃತವಾಗಿ ಯಾವುದೇ ಮಾಹಿತಿ ಪ್ರಕಟವಾಗಿಲ್ಲ. ಆದರೆ, ಉನ್ನತ ಮಟ್ಟದಲ್ಲಿ ಸರಣಿ ಸಭೆಗಳು ನಡೆದಿವೆ. 2019ರಲ್ಲಿ ಎರಡನೇ ಅವಧಿಗೆ ಅಧಿಕಾರಕ್ಕೆ ಬಂದ ಬಳಿಕ ಇದೇ ಮೊದಲ ಬಾರಿಗೆ ಸಂಪುಟದಲ್ಲಿ ಭಾರಿ ಬದಲಾವಣೆ ಆಗಲಿದೆ ಎಂಬ ಸುದ್ದಿಗಳು ಕಳೆದ ಕೆಲವು ದಿನಗಳಿಂದ ಹರಿದಾಡುತ್ತಿವೆ. ಇದು ಯಾವಾಗ ಬೇಕಿದ್ದರೂ ಆಗಬಹುದು ಎಂದು ಮೂಲಗಳೂ ತಿಳಿಸಿವೆ.

ಚಿರಾಗ್ ಆಕ್ಷೇಪ: ತಮ್ಮ ಚಿಕ್ಕಪ್ಪ ಪಶುಪತಿ ಕುಮಾರ್ ಪಾರಸ್ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವುದಕ್ಕೆ ಎಲ್‌ಜೆಪಿ ಮುಖಂಡ ಚಿರಾಗ್ ಪಾಸ್ವಾನ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಎಲ್‌ಜೆಪಿ ಎರಡು ಬಣಗಳಾಗಿ ಇತ್ತೀಚೆಗಷ್ಟೇ ಒಡೆದಿದೆ. ಪಾರಸ್ ಜತೆಗೆ ನಾಲ್ವರು ಸಂಸದರಿದ್ದಾರೆ. ಚಿರಾಗ್ ಏಕಾಂಗಿಯಾಗಿದ್ದಾರೆ. ಎಲ್‌ಜೆಪಿಯಿಂದ ಹೊರ ಹೋಗಿರುವ ಬಣದಿಂದ ಯಾರನ್ನೂ ಸಂಪುಟಕ್ಕೆ ಸೇರಿಸಿಕೊಳ್ಳಬಾರದು ಎಂದು ಪ್ರಧಾನಿಯವರನ್ನು ಚಿರಾಗ್ ಕೋರಿದ್ದಾರೆ. ಸಂಪುಟಕ್ಕೆ ಸೇರಿಸಿಕೊಂಡರೆ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸಲಾಗುವುದು ಎಂದಿದ್ದಾರೆ.

ಚಟುವಟಿಕೆ ಬಿರುಸು

ಬಿಜೆಪಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರು ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಮಂಗಳವಾರ ಸಂಜೆ ಭೇಟಿಯಾಗಿದ್ದಾರೆ. ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಅವರೂ ಸಂತೋಷ್ ಅವರನ್ನು ಭೇಟಿಯಾಗಿದ್ದಾರೆ.

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಜಂಟಿ ಪ್ರಧಾನ ಕಾರ್ಯದರ್ಶಿಗಳಾದ ಕೃಷ್ಣ ಗೋಪಾಲ್ ಮತ್ತು ಮನಮೋಹನ ವೈದ್ಯ ಅವರೂ ಕೆಲವು ದಿನಗಳಿಂದ ರಾಜಧಾನಿಯಲ್ಲಿಯೇ ಇದ್ದಾರೆ.

ರಾಜ್ಯಪಾಲರಾಗಿ ಅಧಿಕಾರ ಸ್ವೀಕರಿಸಲಿರುವ ಗೆಹ್ಲೋಟ್ ಅವರು ರಾಜ್ಯಸಭೆಯ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಲಿದ್ದಾರೆ. ಹಾಗಾಗಿ, ಸಚಿವ ಸಂಪುಟ ಮತ್ತು ರಾಜ್ಯಸಭೆಯಲ್ಲಿ ಒಂದು ಸ್ಥಾನ ತೆರವಾಗಲಿದೆ. ಬಿಜೆಪಿಯ ಸಂಸದೀಯ ಮಂಡಳಿಯಲ್ಲಿ ಗೆಹ್ಲೋಟ್ ಅವರು ದಲಿತ ಸಮುದಾಯವನ್ನು ಪ್ರತಿನಿಧಿಸುವ ಏಕೈಕ ಸದಸ್ಯರಾಗಿದ್ದರು. ಸಂಸದೀಯ ಮಂಡಳಿಯಲ್ಲಿಯೂ ಒಂದು ಸ್ಥಾನ ತೆರವಾಗಲಿದೆ.

ಎ.ನಾರಾಯಣಸ್ವಾಮಿಗೆ ಅವಕಾಶ

ಒಂದನೇ ಪುಟದಿಂದ

ಬೀದರ್ ಸಂಸದ ಭಗವಂತ ಖೂಬಾ, ಕಲಬುರ್ಗಿಯ ಡಾ.ಉಮೇಶ್ ಜಾಧವ್, ವಿಜಯಪುರದ ರಮೇಶ ಜಿಗಜಿಣಗಿ, ಶಿವಮೊಗ್ಗದ ಬಿ.ವೈ. ರಾಘವೇಂದ್ರ, ಉಡುಪಿ–ಚಿಕ್ಕಮಗಳೂರು ಸಂಸದೆ ಶೋಭಾ ಕರಂದ್ಲಾಜೆ ಅವರಲ್ಲಿ ಒಬ್ಬರಿಗೆ ಸಂಪುಟ ಸೇರ್ಪಡೆಗೆ ಅವಕಾಶ ದೊರೆಯುವ ಸಾಧ್ಯತೆ ಇದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಸಂಪುಟ ಪುನರ್ ರಚನೆ ಸಂದರ್ಭ ಬಿಜೆಪಿ ವರಿಷ್ಠರು ಪಂಚ ರಾಜ್ಯಗಳ ವಿಧಾನಸಭೆ ಚುನಾವಣೆಯನ್ನು ದೃಷ್ಟಿಯಲ್ಲಿ ಇರಿಸಿಕೊಂಡೇ ವಿವಿಧ ಸಮುದಾಯಗಳಿಗೆ ಸೇರಿರುವವರಿಗೆ ಮಣೆ ಹಾಕುವ ಸಾಧ್ಯತೆ ಇದೆ ಎಂಬ ಮಾತುಗಳು ಕೇಳಿ ಬಂದಿವೆ.

ಅಮಿತ್ ಶಾ ಭೇಟಿ ಮಾಡಿದ ನಿರಾಣಿ

ನವದೆಹಲಿ: ಕೇಂದ್ರದ ಸಚಿವ ಸಂಪುಟ ಪುನರ್ ರಚನೆಯ ಕಸರತ್ತು ನಡೆಸಿರುವ ಬಿಜೆಪಿ ವರಿಷ್ಠರು, ಸಚಿವ ಮುರುಗೇಶ ನಿರಾಣಿ ಅವರನ್ನು ಭೇಟಿ ಮಾಡಿ ಚರ್ಚಿಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಮಂಗಳವಾರ ಬೆಳಿಗ್ಗೆ ದೆಹಲಿಗೆ ಬಂದ ನಿರಾಣಿ ಮಧ್ಯಾಹ್ನ ಕೇಂದ್ರದ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ.

30 ನಿಮಿಷಗಳ ಕಾಲ ಶಾ ಅವರೊಂದಿಗೆ ಚರ್ಚಿಸಿರುವ ನಿರಾಣಿ, ನಂತರ ಮುಖಂಡ ಬಿ.ಎಲ್. ಸಂತೋಷ್ ಅವರನ್ನೂ ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ ಎನ್ನಲಾಗಿದೆ.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಕುರಿತು ಬಿಜೆಪಿಯ ಕೆಲವು ಶಾಸಕರಿಂದಲೇ ಆಗ್ರಹ ಕೇಳಿ ಬರುತ್ತಿರುವುದರ ನಡುವೆ, ನಿರಾಣಿ ಅವರ ದೆಹಲಿ ಭೇಟಿ ಮತ್ತಷ್ಟು ಚರ್ಚೆಗೆ ಗ್ರಾಸ ಒದಗಿಸಿದೆ.

ಆದರೆ, ವರಿಷ್ಠರೊಂದಿಗಿನ ಭೇಟಿಯನ್ನು ಅಲ್ಲಗಳೆದಿರುವ ನಿರಾಣಿ, ಖಾಸಗಿ ಕೆಲಸಕ್ಕಾಗಿ ದೆಹಲಿಗೆ ಭೇಟಿ ನೀಡಿರುವುದಾಗಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಪ್ರಾಮಾಣಿಕವಾಗಿ ಜವಾಬ್ದಾರಿ ನಿರ್ವಹಿಸುವೆ: ಗೆಹ್ಲೋಟ್

ಪ್ರಜಾವಾಣಿ ವಾರ್ತೆ

ನವದೆಹಲಿ: 'ಪಕ್ಷ ವಹಿಸಿರುವ ಹೊಸ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುವೆ' ಎಂದು ರಾಜ್ಯದ ನೂತನ ರಾಜ್ಯಪಾಲರಾಗಿ ನೇಮಕಗೊಂಡಿರುವ ಥಾವರ್‌ಚಂದ್ ಗೆಹ್ಲೋಟ್ ಹೇಳಿದರು.

ಮಂಗಳವಾರ 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಅವರು, '2014ರಿಂದ ಕೇಂದ್ರದ ಸಚಿವನಾಗಿ ಕೆಲಸ ಮಾಡಿದ್ದೇನೆ. ಎರಡು ಅವಧಿಗೆ ಬಿಜೆಪಿಯ ಕರ್ನಾಟಕ ಉಸ್ತುವಾರಿಯಾಗಿಯೂ ಸೇವೆ ಸಲ್ಲಿಸಿರುವ ಅನುಭವ ಹೊಂದಿದ್ದೇನೆ' ಎಂದು ಹೇಳಿದರು.

'ಕರ್ನಾಟಕದ ಉಸ್ತುವಾರಿಯಾಗಿ ಕೆಲಸ ಮಾಡಿದ ಸಂದರ್ಭದಲ್ಲಿ ಯಾವುದೇ ರೀತಿಯ ಸಮಸ್ಯೆ ಎದುರಿಸಿರಲಿಲ್ಲ. ಭವಿಷ್ಯದಲ್ಲೂ ಯಾವುದೇ ತೊಂದರೆ ಎದುರಾಗುವುದಿಲ್ಲ ಎಂಬ ವಿಶ್ವಾಸವಿದೆ' ಎಂದು 73 ವರ್ಷದ ಗೆಹ್ಲೋಟ್ ತಿಳಿಸಿದರು.

'ನನಗೆ ಹೊಸ ಜವಾಬ್ದಾರಿ ವಹಿಸಿರುವ ಪ್ರಧಾನಿ ಮೋದಿ, ರಾಷ್ಟ್ರಪತಿ ರಾಮನಾಥ ಕೋವಿಂದ್ ಹಾಗೂ ಪಕ್ಷದ ಹಿರಿಯ ಮುಖಂಡರಿಗೆ ಅಭಿನಂದನೆ ಸಲ್ಲಿಸುವೆ. ಎಲ್ಲ ರೀತಿಯ ಸಮಸ್ಯೆಗಳಿಗೆ ಸಂವಿಧಾನದ ಚೌಕಟ್ಟಿನಲ್ಲಿ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುವ ಮೂಲಕ ಹಿರಿಯರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುವೆ' ಎಂದು ಅವರು ಭರವಸೆ ನೀಡಿದರು.

ಗೆಹ್ಲೋಟ್ ಪರಿಚಯ: ಮಧ್ಯಪ್ರದೇಶದ ಉಜ್ಜೈನ್ ಜಿಲ್ಲೆಯ ನಾಗ್ದಾ ತಾಲ್ಲೂಕಿನ ರುಪೆಟಾ ಗ್ರಾಮದಲ್ಲಿ 1948ರ ಮೇ 18ರಂದು ಜನಿಸಿರುವ ಗೆಹ್ಲೋಟ್, ಮೂರು ಬಾರಿ ಮಧ್ಯಪ್ರದೇಶ ವಿಧಾನಸಭೆಯ ಸದಸ್ಯರಾಗಿ, ನಾಲ್ಕು ಬಾರಿ ಶಾಜಾಪುರ ಲೋಕಸಭಾ ಕ್ಷೇತ್ರದ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

2009ರ ಲೋಕಸಭೆ ಚುನಾವಣೆಯಲ್ಲಿ ಪರಾಭವಗೊಂಡಿದ್ದ ಅವರು, 2012ರಲ್ಲಿ ರಾಜ್ಯಸಭೆಗೆ ಆಯ್ಕೆಯಾಗಿದ್ದರು. ಸದ್ಯ ಬಿಜೆಪಿ ಸಂಸದೀಯ ಮಂಡಳಿ ಸದಸ್ಯರೂ, ಪಕ್ಷದ ಕೇಂದ್ರ ಚುನಾವಣಾ ಸಮಿತಿಯ ಸದಸ್ಯರೂ, ರಾಜ್ಯಸಭೆಯ ಬಿಜೆಪಿ ನಾಯಕರೂ ಆಗಿದ್ದಾರೆ.

ಗೆಹ್ಲೋಟ್ ಅವರು ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಎಸ್.ಸಿ ಮೋರ್ಚಾ ಅಧ್ಯಕ್ಷ ಸ್ಥಾನ ಸೇರಿದಂತೆ ಬಿಜೆಪಿಯ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿರುವ ಅನುಭವಿ.

ಕಾರ್ಮಿಕ ಮುಖಂಡರಾಗಿದ್ದ ಇವರು 1968ರಿಂದ 1971ರವರೆಗೆ ಕಾರ್ಮಿಕ ಹೋರಾಟದಲ್ಲಿ ಭಾಗವಹಿಸಿ ಜೈಲು ವಾಸ ಅನುಭವಿಸಿದ್ದಾರೆ. ತುರ್ತು ಪರಿಸ್ಥಿತಿಯ ಸಂದರ್ಭದಲ್ಲೂ ಜೈಲು ಸೇರಿದ್ದರು.

14 ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್' ಮುಂದುವರಿಕೆ

ಬೆಂಗಳೂರು: ರಾಜ್ಯದಲ್ಲಿ ನೈರುತ್ಯ ಮುಂಗಾರು ಮಾರುತಗಳು ಚುರುಕಾಗಿದ್ದು, ಕರಾವಳಿ, ಒಳನಾಡಿನ ಹಲವು ಜಿಲ್ಲೆಗಳಲ್ಲಿ ಜುಲೈ 7, 8 ರಂದು ಧಾರಾಕಾರ ಮಳೆ ಆಗಬಹುದು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

'ದಕ್ಷಿಣಕನ್ನಡ, ಉತ್ತರ ಕನ್ನಡ, ಉಡುಪಿ, ಬೆಳಗಾವಿ, ಬೀದರ್, ಧಾರವಾಡ, ಕಲಬುರ್ಗಿ, ರಾಯಚೂರು, ಯಾದಗಿರಿ, ಬಳ್ಳಾರಿ, ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಮಳೆಯಾಗುವ ಸಾಧ್ಯತೆ ಇರುವುದರಿಂದ ಜು.8 ರವರೆಗೆ 'ಯೆಲ್ಲೊ ಅಲರ್ಟ್' ಮುಂದುವರಿಸಲಾಗಿದೆ'.

'ಕರಾವಳಿ ಜಿಲ್ಲೆಗಳಲ್ಲಿ ಇದೇ 7 ರವರೆಗೆ ಮಳೆ ಮುಂದುವರಿಯಲಿದೆ. ಉಳಿದ ಜಿಲ್ಲೆಗಳಲ್ಲಿ ಒಣಹವೆ ಮುಂದುವರಿಯಲಿದ್ದು, ಕೆಲವೆಡೆ ಸಾಧಾರಣ ಮಳೆಯಾಗಬಹುದು' ಎಂದು ಮಾಹಿತಿ ನೀಡಿದೆ.

ವಿವಿಧೆಡೆ ಗುಡುಗು ಸಹಿತ, ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಕಲಬುರ್ಗಿ/ಹುಬ್ಬಳ್ಳಿ/ಮೈಸೂರು: ಕಲ್ಯಾಣ ಕರ್ನಾಟಕದ ಕಲಬುರ್ಗಿ, ಬೀದರ್ ಹಾಗೂ ಯಾದಗಿರಿ ಜಿಲ್ಲೆಗಳ ಹಲವೆಡೆ ಮಂಗಳವಾರ ಬಿರುಸಿನ ಮಳೆ ಸುರಿಯಿತು. ಕಲಬುರ್ಗಿ ನಗರದಲ್ಲಿ ಗುಡುಗು, ಸಿಡಿಲಿನ ಆರ್ಭಟ ಜೋರಾಗಿತ್ತು.

ಬೀದರ್ ತಾಲ್ಲೂಕಿನಲ್ಲಿ ಒಂದು ಗಂಟೆ ಧಾರಾಕಾರ, ಹುಲಸೂರಿನಲ್ಲಿ ಸಾಧಾರಣ ಮಳೆಯಾಗಿದೆ. ಯಾದಗಿರಿ ತಾಲ್ಲೂಕಿನ ಸೈದಾಪುರ ಗ್ರಾಮ, ವಡಗೇರಾ ತಾಲ್ಲೂಕಿನಲ್ಲಿ ಧಾರಾಕಾರ ಮಳೆಯಾಯಿತು.

ಮೈಸೂರು ನಗರ ಹಾಗೂ ಜಿಲ್ಲೆಯ ನಂಜನಗೂಡು ಹಾಗೂ ತಿ.ನರಸೀಪುರ ತಾಲ್ಲೂಕುಗಳಲ್ಲಿ ಸೋಮವಾರ ತಡರಾತ್ರಿ ಗುಡುಗು, ಸಿಡಿಲು ಸಮೇತ ಧಾರಾಕಾರ ಮಳೆಯಾಗಿದೆ. ರಾತ್ರಿ 12.30ರಿಂದ ನಸುಕಿನವರೆಗೂ ಸುರಿಯಿತು.

ಬೆಳಗಾವಿ ಹಾಗೂ ಬಾಗಲಕೋಟೆ ಜಿಲ್ಲೆಗಳ ವಿವಿಧೆಡೆ ಮಂಗಳವಾರ ಗುಡುಗು ಸಹಿತ ಮಳೆಯಾಗಿದೆ. ಬಾಗಲಕೋಟೆ ಜಿಲ್ಲೆಯ ಕುಳಗೇರಿ ಹೋಬಳಿಯ ಸುತ್ತಮುತ್ತ ಭಾರಿ ಮಳೆಗೆ ಕೃಷಿ ಭೂಮಿಯಲ್ಲಿನ ಒಡ್ಡುಗಳು ಕಿತ್ತುಹೋಗಿವೆ.

ಸಿಡಿಲು ಬಡಿದು ಯುವಕ ಸಾವು

ಕೊಪ್ಪಳ: ಯಲಬುರ್ಗಾ ತಾಲ್ಲೂಕಿನ ಹಿರೇವಡ್ರಕಲ್ ಗ್ರಾಮದ ಯುವಕ ದ್ಯಾಮಣ್ಣ ದೊಡ್ಡಪ್ಪ ಪುರದ (20) ಸಿಡಿಲು ಬಡಿದು ಮಂಗಳವಾರ ಮೃತಪಟ್ಟಿದ್ದು, ಅವರ ತಾಯಿ ಬಸಮ್ಮ ಗಾಯಗೊಂಡಿದ್ದಾರೆ.

ಕೇಂದ್ರದಿಂದ ಪೂರೈಕೆಯಾಗದ ಲಸಿಕೆ • ಹಲವೆಡೆ ಡೋಸ್‌ಗಳು ಖಾಲಿ

ಲಸಿಕೆ ಕಾರ್ಯಕ್ರಮ ಮತ್ತೆ ಕುಂಠಿತ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಲಸಿಕೆಯ ಕೊರತೆಯಾಗಿರುವ ಕಾರಣ ದೇಶದ ಹಲವು ರಾಜ್ಯಗಳು, ತಮ್ಮಲ್ಲಿನ ಹಲವು ಕೇಂದ್ರಗಳಲ್ಲಿ ಲಸಿಕೆ ಕಾರ್ಯಕ್ರಮವನ್ನು ಸ್ಥಗಿತಗೊಳಿಸಿವೆ. ಅಲ್ಲದೆ, ಜುಲೈ ಮೊದಲ ವಾರದಲ್ಲಿ ಪ್ರತಿದಿನ ನೀಡಲಾಗುತ್ತಿರುವ ಸರಾಸರಿ ಲಸಿಕೆ ಡೋಸ್‌ಗಳ ಸಂಖ್ಯೆಯಲ್ಲೂ ಇಳಿಕೆಯಾಗಿದೆ.

ಉತ್ತರದ ಉತ್ತರ ಪ್ರದೇಶದಿಂದ ದಕ್ಷಿಣದ ತಮಿಳುನಾಡು ಮತ್ತು ಕೇರಳದವರೆಗೆ, ಪಶ್ಚಿಮದ ಗುಜರಾತ್ ಮತ್ತು ಮಹಾರಾಷ್ಟ್ರದಿಂದ ಪೂರ್ವದ ಪಶ್ಚಿಮ ಬಂಗಾಳ ಮತ್ತು ಈಶಾನ್ಯ ರಾಜ್ಯಗಳವರೆಗೆ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಡೋಸ್‌ಗಳ ಕೊರತೆ ಆರಂಭವಾಗಿದೆ. ಹಲವು ಲಸಿಕಾ ಕೇಂದ್ರಗಳನ್ನು ಸರ್ಕಾರಗಳು ಮುಚ್ಚಿವೆ.

ತಮಿಳುನಾಡಿಗೆ ಈವರೆಗೆ 1.58 ಕೋಟಿ ಡೋಸ್ ಲಸಿಕೆ ಪೂರೈಸಲಾಗಿದೆ. ಇದರಲ್ಲಿ ಬಹುತೇಕ ಎಲ್ಲಾ ಡೋಸ್‌ಗಳನ್ನು ಈಗಾಗಲೇ ನೀಡಲಾಗಿದೆ. ಈಗ ಲಸಿಕೆ ಇಲ್ಲದೇ ಇರುವ ಕಾರಣ ರಾಜ್ಯದ ಬಹುತೇಕ ಎಲ್ಲಾ ಲಸಿಕಾ ಕೇಂದ್ರಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಸತತ ಪೂರೈಕೆ ಇಲ್ಲದ ಕಾರಣ ಕೇರಳದ ಹಲವೆಡೆ ಲಸಿಕೆ ಕಾರ್ಯಕ್ರಮವನ್ನು ಸ್ಥಗಿತಗೊಳಿಸಲಾಗಿದೆ. ಹಲವರಿಗೆ ಅವಧಿ ಮೀರಿದರೂ, ಎರಡನೇ ಡೋಸ್ ಸಿಗದೇ ಇರುವ ಅಪಾಯ ಎದುರಾಗಿದೆ. ಸಾಕಷ್ಟು ಮಂದಿ, ಲಸಿಕೆ ಲಭ್ಯವಿರುವ ಪಕ್ಕದ ಜಿಲ್ಲೆಗಳಿಗೆ ಹೋಗಿ ಲಸಿಕೆ ಹಾಕಿಸಿಕೊಳ್ಳುತ್ತಿದ್ದಾರೆ.

ಉತ್ತರ ಪ್ರದೇಶದ ಪ್ರಯಾಗ್‌ರಾಜ್, ಗೌತಮ ಬುದ್ಧ ನಗರ ಜಿಲ್ಲೆಗಳಲ್ಲಿ ಲಸಿಕೆ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. 'ಲಸಿಕೆ ಕೊರತೆ ಇರುವ ಕಾರಣ ಪ್ರತಿದಿನ 10 ಲಕ್ಷ ಜನರಿಗೆ ಲಸಿಕೆ ನೀಡುವ ಗುರಿಯನ್ನು ತಲುಪಲು ಸಾಧ್ಯವಿಲ್ಲ. ಹೀಗೇ ಆದರೆ, ಡಿಸೆಂಬರ್ ಅಂತ್ಯದ ವೇಳೆಗೆ 18 ವರ್ಷ ಮೇಲ್ಪಟ್ಟ ರಾಜ್ಯದ ಎಲ್ಲಾ ಜನರಿಗೆ ಲಸಿಕೆ ನೀಡುವುದು ಸಾಧ್ಯವಿಲ್ಲ' ಎಂದು ಉತ್ತರ ಪ್ರದೇಶದ ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ಕಳವಳ ವ್ಯಕ್ತಪಡಿಸಿದ್ದಾರೆ.

ಕೊರೊನಾ ವೈರಸ್ ಮೂಲ ನೈಸರ್ಗಿಕ: ವರದಿ

ನವದೆಹಲಿ (ಪಿಟಿಐ): ಕೊರೊನಾ ವೈರಸ್ ಮೂಲ ನೈಸರ್ಗಿಕ ಎಂದು ವಿಜ್ಞಾನಿಗಳ ಗುಂಪೊಂದು ಪ್ರತಿಪಾದಿಸಿದೆ. ಚೀನಾದ ಪ್ರಯೋಗಾಲಯದಿಂದ ಕೊರೊನಾ ವೈರಸ್ ಸೋರಿಕೆಯಾಗಿದೆ ಎಂಬ ಸಿದ್ಧಾಂತವನ್ನು ಪುಷ್ಟೀಕರಿಸುವ ವೈಜ್ಞಾನಿಕ ಆಧಾರಗಳು ಇಲ್ಲ ಎಂದೂ ಈ ಗುಂಪು ಹೇಳಿದೆ.

ವಿಶ್ವದ 20ಕ್ಕೂ ಹೆಚ್ಚು ಜೀವವಿಜ್ಞಾನಿಗಳು, ಪರಿಸರ ವಿಜ್ಞಾನಿಗಳು, ಸಾಂಕ್ರಾಮಿಕ ರೋಗಶಾಸ್ತ್ರಜ್ಞರು, ವೈದ್ಯರು, ಸಾರ್ವಜನಿಕ ಆರೋಗ್ಯ ತಜ್ಞರು, ಪಶು ವೈದ್ಯರನ್ನು ಒಳಗೊಂಡ ಗುಂಪು ಈ ಕುರಿತು ಅಧ್ಯಯನ ನಡೆಸಿ ವರದಿಯೊಂದನ್ನು ಸಿದ್ಧಪಡಿಸಿದೆ. ವೈಜ್ಞಾನಿಕ ನಿಯತಕಾಲಿಕೆ 'ದಿ ಲ್ಯಾನ್ಸೆಟ್ ಜರ್ನಲ್'ನಲ್ಲಿ ಈ ಅಧ್ಯಯನ ವರದಿ ಪ್ರಕಟವಾಗಿದೆ.

ಇದೇ ವಿಜ್ಞಾನಿಗಳ ತಂಡವು ಕಳೆದ ವರ್ಷವೂ ದಿ ಲ್ಯಾನ್ಸೆಟ್‌ನಲ್ಲಿ ವರದಿ ಪ್ರಕಟಿಸಿತ್ತು. ಆಗಲೂ, ಕೊರೊನಾ ವೈರಸ್ ಪ್ರಯೋಗಾಲಯದಿಂದ ಸೋರಿಕೆಯಾಗಿದೆ ಎಂಬ ವಾದ ಪಿತೂರಿಯ ಭಾಗವಾಗಿದೆ ಎಂದು ಹೇಳಿತ್ತು.

'ವೈಜ್ಞಾನಿಕ ಸಾಹಿತ್ಯದಲ್ಲಿ ಹೊಸ, ವಿಶ್ವಾಸಾರ್ಹ ಮತ್ತು ತಜ್ಞರಿಂದ ಉನ್ನತ ಮಟ್ಟದಲ್ಲಿ ಪರಿಶೀಲನೆಗೆ ಒಳಗಾದ ಪುರಾವೆಗಳನ್ನು ಆಧರಿಸಿ, ಸೋಂಕು ನಿಸರ್ಗದಿಂದ ಪ್ರಸರಣವಾಗಿದೆ ಎಂದು ನಾವು ಬಲವಾಗಿ ನಂಬುತ್ತೇವೆ' ಎಂದು ವಿಜ್ಞಾನಿಗಳು ಹೇಳಿದ್ದಾರೆ.

'ಹೊಸ ವೈರಸ್‌ಗಳು ಎಲ್ಲಿ ಬೇಕಾದರೂ ಹುಟ್ಟಬಹುದು. ಮುಂದಿನ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ನಾವು ಸಿದ್ಧತೆಯಲ್ಲಿ ತೊಡಗಬೇಕು. ಇಂಥ ವಿಷಯಗಳ ಕುರಿತು ವಾದ-ಪ್ರತಿವಾದಗಳಲ್ಲಿ ನಿರತವಾಗುವ ಬದಲು ವೈಜ್ಞಾನಿಕ ಸಂಶೋಧನೆಯತ್ತ ಹೆಚ್ಚಿನ ಗಮನ ಕೊಡಬೇಕಾದ ಅಗತ್ಯವಿದೆ' ಎಂದಿದ್ದಾರೆ. 'ಕೊರೊನಾ ವೈರಸ್ ಉಗಮದ ಬಗ್ಗೆ ಇನ್ನಷ್ಟು ಆಳವಾದ ಸಂಶೋಧನೆಯನ್ನು ನಾವು ಸ್ವಾಗತಿಸುತ್ತೇವೆ' ಎಂದೂ ಹೇಳಿದ್ದಾರೆ.

ಬೋಸ್ಟನ್, ಮೇರಿಲ್ಯಾಂಡ್, ಗ್ಲಾಸ್ಗೊ, ಕ್ವೀನ್ಸ್‌ಲ್ಯಾಂಡ್ ವಿಶ್ವವಿದ್ಯಾಲಯಗಳ ತಜ್ಞರು ಸೇರಿದಂತೆ ಬ್ರಿಟನ್, ಜರ್ಮನಿ, ಅಮೆರಿಕದ ವಿಜ್ಞಾನಿಗಳನ್ನು ಈ ತಂಡ ಒಳಗೊಂಡಿದೆ.

ತಮಿಳುನಾಡು: ಕಪ್ಪು ಶಿಲೀಂಧ್ರಕ್ಕೆ 122 ಜನರ ಸಾವು

ಚೆನ್ನೈ (ಪಿಟಿಐ): ತಮಿಳುನಾಡಿನಲ್ಲಿ ಇದುವರೆಗೆ 3,300 ಕಪ್ಪು ಶಿಲೀಂಧ್ರ ಸೋಂಕಿನ ಪ್ರಕರಣಗಳು ಪತ್ತೆಯಾಗಿದ್ದು, ಇದರಿಂದ 122 ಜನರ ಸಾವು ಸಂಭವಿಸಿವೆ ಎಂದು ರಾಜ್ಯ ಆರೋಗ್ಯ ಸಚಿವ ಸುಬ್ರಮಣಿಯನ್ ಮಂಗಳವಾರ ತಿಳಿಸಿದ್ದಾರೆ.

ರಾಜ್ಯದಲ್ಲಿ ಈ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಮತ್ತು ಜಿಲ್ಲಾ ಕೇಂದ್ರ ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ವಿಶೇಷ ವಾರ್ಡ್‌ಗಳನ್ನು ತೆರೆಯಲಾಗಿದೆ ಎಂದು ಅವರು ಹೇಳಿದ್ದಾರೆ.

ಕೇರಳ: 6 ಜಿಲ್ಲೆಗಳಲ್ಲಿ ತಗ್ಗದ ಟಿಆರ್‌ಪಿ

ತಿರುವನಂತಪುರ (ಪಿಟಿಐ): ಲಾಕ್‌ಡೌನ್ ನಿರ್ಬಂಧಗಳ ನಡುವೆಯೂ ಕೋವಿಡ್ ದೃಢ ಪ್ರಮಾಣ (ಟಿಆರ್‌ಪಿ) ಕಡಿಮೆಯಾಗದ ಆರು ಜಿಲ್ಲೆಗಳಲ್ಲಿ ಪರೀಕ್ಷೆ, ಪ್ರತ್ಯೇಕವಾಸ, ಸೋಂಕಿತರ ಸಂಪರ್ಕಿತರನ್ನು ಪತ್ತೆ ಹಚ್ಚುವ ಕಾರ್ಯವನ್ನು ಹೆಚ್ಚಿಸಲು ಕೇರಳ ಸರ್ಕಾರ ಮಂಗಳವಾರ ನಿರ್ಧರಿಸಿದೆ.

ಆರೋಗ್ಯ ಸಚಿವೆ ವೀಣಾ ಜಾರ್ಜ್ ಅವರ ಅಧ್ಯಕ್ಷತೆಯಲ್ಲಿ ನಡೆದ, ಸೋಂಕು ದೃಢಪ್ರಮಾಣ ಹೆಚ್ಚಿರುವ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಆರೋಗ್ಯ ಅಧಿಕಾರಿಗಳು ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಅಂಕಿ-ಅಂಶಗಳ ಪ್ರಕಾರ, ತ್ರಿಶ್ಶೂರ್, ಕೋಯಿಕೋಡ್, ಮಲಪ್ಪುರಂ, ವಯನಾಡ್, ಕಣ್ಣೂರು ಮತ್ತು ಕಾಸರಗೋಡುಗಳಲ್ಲಿ ಕೋವಿಡ್ ದೃಢ ಪ್ರಮಾಣ ಹೆಚ್ಚಿದೆ.

32.40 ಲಕ್ಷ ಡೋಸ್ ಲಸಿಕೆ ನೀಡಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಮಂಗಳವಾರ 32.40 ಲಕ್ಷ ಡೋಸ್ ಕೋವಿಡ್ ಲಸಿಕೆ ನೀಡಲಾಗಿದ್ದು, ಇಲ್ಲಿಯವರೆಗೆ 36 ಕೋಟಿ ಡೋಸ್‌ಗಳನ್ನು ನೀಡಿದಂತಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಂಗಳವಾರ ತಿಳಿಸಿದೆ.

18ರಿಂದ 44 ವಯಸ್ಸಿನವರಿಗೆ ಇಲ್ಲಿಯವರೆಗೆ 10.45 ಕೋಟಿ ಡೋಸ್‌ಗಳ ಲಸಿಕೆ ನೀಡಲಾಗಿದೆ.

ಮಂಗಳವಾರ 18ರಿಂದ 44 ವಯಸ್ಸಿನ 16 ಲಕ್ಷ ಜನರಿಗೆ ಮೊದಲ ಡೋಸ್, 1 ಲಕ್ಷ ಜನರಿಗೆ ಎರಡನೇ ಡೋಸ್ ಲಸಿಕೆ ನೀಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

111 ದಿನಗಳಲ್ಲೇ ಅತ್ಯಂತ ಕಡಿಮೆ ಪ್ರಕರಣಗಳು ವರದಿ

ನವದೆಹಲಿ (ಪಿಟಿಐ): ದೇಶದಲ್ಲಿ ಕಳೆದ 24 ಗಂಟೆಗಳ ಅವಧಿಯಲ್ಲಿ 34,703 ಕೊರೊನಾ ವೈರಸ್ ಸೋಂಕು ಪ್ರಕರಣಗಳು ಪತ್ತೆಯಾಗಿವೆ. ಇದು 111 ದಿನಗಳಲ್ಲೇ ಅತಿ ಕಡಿಮೆ. ಇದರೊಂದಿಗೆ ದೇಶದ ಒಟ್ಟು ಕೋವಿಡ್ ಪ್ರಕರಣಗಳು 3,06,19,932ಕ್ಕೆ ತಲುಪಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಒಟ್ಟು 553 ಸಾವುಗಳು ವರದಿಯಾಗಿದೆ. ಹೀಗಾಗಿ ಒಟ್ಟು ಸಾವಿನ ಸಂಖ್ಯೆ 4,03,281ಕ್ಕೆ ಏರಿದೆ, ಇದು 91 ದಿನಗಳಲ್ಲೇ ಅತೀ ಕಡಿಮೆ ಸಾವಿನ ಪ್ರಮಾಣವಾಗಿದೆ.

ಸಕ್ರಿಯ ಪ್ರಕರಣಗಳು ಮತ್ತಷ್ಟು ಕುಸಿದಿದೆ. ಸದ್ಯ 4,64,357 ಸಕ್ರಿಯ ಪ್ರಕರಣಗಳಿವೆ. ಇದು 101 ದಿನಗಳಲ್ಲಿ ಅತ್ಯಂತ ಕಡಿಮೆ. 51,864 ಮಂದಿ ಆಸ್ಪತ್ರೆಗಳಿಂದ ಬಿಡುಗಡೆಯಾಗಿದ್ದಾರೆ.

ಕೋವಿಡ್ ಚೇತರಿಕೆ ದರವು ಶೇ 97.17ಕ್ಕೆ ಏರಿಕೆಯಾಗಿದೆ.

ಮಾನಸಿಕ ಆರೋಗ್ಯ ಕೇಂದ್ರಗಳಲ್ಲಿರುವವರಿಗೆ ಲಸಿಕೆ

ನವದೆಹಲಿ (ಪಿಟಿಐ): ಮಾನಸಿಕ ಆರೋಗ್ಯ ಕೇಂದ್ರಗಳಲ್ಲಿ ದಾಖಲಾಗಿರುವವರಿಗೆ ಕೊರೊನಾ ಸೋಂಕು ಪತ್ತೆಗೆ ಪರೀಕ್ಷೆ ನಡೆಸಲಾಗಿದೆಯೇ ಹಾಗೂ ಅವರಿಗೆ ಕೋವಿಡ್ ಲಸಿಕೆ ನೀಡಲು ಕ್ರಮಕೈಗೊಳ್ಳಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆ ಸುಪ್ರೀಂ ಕೋರ್ಟ್ ಮಂಗಳವಾರ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಮಾನಸಿಕ ಆರೋಗ್ಯ ಕೇಂದ್ರಗಳಲ್ಲಿ ದಾಖಲಾಗಿರುವವರಿಗೆ ಕೋವಿಡ್ ಪರೀಕ್ಷೆ ಕಡ್ಡಾಯಗೊಳಿಸಿದೆ.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಮುಏನೀ ವಿಭಾಗ ಸಂಖ್ಯೆ-2, ಬಬಲೇಶ್ವರ, ತಾ: ಬಬಲೇಶ್ವರ-586 113
ಜಿ: ವಿಜಯಪುರ, ಫೋನ್: 08355-283011, ಇ-ಮೇಲ್: eemli2babaleshwar@gmail.com
ಸಂಖ್ಯೆ: ಕೃಭಾಜನಿನಿ/ಎಮ್.ಎಲ್.ಐ/ವಿ.ಸಂ.2/ಯೋ.ಶಾ-4/ಎಸ್.ಸಿ.ಪಿ-ಟಿ.ಎಸ್.ಪಿ/2021-22/317 ದಿನಾಂಕ:29.06.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಮುಏನೀ ವಿಭಾಗ ನಂ.2, ಬಬಲೇಶ್ವರ ಇವರು ಈ ಕೆಳಗಿನ ಟೆಂಡರ್ ಇಂಡೆಂಟ್ ಕಾಮಗಾರಿಗಳಿಗಾಗಿ **ನೋಂದಾಯಿತ ಕೆ.ಪಿ.ಡಬ್ಲ್ಯೂ.ಡಿ-1,2,3 ಅಥವಾ ಕೆ.ಬಿ.ಜೆ.ಎನ್.ಎಲ್ ಕೆಟಗೆರಿ-3ನೇ ದರ್ಜೆ & ಮೇಲ್ಪಟ್ಟು ಗುತ್ತಿಗೆದಾರರು** ಇವರಿಂದ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಕೆಟಿಪಿಪಿ / ಸರ್ಕಾರಿ ಸುತ್ತೋಲೆ **ಸಂ.ಆಇ675 ವೆಚ್ಚ12/2020** ಬೆಂಗಳೂರು **ದಿನಾಂಕ 22.12.2020** ನಿಯಮರನ್ವಯ ಗುತ್ತಿಗೆದಾರರು ಇ.ಎಂ.ಡಿ ಘೋಷಣಾ ಪತ್ರವನ್ನು ಸಲ್ಲಿಸಿ, ದ್ವಿಪ್ರತಿಯಲ್ಲಿನ ಲಕೋಟಿಯಲ್ಲಿ ಟೆಂಡರನ್ನು ಸಲ್ಲಿಸುವದು. ಟೆಂಡರ್ ಪ್ಯಾರಾ-1.1 ರಲ್ಲಿ ಸೂಚಿಸಿರುವ ಅಗತ್ಯ ದಾಖಲೆಗಳನ್ನೊಳಗೊಂಡಿರುವ ಬಿಡ್‌ದಾರರ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.

ಸಾಮಾನ್ಯವರ್ಗ: 06 ಸಂಖ್ಯೆ ಕಾಮಗಾರಿಗಳು (ಇಂಡೆಂಟ್ ಸಂ.20297, 20298, 20136, 20137, 20648, 20649)
ಪರಿಶಿಷ್ಟ ಜಾತಿ: 02 ಕಾಮಗಾರಿಗಳು (ಇಂಡೆಂಟ್ ಸಂ.20135,20650)
ಪರಿಶಿಷ್ಟ ಪಂಗಡ: 01 ಕಾಮಗಾರಿ (ಇಂಡೆಂಟ್ ಸಂ.20134)

ಇ-ಟೆಂಡರ್‌ನಲ್ಲಿ ದಾಖಲಾತಿಗಳನ್ನು ಸ್ವೀಕರಿಸುವ ಹಾಗೂ ಸಲ್ಲಿಸುವ ವಿವರಗಳು
1) ಅರ್ಹ ಗುತ್ತಿಗೆದಾರರು ಇ-ಟೆಂಡರ್ ಮೂಲಕ ಪ್ರವೇಶ ಪಡಯುವ **ದಿನಾಂಕ 06.07.2021 ರಿಂದ 19.07.2021 ಸಾಯಂಕಾಲ 5.00 ಗಂಟೆಯವರೆಗೆ.** 3) ಲಕೋಟೆ (ತಾಂತ್ರಿಕ ಹಾಗೂ ಆರ್ಥಿಕ ಬಿಡ್) ನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಮುಏನೀ ವಿಭಾಗ ಸಂಖ್ಯೆ-2, ಬಬಲೇಶ್ವರ ಇವರ ಕಚೇರಿಯಲ್ಲಿ **ದಿನಾಂಕ: 22.07.2021 & 26.07.2021 ರ ಬೆಳಗ್ಗೆ 11.00 ಗಂಟೆಗೆ** ಕ್ರಮವಾಗಿ ತೆರೆಯಲಾಗುವುದು.

ಇಲೆಕ್ಟ್ರಾನಿಕ್ ಟೆಂಡರಿಂಗ್ ಕುರಿತು ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in/e-portal/lines.Seam ಕ್ಲಿಕ್ ಮಾಡಿ ಅಥವಾ KBJNL ವೆಬ್‌ಸೈಟ್ www.kbjnl.karnataka.gov.in ಮತ್ತು ಈ ಕೆಳಗಿನ ಅಧಿಕಾರಿಯ ಕಚೇರಿಯನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.
ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು,
ವಾಸಾಸಂಇ/ವಿಜಯಪುರ/152/ಜಿಎ/2021-22 ಕೃಭಾಜನಿನಿ, ಮುಏನೀ ವಿಭಾಗ ಸಂಖ್ಯೆ-2, ಬಬಲೇಶ್ವರ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ.
ಸಂಖ್ಯೆ:ಕಾ.ಇಂ:ಗ್ರಾಕುನೀ&ನೈವಿ:ಮಂ:SWMUTIPPER:2021-22/470
ದಿನಾಂಕ:02.07.2021.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:07/2021-22 (ದ್ವಿ-ಲಕೋಟೆ ಪದ್ಧತಿ) - (e-procurement portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರಿಂದ ಸ್ವಚ್ಛ ಭಾರತ ಮಿಷನ್(ಗ್ರಾಮೀಣ) ಯೋಜನೆಯಡಿ ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯತ್‌ಗಳಿಗೆ ಘನ ತ್ಯಾಜ್ಯ ನಿರ್ವಹಣೆ ಚಟುವಟಿಕೆಗಾಗಿ 33 ತ್ರಿ-ಚಕ್ರ ಆಟೋ ಟಿಪ್ಪರ್‌ಗಳನ್ನು ಖರೀದಿಸಲು ಉತ್ಪಾದಕರು/ವಿತರಕರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ : 17.07.2021 ಸಂಜೆ:5:30 ಗಂಟೆಗೆ,** ಪೂರ್ವಭಾವಿ ಸಭೆ **ದಿನಾಂಕ : 09.07.2021 ಬೆಳಿಗ್ಗೆ:11:00 ಗಂಟೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ : 20.07.2021 ಸಂಜೆ:05:35 ಗಂಟೆಗೆ.** ಆರ್ಥಿಕ ಬಿಡ್ ತೆರೆಯುವ **ದಿನಾಂಕ : 26.07.2021, ಬೆಳಿಗ್ಗೆ:11:00 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ https://eproc.karnataka.gov.in ವೆಬ್‌ಸೈಟ್‌ನಲ್ಲಿ ಅಥವಾ **ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ** ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ: 08232-222363.
ಸಹಿ/-ಕಾರ್ಯಪಾಲಕ ಇಂಜಿನಿಯರರು,
ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ.
DIPR/AD-MDY/MCA/183/2021-22

ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ನಂ.1, ಉನ್ನತ ಶಿಕ್ಷಣ ಸೌಧ, ಶೇಷಾದ್ರಿಪುರಂ ರಸ್ತೆ, ಬೆಂಗಳೂರು - 560001
ಫೋನ್ : 080 29701510 , ಇಮೇಲ್ : uucms.hed.kar.gov@gamil.com
ಸಂಖ್ಯೆ: ರಾಯೋನಿಫ:08:2021 **ದಿನಾಂಕ: 06/07/2021**

ಇ-ಟೆಂಡರ್ ಅಧಿಸೂಚನೆ

ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಈ ಕೆಳಕಂಡ ಸೇವೆಗಳನ್ನು ಪೂರೈಸುವ ಸಂಬಂಧ ಆಸಕ್ತ ಬಿಡ್‌ದಾರರಿಂದ ಇ-ಸಂಗ್ರಹಣೆ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಬಿಡ್‌ಗಳನ್ನು ಆಹ್ವಾನಿಸಿರುತ್ತಾರೆ.
"ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ (UUCMS) ಯೋಜನೆಗಾಗಿ ಬ್ಯಾಂಕಿಂಗ್ ಪಾಲುದಾರರನ್ನು ಆಯ್ಕೆ ಮಾಡಲು ಪ್ರಸ್ತಾವನೆಗೆ ಟೆಂಡರ್ ಆಹ್ವಾನ"
(ಟೆಂಡರ್ ಸಂಖ್ಯೆ: ಡಿಸಿಇ/2020-21/(UUCMS) ದಿ: 06/07/2021)
ಟೆಂಡರ್ ದಸ್ತಾವೇಜು ಮತ್ತು ಇತರ ವಿವರಗಳಿಗಾಗಿ https://eproc.karnataka.gov.in. ಅನ್ನು ಸಂಪರ್ಕಿಸಬಹುದಾಗಿದೆ.
ಪರಿಷ್ಕೃತ ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿದೆ

ಟೆಂಡರ್ ಸಂಖ್ಯೆ	ಇ-ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಅಪ್‌ಲೋಡ್ ಮಾಡುವ ದಿನಾಂಕ	ಪ್ರೀಬಿಡ್ ಸಭೆಯ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ
ಟೆಂಡರ್ ಸಂಖ್ಯೆ: ಡಿಸಿಇ/2021-22/(UUCMS) ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ (UUCMS) ಯೋಜನೆಗಾಗಿ ಬ್ಯಾಂಕಿಂಗ್ ಪಾಲುದಾರರನ್ನು ಆಯ್ಕೆ ಮಾಡಲು ಪ್ರಸ್ತಾವನೆಗೆ ಟೆಂಡರ್ ಆಹ್ವಾನ	06/07/2021	08/07/2021 at 3.00 PM	17/07/2021 5:00 PM	19/07/2021 11:00 AM

DIPR/DDU/R.O:757/ 2021-22
ಸಹಿ/-
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರು
ಬೆಂಗಳೂರು, ಕರ್ನಾಟಕ
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ-585105
ಪೋ.ನಂ 08472-278634/256944 Email:eerwssglb14@gmail.com
ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾ .ಶಾ /2021-22/662 ದಿನಾಂಕ: 05-07-2021

ಅಲ್ಪಾವಧಿ ಟೆಂಡರ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ) (ದ್ವಿಲಕೋಟೆಯಲ್ಲಿ)

ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ : **ಚಿಂಚೋಳಿ ತಾಲೂಕಿನ - 03 (Indent No27506, 31831 & 33375 2ನೇ ಕರೆ),** 2) ಟೆಂಡರಿಗಿಟ್ಟ ಮೊತ್ತ : ಕನಿಷ್ಠ : **58,14,886/-,** ಗರಿಷ್ಠ : **99,44,139/-,** 3) ಲೆಕ್ಕ ಶೀರ್ಷಿಕೆ : Jal Jeevan Mission 2020-21, 4) ಗುತ್ತಿಗೆದಾರರ ಅರ್ಹತೆ : 3ನೇ ದರ್ಜೆ ಗುತ್ತಿಗೆದಾರರು & ಮೇಲ್ಮಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ : **06-07-2021 ರಿಂದ 16-07-2021,** 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: ಇ-ಪ್ರೋಕ್ಯೂರಮೆಂಟ್ ಪ್ರಕಾರ, 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ : **16-7-2021 ಸಾಯಂಕಾಲ 4:00 ಗಂಟೆವರೆಗೆ,** 8) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : **17-07-2021 ಸಾಯಂಕಾಲ 4.01 ಗಂಟೆಗೆವೆರೆಗೆ,** 9) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ : **19-07-2021 ಬೆ. 11.00 ಗಂಟೆಯ ನಂತರ,** 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ, ಕುಸನೂರ ರೋಡ, ಕಲಬುರಗಿ, 11) ಅಂತರಜಾಲ ತಾಣದ ವಿಳಾಸ : **www.eproc.karnataka.gov.in**
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/401/ಎಂ.ಸಿ.&ಎ/2021-22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No : 08372-238782 Fax No. 08372-237268
E.Mail : eepwdgad@gmail.com
ನಂ:ಕಾನಿಇಂಗಃಲೋಇ:ಪಿಬಿ-:ವಿವಿಧ:2021-22/720 ದಿನಾಂಕ : 03-07-2021

ತಿದ್ದುಪಡಿ/ಮಾರ್ಪಡಿಸಿದ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ನಂ: 452 ದಿ:- 04-06-2021 ರಲ್ಲಿ ಗದಗ ವಿಭಾಗದ ಪ್ರಕಟಿಸಲಾದ ಟೆಂಡರ್ ಪ್ರಕಟಣೆಯು ಈ ಕೆಳಗಿನಂತೆ ತಿದ್ದುಪಡಿ/ ಮಾರ್ಪಡಿಸಿ ಟೆಂಡರ್ ಪ್ರಕಟಣೆ ಹೊಡಿಸಲಾಗಿದೆ. ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **1046.42** ಲಕ್ಷ ಮೊತ್ತದಲ್ಲಿ ಗದಗ ವಿಭಾಗದಡಿ ಬರುವ ಗದಗ, ರೋಣ, ಮುಂಡರಗಿ, ಶಿರಹಟ್ಟಿ ಹಾಗೂ ನರಗುಂದ ತಾಲೂಕಿನ ಒಟ್ಟು **82** ಕಾಮಗಾರಿಗಳಿಗೆ (ಕನಿಷ್ಟ ಮೊತ್ತ ರೂ: **5.16** ಲಕ್ಷ ಗರಿಷ್ಠ ಮೊತ್ತ ರೂ: **41.16** ಲಕ್ಷ) ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಇ- ಪ್ರೊಕ್ಯೂರಮೆಂಟ್ (E- Procurement) ಸ್ಟ್ಯಾಂಡರ್ಡ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ-1, ಹಾಗೂ 2 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.eproc.karnataka.gov.in/ ದಲ್ಲಿ ನೋಡಿಕೊಳ್ಳಬಹುದು.

ಒಟ್ಟು 82 ಕಾಮಗಾರಿಗಳ ಪೈಕಿ 61 ಕಾಮಗಾರಿಗಳು ಸಾಮಾನ್ಯ ವರ್ಗದವರಿಗೆ, 13 ಕಾಮಗಾರಿಗಳು ಪರಿಶಿಷ್ಟ ಜಾತಿ ಹಾಗೂ 08 ಕಾಮಗಾರಿಗಳು ಪರಿಶಿಷ್ಟ ಪಂಗಡದವರಿಗೆ ಮಿಸಲಿರಿಸಲಾಗಿದೆ.

ಮೇಲಿನ ಕಾಮಗಾರಿಗಳಿಗೆ ಟೆಂಡರ ವಿವರ ಪಶ್ನೋತ್ತರ ದಿನಾಂಕ : **17-07-2021,** ಟೆಂಡರ್ ಸಲ್ಲಿಸುವ ದಿನಾಂಕ : **20-07-2021** ಆರ್ಥಿಕ ಬಿಡ್ ತೆರೆಯುವ ದಿನಾಂಕ : **22-07-2021**

GST of 12% shall be added separately in the estimate as per Govt. Letter No PWD 65 RDF 2017, dated 11-10-2018. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಅನುಸೂಚಿತ ಜಾತಿ ಮತ್ತು ಪಂಗಡಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಗದಗ
ವಾಸಾಸಂಇ/ಗದಗ/ಎಂ.ಸಿ.ಎ/152/2021-22

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.7, ಹಿರಿಯೂರು ಕ್ಯಾಂಪ್, ಚಿತ್ರದುರ್ಗ.
Ph/Fax: 08194-220500 E-Mail: ubpee07@gmail.com
ಸಂ.: ಕಾಇಂ/ವಿಜನಿನಿ/ಭಮೇಯೋ/ವಿ.ನಂ.07/ಹಿ/ಕ್ಯಾಂ.ಚಿ/2021-22/16
ದಿನಾಂಕ: 01.07.2021

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.7, ಹಿರಿಯೂರು, ಕ್ಯಾಂಪ್: ಚಿತ್ರದುರ್ಗರವರು ಶೇಕಡಾವಾರು ಟೆಂಡರ್‌ನ್ನು ಭದ್ರಾ ಮೇಲ್ದಂಡೆ ಯೋಜನೆಯ ಲೆಕ್ಕಶೀರ್ಷಿಕೆ 4701-ಕ್ಯಾಪಿಟಲ್ ಹೆಡ್ ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನ http://www.eproc.karnataka.gov.in ವೆಬ್‌ಸೈಟ್‌ನಿಂದ ಖಾಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ದಿನಾಂಕ: 13.07.2021ರ ಸಂಜೆ 16:30 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಅಥವಾ ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ಸಮಯದಲ್ಲಿ ದೂರವಾಣಿ ಸಂಖ್ಯೆ: 08194-220500ರಲ್ಲಿ ಸಂಪರ್ಕಿಸಬಹುದು. ಸ್ವೀಕೃತ ಟೆಂಡರ್‌ಗಳ ಆರ್ಥಿಕ ಬಿಡ್‌ನ್ನು ಇ-ಪೋರ್ಟಲ್‌ನಲ್ಲಿ ದಿನಾಂಕ: 15.07.2021ರ 11:00 ಗಂಟೆಯ ನಂತರ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.07, ಹಿರಿಯೂರು ಕ್ಯಾಂಪ್: ಚಿತ್ರದುರ್ಗರವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಕಾಮಗಾರಿಯ ವಿವರ ಈ ಕೆಳಕಂಡಂತಿದೆ: (1) Shifting of Existing 400 KV KPTCL Power line Coming across the Chitradurga Branch canal at CH-82.865 in Goguddu Village, Hiriyur Taluk in Chitradurga District. **(VJNL/2020-21/BB/WORK_INDENT1532/Call-3).** ಕಾಮಗಾರಿಯ ಮೊತ್ತ: ರೂ. 2,02,17,840.44
RO No. 242: DIPR/CTA/MCA/2021-22 ಸಹಿ/- ಕಾರ್ಯಪಾಲಕ ಇಂಜಿನಿಯರ್

ಕಾರ್ಯನಿರ್ವಾಹಕ ಇಂಜನೀಯರ್
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ, ಕೋಲಾರ-563101.
e-mail: eeklr@kpwd.gov.in, Website: www.kpwd.gov.in
ದೂರವಾಣಿ ಸಂಖ್ಯೆ: 08152-222022, ಫ್ಯಾಕ್ಸ್ ಸಂಖ್ಯೆ: 08152-227443
ಅಲ್ಪಾವಧಿ ಟೆಂಡರ್ ಅಧಿಸೂಚನೆ ಸಂಖ್ಯೆ: 105/2020-21 ದಿನಾಂಕ: 05.07.2021

ಇ-ಟೆಂಡರ್ ಪ್ರಕಟಣೆ-ಕೆಡಬ್ಲ್ಯೂ-1:2

ಕೋಲಾರ ಲೋಕೋಪಯೋಗಿ ಇಲಾಖೆ ವಿಭಾಗ ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 2059- ನ್ಯಾಯಾಂಗ ಕಟ್ಟಡಗಳ ದುರಸ್ತಿ ಅಡಿಯಲ್ಲಿ ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ **ಮೊತ್ತ: ಕನಿಷ್ಠ ರೂ. 5.00 ಲಕ್ಷಗಳು ಗರಿಷ್ಠ: ರೂ. 21.60 ಲಕ್ಷಗಳು** ಇ.ಎಂ.ಡಿ ಮೊತ್ತ: **ಸರ್ಕಾರದ ಆದೇಶದಂತೆ** ವಿನಾಯಿತಿ ನೀಡಲಾಗಿದೆ. (EMD Declaration ನಮೂನೆಯನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು) ಕಾಲಾವಧಿ: **2-3 ತಿಂಗಳು** ನಿರ್ವಹಿಸಲು ನೋಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯೂ-1:2ರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (Viz http://eproc.karnataka.gov.in)ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **ದಿನಾಂಕ: 22.07.2021ರಂದು ಸಂಜೆ 16:00 ಗಂಟೆ** ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು **ದಿನಾಂಕ: 23.07.2021 ರಂದು ಸಂಜೆ 16:30 ಗಂಟೆಯ** ನಂತರ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ Viz http://eproc.karnataka.gov.in ನಲ್ಲಿ ಅಥವಾ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಸಂಪರ್ಕಿಸಿ ಪಡೆಯಹುದಾಗಿದೆ.
ಸಹಿ/-
ಕಾರ್ಯನಿರ್ವಾಹಕ ಇಂಜನೀಯರ್,
ವಾಸಾಸಂಇ/ಕೋಲಾರ/ಜಿಎ/128/2021-22 ಲೋ.ಇ, ವಿಭಾಗ ಕೋಲಾರ.
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ, ಕ.ನೀ.ನಿ.ನಿ., ಘಟಬಂಕಾನಿ ವಿಭಾಗ ನಂ. 2, ಹಿಡಕಲ್ ಡ್ಯಾಂ, ತಾಲೂಕು ಹುಕ್ಕೇರಿ, ಜಿಲ್ಲೆ ಬೆಳಗಾವಿ. ದೂ.: 08333-263242
ಫ್ಯಾಕ್ಸ್ : 08333-263405, ಇ-ಮೇಲ್ : eegrbc2@gmail.com/yahoo.com
Postal Index Number (PIN) : 591107
ಸಂ.ಕಾಇಂ/ಕನೀನಿನಿ/ಘಬದಂಕಾನಿ ನಂ.2/ಡಿಬಿ/ದರವಿಚಾರಣೆ/21-22/631 ದಿನಾಂಕ: 29-06-2021

ದರ ವಿಚಾರಣೆ ಅಧಿಸೂಚನೆ

ಕೆಳಗೆ ಸಹಿ ಮಾಡಿದ ಕಾರ್ಯಪಾಲಕ ಅಭಿಯಂತರವರ ಕಛೇರಿ, ಕ.ನೀ.ನಿ.ನಿ., ಘಟಬಂಕಾನಿ ವಿಭಾಗ ನಂ.2, ಹಿಡಕಲ್ ಡ್ಯಾಂ - 591 107 ಇವರು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಾಲ್ಕನೇ ಮಹಡಿ ಕಾಫಿ ಬೋರ್ಡ್ ಕಟ್ಟಡ, ಡಾ. ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - 560 001. ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳ ಅಂದಾಜು ಪತ್ರಿಕೆಗಳಲ್ಲಿ ದರಗಳನ್ನು ಅಳವಡಿಸಿಕೊಳ್ಳುವ ಸಲುವಾಗಿ ಮೂಲ ದರ ಹಾಗೂ ಜಿ.ಎಸ್.ಟಿ. ಪ್ರತ್ಯೇಕವಾಗಿ ದರಗಳನ್ನು ನಮೂದಿಸಿದ ಮೊಹರಬಂದ ಮಾಡಿದ ಲಕೋಟೆಯಲ್ಲಿ ಸ್ಪರ್ಧಾತ್ಮಕ ದರಗಳನ್ನು ಆಹ್ವಾನಿಸಿ. ಈ ದರ ವಿಚಾರಣೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.

1) Name of Work : Consultancy Services for Preparation of Details Project Report of Brundavan Garden Development at Hidkal Dam.

ಆಸಕ್ತಿಯುಳ್ಳ ಅರ್ಹತೆ ಹೊಂದಿದ ನೊಂದಾಯಿತ ಪಟ್ಟಿಯಲ್ಲಿ ಇರುವ ಕನ್ಸಲ್ಟಂಟ್ ಸರ್ವೆ ಗುತ್ತಿಗೆದಾರರು ಪ್ರತ್ಯೇಕವಾಗಿ ದಿನಾಂಕ : 10-07-2021 ರ ಸಂಜೆ 4.00 ಗಂಟೆಯೊಳಗಾಗಿ ಅಂಚೆ ಮೂಲಕವಾಗಲಿ ಅಥವಾ ಖುದ್ದಾಗಿಯಾಗಲಿ ಮೇಲಿನ ವಿಳಾಸದ ಕಛೇರಿಗೆ ತಲುಪುವಂತೆ ಕಳುಸಹಿಕೊಡಲು ಈ ಮೂಲಕ ಕೋರಲಾಗಿದೆ. ದರ ಕೋರಿರುವ ವಿವರಗಳನ್ನೊಂಡ ಪಟ್ಟಿಯ ನಮೂನೆಯು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಸಿಬಿಸಿ ಉಪ ವಿಭಾಗ, ನಂ. 2, ಹಿಡಕಲ್ ಡ್ಯಾಂ, ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಹಿಡಕಲ್ ಡ್ಯಾಂ ಇವರ ಕಛೇರಿಯಲ್ಲಿ ಲಭ್ಯವಿರುವುದು. ಸದರಿ ವಿಶಿಷ್ಟ ವಿವರಣೆಗಳನ್ನು ಕಛೇರಿಯಿಂದ ಪಡೆದು ದರಗಳನ್ನು ಸಲ್ಲಿಸುವುದು. ಹೆಚ್ಚಿನ ವಾಹಿತಿಯನ್ನು ಕೆಳಗೆ ಸಹಿ ಮಾಡಿದವರನ್ನು ಮತ್ತು ಮೇಲೆ ತಿಳಿಸಲಾದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ರವರನ್ನು ಕಛೇರಿ ವೇಳೆಯಲ್ಲಿ ಖುದ್ದಾಗಿಯಾಗಲಿ ಅಥವಾ ದೂರವಾಣಿ ಸಂ.: 08333-263242 ಮುಖಾಂತರವಾಗಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ಹಾಗೂ ದರಗಳನ್ನು ಮೇಲೆ ತಿಳಿಸಲಾದ ಈ ಕಛೇರಿಯ ಇಮೇಲ್ ಮುಖಾಂತರ ಸಹ ನಿಗಧಿತ ದಿನಾಂಕದೊಳಗೆ ಸಲ್ಲಿಸಬಹುದಾಗಿದೆ.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕ.ನೀ.ನಿ.ನಿ., ಘಟಬಂಕಾನಿ, ವಿಭಾಗ ನಂ. 2,
ಹಿಡಕಲ್ ಡ್ಯಾಂ.
ಡಿಐಪಿಆರ್/ಬೆಳಗಾವಿ/335/ಮಣಿಪಾಲ್/2021-22

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ಫೆಡರೇಶನ್ ಹೌಸ್, ಎಫ್.ಕೆ.ಸಿ.ಸಿ.ಐ, ಕಟ್ಟಡ, ಫೆಡರೇಶನ್ ಹೌಸ್, 3 ನೇ ಮಹಡಿ. ಕೆ.ಜಿ. ರಸ್ತೆ, ಬೆಂಗಳೂರು.560009. ದೂರವಾಣಿ: 080-22352044, ಇ-ಮೇಲ್-kbada6666@gmail.com
ಸಂ.: ಕಗಪ್ರಅಪ್ರಾ/ಆ/2021-22 ದಿನಾಂಕ: 05.07.2021
ದಿನಾಂಕ: **10.06.2021** ರಂದು ಪ್ರಾಧಿಕಾರವು ಅರ್ಹ ಕನ್ನಡ ಸರ್ಕಾರಿ ಶಾಲೆ / ಖಾಸಗಿ ಶಾಲೆ / ಕನ್ನಡಪರ ಸಂಘ / ಸಂಸ್ಥೆಗಳಿಂದ ಮತ್ತು ವ್ಯಕ್ತಿಗಳಿಂದ ಆಹ್ವಾನಿಸಲಾದ ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ್ದ ಕೊನೆಯ ದಿನಾಂಕ: **05.07.2021**ನ್ನು **20.07.2021**ರವರೆಗೆ ವಿಸ್ತರಿಸಲಾಗಿದೆ.
ಸಹಿ/-
ಕಾರ್ಯದರ್ಶಿ
ವಾಸಾಸಂಇ/ಬೆಂನ/754/ಅಲಕನಂದ/2021-22 ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ
ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಬಿ/ಗುತ್ತಿಗೆ/4202/2021-22/840
ದಿನಾಂಕ : 05-07-2021

ಇ-ಟೆಂಡರ್ ಪ್ರಕಟಣೆ

ದಿನಾಂಕ : 05-07-2021ರಂದು ಇ-ಪ್ರಕ್ಯೂರ್‌ಮೆಂಟ್ ಮೂಲಕ, ಕಾಮಗಾರಿ ಇಂಡೆಂಟ್ ಸಂಖ್ಯೆ 137064ರ ಕಾಮಗಾರಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಇ-ಪ್ರಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **19-07-2021** (ಸಾಯಂಕಾಲ 4.00 ಗಂಟೆಯುವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ **http://www.eproc.karnataka.gov.in** ನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/- (ಸತೀಶ.ಹೆಚ್.ಜಹಾಗೀರದಾರ)
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ,
ವಾಸಾಸಂಇ/ಹಾವೇರಿ/ಎಂಸಿಎ/138/2021-22 ಹಾವೇರಿ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು-570 022.
ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ-ಪ್ರೊಕ್ಯೂರ್‌ಮೆಂಟ್
ಅಲ್ಪಾವಧಿ ಟೆಂಡರ್ ಪ್ರಕಟಣೆ

ಇ-ಟೆಂಡರ್ ಪ್ರಕಟಣೆ ಸಂಖ್ಯೆ.09/2021-22 ದಿ:30.06.2021

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ ಕಾಮಗಾರಿ ಮೊತ್ತದನ್ವಯ 3ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು ಟೆಂಡರ್ ನಮೂನೆ **KW-2&4** ರೀತ್ಯಾ (ದ್ವಿ ಲಕೋಟೆ ಪದ್ಧತಿಯಂತೆ) ಮೈಸೂರು ತಾಲ್ಲೂಕಿನ ಒಟ್ಟು 1 ಕಾಮಗಾರಿ, ಟಿ.ನರಸೀಪುರ ತಾಲ್ಲೂಕಿನ 3 ಕಾಮಗಾರಿ ಮತ್ತು ಹೆಚ್.ಡಿ.ಕೋಟೆ ತಾಲ್ಲೂಕಿನ 1 ಕಾಮಗಾರಿಗೆ **(ಟೆಂಡರ್‌ಗಿಟ್ಟ ಮೊತ್ತ ರೂ. 151.36 ಲಕ್ಷಗಳಿಂದ ರೂ. 20.91 ಲಕ್ಷದವರೆಗೆ)** ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ **ದಿನಾಂಕ: 01.07.2021 ರಿಂದ 12.07.2021 ಸಂಜೆ 4.00 ಘಂಟೆಯವರೆಗೆ** ಸಾಧ್ಯವಾದರೆ ಟೆಂಡರ್ ತೆರೆಯುವ **ದಿನಾಂಕ: 13.07.2021 ರ ಸಂಜೆ 5.00 ಘಂಟೆಯ** ನಂತರ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ **(e-procurement portal)** ವೆಬ್ ಸೈಟ್‌ನಲ್ಲಿ ಪಡೆಯಬಹುದು. **https://eprockarnataka.gov.in** ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (**ಫೋನ್ ನಂ.0821-2460495**) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/-ಕಾರ್ಯಪಾಲಕ ಅಭಿಯಂತರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಮೈಸೂರು.
DIPR/DD-MYS/MCA/259/2021-22

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)
ಕರ್ನಾಟಕ ಸರ್ಕಾರದ ಸಚಿವಾಲಯ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001. ಫೋನ್: 080-22866340
ಇ-ಮೇಲ್: ds-dparjansp@karnataka.gov.in ವೆಬ್‌ಸೈಟ್: https://janaspandana.karnataka.gov.in
ಸಂಖ್ಯೆ: ಸಿಆಸುಇ/288/ಆರ್‌ಟಿಐ/2020 ದಿನಾಂಕ: 06-07-2021

ಅಧಿಸೂಚನೆ

ವಿಷಯ: ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು ಮತ್ತು ಕರ್ನಾಟಕ ಮಾಹಿತಿ ಆಯೋಗ, ಕಲಬುರಗಿ ಪೀಠ ಇಲ್ಲಿ ಖಾಲಿಯಿರುವ ಮಾಹಿತಿ ಆಯುಕ್ತರುಗಳ ನೇಮಕಾತಿ ಬಗ್ಗೆ.

ಕರ್ನಾಟಕ ಮಾಹಿತಿ ಆಯೋಗವನ್ನು ಮಾಹಿತಿ ಹಕ್ಕು ಅಧಿನಿಯಮ, 2005 ರಡಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಲು ಕರ್ನಾಟಕ ಸರ್ಕಾರವು ರಚಿಸಿದೆ. ಕರ್ನಾಟಕ ಮಾಹಿತಿ ಆಯೋಗದ ಈಗಿನ ಸಂರಚನೆಯನ್ನು **www.kic.gov.in** ಇಲ್ಲಿ ನೋಡಬಹುದಾಗಿದೆ. ಕರ್ನಾಟಕ ಮಾಹಿತಿ ಆಯೋಗದ ಮಾಹಿತಿ ಆಯುಕ್ತರ ಅಧಿಕಾರ ಮತ್ತು ಕರ್ತವ್ಯಗಳು ಮಾಹಿತಿ ಹಕ್ಕು ಅಧಿನಿಯಮ, 2005 ರ ಅಧ್ಯಾಯ-V ರನ್ವಯ ಇರುತ್ತವೆ.
ಕರ್ನಾಟಕ ಮಾಹಿತಿ ಆಯೋಗದಲ್ಲಿ ಖಾಲಿಯಿರುವ ಮೂರು ಮಾಹಿತಿ ಆಯುಕ್ತರ ಹುದ್ದೆಗಳನ್ನು ಭರ್ತಿ ಮಾಡಲು ಉದ್ದೇಶಿಸಲಾಗಿದೆ. (ಒಂದು ಹುದ್ದೆ ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠಕ್ಕೆ ಹಾಗೂ ಎರಡು ಹುದ್ದೆಗಳು ಕರ್ನಾಟಕ ಮಾಹಿತಿ ಆಯೋಗ ಬೆಂಗಳೂರು ಇಲ್ಲಿಗೆ).
ಮಾಹಿತಿ ಹಕ್ಕು ಕಾಯ್ದೆ, 2005 ರ ಅಧ್ಯಾಯ-IV ರನ್ವಯ ಕಾನೂನು, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜ ಸೇವೆ, ನಿರ್ವಹಣೆ (ಮ್ಯಾನೇಜ್‌ಮೆಂಟ್), ಪತ್ರಿಕೋದ್ಯಮ, ಸಮೂಹ ಮಾಧ್ಯಮ ಅಥವಾ ಆಡಳಿತ (ಅಡ್ಮಿನಿಸ್ಟ್ರೇಷನ್ ಮತ್ತು ಗವರ್ನೆನ್ಸ್) ನಲ್ಲಿ ವಿಶಾಲ ತಿಳುವಳಿಕೆ ಮತ್ತು ಅನುಭವ ಹೊಂದಿರುವ ಹಾಗೂ ಸಾರ್ವಜನಿಕ ಜೀವನದಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಗಳನ್ನು ಮಾಹಿತಿ ಆಯುಕ್ತರನ್ನಾಗಿ ನೇಮಕಾತಿ ಮಾಡಲು ಅವಕಾಶವಿದೆ.
ಮಾಹಿತಿ ಆಯುಕ್ತರು ಸಂಸತ್ ಸದಸ್ಯರಾಗಲೀ ಅಥವಾ ಯಾವುದೇ ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ವಿಧಾನಮಂಡಲದ ಸದಸ್ಯರಾಗಿರತಕ್ಕದ್ದಲ್ಲ ಅಥವಾ ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರತಕ್ಕದ್ದಲ್ಲ ಅಥವಾ ಯಾವುದೇ ರಾಜಕೀಯ ಪಕ್ಷದೊಂದಿಗೆ ಸಂಪರ್ಕ ಹೊಂದಿರತಕ್ಕದ್ದಲ್ಲ ಅಥವಾ ಯಾವುದೇ ವ್ಯಾಪಾರ ವ್ಯವಹಾರವನ್ನಾಗಲೀ ಅಥವಾ ಯಾವುದೇ ವೃತ್ತಿಯನ್ನು ಮಾಡತಕ್ಕದ್ದಲ್ಲ.
ಮಾಹಿತಿ ಆಯುಕ್ತರ ಪದಾವಧಿ ಮತ್ತು ಸೇವಾ ಷರತ್ತುಗಳು ಮಾಹಿತಿ ಹಕ್ಕು (ಕೇಂದ್ರ ಮಾಹಿತಿ ಆಯೋಗದ ಮುಖ್ಯ ಮಾಹಿತಿ ಆಯುಕ್ತರ ಹಾಗೂ ಮಾಹಿತಿ ಆಯುಕ್ತರುಗಳ, ರಾಜ್ಯ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಹಾಗೂ ರಾಜ್ಯ ಮಾಹಿತಿ ಆಯುಕ್ತರುಗಳ ಪದಾವಧಿ, ವೇತನಗಳು, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ಹಾಗೂ ನಿಬಂಧನೆಗಳು) ನಿಯಮಗಳು, 2019 ನ್ನು ಓದಿಕೊಂಡು ಮಾಹಿತಿ ಹಕ್ಕು ಅಧಿನಿಯಮ 2005 ರ ಪ್ರಕರಣ 16(2) ರಡಿಯಲ್ಲಿ ಹಾಗೂ ಸದರಿ ಅಧಿನಿಯಮದ ಅಡಿಯಲ್ಲಿ ಕಾಲಕಾಲಕ್ಕೆ ಹೊರಡಿಸಲಾದ ಯಾವುದೇ ಅಧಿಸೂಚನೆಗಳು, ನಿಯಮಗಳು ಮತ್ತು ತಿದ್ದುಪಡಿಗಳಡಿಯಲ್ಲಿ ಉಪಬಂಧಿಸಿದಂತೆ ಇರತಕ್ಕದ್ದು. ಅಭ್ಯರ್ಥಿಗಳು ಕರ್ನಾಟಕದ ಯಾವುದೇ ಭಾಗದಲ್ಲಿ ಸೇವೆ ಸಲ್ಲಿಸುವುದಕ್ಕೆ ಸಿದ್ಧರಿರಬೇಕು. ಆಯ್ಕೆಗೊಂಡ ಅಭ್ಯರ್ಥಿಗಳು ಘನತೆವೆತ್ತ ರಾಜ್ಯಪಾಲರು ನಿಗದಿಪಡಿಸಿದ ದಿನಾಂಕದಂದು ಪ್ರಮಾಣವಚನ ಸ್ವೀಕರಿಸಲು ಸಿದ್ಧರಿರಬೇಕು.
ಮಾಹಿತಿ ಆಯುಕ್ತರಾಗಿ ನೇಮಕಾತಿ ಹೊಂದಲು ನಿಗದಿತ ಮಾನದಂಡಗಳನ್ನು ಪೂರೈಸಿರುವವರು ಮತ್ತು ನೇಮಕಗೊಳ್ಳಲು ಆಸಕ್ತರಾದವರು ತಮ್ಮ ವೈಯಕ್ತಿಕ ವಿವರಗಳನ್ನು ಈ ಅಧಿಸೂಚನೆಗೆ ಲಗತ್ತಿಸಿರುವ ನಮೂನೆಯಲ್ಲಿ ಅಂಚೆ ಮೂಲಕ ಅಥವಾ ಖುದ್ದಾಗಿ **ಸರ್ಕಾರದ ಅಧೀನ ಕಾರ್ಯದರ್ಶಿ-1, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಜನಸ್ಪಂದನ), 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - 560001** ಇವರಿಗೆ ವಿಳಾಸಿಸಿ **ದಿನಾಂಕ: 04-08-2021ರ ಸಂಜೆ 5.30 ಗಂಟೆಯೊಳಗೆ** ಸಲ್ಲಿಸಬಹುದಾಗಿದೆ. ಕೇಂದ್ರ / ರಾಜ್ಯ ಸರ್ಕಾರದಲ್ಲಿ ಅಥವಾ ಯಾವುದೇ ಇತರೆ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವವರು ತಮ್ಮ ವಿವರಗಳನ್ನು ಸಮುಚಿತ ಮಾರ್ಗದ ಮೂಲಕ ನಿಗದಿತ ನಮೂನೆಯಲ್ಲಿ ಸಲ್ಲಿಸಬಹುದಾಗಿದೆ.
ಸಹಿ/- (ಆರ್.ಪುಟ್ಟರಾಮು)
ಸರ್ಕಾರದ ಅಧೀನ ಕಾರ್ಯದರ್ಶಿ-1
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಜನಸ್ಪಂದನ), ದೂ.ಸಂ.: 080-22033174

ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು ಮತ್ತು ಕಲಬುರಗಿ ಪೀಠ ಇಲ್ಲಿ ಖಾಲಿಯಿರುವ ಮಾಹಿತಿ ಆಯುಕ್ತರ ನೇಮಕಾತಿಗಾಗಿ ಅರ್ಜಿ ನಮೂನೆ

1) ಹೆಸರು :
2) ಹುಟ್ಟಿದ ದಿನಾಂಕ :
3) ಲಿಂಗ (ಸ್ತ್ರೀ/ಪುರುಷ) :
4) ಪರಿಶಿಷ್ಟ ಜಾತಿ / ಪಂಗಡಕ್ಕೆ ಸೇರಿದವರೇ :
5) ಅಂಚೆ ವಿಳಾಸ :
6) ಕನ್ನಡ ಭಾಷೆಯ ನೈಪುಣ್ಯತೆ (ಓದಲು, ಬರೆಯಲು ಮತ್ತು ಮಾತನಾಡಲು) :
7) ದೂರವಾಣಿ ಸಂಖ್ಯೆ :
ಮೊಬೈಲ್ ಸಂಖ್ಯೆ :
ಫ್ಯಾಕ್ಸ್ ಸಂಖ್ಯೆ :
8) ಇ-ಮೇಲ್ ವಿಳಾಸ :
9) ಶೈಕ್ಷಣಿಕ ಅರ್ಹತೆ :
10) ಪರಿಣಿತಿ ಹೊಂದಿರುವ ಕ್ಷೇತ್ರ :
11) ಪ್ರಸ್ತುತ ಉದ್ಯೋಗ :
12) ಸಾಧನೆಗಳು / ಉದ್ಯೋಗದ ಅನುಭವ (ಒಂದು ಪುಟಕ್ಕೆ ಮೀರದಂತೆ) :

ಸ್ವಯಂ ದೃಢೀಕರಿಸಿದ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸುವುದು.

ದಿನಾಂಕ: ಸಹಿ/-
ಸ್ಥಳ :
ವಾಸಾಸಂಇ/ಬೆಂ.ನ/ಅಡ್ವರ್ಟೋ/759/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸುಭಾಷಿತ

ಒಬ್ಬರ ತಪ್ಪನ್ನು ಎತ್ತಿ ಆಡುವುದರಿಂದ ನೀವು ಅವರಿಗೆ ಯಾವುದೇ ಸಹಾಯ ಮಾಡಿದಂತೆ ಆಗುವುದಿಲ್ಲ. ಅದರಿಂದ ಅವರಿಗೆ ಹಾನಿಯುಂಟು ಮಾಡುತ್ತೀರಿ, ಜೊತೆಗೆ ನಿಮಗೆ ನೀವೇ ಹಾನಿ ಮಾಡಿಕೊಳ್ಳುತ್ತೀರಿ.

-ಸ್ವಾಮಿ ವಿವೇಕಾನಂದ

ಸ್ಟ್ಯಾನ್ ಸ್ವಾಮಿ ಸಾವು ಒಂದು ಅಮಾನವೀಯ ಅಧ್ಯಾಯ

ಎಲ್ಗಾರ್ ಪರಿಷತ್ ಸಭೆ, ಭೀಮಾ ಕೋರೆಗಾಂವ್ ಹಿಂಸಾಚಾರ ಪ್ರಕರಣದಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಂಧಿಸಿದ್ದ, 84 ವರ್ಷ ವಯಸ್ಸಿನ ಸ್ಟ್ಯಾನ್ ಸ್ವಾಮಿ ಅವರು ಸಾವನ್ನಪ್ಪಿರುವ ಪ್ರಸಂಗವು ಪ್ರಭುತ್ವ ಮತ್ತು ಅದರ ತನಿಖಾ ಸಂಸ್ಥೆಗಳು ನಾಚಿಕೆಯಿಂದ ತಲೆ ತಗ್ಗಿಸುವಂತೆ ಮಾಡಬೇಕು. ಮಾನವ ಹಕ್ಕುಗಳ ಪರವಾಗಿ ಕೆಲಸ ಮಾಡುತ್ತಿದ್ದ, ಅದರಲ್ಲೂ ಮುಖ್ಯವಾಗಿ ನಿರ್ಲಕ್ಷ್ಯಕ್ಕೆ ಒಳಗಾದ ಆದಿವಾಸಿಗಳ ಪರವಾಗಿ ಕೆಲಸ ಮಾಡಿದ್ದ ಸ್ವಾಮಿ ಅವರು ಹಲವು ಕಾಯಿಲೆಗಳಿಂದ ಬಳಲುತ್ತಿದ್ದರು. ತಮಗೆ ವೈದ್ಯಕೀಯ ನೆಲೆಯಲ್ಲಿ ಜಾಮೀನು ಕೊಡಬೇಕು ಎಂದು ಅವರು ನ್ಯಾಯಾಲಯವನ್ನು ಕೋರಿದ್ದರು. ಈ ಜಾಮೀನು ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ಸ್ವಾಮಿ ಪರ ವಕೀಲರು, ಅವರು ಮೃತಪಟ್ಟಿರುವ ವಿಷಯವನ್ನು ನ್ಯಾಯಾಲಯಕ್ಕೆ ತಿಳಿಸಿದರು. ಸ್ವಾಮಿ ಅವರು ಪಾರ್ಕಿನ್ಸನ್ಸ್ ಕಾಯಿಲೆಯಿಂದ ಬಳಲುತ್ತಿದ್ದರು. ಅವರಿಗೆ ನೀರಿನ ಲೋಟವನ್ನು ಕೈಯಲ್ಲಿ ಹಿಡಿದುಕೊಂಡು ಕುಡಿಯಲು ಆಗುತ್ತಿರಲಿಲ್ಲ. ಕೈಗಳು ಅಷ್ಟು ನಡುಗುತ್ತಿದ್ದವು. ಹಾಗಾಗಿ, ಜೈಲಿನಲ್ಲಿ ತಮಗೆ ನೀರು ಕುಡಿಯಲು ಸ್ಟ್ರಾ (ಹೀರುಕೊಳವೆ) ಬೇಕು ಎಂದು ಈ ಹಿಂದೆ ನ್ಯಾಯಾಲಯವನ್ನು ಕೋರಿದ್ದರು. ಈ ಕೋರಿಕೆಗೆ ಪ್ರತಿಕ್ರಿಯೆ ಸಲ್ಲಿಸಲು ರಾಷ್ಟ್ರೀಯ ತನಿಖಾ ಸಂಸ್ಥೆಯು ಇಪ್ಪತ್ತು ದಿನಗಳ ಸಮಯ ತೆಗೆದುಕೊಂಡಿತು! ಅನಾರೋಗ್ಯಕ್ಕೆ ತುತ್ತಾದ ವ್ಯಕ್ತಿಗೆ ಸ್ಟ್ರಾ ಕೊಡುವ ಬಗ್ಗೆ ಪ್ರತಿಕ್ರಿಯೆ ಸಲ್ಲಿಸಲು ಅಷ್ಟು ದಿನ ಬೇಕಾಗುತ್ತದೆಯೇ? ಸ್ವಾಮಿ ಅವರು ಕೋರಿಕೆ ಸಲ್ಲಿಸಿದ ಒಂದು ತಿಂಗಳ ನಂತರ, ನೀರು ಕುಡಿಯಲು ಅವರಿಗೆ ಸ್ಟ್ರಾ ನೀಡಲಾಯಿತು. ಈ ಮಧ್ಯೆ, ಅವರು ವೈದ್ಯಕೀಯ ಆಧಾರದಲ್ಲಿ ತಮಗೆ ಜಾಮೀನು ನೀಡಬೇಕು ಎಂದು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಎನ್‌ಐಎ ವಿಶೇಷ ನ್ಯಾಯಾಲಯ ತಿರಸ್ಕರಿಸಿತ್ತು. ಈಗ ಸ್ವಾಮಿ ಅವರು ಸೆರೆಯಲ್ಲೇ ಸಾವನ್ನಪ್ಪಿದ್ದಾರೆ. ಇದು ಯಾವುದಾದರೂ ಪ್ರಜಾತಂತ್ರ ವ್ಯವಸ್ಥೆಗೆ ಭೂಷಣ ತರುವ ಪ್ರಸಂಗವೇ? ವಯೋವೃದ್ಧನಿಗೆ ನೀರು ಕುಡಿಯಲು ಒಂದು ಅನುಕೂಲ ಕಲ್ಪಿಸುವುದಕ್ಕೆ ನಮ್ಮ ಜೈಲು ಆಡಳಿತಕ್ಕೆ ಒಂದು ತಿಂಗಳ ಸಮಯ ಬೇಕೇ? ವೈದ್ಯಕೀಯ ಕಾರಣಗಳನ್ನು ನೋಡಿಯಾದರೂ ಜಾಮೀನು ಕೊಡಿ ಎಂದು ಕೇಳಿದ್ದ ವ್ಯಕ್ತಿ ಸೆರೆಯಲ್ಲಿ ಇದ್ದಾಗಲೇ ಮೃತಪಟ್ಟಿರುವುದು ಪ್ರಜಾಪ್ರಭುತ್ವ ದೇಶಗಳ ಸಾಲಿನಲ್ಲಿ ಭಾರತಕ್ಕೆ ಯಾವ ಬಗೆಯ ಹೆಸರು ತಂದುಕೊಡಬಹುದು? ಸ್ವಾಮಿ ಅವರು ತಪ್ಪು ಮಾಡಿದ್ದೇ ಆದಲ್ಲಿ ಅವರಿಗೆ ದೇಶದ ಕಾನೂನಿಗೆ ಅನುಗುಣವಾಗಿ ಶಿಕ್ಷೆ ಆಗಬೇಕಿತ್ತು. ಕಾನೂನಿಗಿಂತ ಯಾರೂ ದೊಡ್ಡವರಲ್ಲ. ಆದರೆ, ಆರೋಪ ಸಾಬೀತಾಗುವ ಮೊದಲೇ ಅವರನ್ನು ಈ ಪರಿ 'ಶಿಕ್ಷೆ'ಗೆ ಒಳಪಡಿಸಬಾರದಿತ್ತು. ತನಿಖಾ ಸಂಸ್ಥೆಗಳು ಇವರ ವಿಚಾರದಲ್ಲಿ ಕನಿಷ್ಠ ಸಂವೇದನೆಯನ್ನೂ ತೋರಿದಂತೆ ಕಾಣುತ್ತಿಲ್ಲ.

ಆರೋಗ್ಯ ಹದಗೆಟ್ಟಿರುವ ವ್ಯಕ್ತಿಯನ್ನು ಅಂತಃಕರಣದಿಂದ ನೋಡಬೇಕಾದ ಕೆಲಸ ಈ ಪ್ರಕರಣದಲ್ಲಿ ಪ್ರಭುತ್ವದ ಕಡೆಯಿಂದ ಆಗಲಿಲ್ಲ

ವ್ಯಕ್ತಿಯೊಬ್ಬನಿಗೆ ಕಾಯಿಲೆಗಳು ಇವೆ, ಆತನಿಗೆ ವಯಸ್ಸಾಗಿದೆ ಎಂಬ ಕಾರಣಕ್ಕೆ ಅಪರಾಧಕ್ಕೆ ಶಿಕ್ಷೆಯಿಂದ ವಿನಾಯಿತಿ ಕೊಡಬೇಕಿಲ್ಲ ಎಂಬುದು ನಿಜ. ಆದರೆ, ಸ್ವಾಮಿ ಅವರ ಪ್ರಕರಣದಲ್ಲಿ ಅವರಿಗೆ ವೈದ್ಯಕೀಯ ಕಾರಣಗಳ ಆಧಾರದಲ್ಲಿ ಜಾಮೀನನ್ನಾದರೂ ಕೊಡಬಹುದಿತ್ತು. ಸ್ವಾಮಿ ಅವರಿಗೆ ಕ್ರಿಮಿನಲ್ ಅಪರಾಧಗಳ ಹಿನ್ನೆಲೆ ಇಲ್ಲವಾಗಿತ್ತು ಎಂಬುದನ್ನು ಕೂಡ ಪರಿಗಣನೆಗೆ ತೆಗೆದುಕೊಳ್ಳಬಹುದಿತ್ತು. ಸ್ವಾಮಿ ಅವರು ಜಾಮೀನು ಕೋರಿ ಒಂದಕ್ಕಿಂತ ಹೆಚ್ಚು ಬಾರಿ ಅರ್ಜಿ ಸಲ್ಲಿಸಿದ್ದರು. ಜೈಲಿನಲ್ಲಿ ಇದ್ದಾಗ ಅವರ ಆರೋಗ್ಯ ಹದಗೆಟ್ಟಿತ್ತು. ಅಲ್ಲದೆ, ಜೈಲಿನಲ್ಲಿ ಇದ್ದಾಗಲೇ ಅವರು ಕೋವಿಡ್–19 ಸಾಂಕ್ರಾಮಿಕಕ್ಕೆ ಒಳಗಾಗಿದ್ದರು, ನಂತರ ಅದರಿಂದ ಚೇತರಿಸಿಕೊಂಡಿದ್ದರು. ಆರೋಗ್ಯಕ್ಕೆ ಸಂಬಂಧಿಸಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದ ಅವರಿಗೆ ಜೈಲಿನಲ್ಲಿ ಸರಿಯಾದ ಚಿಕಿತ್ಸೆ ದೊರೆಯಲಿಲ್ಲ ಎಂಬ ಆರೋಪ ಇದೆ. ವಿಚಾರಣಾಧೀನ ಕೈದಿಯಾಗಿ ಜೈಲು ಸೇರುವಾಗ ಆರೋಗ್ಯವಾಗಿ ಇದ್ದ ಸ್ವಾಮಿ ಅವರು ಜೈಲಿನಲ್ಲಿ ದೈಹಿಕವಾಗಿ ಕುಗ್ಗಿದ್ದರು ಎಂಬ ವರದಿಗಳು ಇವೆ. 'ಜಾಮೀನಿನ ಮೇಲೆ ನನ್ನನ್ನು ಬಿಡುಗಡೆ ಮಾಡದಿದ್ದರೆ, ನಾನು ಯಾವ ಆಸ್ಪತ್ರೆಗೂ ಸೇರಿಕೊಳ್ಳಲು ಬಯಸುವುದಿಲ್ಲ. ಅದರ ಬದಲಿಗೆ ಜೈಲಿನಲ್ಲೇ ಸಾಯಲು ಇಚ್ಛಿಸುತ್ತೇನೆ' ಎಂದು ಸ್ವಾಮಿ ಅವರು ಈಚೆಗೆ ನ್ಯಾಯಾಲಯಕ್ಕೆ ತಿಳಿಸಿದ್ದರು. ಈಗ ಅವರು ವಿಚಾರಣಾಧೀನ ಕೈದಿಯಾಗಿಯೇ ಸಾವನ್ನಪ್ಪಿದ್ದಾರೆ. ಅವರು ಹೃದಯ ಬಡಿತ ನಿಂತುಹೋದ ಕಾರಣದಿಂದಾಗಿ ಜೀವ ಕಳೆದುಕೊಂಡರು ಎಂಬುದಕ್ಕಿಂತಲೂ ಪ್ರಭುತ್ವದ ಹೃದಯಹೀನತೆಯ ಪರಿಣಾಮವಾಗಿ ಮೃತಪಟ್ಟರು ಎಂದು ವಿಷಾದದಿಂದ ಹೇಳಬೇಕಾಗುತ್ತದೆ. ಸಾವು ಎಲ್ಲರನ್ನೂ ತಟ್ಟುತ್ತದೆ, ಸಾವನ್ನು ಗೆದ್ದವರು ಯಾರೂ ಇಲ್ಲ. ಆದರೆ, ಆರೋಗ್ಯ ಹದಗೆಟ್ಟಿರುವ ವ್ಯಕ್ತಿಯನ್ನು ಅಂತಃಕರಣದಿಂದ ನೋಡಬೇಕಾದ ಕೆಲಸ ಈ ಪ್ರಕರಣದಲ್ಲಿ ಪ್ರಭುತ್ವದ ಕಡೆಯಿಂದ ಆಗಲಿಲ್ಲ. ಪ್ರಭುತ್ವದ ನಡೆ, ನುಡಿಗಳು ಇಂದಿನ ಹಾಗೂ ಮುಂದಿನ ಪೀಳಿಗೆಗಳಿಗೆ ಮೇಲ್ಪಂಕ್ತಿಯಂತೆ ಇರಬೇಕು. ಆದರೆ, ಸ್ಟ್ಯಾನ್ ಸ್ವಾಮಿ ಪ್ರಕರಣದಲ್ಲಿ ಅಂತಹ ನಡೆ ಕಾಣಲಿಲ್ಲ. ಉದಾರವಾದಿ ಮೌಲ್ಯಗಳಲ್ಲಿ, ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ನಂಬಿಕೆ ಇರುವವರ ಅಂತಃಸಾಕ್ಷಿಯನ್ನು ಈ ಪ್ರಕರಣ ಕಲಕುತ್ತದೆ. ಬಹುಕಾಲ ಸ್ಮೃತಿಪಟಲದಲ್ಲಿ ಉಳಿದುಕೊಳ್ಳುತ್ತದೆ.

ದಿನದ ಟ್ವೀಟ್

ಸ್ಥಳೀಯರು ಕಾಣುವುದಿಲ್ಲವೇಕೆ?

ಎಂಟು ಕಡೆ ರಾಜ್ಯಪಾಲರನ್ನು ಬದಲಿಸಲಾಗಿದೆ. ರಾಜ್ಯಪಾಲರನ್ನಾಗಿ ಹೊರ ರಾಜ್ಯದವರನ್ನು ನೇಮಕ ಮಾಡುವುದೇಕೆ ಎಂಬುದು ಅರ್ಥವಾಗುವುದಿಲ್ಲ. ಸಾಮಾನ್ಯವಾಗಿ ಅಂತಹವರಿಗೆ ತಾವು ನೇಮಕಗೊಂಡು ಬರುವ ರಾಜ್ಯದ ಬಗ್ಗೆ ಕನಿಷ್ಠ ತಿಳಿವಳಿಕೆ ಇರುತ್ತದೆ. ಇನ್ನು ಕೆಲವು ಬಾರಿ ಸ್ಥಳೀಯ ಭಾಷೆಯನ್ನು ಮಾತನಾಡಲು ಸಹ ಅವರಿಗೆ ಬರುವುದಿಲ್ಲ. ಈ ಹುದ್ದೆಗೆ ಅರ್ಹರಾದ ಸ್ಥಳೀಯರನ್ನು ಹುಡುಕುವುದು ಅಸಾಧ್ಯವೇನಲ್ಲ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

25 ವರ್ಷಗಳ ಹಿಂದೆ

ಭಾನುವಾರ, 7-7-1996

• ಒತ್ತಡಕ್ಕೆ ಮಣಿದು ಡೀಸೆಲ್ ಬೆಲೆ ಇಳಿಕೆ

ನವದೆಹಲಿ, ಜುಲೈ 6 (ಪಿಟಿಐ): ಸಂಯುಕ್ತ ರಂಗದ ಅಂಗಪಕ್ಷಗಳ ಒತ್ತಡಕ್ಕೆ ಮಣಿದ ಕೇಂದ್ರ ಸರ್ಕಾರ ಇಂದು ಡೀಸೆಲ್ ಬೆಲೆ ಏರಿಕೆಯನ್ನು ಶೇಕಡ 15ಕ್ಕೆ ಇಳಿಸಿ ಆದೇಶ ಹೊರಡಿಸಿದೆ.

ಡೀಸೆಲ್‌ನ ಪರಿಷ್ಕೃತ ಬೆಲೆಯನ್ನು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಶ್ರೀಕಾಂತ್ ಜೆನಾ, 'ಪೆಟ್ರೋಲ್, ಅಡುಗೆ ಅನಿಲ ಹಾಗೂ ಇತರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯಲ್ಲಿ ಬದಲಾವಣೆ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ಡೀಸೆಲ್ ಬೆಲೆ ಏರಿಕೆಯಿಂದ ಸಾರ್ವಜನಿಕ ಸಾರಿಗೆ, ಕೃಷಿ ಕೆಲಸ ಕಾರ್ಯಗಳು ತುಟ್ಟಿಯಾಗಲಿದ್ದು, ಪರಿಣಾಮವಾಗಿ ಮಧ್ಯಮ ವರ್ಗಕ್ಕೆ ಭಾರೀ ಹೊರೆಯಾಗುತ್ತದೆ. ಆದ್ದರಿಂದ ಡೀಸೆಲ್ ಬೆಲೆ ಏರಿಕೆಯನ್ನು ಶೇಕಡ 15ಕ್ಕೆ ಸೀಮಿತಗೊಳಿಸುವ ನಿರ್ಧಾರವನ್ನು ಸಂಪುಟ ಸಭೆ ಒಮ್ಮತದಿಂದ ಕೈಗೊಂಡಿತು' ಎಂದು ಜೆನಾ ವಿವರಿಸಿದರು.

50 ವರ್ಷಗಳ ಹಿಂದೆ

ಬುಧವಾರ, 7-7-1971

• ಏಕತೆ: ಮರೆತುಬಿಡಬಹುದಾದ ಮಾತೆಂದು ಎಸ್ಸೆನ್

ಬೆಂಗಳೂರು, ಜುಲೈ 6– 'ಸಂಸ್ಥಾ ಕಾಂಗ್ರೆಸ್ ಹಾಗೂ ಆಡಳಿತ ಕಾಂಗ್ರೆಸ್ ನಡುವೆ ಐಕ್ಯದ ಮಾತನ್ನು ನಾವು ಮರೆತುಬಿಡಬಹುದು'

ಐಕ್ಯಸ್ಥಾಪನೆಯ ಬಗ್ಗೆ ಪ್ರಯತ್ನ ನಡೆಯುತ್ತಿದೆಯೆಂಬ ವರದಿಯನ್ನು ಗಮನಕ್ಕೆ ತಂದಾಗ ಸಂಸ್ಥಾ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪ ಅವರು ನೀಡಿದ ಪ್ರತಿಕ್ರಿಯೆಯಿದು.

'ಈ ಐಕ್ಯ ಸಾಧನೆಗಾಗಿ ನಾವ್ಯಾರೂ ಪ್ರಯತ್ನ ಮಾಡುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ಕೆಲವರನ್ನು ಅಶಿಸ್ತಿನ ಕಾರಣ ಸಂಸ್ಥೆಯಿಂದ ಹೊರಕ್ಕೆ ಕಳುಹಿಸಲಾಯಿತು. ಕೆಲವರು ಅಧಿಕಾರ ಲಾಲಸೆ ಹಾಗೂ ಲಂಚದ ಪ್ರಭಾವದ ಕಾರಣ ಹೊರಗೆ ಹೋಗಿದ್ದಾರೆ. ದಾರಿ ತೋರಿದಲ್ಲಿ ಅವರು ವಾಪಸಾಗಬಹುದು. ಐಕ್ಯದ ಪ್ರಶ್ನೆಯಿಲ್ಲ. ಸಂಸ್ಥೆಯನ್ನು ಬಿಡಬೇಕೆನ್ನುವವರು ಬೇಗ ಬಿಡಲಿ. ನಾನು ಹಿಂದೊಮ್ಮೆ ಮುಂಬೈನಲ್ಲಿ ಹೇಳಿದಂತೆ, ಬಿಡುವವರಿಗೆ ಎರಡು ತೆಂಗಿನ ಕಾಯಿ ಕೊಟ್ಟು ಕಳುಹಿಸುತ್ತೇನೆ' ಎಂದರು.

• ಅಸ್ವಸ್ಥ ಅ.ನ.ಕೃ.ಗೆ ರಾಜ್ಯಪಾಲರ ಕೊಡುಗೆ

ಬೆಂಗಳೂರು, ಜುಲೈ 6– ರಾಜ್ಯಪಾಲ ಶ್ರೀ ಧರ್ಮವೀರ ಅವರು ಇಂದು, ಬೆಂಗಳೂರು ನರ್ಸಿಂಗ್ ಹೋಂನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪ್ರಸಿದ್ಧ ಸಾಹಿತಿ ಶ್ರೀ ಅ.ನ. ಕೃಷ್ಣರಾಯರನ್ನು ಭೇಟಿ ಮಾಡಿ 1,000 ರೂಪಾಯಿ ಚೆಕ್ಕನ್ನು ನೀಡಿದರು.

ಶ್ರೀ ಅ.ನ.ಕೃ. ಅವರು ಕರುಳಿನ ಬೇನೆಗಾಗಿ ಕೆಲ ದಿನಗಳಿಂದ ಈ ನರ್ಸಿಂಗ್ ಹೋಂನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಚಿಕಿತ್ಸಾ ವಿಧಾನಗಳಿಗೆ ತೋರಬೇಕಾದ ಬದ್ಧತೆ ಕರಗುತ್ತಿದೆ; ಔಷಧಗಳ ಗುಣಮಟ್ಟ ಕುಸಿಯುತ್ತಿದೆ!

ಆಯುರ್ವೇದ ಹುಡುಕಬೇಕಾದ 3 ಮದ್ದು

ವಿಶ್ಲೇಷಣೆ

ಕೇಶವ ಎಚ್. ಕೊರ್ಸೆ

ಮಲೆನಾಡಿನ ತಪ್ಪಲಿನ ನಮ್ಮೂರಲ್ಲಿ ಒಮ್ಮೆ ಸುತ್ತಾಡಿದರೆ, ಆರೋಗ್ಯ ಕಾಪಾಡಿಕೊಳ್ಳಲಿಕ್ಕಾಗಿ ಜನ ಹೇಗೆಲ್ಲ ಶ್ರಮಿಸುತ್ತಿರುತ್ತಾರೆಂದು ಅರಿವಾಗುವುದು. ಜ್ವರ-ಕೆಮ್ಮಿಗೆ ಮನೆಯಲ್ಲೇ ಕಷಾಯ-ಲೇಹ್ಯ ಸೇವಿಸುವವರು, ಪಕ್ಕದೂರಿನ ನಾಟಿವೈದ್ಯರ ಮದ್ದಿಗೆ ಮೈಯೊಡ್ಡಿದ ಮೈಕೈ ನೋವಿನವರು, ಉಬ್ಬಸವೋ ಅಥವಾ ಸಂಧಿವಾತವೆಂದೋ ಪಟ್ಟಣದ ಆಯುರ್ವೇದ ವೈದ್ಯರಿಗೆ ಮೊರೆ ಹೋದವರು ಹಾಗೂ ನಗರದ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ ಪೂರೈಸಿ ಬಂದ ಹೃದ್ರೋಗದಂಥ ಕಾಯಿಲೆಯವರು!

ಮೂರು ಸಾವಿರ ವರ್ಷಕ್ಕೂ ಮಿಕ್ಕಿ ಇತಿಹಾಸವಿರುವ ಆರೋಗ್ಯಶಾಸ್ತ್ರಗಳ ವಿಕಾಸದ ಘಟ್ಟಗಳೆಲ್ಲ ಒಮ್ಮೆಲೇ ಪ್ರತ್ಯಕ್ಷವಾದಂತೆ. ಬಹುಶಃ, ನಾಡಿನ ಬೇರೆಡೆಯೂ ದೊರಕಬಲ್ಲ ಸಾಮಾನ್ಯ ಚಿತ್ರಣವಿದು. ಸ್ವಾಸ್ಥ್ಯ ಕಾಯುವ ಚಿಕಿತ್ಸೆ ಯಾವ ಪದ್ಧತಿಗೆ ಸೇರಿದರೇನು ಎಂಬ ಬಹುಜನರ ಉದಾರಭಾವದ ಪ್ರತೀಕವದು. ಹೀಗೆಂದೇ, ವಿವಿಧ ಪದ್ಧತಿಗಳ ಪರಿಣಾಮಕಾರಿ ಅಂಶಗಳನ್ನೆಲ್ಲ ಬೆಸೆದು 'ಸಂಯೋಜಿತ ಚಿಕಿತ್ಸಾ ವಿಧಾನ' ರೂಪಿಸಬೇಕೆನ್ನುವ ವಾದವೂ ವೈದ್ಯಕೀಯ ಸಂಶೋಧನಾ ರಂಗದಲ್ಲಿ ಕೇಳಿಬರುತ್ತಿದೆ. ಒಂದು ಹಂತದವರೆಗೆ ಇದು ಸ್ವಾಗತಾರ್ಹವೇ. ಆದರೆ, ವೈದ್ಯರೆಂದು ಗುರುತಿಸಿಕೊಂಡವರು ತಮ್ಮ ಪದ್ಧತಿಯ ಕ್ಷಮತೆಗೆ ಮೀರಿದ ಚಿಕಿತ್ಸೆಗೆ ಮುಂದಾದಾಗ ಸಮಸ್ಯೆಗಳು ಉದ್ಭವಿಸತೊಡಗುತ್ತವೆ.

ಪಾರಂಪರಿಕ ಹಿನ್ನೆಲೆ- ತರಬೇತಿಯೇ ಇಲ್ಲದೆ ರಾತ್ರೋರಾತ್ರಿ ಹುಟ್ಟಿಕೊಳ್ಳುವ ಖೊಟ್ಟಿ 'ನವ-ನಾಟಿ ವೈದ್ಯರು', ಕದ್ದು ಮದ್ದು ಮಾರುವ ನಕಲಿ ವೈದ್ಯರು, ಸ್ಟೆರಾಯ್ಡ್, ಆ್ಯಂಟಿಬಯೊಟಿಕ್ ತರಹದ ನಿಯಂತ್ರಿತ ಕೃತಕ ರಾಸಾಯನಿಕ ಔಷಧಗಳನ್ನೂ ಮನಬಂದಂತೆ ನೀಡುವ ಆಯುಷ್ ವೈದ್ಯರು, ಗಂಭೀರ ಪ್ರಮಾದವೆಸಗುವ ಅಲೋಪಥಿ ಚಿಕಿತ್ಸಕರು- ಇವರೆಲ್ಲರ ಸಂಖ್ಯೆ ಏರುತ್ತಲೇ ಇದೆಯಷ್ಟೆ? ಸಮಾಜವನ್ನೆಲ್ಲ ಆವರಿಸಿಕೊಂಡಿರುವ ಲಾಭಕೋರತನವು ಆರೋಗ್ಯಕ್ಷೇತ್ರವನ್ನೂ ಬಲಿ ತೆಗೆದುಕೊಳ್ಳುತ್ತಿದೆ. ಸಾರ್ವಜನಿಕ ಆರೋಗ್ಯವು ಮತ್ತಷ್ಟು ಪಾತಾಳಕ್ಕೆ ಕುಸಿಯಬಾರದೆಂದರೆ, ಸರ್ಕಾರದ ಆರೋಗ್ಯ ಹಾಗೂ ಆಯುಷ್ ಇಲಾಖೆಗಳು ಜಂಟಿಯಾಗಿ ಇವೆಲ್ಲವನ್ನೂ ಕಟ್ಟುನಿಟ್ಟಾಗಿ ನಿಯಂತ್ರಿಸಬೇಕಷ್ಟೆ.

ನಿಯಂತ್ರಣವೇನೋ ಸರ್ಕಾರದ ಜವಾಬ್ದಾರಿಯಾಯಿತು. ಆದರೆ, ಈ ಸಂಕೀರ್ಣ ಸಂಗತಿಯ ಕುರಿತು ಆರೋಗ್ಯಶಾಸ್ತ್ರ ಪರಿಣತರು, ಆರೋಗ್ಯ ಜ್ಞಾನಶಿಸ್ತುಗಳು ಹಾಗೂ ಅವುಗಳ ಸಂಘಟನೆಗಳ ನಿಲುವೇನು? ಆ ನೈತಿಕ ಜವಾಬ್ದಾರಿಗಳ ಚಿಂತನೆಗಳು ಈಗ ಮುನ್ನೆಲೆಗೆ ಬರುತ್ತಿವೆ. ಗ್ರಾಮೀಣ ಬದುಕಿನೊಂದಿಗೆ ಹೆಣೆದುಕೊಂಡಿರುವ ಜನಪದ ವೈದ್ಯಕ್ಷೇತ್ರದ ನೈಜ ಪ್ರತಿನಿಧಿಗಳನ್ನು ಗುರುತಿಸುವುದೇನೋ ಕಷ್ಟ. ಆದರೆ, ಪಾರಂಪರಿಕ ಪದ್ಧತಿಗಳ ಶ್ರುತಿಯಾದ ಆಯುರ್ವೇದ ಹಾಗೂ ಆಧುನಿಕ ಅಲೋಪಥಿ- ಈ ಜ್ಞಾನಶಿಸ್ತುಗಳಾದರೂ ತಮ್ಮ ಮಿತಿಯನ್ನು ಗುರುತಿಸಿಕೊಳ್ಳುತ್ತ, ವಿಧಿ- ನಿಷೇಧಗಳನ್ನು ಅಳವಡಿಸಿಕೊಳ್ಳುವ ಹೊಣೆಗಾರಿಕೆ ತೋರಬೇಕಲ್ಲವೇ? ಅಂಥ ಮಂಥನಕ್ಕೆ ಪೂರಕವಾಗಿ, ಆಯುರ್ವೇದ ಸಮುದಾಯ ಮಾಡಿಕೊಳ್ಳಬೇಕಿರುವ ಆತ್ಮಶೋಧನೆಯ ನೆಲೆಗಳನ್ನು ಗುರುತಿಸುವ ಪ್ರಯತ್ನವಿಲ್ಲಿದೆ.

ತೊಂಬತ್ತರ ದಶಕದ ಆರಂಭದಲ್ಲಿ, ಔಷಧಸಸ್ಯ ಶಾಸ್ತ್ರದ ಸಂಶೋಧನೆ ಹಾಗೂ ಅಧ್ಯಾಪನದ ಮೂಲಕವೇ ಆಯುರ್ವೇದವನ್ನು ಅರ್ಥೈಸಿಕೊಳ್ಳತೊಡಗಿದ್ದ ನನ್ನಂಥ ಅನೇಕರಿಗೆ, ಆರೋಗ್ಯ ಸುರಕ್ಷತೆಯ ಹೊಸ ಸಾಧ್ಯತೆಗಳ ಅದ್ಭುತ ಕ್ಷೇತ್ರವಾಗಿ ಅದು ತೋರತೊಡಗಿತ್ತು. ಮುಂದಿನ ಎರಡು ದಶಕಗಳಲ್ಲಿ ಹಲವು ಆಯಾಮಗಳಲ್ಲಿ ಕ್ರಾಂತಿಯೇ ಎನ್ನಬಹುದಾದ ಬೆಳವಣಿಗೆಗಳೂ ಜರುಗಿದವು. ವಸಾಹತುಶಾಹಿ ನಿಲುವುಗಳ ಪೊರೆ ಕಳಚಿಕೊಂಡ ಹೊಸ ತಲೆಮಾರು ಹಾಗೂ ಆರ್ಥಿಕ ಉದಾರೀಕರಣದ ಫಲವಾಗಿ ಆಯುರ್ವೇದ ವೇಗವಾಗಿ ಬೆಳೆಯತೊಡಗಿತು. ಚರಕ, ಸುಶ್ರುತ, ವಾಗ್ಭಟರನ್ನೆಲ್ಲ ಆಳವಾಗಿ ಅಭ್ಯಸಿಸಿದ ಎಂ.ಎಸ್.ವಲಿಯಾಥನ್ ತರಹದ ಆಧುನಿಕ ವೈದ್ಯಕೀಯ ಶಾಸ್ತ್ರಜ್ಞರು, ಆಯುರ್ವೇದಕ್ಕೆ ಸ್ವತಂತ್ರ ಜೀವವಿಜ್ಞಾನವಾಗುವ ಸಾಮರ್ಥ್ಯವಿರುವುದನ್ನು ಜಗದ ಮುಂದಿರಿಸಿದರು. ಭೂಷಣ ಪಟವರ್ಧನ ಅವರಂಥ ವಿಜ್ಞಾನಿಗಳು ಆಯುರ್ವೇದ ಮೂಲಿಕೆಗಳ ಚಿಕಿತ್ಸಾಗುಣಗಳನ್ನು ಆಧುನಿಕ ವಿಜ್ಞಾನದ ಪರಿಭಾಷೆಯಲ್ಲೇ ಮುಂಡಿಸತೊಡಗಿದರು. ಆಯುರ್ವೇದ ಕಾಲೇಜುಗಳು ಹಾಗೂ ಮೂಲಿಕಾಧಾರಿತ ಉದ್ಯಮಗಳು ಬೆಳೆದವು. ಆಯುಷ್ ಇಲಾಖೆ ಪ್ರಕಟಿಸುವ 'ಆಯುರ್ವೇದಿಕ್ ಫಾರ್ಮಾ-ಕೋಪಿಯ'ದಲ್ಲಿಂದು (API) ಸಾವಿರಕ್ಕೂ ಮಿಕ್ಕಿ ಸಸ್ಯ ಪ್ರಭೇದಗಳಿವೆ. ಔಷಧಿಮೂಲಿಕೆ ಉದ್ದಿಮೆಗಳ ವಾರ್ಷಿಕ ವಹಿವಾಟು ₹ 2,500 ಕೋಟಿಗೂ ಮಿಕ್ಕಿ ಬೆಳೆದಿದೆ.

ಆಯುರ್ವೇದವು ವೈದ್ಯಕೀಯವಾಗಿ ಹಾಗೂ ಉದ್ದಿಮೆಯಾಗಿ ಬೆಳೆದುನಿಂತ ಈ ಪರಿಯೇ ಅನನ್ಯವಾದದ್ದು. ಆದರೆ, ಜೊತೆಯಲ್ಲಿಯೇ ಹೊಮ್ಮುವ ನೈತಿಕ ಜವಾಬ್ದಾರಿಗಳನ್ನೂ ಆಯುರ್ವೇದಶಿಸ್ತು ನಿರ್ವಹಿಸಬೇಕಲ್ಲವೇ? ಈ ದಿಸೆಯಲ್ಲಿ ಗುರುತಿಸಲೇಬೇಕಾದ ಮೂರು ಪ್ರಮುಖ ಅಂಶಗಳು ಇಲ್ಲಿವೆ.

ಮೊದಲಿನದು, ಕಾನೂನು ಹಾಗೂ ಜ್ಞಾನಶಿಸ್ತಿನ ಚೌಕಟ್ಟುಗಳ ಹಂಗಿಲ್ಲದೆ ವ್ಯಾಪಿಸುತ್ತಿರುವ 'ನವ ಜನಪದ ವೈದ್ಯಕೀಯ'ದ ಕುರಿತು. ನೈಜ ನಾಟಿ ವೈದ್ಯಕೀಯದ ಸಾಮರ್ಥ್ಯದ ಜೊತೆಗೆ ಅದರ ಮಿತಿಗಳನ್ನೂ ಗುರುತಿಸಿ, ಅದರ ಚಿಕಿತ್ಸಕರು ಮತ್ತು ಸಂಘಟನೆಗಳಿಗೆ ಲಕ್ಷ್ಮಣರೇಖೆ ದಾಟದಂತೆ ಅಧಿಕೃತವಾಗಿ ಹೇಳುವ ಕೆಲಸವಾಗಬೇಕಿದೆ. ಪಾರಂಪರಿಕ ಜ್ಞಾನವನ್ನೇ ಹೀರಿ ಬೆಳೆದಿರುವ ಆಯುರ್ವೇದ ಸಮುದಾಯವು ತನ್ನ ಹಿತ್ತಲಿನ ಬೆಳೆಗಳನ್ನು ಪೋಷಿಸುತ್ತಲೇ ವಿಷಕಳೆ ನಿಯಂತ್ರಿಸಬೇಕಲ್ಲವೇ?

ಎರಡನೆಯದು, ಆಯುರ್ವೇದ ಮದ್ದುಗಳ ಗುಣಮಟ್ಟದ ಕುರಿತು. ಮಾರುಕಟ್ಟೆಯಲ್ಲಿಂದು ಎರಡು ಬಗೆಯ ಆಯುರ್ವೇದ ಔಷಧಗಳಿವೆ. ಪ್ರಾಚೀನ ಗ್ರಂಥಗಳ ಉಲ್ಲೇಖಾನುಸಾರ ತಯಾರಿಸುವ ಆಸವ, ಅರಿಷ್ಟಗಳಂಥ 'ಶಾಸ್ತ್ರೀಯ ಔಷಧಿ'ಗಳು ಮೊದಲ ಬಗೆಯವು. ಅವುಗಳ ಕ್ಷಮತೆಯನ್ನು ಪುನಃ ಸಿದ್ಧಪಡಿಸುವ ಅಗತ್ಯವಿಲ್ಲ ಎನ್ನುವುದು ಸರಿ. ಎರಡನೆಯ ಬಗೆಯವು 'ಬೌದ್ಧಿಕ ಸ್ವಾಮ್ಯತ್ವ ಇರುವ ಔಷಧಿಗಳು' (Proprietary Ayurvedic Medicines). ಗುಪ್ತ ಸೂತ್ರದಡಿ ತಯಾರಿಸುವ ಈ ಮದ್ದುಗಳನ್ನು ಮಾರುಕಟ್ಟೆಗೆ ತರುವ ಮೊದಲು, ರೋಗಿಗಳ ಮೇಲೆ ಪ್ರಯೋಗಿಸಿ ಕ್ಷಮತೆ ಸಿದ್ಧಪಡಿಸುವ ಹೊಣೆ ಉದ್ದಿಮೆಗಳದ್ದು. ಆದರೆ, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು 2018ರಲ್ಲಿ 'ಡ್ರಗ್ಸ್ ಮತ್ತು ಕಾಸ್ಮೆಟಿಕ್ಸ್ ಕಾನೂನಿನ (1940)' ನಿಯಮಾವಳಿಗೆ ತಿದ್ದುಪಡಿ ಮಾಡಿ, ಈ ಕ್ಲಿನಿಕಲ್ ಪುರಾವೆ ಒದಗಿಸುವ ಅಗತ್ಯವನ್ನೇ ಕೈಬಿಟ್ಟಿದೆ! ಇದರಿಂದಾಗಿ ಮಾರುಕಟ್ಟೆಗೆ ಲಗ್ಗೆಯಿಡುತ್ತಿರುವ ಹೊಸಬಗೆಯ ಆಯುರ್ವೇದ ಮದ್ದುಗಳ ಫಲಪ್ರದತೆಯನ್ನು ನಂಬುವುದು ಹೇಗೆ? ಅಲೋಪಥಿಯಷ್ಟೇ ತಾನೂ ವೈಜ್ಞಾನಿಕ ಎಂದು ನಿರೂಪಿಸಿಕೊಳ್ಳಲು ಸದಾ ಶ್ರಮಿಸುವ ಆಯುರ್ವೇದ ಜ್ಞಾನಶಿಸ್ತಿನ ಸಮುದಾಯವು ಈ ಕುರಿತು ಮೌನ ತಾಳಿರುವುದು ಸರಿಯೇ?

ಅಂತಿಮವಾಗಿ, ಆಯುರ್ವೇದ ಔಷಧಿಗಳ ಜಾಹೀರಾತು ಸವಾರಿ ಕುರಿತು. ಔಷಧವೊಂದು ಮಾರುಕಟ್ಟೆಗೆ ಬರುವ ಪೂರ್ವದಲ್ಲಿ, ಅದರ ಗುಣಮಟ್ಟವು ಪ್ರಯೋಗ-ಸಿದ್ಧವಾಗಿ, ವೈದ್ಯರು ಅದನ್ನು ಪ್ರಾಯೋಗಿಕವಾಗಿ ಬಳಸಿ, ಅಂತಿಮ ಅಭಿಪ್ರಾಯ ರೂಪಿತವಾಗಬೇಕು. ಆದರೆ, ಈ ರಾಜಮಾರ್ಗವನ್ನು ತೊರೆದು, ಕೇವಲ ಜಾಹೀರಾತುಗಳ ಮೋಡಿಯ ಮೂಲಕವೇ ರೋಗಿಗಳ ಉದರ ಸೇರುತ್ತಿರುವ ಆಯುರ್ವೇದದ 'ಬ್ರ್ಯಾಂಡ್' ಔಷಧಿಗಳು ಹೆಚ್ಚುತ್ತಿವೆ. ರಫ್ತು ಮಾಡುವ ಬೃಹತ್ ಉದ್ದಿಮೆಗಳು ಹಾಗೂ ದೇಶೀಯ ಮಾರುಕಟ್ಟೆಯ ಕಿರು ಉದ್ದಿಮೆಗಳು ಇವೆರಡೂ ಈ ಬೆಳವಣಿಗೆಯಲ್ಲಿವೆ. ಪಂಚಾಯಿತಿ ಅಥವಾ ನಗರಸಭೆಯಿಂದ ಪಡೆದ ಕಟ್ಟಡದ ಪರವಾನಗಿಯನ್ನೇ ಆಯುರ್ವೇದ ಔಷಧಿ ಮಾರಾಟಕ್ಕೆ ಅನುಮತಿ ಪತ್ರ ಎಂದು ಬಿಂಬಿಸುತ್ತಿರುವ ಅಸಂಖ್ಯ ಸಣ್ಣ ಉದ್ದಿಮೆಗಳೂ ಸೇರಿವೆ! ಅಲ್ಲಿ ಬಳಸುವ ಮೂಲಿಕೆಗಳ ಅಸಲಿತನ ಹಾಗೂ ಔಷಧಿಗಳ ಕನಿಷ್ಠ ವಿಶ್ವಾಸಾರ್ಹತೆಯ ಖಾತರಿಯೇ ಇಲ್ಲದಿರುವಾಗ, ಜನಾರೋಗ್ಯ ಏನಾದೀತು? ಉದ್ಯಮದ ಮದ್ದಾನೆ ಮನೆಯೊಳಗೆ ನುಗ್ಗುತ್ತಿರುವ ಪರಿಣಾಮವನ್ನು ಆಯುರ್ವೇದ ಜ್ಞಾನಶಿಸ್ತು ಗ್ರಹಿಸುತ್ತಿದೆಯೇ?

ದೇಹ ಮತ್ತು ಮನಸ್ಸಿನ ಯೋಗಕ್ಷೇಮ ಸಾಧಿಸುವ ಅಗಾಧ ಸಾಮರ್ಥ್ಯ ಆಯುರ್ವೇದದ್ದು. ಆದರೆ, ಇದರ ನೇತೃತ್ವವು ಆಯುರ್ವೇದ ಜ್ಞಾನಶಿಸ್ತಿನ ತಜ್ಞರ ವಲಯದ ಕೈತಪ್ಪುತ್ತಿರುವುದು ವಿಷಾದನೀಯ. ಚಿಕಿತ್ಸೆಗಳ ಸ್ವರೂಪ ಹಾಗೂ ನೀತಿ- ನಿಯಮಗಳೆಲ್ಲವನ್ನೂ ಲಾಭ ಗಳಿಕೆ ಉದ್ದೇಶದ ಉದ್ಯಮಗಳೇ ನಿರ್ಧರಿಸತೊಡಗಿದರೆ, ಕ್ಷೀಣಿಸುವುದು ಆಯುರ್ವೇದದ ಭವಿಷ್ಯ ಮಾತ್ರವಲ್ಲ ಜನಸಾಮಾನ್ಯರ ಆರೋಗ್ಯಭದ್ರತೆ ಕೂಡ!

ಹಿತ್ತಲಿನ ಕಳೆ ಹಾಗೂ ಜಗುಲಿಯ ಆನೆಯನ್ನು ಆಯುರ್ವೇದ ನಿಭಾಯಿಸೀತೇ?

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ

ನೆಟ್ಟಗಿಲ್ಲದ ನೆಟ್

• ಮಣ್ಣೆ ರಾಜು

ಚಟ್ನಹಳ್ಳಿಯ ಸೆಂಚುರಿಗೌಡ ತಿಮ್ಮಜ್ಜ, ಐನೋರ ಹೋಟೆಲ್‌ನಲ್ಲಿ ಟೀ ಕುಡಿಯುತ್ತಿದ್ದ. ಪಡ್ಡೆ ಹುಡುಗರ ತಂಡ ಬಂದು, 'ಅಜ್ಜಾ, ಕಟಿಂಗು, ಶೇವಿಂಗು ಮಾಡಿಸಿಕೊಂಡು ರೆಡಿಯಾಗು, ಎಮ್ಮೆಲ್ಲೆ ಮನೆಗೆ ಹೋಗಿ ಬರೋಣ...' ಅಂತು.

'ಯಾಕ್ರಲೇ? ಲಾಕ್‌ಡೌನ್‌ನಲ್ಲಿ ಹಂಚಿದ್ದ ರೇಷನ್ ಕಿಟ್ ಖಾಲಿ ಆಯ್ತಾ?' ತಿಮ್ಮಜ್ಜ ರೇಗಿದ.

'ಅಲ್ಲಜ್ಜಾ, ನಮ್ಮೂರಿಗೆ ನೆಟ್ ಕೊಡಿ ಅಂತ ಕೇಳಬೇಕು' ಅಂದ ಸೀನ.

'ಮೆಟ್ಟು ಕೊಡಿಸಿ ಅಂತ ಎಮ್ಮೆಲ್ಲೆನ ಕೇಳಲಾ-ಗುತ್ತೇನ್ರಲಾ? ಒಂದು ಜೊತೆ ಮೆಟ್ಟು ಕೊಳ್ಳೋ ಯೋಗ್ಯತೆ ಇಲ್ವಾ ನಿಮಗೆ?'

'ಕಿವುಡಜ್ಜಾ, ಮೆಟ್ಟು ಅಲ್ಲ, ನೆಟ್ಟು... ಇಂಟರ್‌ನೆಟ್ ಬೇಕು ಅಂತ ಕೇಳಬೇಕು' ಅಂದ ಚಂದ್ರ.

'ನೆಟ್ಟಾ?... ಅದು ಹೆಂಗಿರ್ತದೆ?'

'ಯಾವೋನಿಗೆ ಗೊತ್ತು, ಕೊರೊನಾ ವೈರಸ್ ಥರಾ ನೆಟ್ಟು ಕಣ್ಣಿಗೆ ಕಾಣಲ್ಲ. ಅದು ಇಲ್ಲದಿದ್ರೆ ಮಕ್ಕಳು ಆನ್‌ಲೈನ್ ಪಾಠ ಕಲಿಯಕ್ಕಾಗಲ್ಲ' ಅಂದ ಗಿರಿ.

'ರೇಷನ್‌ಕಿಟ್ ಇದ್ರೆ ಬದುಕು, ಇಂಟರ್‌ನೆಟ್ ಇದ್ರೆ ಭವಿಷ್ಯ ಅನ್ನೋ ಕಾಲ ಇದು. ಪರೀಕ್ಷೆ ಪಾಸ್‌ಗೆ, ಟೈಂ ಪಾಸ್‌ಗೆ ನೆಟ್ ಬೇಕೇಬೇಕು' ಪರಮೇಶಿ ಹೇಳಿದ.

'ನಮ್ಮೂರ ಮಕ್ಕಳು ಮರ, ಮಾಳಿಗೆ ಹತ್ತಿ ಹುಡುಕಿದ್ರೂ ನೆಟ್ ಸಿಗ್ತಿಲ್ಲ. ಇಲಿ ಹಿಡಿಯಬಹುದು ನೆಟ್ ಹಿಡಿಯೋದು ಕಷ್ಟ ಆಗಿದೆ. ನಮ್ಮ ಮಕ್ಕಳು ಎಜುಕೇಟೆಡ್ಸ್ ಆಗಿ ಭವಿಷ್ಯ ನೆಟ್ಟಗಾಗಲು ನೆಟ್ ಬೇಕು'.

'ಅಕ್ಕಪಕ್ಕದ ಊರುಗಳಲ್ಲಿ ಹಗಲು-ರಾತ್ರಿ ನೆಟ್ ಸಿಕ್ತದೆ. ನಮ್ಮೂರಿನ ನೆಟ್ ಬರ ನಿವಾರಣೆ ಮಾಡಿ ಮಕ್ಕಳು ಪರೀಕ್ಷೆ ಪಾಸ್ ಆಗಲು ಅನುಕೂಲ ಮಾಡಿಕೊಡಿ ಅಂತ ಎಮ್ಮೆಲ್ಲೆಗೆ ಅರ್ಜಿ ಕೊಟ್ಟು ಬರೋಣ ಬಾ...' ಸೀನ ಹೇಳಿದ.

'ನಡೀರಿ ಹೋಗಣ, ಬೋರ್‌ವೆಲ್ಲು ಫೇಲಾದ್ರೂ, ಸ್ಕೂಲ್ ಮಕ್ಕಳು ಫೇಲಾಗಬಾರದು. ಫೇಲಾದ್ರೆ ಊರಿನ ಮಾನ ಹೋಯ್ತದೆ...' ಅನ್ನುತ್ತಾ ತಿಮ್ಮಜ್ಜ ಮೇಲೆದ್ದ.

ಸಂಗತ

ಅಯ್ಯೋ ಹಬಲ್, ಏನಿದು ಟ್ರಬಲ್?

ಅನಂತ ವಿಶ್ವದ, ಅನೂಹ್ಯ ಮಾಹಿತಿಯನ್ನು ಮೊಗೆದು ಸುರಿಯುತ್ತಿದ್ದ ಹಬಲ್‌ನಲ್ಲಿನ ತಾಂತ್ರಿಕ ದೋಷ ವಿಜ್ಞಾನಿಗಳಲ್ಲಿ ತೀವ್ರ ಆತಂಕ ಉಂಟುಮಾಡಿದೆ

• ಶ್ರೀಗುರು

ಖಗೋಳ ವಿಜ್ಞಾನಿಗಳ ಪ್ರೀತಿಯ ದೂರದರ್ಶಕ ಹಬಲ್‌ನಲ್ಲಿ ಚಿಕ್ಕ ಟ್ರಬಲ್ ಕಾಣಿಸಿಕೊಂಡಿದೆ. ಕಳೆದ ಮೂವತ್ತೊಂದು ವರ್ಷಗಳಿಂದ ಭೂಮಿಯ ಮೇಲಿನ 570 ಕಿ.ಮೀ. ಕಕ್ಷೆಯಲ್ಲಿ ಪ್ರತೀ ಸೆಕೆಂಡಿಗೆ 8 ಕಿ.ಮೀ. ವೇಗದಲ್ಲಿ ದಿನಕ್ಕೆ ಹದಿನೈದು ಸಲ ಭೂಮಿಯನ್ನು ಸುತ್ತುತ್ತ ಗ್ರಹ, ನಕ್ಷತ್ರ, ನೀಹಾರಿಕೆ, ಕಪ್ಪುಕುಳಿ, ಕ್ಷುದ್ರಗ್ರಹ, ಸೂಪರ್‌ನೋವಾ, ಗೆಲಾಕ್ಸಿಗಳ ಸ್ಪಷ್ಟ ಚಿತ್ರಗಳ ಜೊತೆ ಅನಂತ ವಿಶ್ವದ, ಅನೂಹ್ಯ ಮಾಹಿತಿಯನ್ನು ಮೊಗೆದು ಸುರಿಯುತ್ತಿದ್ದ ಹಬಲ್‌ನ ಒಂದು ಕಂಪ್ಯೂಟರ್‌ನಲ್ಲಿ ತಾಂತ್ರಿಕ ದೋಷ ಉಂಟಾಗಿದೆ. ಹೀಗಾಗಿ, ಸುಮಾರು 25 ದಿನಗಳಿಂದ ಅದರಿಂದ ಯಾವ ಮಾಹಿತಿಯೂ ಭೂಮಿಗೆ ಬಂದಿಲ್ಲ!

ಅದನ್ನು ಜಂಟಿಯಾಗಿ ಕಕ್ಷೆಗೆ ಹಾರಿಸಿದ್ದ ನಾಸಾ ಮತ್ತು ಇಸಾದ (ಯುರೋಪಿಯನ್ ಸ್ಪೇಸ್ ಏಜೆನ್ಸಿ) ವಿಜ್ಞಾನಿಗಳು, 'ಆತಂಕದ ಅಗತ್ಯವಿಲ್ಲ, ಇಲ್ಲಿಂದಲೇ ಕಂಪ್ಯೂಟರ್ ಸರಿಪಡಿಸಿ ಶೀಘ್ರದಲ್ಲಿ ಒಳ್ಳೆಯ ಸುದ್ದಿ ನೀಡುತ್ತೇವೆ' ಎಂದಿದ್ದರು. ದುರಸ್ತಿಯಾಗದಿದ್ದರೆ, ಇದುವರೆಗೂ ಬಳಕೆಯಾಗದ ಇನ್ನೊಂದು ಕಂಪ್ಯೂಟರ್ ಇದ್ದೇ ಇದೆ ಎಂಬ ವಿಶ್ವಾಸದಲ್ಲಿದ್ದರು. ಆದರೆ ನಾಸಾ ವಿಜ್ಞಾನಿಗಳ ಇತ್ತೀಚಿನ ಹೇಳಿಕೆಯ ಪ್ರಕಾರ, ಬ್ಯಾಕಪ್‌ಗೆ ಇದ್ದ ಎರಡನೆಯ ಕಂಪ್ಯೂಟರ್ ಸಹ ಕೆಲಸ ಮಾಡುತ್ತಿಲ್ಲ!

ಹನ್ನೆರಡು ವರ್ಷಗಳ ಕಾಲ ನಿರ್ಮಾಣಗೊಂಡ, ಖಗೋಳ ವಿಜ್ಞಾನಿ ಸರ್ ಎಡ್ವಿನ್ ಪೋವೆಲ್ ಹಬಲ್ ಅವರ ಹೆಸರಿನ ಈ ಖಗೋಳ ದೂರದರ್ಶಕವನ್ನು 1990ರ ಏಪ್ರಿಲ್ 24ರಂದು ಡಿಸ್ಕವರಿ ಬಾಹ್ಯಾಕಾಶ ಶಟಲ್‌ನಲ್ಲಿ ಮೇಲಾಕಾಶಕ್ಕೆ ಯಶಸ್ವಿಯಾಗಿ ಹಾರಿಸಲಾಗಿತ್ತು. ವಿವಿಧ ಗಾತ್ರ, ಶಕ್ತಿಯ ಕ್ಯಾಮೆರಾ, ಮಸೂರ, ಕಕ್ಷೆಯಲ್ಲಿ ಸುತ್ತುವಾಗ ಸ್ಥಿರತೆ ಮತ್ತು ದಿಕ್ಕನ್ನು ಸರಿಯಾಗಿಡುವ ಗೈರೋಸ್ಕೋಪ್‌ಗಳು, ಶಟಲ್ ಮತ್ತು ಕಂಪ್ಯೂಟರ್‌ಗಳಿಗೆ ಶಕ್ತಿ ನೀಡುವ ಬ್ಯಾಟರಿಗಳೆಲ್ಲ ಅದರಲ್ಲಿವೆ. ದೂರದರ್ಶಕದ ಕಾರ್ಯವನ್ನು ಅಮೆರಿಕದ ಬಾಲ್ಟಿಮೋರ್‌ನ ಸ್ಪೇಸ್ ಟೆಲಿಸ್ಕೋಪ್ ಸೈನ್ಸ್ ಇನ್‌ಸ್ಟಿಟ್ಯೂಟ್‌ನಿಂದ ನಿರ್ವಹಿಸ-ಲಾಗುತ್ತದೆ.

ಭೂಮಿಯ ನಡುಗೆರೆಗೆ (ಸಮಭಾಜಕ ರೇಖೆ) 28.5 ಡಿಗ್ರಿ ವಾಲಿಕೊಂಡು, ಭೂಮಿಯನ್ನು 1,63,500 ಸಲ ಸುತ್ತಿ, ಇದುವರೆಗೆ 640 ಕೋಟಿ ಕಿಲೊ ಮೀಟರ್ ದೂರ ಕ್ರಮಿಸಿ 45 ಸಾವಿರಕ್ಕೂ ಹೆಚ್ಚು ಆಕಾಶಕಾಯಗಳನ್ನು ಹದಿನೈದು ಲಕ್ಷ ಸಲ ವೀಕ್ಷಿಸಿ, 160 ಟೆರಾಬೈಟ್‌ನಷ್ಟು ದತ್ತಾಂಶವನ್ನು ಅದು ಭೂಮಿಗೆ ರವಾನಿಸಿದೆ. ವಿಶ್ವದ ವಯಸ್ಸು, ವಿಸ್ತರಣೆ, ನಮ್ಮ ಗೆಲಾಕ್ಸಿಯ ತೂಕವನ್ನು ನಿರ್ಧರಿಸುವಲ್ಲಿ ಅತ್ಯಂತ ಮಹತ್ವದ ಮಾಹಿತಿ ನೀಡಿದೆ. ಪ್ರತೀ ತಿಂಗಳೂ 80 ಗಿಗಾಬೈಟ್‌ಗಳಷ್ಟು ಡೇಟಾ ಪಡೆಯುತ್ತಿದ್ದ ವಿಜ್ಞಾನಿಗಳು 16,000 ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ.

ಟೆಲಿಸ್ಕೋಪ್ ಹಾಳಾಗುತ್ತಿರುವುದು ಇದೇ ಮೊದಲೇನಲ್ಲ. ಉಡಾವಣೆಗೊಂಡ ದಿನದಿಂದ ಇಲ್ಲಿಯವರೆಗೆ ಐದು ಸಲ ದುರಸ್ತಿ ಮಾಡಲಾಗಿದೆ. ಮೂರು ವರ್ಷಗಳಿಗೊಮ್ಮೆ ಶಟಲ್ ಕಳುಹಿಸಿ ಹಾಳಾದ ಭಾಗವನ್ನು ಸರಿಪಡಿಸುವುದು, ಇಲ್ಲವೆ ಹೊಸದನ್ನು ಹಾಕುವುದು ನಡೆದೇ ಇದೆ. ಮೊದಲ ದುರಸ್ತಿ ಕಾರ್ಯ ನಡೆದದ್ದು 1993ರಲ್ಲಿ. ಅದರ ನಿಮ್ನ ಕನ್ನಡಿ (Concave Mirror) ದೋಷಪೂರಿತವಾಗಿದ್ದರಿಂದ, ಹಾರಿದ ನಾಲ್ಕೇ ವಾರಗಳಿಗೆ ಅದು ಕಳಿಸಿದ ಚಿತ್ರಗಳೆಲ್ಲ ಕಲೆಸಿದ ಮುದ್ದೆಯಂತಾಗಿದ್ದವು. ವೈಡ್ ಫೀಲ್ಡ್ ಕ್ಯಾಮೆರಾ ತೆಗೆದ ಚಿತ್ರಗಳಲ್ಲಿ ಅನಗತ್ಯ ಬೆಳಕಿನ ಸೆಳಕು ಕಾಣಿಸುತ್ತಿತ್ತು. ಅಂದಿನ ಕಾಲಕ್ಕೇ 200 ಕೋಟಿ ಡಾಲರ್ ವೆಚ್ಚದಲ್ಲಿ ತಯಾರಾಗಿದ್ದ ಹಬಲ್‌ನ ಕುರಿತು ಸಿಕ್ಕ ಸಿಕ್ಕಲ್ಲೆಲ್ಲ ಲೇವಡಿ ಶುರುವಾಗಿತ್ತು. ಮಹತ್ವಾಕಾಂಕ್ಷಿ ಯೋಜನೆಯನ್ನು 'ಮಿಷನ್ ಇಂಪಾಸಿಬಲ್', 'ಆಸ್ಟ್ರಾ-ನಾಮಿಕಲ್ ಎರರ್' ಎಂದೆಲ್ಲ ಟೀಕಿಸಲಾಗಿತ್ತು.

ಶಟಲ್‌ನಲ್ಲಿ ಗಗನಯಾತ್ರಿಗಳನ್ನು ಕಳುಹಿಸಿ ಹತ್ತು ದಿನಗಳ ಕಾಲ ಸರಿಪಡಿಸಿದ ಮೇಲೆ ಬಂದ ಚಿತ್ರಗಳು ಅತ್ಯುತ್ತಮ ಗುಣಮಟ್ಟ ಹೊಂದಿದ್ದವು. ಹದಿನೆಂಟು ವರ್ಷಗಳ ಹಿಂದೆ ಸೌರಫಲಕ ಹಾಳಾದಾಗ ಅಮೆರಿಕವು ಕೊಲಂಬಿಯಾ ಶಟ್ಲ್ ನೌಕೆಯನ್ನು ಕಳಿಸಿ ಹೊಸ ಫಲಕವನ್ನು ಜೋಡಿಸಿತ್ತು. ನಾಲ್ಕು ಗೈರೋಸ್ಕೋಪ್‌ಗಳನ್ನು ದುರಸ್ತಿ ಮಾಡಲಾಗಿತ್ತು. 2009ರಲ್ಲಿ ಮಾಡಿದ ಕೊನೆಯ ದುರಸ್ತಿಯಲ್ಲಿ ಕಾಸ್ಮಿಕ್ ಆರಿಜಿನ್ಸ್ ಸ್ಪೆಕ್ಟ್ರೊಗ್ರಾಫ್, 3ನೆಯ ವೈಡ್ ಫೀಲ್ಡ್ ಕ್ಯಾಮೆರಾ, ಟೆಲಿಸ್ಕೋಪ್ ಇಮೇಜಿಂಗ್ ಸ್ಪೆಕ್ಟ್ರೊಗ್ರಾಫ್ ಮತ್ತು ಸುಧಾರಿತ ಸರ್ವೆ ಕ್ಯಾಮೆರಾಗಳನ್ನು ಕಕ್ಷೆಯಲ್ಲೇ ಅಳವಡಿಸಲಾಗಿತ್ತು.



3 ಸಿಪಿಯುಗಳನ್ನು ಹೊಂದಿರುವ, 40 ವರ್ಷಗಳಷ್ಟು ಹಳೆಯ ಕಂಪ್ಯೂಟರ್‌ಗಳು 1.25 ಮೆಗಾಹರ್ಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದವು. 1999ರಲ್ಲಿ 25 ಮೆಗಾಹರ್ಟ್ಸ್ ಪ್ರೋಸೆಸರ್ ಅನ್ನು ಅಳವಡಿಸಿದ ನಂತರ ಕಂಪ್ಯೂಟರ್‌ನ ವೇಗ 20 ಪಟ್ಟು ಹೆಚ್ಚಾಗಿತ್ತು ಮತ್ತು ಮೆಮೊರಿ 6 ಪಟ್ಟು ವೃದ್ಧಿಸಿತ್ತು. ಈಗ ಸಮಸ್ಯೆ ಉದ್ಭವಿಸಿರುವುದು ಒಂದು ಮೆಮೊರಿ ಯುನಿಟ್‌ನಲ್ಲಿ. ಉಳಿದೆರಡು ಮೆಮೊರಿ ಯುನಿಟ್‌ಗಳಿಂದ ಕೆಲಸ ಮುಂದುವರಿಸುವ ಪ್ರಯತ್ನ ನಡೆಯುತ್ತಿದೆ. ಜೊತೆಗೆ ಬ್ಯಾಕಪ್‌ಗಾಗಿ ಇರುವ ಇನ್ನೊಂದು ಪೇಲೋಡ್ ಕಂಪ್ಯೂಟರ್ ಅನ್ನು ಆ್ಯಕ್ಟಿವೇಟ್ ಮಾಡುವ ಪ್ರಯತ್ನವೂ ವಿಫಲವಾಗಿದೆ.

ಇಡೀ ದೂರದರ್ಶಕವನ್ನು ನಿಯಂತ್ರಿಸುವ ಎರಡೂ ಕಂಪ್ಯೂಟರ್‌ಗಳು ಕೆಲಸ ನಿಲ್ಲಿಸಿರುವುದು ವಿಜ್ಞಾನಿಗಳಲ್ಲಿ ತೀವ್ರ ಆತಂಕ ಹುಟ್ಟಿಸಿದೆ. ಸದ್ಯಕ್ಕೆ ಟೆಲಿಸ್ಕೋಪ್ ಯಾವ ಕೆಲಸವನ್ನೂ ಮಾಡದೆ ಸೇಫ್ ಮೋಡ್‌ನಲ್ಲಿದೆ.

ವಾಚಕರ ವಾಣಿ

ಡೆಲ್ಟಾಪ್ಲಸ್: ಎಚ್ಚರಿಕೆಯ ಗಂಟೆಯಾಗಲಿ

ರಾಜ್ಯದಲ್ಲಿ ಲಾಕ್‌ಡೌನ್ ಸಡಿಲಿಕೆ ಆಗುತ್ತಿರುವುದು ಒಂದು ಕಡೆಯಾದರೆ, ನೆರೆಯ ರಾಜ್ಯಗಳಾದ ಮಹಾರಾಷ್ಟ್ರ, ಕೇರಳದಲ್ಲಿ ಡೆಲ್ಟಾಪ್ಲಸ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದು ನಮಗೆ ಎಚ್ಚರಿಕೆಯ ಗಂಟೆ ಎಂದು ಭಾವಿಸಬೇಕು. ಜನರು ನಿರ್ಲಕ್ಷ್ಯ ಧೋರಣೆ ಕೈಬಿಟ್ಟು ಪರಸ್ಪರ ಅಂತರ ಪಾಲಿಸುವುದು, ಮಾಸ್ಕ್ ಧರಿಸುವುದು, ಸ್ವಚ್ಛತೆ, ಕೈಗಳನ್ನು ಸ್ಯಾನಿಟೈಸ್ ಮಾಡಿಕೊಳ್ಳುವುದರ ಜತೆಗೆ, ಅನಗತ್ಯವಾಗಿ ಓಡಾಡದೆ ಕೋವಿಡ್ ಶಿಷ್ಟಾಚಾರವನ್ನು ಕಡ್ಡಾಯವಾಗಿ ಪಾಲಿಸಲು ಮುಂದಾಗಬೇಕು.

ಚನ್ನಕೇಶವ ಜಿ.ಕೆ., ತರೀಕೆರೆ

ಅಮಾನವೀಯ, ದುರಂತಮಯ

ಆದಿವಾಸಿಗಳಿಗೆ 'ಜಲ್, ಜಂಗಲ್, ಝಮೀನ್' (ನೀರು, ಅರಣ್ಯಭೂಮಿ, ವಸತಿ) ಹಕ್ಕು ಮತ್ತು 'ಸುಳ್ಳು ದೋಷಾರೋಪಗಳನ್ನು ಎದುರಿಸುತ್ತಿರುವ ಲಕ್ಷಾಂತರ ವಿಚಾರಣಾಧೀನ ಕೈದಿಗಳ ಹಕ್ಕು'ಗಳಿಗಾಗಿ ತಮ್ಮ ಇಡೀ ಜೀವನವನ್ನು ಧಾರೆ ಎರೆದಿದ್ದವರು 84 ವರ್ಷದ ಫಾದರ್ ಸ್ಟ್ಯಾನ್ ಸ್ವಾಮಿ. ಬಂಧನದಲ್ಲಿದ್ದ ಅವರು, ಪಾರ್ಕಿನ್ಸನ್ಸ್ ಕಾಯಿಲೆಯಿಂದ ನರಳುತ್ತಿದ್ದರೂ ಜಾಮೀನಿನಿಂದ ವಂಚಿತರಾಗಿ ನರಳುತ್ತಲೇ ದೇಹತ್ಯಾಗ ಮಾಡಬೇಕಾಗಿ ಬಂದುದು ಅಮಾನವೀಯ ಹಾಗೂ ದುರಂತಮಯ.

ಆಡಳಿತಾರೂಢರು ಆವೇಶಭರಿತರಾಗಿ ನಡೆಸುತ್ತಿರುವ ದ್ವೇಷಪೂರ್ಣ ಆಡಳಿತದ ವೈಖರಿಗೆ ಸ್ವಾಮಿಯವರ ಸಾವು ಒಂದು ನಿದರ್ಶನ. ಹೀಗೆ ನ್ಯಾಯ ಕುರುಡಾದರೆ, ಜನ ಕಿವುಡಾದರೆ, ಆಡಳಿತದ ದುಷ್ಟ ಕಪಿಮುಷ್ಟಿಯಿಂದ ದೇಶಕ್ಕೆಂದು ಮುಕ್ತಿ?

ಕೆ.ಎನ್.ಭಗವಾನ್, ಬೆಂಗಳೂರು

ಶಾಂತಿ ಬೇಕೆಂದಿದ್ದರೆ ಜಾತಿ ಕೇಳದಿರಲಿ

'ಧಾರ್ಮಿಕ ಕಟ್ಟುಪಾಡುಗಳ ಬಿಗಿಹಿಡಿತ' ಎಂಬ ಡಾ. ಶಿವಮೂರ್ತಿ ಮುರುಘಾ ಶರಣರ ಲೇಖನವನ್ನು (ಪ್ರ.ವಾ., ಜುಲೈ 6) ಓದಿದಾಗ ಈ ಪತ್ರ ಬರೆಯಬೇಕೆನಿಸಿತು. ನಿಜ ಹೇಳಬೇಕೆಂದರೆ, ಈ ಜಾತಿವಾದ, ಪರಸ್ಪರ ವೈಷಮ್ಯ ಹೆಚ್ಚಾಗಿರುವುದಕ್ಕೆ ಕಾರಣ ರಾಜಕಾರಣಿಗಳು ಮತ್ತು ಮಠಾಧೀಶರು. ಮುಖ್ಯವಾಗಿ, ಬಸವಣ್ಣನವರ ಅನುಯಾಯಿಗಳೆಂದು ಹೇಳಿಕೊಳ್ಳುವ ಕೆಲವು ಕಾವಿಧಾರಿಗಳು, ತಮ್ಮ ಕರ್ತವ್ಯ ಮರೆತು ರಾಜಕೀಯ ಮಾಡುತ್ತಿರುವುದು ವಿಷಾದನೀಯ. ಬಸವಣ್ಣನವರು ಯಾವುದನ್ನು ಬೇಡವೆಂದು ಧಿಕ್ಕರಿಸಿದ್ದರೋ ಅದನ್ನು ಇವರು ಬಿಡದೆ ಮಾಡುತ್ತಿದ್ದಾರೆ. ನೂರಾರು ಮಠಗಳನ್ನು ಸ್ಥಾಪಿಸಿ, ಅವರವರಲ್ಲೇ ವೈಷಮ್ಯ ಹುಟ್ಟಿಸಿದ್ದಾರೆ. ತಮ್ಮ ಗುಂಪಿನ ಜನಕ್ಕೇ ಪದವಿ ಬೇಕೆಂದು ಧರಣಿ ಮಾಡುವ ಹೀನ ಸ್ಥಿತಿಗೆ ಇಳಿದಿದ್ದಾರೆ.

ಸಮಾಜಸೇವೆ ಮಾಡುತ್ತೇವೆಂದು ನೆಪ ಹೇಳಿ ರಾಜಕೀಯಕ್ಕೆ ಬಂದಿರುವ ಮಹಾನಾಯಕರು, ಮೀಸಲಾತಿಗಾಗಿ, ಇದ್ದ ನಾಲ್ಕು ಜಾತಿಗಳನ್ನು ನೂರಾರು ಜಾತಿಗಳಾಗಿ ಒಡೆದು ಕಚ್ಚಾಡುತ್ತಿದ್ದಾರೆ. ಇನ್ನು ಜಾತಿ ವೈಷಮ್ಯ ಹೋಗುವುದು ಹೇಗೆ? ದೇಶದಲ್ಲಿ ಶಾಂತಿ ಬೇಕೆಂದಿದ್ದರೆ, ಸರ್ಕಾರ ಜಾತಿ ಕೇಳುವುದನ್ನು ಬಿಡಲಿ. ವಿಷಾದವಾದರೂ ತಮಾಷೆ ಎಂದರೆ, ನನ್ನ ಮೊಮ್ಮಗ ನಾಲ್ಕು ವರ್ಷದ ಅಭಿರಾಮ್‌ಗೆ, ಜಾತಿ ಪ್ರಮಾಣಪತ್ರ ತರುವಂತೆ ಶಾಲೆಯಲ್ಲಿ ಕೇಳುತ್ತಾರೆ. ಏನೂ ತಿಳಿಯದ ಮಕ್ಕಳಲ್ಲಿ ಜಾತಿ ವೈಷಮ್ಯ ಬಿತ್ತುತ್ತಿದ್ದಾರೆ. ದೇಶ ಉದ್ಧಾರವಾಗಬೇಕೆಂದಿದ್ದರೆ, ಜಾತಿ ಕೇಳುವುದನ್ನು ಬಿಡಲಿ. ಬಡವರ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕು. ಯಾರು ಬಡವರು ಎನ್ನುವುದನ್ನು ಅವರ ಜೀವನಶೈಲಿಯೇ ಹೇಳುತ್ತದೆ. ಆಗ ಜಾತಿ ವೈಷಮ್ಯ ಹೇಳದಂತೆ ಮರೆಯಾಗುತ್ತದೆ.

ವೆಂಕಟೇಶ್ ಮೂರ್ತಿ, ಚಿಂತಾಮಣಿ

ಜೀವಪರ ಕಾಳಜಿ ಇಂದಿನ ಜರೂರು

ಕೊರೊನಾ ತಂದೊಡ್ಡಿರುವ ಸಂಕಷ್ಟದ ಜೊತೆಗೆ, ಲಸಿಕೆ ಕೊರತೆ, ದುಬಾರಿ ಇಂಧನ, ಗ್ಯಾಸ್ ಸಿಲಿಂಡರ್ ಬೆಲೆ ಹೆಚ್ಚಳದಂತಹ ನಾನಾ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಶ್ರೀಸಾಮಾನ್ಯರು ಹತಾಶರಾಗಿ ಪರಿತಪಿಸುತ್ತಿದ್ದಾರೆ. ಇಂತಹ ದಾರುಣ ಪರಿಸ್ಥಿತಿಯಲ್ಲಿ ಸರ್ಕಾರದ ಪಾತ್ರ ಮಹತ್ತರವಾದುದು. ಜನತೆಗೆ 'ನಾವು ನಿಮ್ಮ ಜೊತೆಗಿದ್ದೇವೆ' ಎಂಬ ನಂಬಿಕೆ ಮೂಡಿಸಿ ಭರವಸೆಯನ್ನು ತುಂಬಬೇಕು. ಇದರಲ್ಲಿ ಆಳುವ ಪಕ್ಷ, ವಿರೋಧ ಪಕ್ಷ ಎಂಬ ಪ್ರಶ್ನೆ ಬರಕೂಡದು. ಶಾಸಕರ ನಿಜಬಣ್ಣ ಮತ್ತು ಸಾಮಾಜಿಕ ಬದ್ಧತೆಯನ್ನು ಪರೀಕ್ಷಿಸುವ ಪರ್ವಕಾಲವಿದು. ಈ ದಾರುಣ ಸನ್ನಿವೇಶ-ದಲ್ಲಿ ನಮ್ಮ ಜನಪ್ರತಿನಿಧಿಗಳು ಏನು ಮಾಡುತ್ತಿದ್ದಾರೆ? ದುರ್ದೈವವೆಂದರೆ ಅವರು ನಡೆದುಕೊಳ್ಳುತ್ತಿರುವ ರೀತಿ ಶೋಚನೀಯವಾಗಿದೆ ಹಾಗೂ ನಿರಾಶಾದಾಯಕವಾಗಿದೆ. ಆಡಳಿತ ಪಕ್ಷದಲ್ಲಿ ಎರಡು ಬಣ. ಮುಖ್ಯಮಂತ್ರಿಯನ್ನು ಬದಲಿಸಬೇಕು ಎಂದು ಒಂದು ಗುಂಪು ನಿಲುವು ತಳೆದರೆ, ಅವರೇ ಮುಂದುವರಿಯಬೇಕು ಎಂದು ಇನ್ನೊಂದು ಗುಂಪು ಬೆಂಬಲಿಸಿದೆ. ಅಪಸ್ವರಗಳು ನಿಂತಿಲ್ಲ. ಶಾಸಕರ ಚಿತ್ತ ಅಧಿಕಾರದ ಗದ್ದುಗೆಯತ್ತ ಧಾವಿಸುತ್ತಿದೆಯೇ ಹೊರತು ಜನಮುಖಿಯಾಗಿ ಹೊರಳದಿರುವುದು ದುರಂತ.

ಇನ್ನು ವಿರೋಧಪಕ್ಷದ ವರ್ತನೆಯಾದರೂ ಸಮಾಜಮುಖಿಯಾಗಿ ಹೆಜ್ಜೆ ಹಾಕುತ್ತಿದೆಯೇ ಎಂದರೆ ಅಲ್ಲಿಯೂ ಅಧಿಕಾರದ ಪೈಪೋಟಿ ನಡೆದಿದೆ. ಕಣ್ಣೀರಲ್ಲಿ ಕೈ ತೊಳೆಯುತ್ತಿರುವ ಜನರ ಸಮಸ್ಯೆಗಿಂತಲೂ ದೊಡ್ಡದಾಗಿ 'ಮುಖ್ಯಮಂತ್ರಿ' ಯಾರಾಗಬೇಕೆಂಬ ಸಮಸ್ಯೆ ಅವರನ್ನು ಕಾಡುತ್ತಿದೆ. ಚುನಾವಣೆಗೆ ಇನ್ನೂ ಎರಡು ವರ್ಷ ಇದೆ. ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಸುವ ಈ ವಿಚಿತ್ರ ವರ್ತನೆ ಗೌರವ ತರುವಂತಹುದಲ್ಲ. ಶಿಸ್ತಿನಿಂದ ವರ್ತಿಸೋಣ ಎಂದು ಆಲೋಚಿಸದೆ 'ನಾನೂ ಮುಖ್ಯಮಂತ್ರಿ ಪದವಿ ಆಕಾಂಕ್ಷಿ' ಎಂದು ಹೇಳುತ್ತಾರೆ. ನಮ್ಮ ಶಾಸಕರು ಯಾಕೆ ಇಂಥ ಅಧೋಗತಿಗೆ ಇಳಿದರು ಎಂದು ದುಗುಡವಾಗುತ್ತದೆ.

ಪಕ್ಷಗಳು ಬೇರೆಯೇ ಹೊರತು ಶಾಸಕರೆಲ್ಲ ಒಂದೇ ಬಗೆಯವರು. ಆಡಳಿತ ಪಕ್ಷಕ್ಕೆ ಅಧಿಕಾರ ಉಳಿಸಿಕೊಳ್ಳುವ ಚಿಂತೆ. ವಿರೋಧ ಪಕ್ಷದವರಿಗೆ ಮತ್ತೆ ಆಡಳಿತದ ಚುಕ್ಕಾಣಿ ಹಿಡಿಯುವ ಕನಸು. ಇವರಿಬ್ಬರ ನಡುವೆ ಪ್ರಜೆಗಳು ಅನಾಥರು. ಇದು ನಾಚಿಕೆಗೇಡಲ್ಲದೆ ಮತ್ತೇನು? ಇದು ಜನರ ಸಂಕಷ್ಟಕ್ಕೆ ಮಿಡಿಯಬೇಕಾದ ಕಾಲ. ಜನರ ನೋವಿಗೆ ಮಿಡಿದು, ಅವರ ವಿಶ್ವಾಸಕ್ಕೆ ಪಾತ್ರರಾಗಿ ಮುಂದಿನ ಚುನಾವಣೆಯಲ್ಲಿ ಬಹುಮತದಿಂದ ಗೆದ್ದು ಬರಲು ಭೂಮಿಕೆ ನಿರ್ಮಿಸಿಕೊಳ್ಳಲು ಅವಕಾಶ ಸೃಷ್ಟಿಸಿಕೊಳ್ಳಬೇಕಾದ ಸಂದರ್ಭ. ಶಾಸಕರು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಪರ್ವಕಾಲವಿದು. ದಿಟವಾದ ಜೀವಪರ ಕಾಳಜಿ ಇಂದಿನ ಜರೂರು.

ಪ್ರೊ. ಕಮಲಾ ಹಂಪನಾ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೊರತೆಗಳ ಕಾಟ, ಅಪನಂಬಿಕೆಯ ಅಡೆತಡೆ... ಗ್ರಾಮೀಣ ಪ್ರದೇಶದ ಆರೋಗ್ಯ ಕೇಂದ್ರಗಳತ್ತ ಆಡಳಿತ ವ್ಯವಸ್ಥೆಯ ಅಸಡ್ಡೆ

ಹಳ್ಳಿ ಆಸ್ಪತ್ರೆಗಳು ಹಾಸಿಗೆ ಹಿಡಿದಿವೆ ಸೋಮಿ...!

• ಪ್ರವೀಣ ಕುಲಕರ್ಣಿ

ಕೋವಿಡ್ ಸಾಂಕ್ರಾಮಿಕದ ಕಾಲಘಟ್ಟದಲ್ಲಿ ಕರ್ನಾಟಕದ 'ಗ್ರಾಮಾರೋಗ್ಯ' ಸಂಪೂರ್ಣವಾಗಿ ಹದಗೆಟ್ಟು ಹಳ್ಳಿಗಳು ಹಾಸಿಗೆ ಹಿಡಿಯಲು ಮುಖ್ಯವಾಗಿ ಮೂರು ಕಾರಣಗಳುಂಟು. ಅವುಗಳೆಂದರೆ- ಆರೋಗ್ಯ ಮೂಲಸೌಕರ್ಯದ ಗೈರು, ವೈದ್ಯರ ಕೊರತೆ ಮತ್ತು ಆರೋಗ್ಯ ಸಿಬ್ಬಂದಿಗೆ ಸೂಕ್ತ ತರಬೇತಿ ನೀಡುವಲ್ಲಿ ತೋರಲಾದ ತೀವ್ರ ನಿರ್ಲಕ್ಷ್ಯ. ನೀವು ಚಾಮರಾಜನಗರದ ಯಾವುದೇ ಹಾಡಿಯಿಂದ ಬೀದರ್‌ನ ಕಟ್ಟಕಡೆಯ ಗ್ರಾಮದವರೆಗೆ, ದಕ್ಷಿಣ ಕನ್ನಡದ ಸಮುದ್ರ ತೀರದಿಂದ ಚಿತ್ರದುರ್ಗದ ಗುಡ್ಡದ ಮೇಲಿನ ಹಟ್ಟಿಯವರೆಗೆ ಎತ್ತ ಸುತ್ತಿ ನೋಡಿದರೂ 'ಗ್ರಾಮಾರೋಗ್ಯ'ದ ತಪಾಸಣಾ ವರದಿಗಳಲ್ಲಿ ಇವೇ ಮೂರು 'ರೋಗ ಲಕ್ಷಣ'ಗಳು ಎದ್ದು ಕಾಣುತ್ತವೆ.

ಮೂರು ಹಂತಗಳ ನಮ್ಮ ಗ್ರಾಮೀಣ ಆರೋಗ್ಯ ವ್ಯವಸ್ಥೆಯಲ್ಲಿ ತೀರಾ ಕೆಳಸ್ತರದಲ್ಲಿರುವ ಉಪ ಆರೋಗ್ಯ ಕೇಂದ್ರಗಳು (ಎಸ್‌ಎಚ್‌ಸಿ) ಅಗತ್ಯ ಪ್ರಮಾಣಕ್ಕಿಂತಲೂ ಶೇ 18ರಷ್ಟು ಕಡಿಮೆ ಇವೆ. ಹಾಗೆಯೇ ಮಧ್ಯದ ಸ್ತರದ ಪ್ರಾಥಮಿಕ ಆರೋಗ್ಯ ಕೇಂದ್ರಗಳ (ಪಿಎಚ್‌ಸಿ) ಪ್ರಮಾಣದಲ್ಲಿ ಶೇ 22ರಷ್ಟು, ಮೇಲಿನ ಸ್ತರದ ಸಮುದಾಯ ಆರೋಗ್ಯ ಕೇಂದ್ರಗಳ (ಸಿಎಚ್‌ಸಿ) ಪ್ರಮಾಣದಲ್ಲೂ ಶೇ 30ರಷ್ಟು ಕೊರತೆ ಇದೆ. ಗ್ರಾಮಾಂತರ ಭಾಗದಲ್ಲಿ ಪ್ರತೀ ಹತ್ತು ಸಾವಿರ ಜನಸಂಖ್ಯೆಗೆ ಲಭ್ಯವಿರುವ ಆಸ್ಪತ್ರೆ ಹಾಸಿಗೆಗಳ ಸಂಖ್ಯೆ 3.2ರಷ್ಟು ಮಾತ್ರ. ಕಲ್ಯಾಣ ಕರ್ನಾಟಕದ ಹಿಂದುಳಿದ ತಾಲ್ಲೂಕುಗಳಲ್ಲಿ ಪ್ರತೀ ಹತ್ತುಸಾವಿರ ಜನಸಂಖ್ಯೆಗೆ ಕೇವಲ ಒಬ್ಬ ವೈದ್ಯರ ಸೇವೆ ಲಭ್ಯವಿದೆ. ಪಟ್ಟಣ ಪ್ರದೇಶಗಳನ್ನೂ ಒಳಗೊಂಡಂತೆ ಗ್ರಾಮೀಣ, ಅರೆಗ್ರಾಮೀಣ ಭಾಗಗಳ ಆರೋಗ್ಯ ಕೇಂದ್ರಗಳಲ್ಲಿ ತಜ್ಞವೈದ್ಯರ ಕೊರತೆ ಶೇ 81.9ರಷ್ಟಿದೆ. ಇವುಗಳೆಲ್ಲ ರಾಷ್ಟ್ರೀಯ ಆರೋಗ್ಯ ಸಮೀಕ್ಷೆಗಳೇ ಹೊರಹಾಕಿರುವ ಅಂಕಿ ಅಂಶಗಳು.

ಆರೋಗ್ಯ ಕೇಂದ್ರಗಳಲ್ಲಿ ಬಹುಮುಖ್ಯವಾಗಿ ಬೇಕಾಗಿರುವುದು ರೋಗಪತ್ತೆ ಪರೀಕ್ಷಾ ವ್ಯವಸ್ಥೆ. ರೋಗವನ್ನು ಪತ್ತೆ ಮಾಡಿದರೆ ಅರ್ಧ ಚಿಕಿತ್ಸೆ ಮುಗಿದಂತೆ. ಆಗ ಚಿಕಿತ್ಸೆ ದಾರಿ ಸುಲಭ. ಆದರೆ, ಅಪಸವ್ಯಗಳಿಂದ ನಿಂತಿರುವ ಗ್ರಾಮೀಣ ಆರೋಗ್ಯ ಕೇಂದ್ರಗಳಲ್ಲಿ ರೋಗಪತ್ತೆಗೆ ಬೇಕಾದ ಪರೀಕ್ಷಾ ಸೌಲಭ್ಯಗಳೇ ಇಲ್ಲ. ತಜ್ಞವೈದ್ಯರ ಲಭ್ಯತೆ ಒತ್ತಟ್ಟಿಗಿರಲಿ, ಎಷ್ಟೋ ಕಡೆ ಒಬ್ಬ ಫಿಸಿಷಿಯನ್ ಕೂಡ ಲಭ್ಯವಿಲ್ಲ. ಹೀಗಾಗಿ ಸಮುದಾಯದ ಆರೋಗ್ಯದ ಅಗತ್ಯಗಳಿಗೆ ತಕ್ಕಂತೆ ಅರ್ಥಪೂರ್ಣವಾಗಿ ಸ್ಪಂದಿಸಲು ಅವುಗಳಿಂದ ಸಾಧ್ಯವಾಗುತ್ತಿಲ್ಲ. ಹಾವು ಕಚ್ಚಿಸಿಕೊಂಡು ಬಂದವರಿಗೂ ತುರ್ತಾಗಿ ಚಿಕಿತ್ಸೆ ಕೊಡುವಷ್ಟು ಚಿಕಿತ್ಸಾ ಸೌಲಭ್ಯಗಳಿಲ್ಲ. ಒಂದು ಪುಟ್ಟ ಶಸ್ತ್ರಚಿಕಿತ್ಸೆ ನಡೆಸುವಷ್ಟು ಸಾಧನ ಸೌಲಭ್ಯಗಳಾಗಲೀ ಇಂತಹ ಕೇಂದ್ರಗಳಲ್ಲಿಲ್ಲ. ಸಂಬಂಧಿಗಳು ಅಸ್ವಸ್ಥರನ್ನು ಕರೆದುಕೊಂಡು ಪಟ್ಟಣದ ಆಸ್ಪತ್ರೆಗಳತ್ತ ಓಡಬೇಕು. ಬಯಲು ಸೀಮೆಯಲ್ಲಿ ಆಸ್ಪತ್ರೆ ತೆರಳಲು ದಾರಿಗಳಾದರೂ ಇವೆ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಕೊಡಗು, ಹಾಸನ ಜಿಲ್ಲೆಗಳ ಘಟ್ಟ ಪ್ರದೇಶಗಳಲ್ಲಿ, ಚಾಮರಾಜನಗರದ ಹಾಡಿಗಳಿಂದ ತಾಣಗಳಲ್ಲಿ ಸರಾಗವಾಗಿ ಓಡಾಡಲು ದಾರಿಗಳೂ ಇಲ್ಲದೆ ಎಷ್ಟೋ ಕಡೆ ಕಡಿದಾದ ಹಾದಿಗಳಲ್ಲಿ ರೋಗಿಗಳನ್ನು ಹೊತ್ತುಕೊಂಡೇ ಹೋಗಬೇಕಾದಂತಹ ಸನ್ನಿವೇಶ ಇದೆ.

ಗ್ರಾಮೀಣ ಭಾಗಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕೊರತೆಗಳ ಉದ್ದನೆಯ ಪಟ್ಟಿಯೇ ದೊಡ್ಡ ತೊಡಕಾದರೆ, ಈ ಕೇಂದ್ರಗಳ ಕುರಿತು ಜನರಿಗೆ ಇರುವ ಭಯ ಹಾಗೂ ಅಪನಂಬಿಕೆ ಅಷ್ಟೇ ದೊಡ್ಡ ಸವಾಲು. ಆರೋಗ್ಯ ಸಿಬ್ಬಂದಿ, ರೋಗಿಗಳೊಂದಿಗೆ ನಡೆದುಕೊಳ್ಳುವ ರೀತಿಯೇ ಇದಕ್ಕೆ ಕಾರಣ. ವೈದ್ಯರು ಇಲ್ಲದಿರುವುದು, ರೋಗಿಗಳ ಪ್ರಶ್ನೆಗಳಿಗೆ ಸಿಬ್ಬಂದಿ ಅಸಡ್ಡೆಯಿಂದ ಉತ್ತರಿಸುವುದು, ರೋಗಲಕ್ಷಣವನ್ನು ಸರಿಯಾಗಿ ಗುರುತಿಸದೆ ಚುಚ್ಚುಮದ್ದು ಹಾಕಿ ಕಳುಹಿಸುವುದು, ಆರೈಕೆಯಲ್ಲಿ ನಿರ್ಲಕ್ಷ್ಯ ವಹಿಸುವುದು– ಇಂತಹ ಕಾರಣಗಳಿಂದ ಆರೋಗ್ಯ ಕೇಂದ್ರಗಳು ಜನರ ವಿಶ್ವಾಸವನ್ನು ಬಹುಮಟ್ಟಿಗೆ ಕಳೆದುಕೊಂಡಿವೆ. ಸರ್ಕಾರಿ ಆಸ್ಪತ್ರೆಗಳೆಂದರೆ, 'ಅಲ್ಲಿ ಡಾಕ್ಟ್ರು ಇರ್ತಾರಾ', 'ಸರಿಯಾಗಿ ಟ್ರೀಟ್‌ಮೆಂಟ್ ಕೊಡ್ತಾರಾ' ಎಂದೆಲ್ಲ ಪ್ರಶ್ನಿಸುತ್ತಾ ಅಂಜಿಕೆಯಿಂದ ಹಿಂದೆ ಸರಿಯುವಂತೆ ಮಾಡಿವೆ. ಸಾಲ ಮಾಡಿದರೂ ಪರವಾಗಿಲ್ಲ, ಖಾಸಗಿ ಆಸ್ಪತ್ರೆಗಳಲ್ಲೇ ತೋರಿಸುವುದು ವಾಸಿ ಎನ್ನುವ ಮನಃಸ್ಥಿತಿಗೂ ಅವರು ಬರಲು ಕಾರಣವಾಗಿವೆ. ಆದರೆ, ಆ ಖಾಸಗಿ ಆಸ್ಪತ್ರೆಗಳು ಸಹ ಎಲ್ಲ 'ಅರ್ಥ'ದಲ್ಲೂ ಹಳ್ಳಿಗರ ಕೈಗೆಟಕದಷ್ಟು ದೂರವೇ ಉಳಿದಿವೆ. ಅದು ಗದಗ ಜಿಲ್ಲೆಯ ಬೆಳ್ಳಟ್ಟಿಯೇ ಆಗಿರಲಿ, ಕೊಡಗು ಜಿಲ್ಲೆಯ ಕಾಡ್ಮನೆ ಆಗಿರಲಿ ಎಲ್ಲ ಕಡೆಗಳಲ್ಲಿ ಇಂತಹದ್ದೇ ಮನೋಭಾವ, ಇಂತಹದ್ದೇ ವಾತಾವರಣ.

ಕೋವಿಡ್ ಸಾವು ನೋವಿನ ತೀವ್ರತೆ ರಾಜ್ಯದ ಗ್ರಾಮಾಂತರ ಭಾಗದಲ್ಲಿ ವರದಿ ಆಗಿರುವ ಪ್ರಮಾಣಕ್ಕಿಂತಲೂ ಹೆಚ್ಚಾಗಿದೆ. ಬಹುತೇಕ ಹಳ್ಳಿಗಳಲ್ಲಿ ಕೋವಿಡ್ ಲಕ್ಷಣಗಳಿದ್ದರೂ ತಪಾಸಣೆ ಮಾಡಿಸಿಕೊಳ್ಳಲು ಜನ ಹಿಂದೇಟು ಹಾಕಿರುವುದು ಎದ್ದು ಕಂಡಿರುವ ಸತ್ಯ. ಎಷ್ಟೋ ಮಂದಿ ಚಿಕಿತ್ಸೆ ಪಡೆಯುವ ಗೋಜಿಗೆ ಹೋಗದೆ ಮನೆಯಲ್ಲಿಯೇ ನರಳಿ ಪ್ರಾಣಬಿಟ್ಟ ಕಥೆಗಳು ಹಳ್ಳಿ–ಹಳ್ಳಿಯಲ್ಲೂ ಬಿಚ್ಚಿಕೊಳ್ಳುತ್ತವೆ. ಸಾವಿರಾರು ಕೋವಿಡ್ ಸಾವುಗಳು ದಾಖಲೆಗೆ ಸೇರದೆ 'ಸಹಜ ಸಾವು'ಗಳಾಗಿ ಮಾರ್ಪಟ್ಟಿರುವುದು ಕಟು ವಾಸ್ತವ. ರಾಜ್ಯದಲ್ಲಿ ಗ್ರಾಮೀಣ ಭಾಗದ ಜನಸಂಖ್ಯೆಯ ಪ್ರಮಾಣ ಶೇ 61.33ರಷ್ಟಿದೆ (ದೇಶದಲ್ಲಿ ಈ ಪ್ರಮಾಣದ ಸರಾಸರಿ ಶೇ 65). ಈ ಜನಸಂಖ್ಯೆಗೆ ಲಭ್ಯವಿರುವ ಆಸ್ಪತ್ರೆ ಹಾಸಿಗೆಗಳ ಪ್ರಮಾಣ, ರಾಜ್ಯದ ಒಟ್ಟು ಸಾಮರ್ಥ್ಯದ ಶೇ 35ರಷ್ಟು ಮಾತ್ರ. ಈ ಅಂಶವೊಂದೇ ಸಾಕು, ಗ್ರಾಮಾಂತರ ಪ್ರದೇಶದಲ್ಲಿರುವ ಆರೋಗ್ಯದ ಅವ್ಯವಸ್ಥೆಗೆ ಕನ್ನಡಿ ಹಿಡಿಯಲು. ಹಳ್ಳಿಗಳಲ್ಲಿ ವೈರಾಣುವಿನ ತೀವ್ರವಾದ ಹೊಡೆತಕ್ಕೆ ಸಿಕ್ಕ ರೋಗಿಯನ್ನು ತುರ್ತಾಗಿ ಆಸ್ಪತ್ರೆಗೆ ಸೇರಿಸಲು ಕನಿಷ್ಠ ಆರರಿಂದ ಎಂಟು ಗಂಟೆ ಬೇಕು. ರೋಗಿಯನ್ನು ಉಳಿಸಿಕೊಳ್ಳಲು ಇರುವ 'ಸುವರ್ಣ ಸಮಯ' ಆಸ್ಪತ್ರೆ ಹುಡುಕಾಟದಲ್ಲೇ ಕಳೆದು ಹೋಗಿದ್ದರಿಂದ ಗ್ರಾಮಾಂತರ ಭಾಗಗಳಲ್ಲಿ ಕೋವಿಡ್ ಮರಣಗಳ ಪ್ರಮಾಣ ಹೆಚ್ಚಾಗಿದೆ ಎಂದು ಹಲವು ಸಮೀಕ್ಷೆಗಳು ಹೇಳಿವೆ.

ಕೋವಿಡ್ ಪ್ರಕರಣಗಳ ಅಸಮರ್ಪಕ ನಿಗಾ ವ್ಯವಸ್ಥೆ ಕುರಿತು, ಪರಿಸ್ಥಿತಿ ನಿರ್ವಹಣೆಯಲ್ಲಿ ಆಗುತ್ತಿರುವ ವೈಫಲ್ಯಗಳ ಕುರಿತು, ವೆಂಟಿಲೇಟರ್–ಆಕ್ಸಿಜನ್ ಅಲಭ್ಯತೆ ಕುರಿತು, ಸರಿಯಾದ ತಪಾಸಣಾ ಸೌಲಭ್ಯ ಇಲ್ಲದಿರುವ ಕುರಿತು, ವೈದ್ಯಕೀಯ ಆರೈಕೆಯಲ್ಲಿ ಆಗುತ್ತಿರುವ ಲೋಪಗಳ ಕುರಿತು ತಜ್ಞರು ಎಚ್ಚರಿಸುತ್ತಲೇ ಬಂದರೂ ಗ್ರಾಮಾಂತರ ಭಾಗದಲ್ಲಿ ಗಣನೀಯ ಬದಲಾವಣೆಗಳು ಏನೂ ಕಂಡುಬರಲಿಲ್ಲ. ಕೋವಿಡ್‌ನ ಮೊದಲ ಅಲೆಯ ಸಂದರ್ಭದಲ್ಲೇ ವೈರಾಣು ಗ್ರಾಮೀಣ ಭಾಗದಲ್ಲಿಯೂ ಹರಡುವ ಸಾಧ್ಯತೆಯಿದ್ದು, ಅಲ್ಲಿನ ಸೌಲಭ್ಯಗಳನ್ನು ಈಗಲೇ ಹೆಚ್ಚಿಸಬೇಕು ಎಂಬ ಸಲಹೆಯನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಗ್ರಾಮೀಣ ಭಾಗಗಳಲ್ಲಿ ಕೋವಿಡ್ ನಿರ್ವಹಣೆಗೆ ಕೇಂದ್ರ ಸರ್ಕಾರ ಮೇ 16ರಂದು ನಿಯಮಾವಳಿ ರೂಪಿಸುವವರೆಗೆ ಎದ್ದು ಕಾಣುವಂತಹ ಯಾವ ಗಟ್ಟಿ ಕ್ರಮವೂ ಕಾಣಲಿಲ್ಲ. ಹೀಗಾಗಿ ನೂರಾರು ಹಳ್ಳಿಗಳು ಕೋವಿಡ್‌ನ 'ಹಾಟ್‌ಬೆಡ್'ಗಳಾಗಿ ರೂಪಾಂತರ ಹೊಂದಿದವು. ಗ್ರಾಮಾಂತರ ಪ್ರದೇಶದಲ್ಲಿ ಸೋಂಕು ಪೀಡಿತರಾದ ನೂರರಲ್ಲಿ 20 ಮಂದಿಗೆ ಮಾತ್ರ ಆಸ್ಪತ್ರೆಗಳಲ್ಲಿ ಆರೈಕೆ ಬೇಕಿತ್ತು. ಆದರೆ, ಅಷ್ಟು ಸಣ್ಣ ಅಗತ್ಯವನ್ನೂ ಪೂರೈಸಲಾಗದೆ ನಮ್ಮ ಆರೋಗ್ಯ ವ್ಯವಸ್ಥೆ ಸೋತು ಕೈಚೆಲ್ಲಿತು. ಪಿಎಚ್‌ಸಿ, ಸಿಎಚ್‌ಸಿ ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಮೂಲಸೌಕರ್ಯವನ್ನು ಮುಂಚಿತವಾಗಿ ಹೆಚ್ಚಿಸಿದ್ದರೆ, ಹಳ್ಳಿಗಳಿಂದ ಆಸ್ಪತ್ರೆಗಳಿಗೆ ತೆರಳಲು ಸೂಕ್ತ ಸಾರಿಗೆ ವ್ಯವಸ್ಥೆಯನ್ನೂ ಮಾಡಿದ್ದರೆ, ಅಗತ್ಯ ಸಂಖ್ಯೆಯಲ್ಲಿ ಆಂಬುಲೆನ್ಸ್‌ಗಳು ಲಭ್ಯವಾಗಿದ್ದರೆ ಪರಿಸ್ಥಿತಿ ಇಷ್ಟೊಂದು ವಿಕೋಪಕ್ಕೆ ಹೋಗುತ್ತಿರಲಿಲ್ಲ.

ರಾಜ್ಯದ ಕೆಲವು ಉಪ ಆರೋಗ್ಯ ಕೇಂದ್ರಗಳಿಗೆ ವಿದ್ಯುತ್ ಸಂಪರ್ಕವಾಗಲೀ ನೀರಿನ ಸಂಪರ್ಕವಾಗಲೀ ಇಲ್ಲ ಎಂದಮೇಲೆ ಸರ್ಕಾರ ಈ ವಿಷಯದಲ್ಲಿ ಎಷ್ಟೊಂದು ಗಂಭೀರವಾಗಿದೆ ಎಂಬುದನ್ನು ನೀವೇ ಊಹಿಸಿ. ಪಿಎಚ್‌ಸಿಗಳಲ್ಲಿ ಕನಿಷ್ಠ ನಾಲ್ಕು ಹಾಸಿಗೆ ಸೌಲಭ್ಯವಾದರೂ ಇರಬೇಕು ಎನ್ನುವುದು ನಿಯಮ. ಆದರೆ, ಕಲ್ಯಾಣ ಕರ್ನಾಟಕದ ಬಹುತೇಕ ಪಿಎಚ್‌ಸಿಗಳಲ್ಲಿ ಒಂದು ಹಾಸಿಗೆ ಸೌಲಭ್ಯವೂ ಇಲ್ಲ. ವೈದ್ಯರು ಇರಲಿ, ಎಷ್ಟೋ ಕೇಂದ್ರಗಳಲ್ಲಿ ನರ್ಸ್‌ಗಳು, ಸೂಲಗಿತ್ತಿಯರು, ಪ್ರಯೋಗಾಲಯದ ಸಹಾಯಕರು ಸಹ ಇಲ್ಲ. ಅವುಗಳು ಹೆಸರಿಗೆ ಮಾತ್ರ ಬಾಗಿಲು ತೆರೆದಿರುತ್ತವೆ ಎನ್ನುತ್ತವೆ ಖುದ್ದು ಸ್ಥಳಕ್ಕೆ ಹೋಗಿ ಬರೆದಿರುವ ವರದಿಗಳು. ಆರೋಗ್ಯ ಕೇಂದ್ರಗಳಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಲು ವಿಫಲವಾದ ಸರ್ಕಾರ, ಪ್ರಕರಣಗಳ ಸಂಖ್ಯೆ ಹೆಚ್ಚಿದಂತೆ ಲಾಕ್‌ಡೌನ್ ವಿಧಿಸಿ, ಹಳ್ಳಿಗರನ್ನೂ ಮನೆಯಲ್ಲಿಯೇ ಕುಳಿತು ದಣಿಯುವಂತೆ ಮಾಡಿತು. ಏನು ಮಾಡುವುದು? ನಮ್ಮ ನೀತಿ ನಿರೂಪಣೆಗಳೇ ಹಾಗಿವೆ. ರೋಗಗಳು ದಾಳಿ ಇಡುವುದನ್ನು ತಡೆಗಟ್ಟುವುದು ನಮ್ಮ ಆದ್ಯತೆಯಾಗುವ ಬದಲು ರೋಗ ಬಂದಮೇಲೆ ನಿರ್ವಹಣೆಗೆ ಒತ್ತು ನೀಡುವುದು ನಮ್ಮ ಸಮುದಾಯ ಆರೋಗ್ಯದ ನೀತಿಯಾಗಿಬಿಟ್ಟಿದೆ.

ಹುನಗುಂದ ತಾಲ್ಲೂಕಿನ ಬಿಸಿಲಿದಿನ್ನಿಯಲ್ಲಿ ಹಾಳು ಬಿದ್ದಿರುವ ಉಪ ಆರೋಗ್ಯ ಕೇಂದ್ರ — ಚಿತ್ರ: ಇಂದ್ರಕುಮಾರ್ ದಸ್ತೇನವರ

ಸರ್ಕಾರವು ಆರೋಗ್ಯ ಕ್ಷೇತ್ರಕ್ಕೆ ಒತ್ತು ನೀಡಿದ್ದು, ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. 250 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾಯೋಗಿಕವಾಗಿ ಮೇಲ್ದರ್ಜೆಗೇರಿಸಿ, ಗ್ರಾಮೀಣ ಪ್ರದೇಶದ ಪ್ರತಿಯೊಬ್ಬರಿಗೂ ಆರೋಗ್ಯ ಸವಲತ್ತುಗಳನ್ನು ನೀಡುವ ಉದ್ದೇಶವಿದೆ. ಆಸ್ಪತ್ರೆಗಳ ಖಾಲಿ ಹುದ್ದೆ ತುಂಬಲು 1,763 ವೈದ್ಯರು ಹಾಗೂ ವೈದ್ಯಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ನಂತರ ಗುತ್ತಿಗೆ ಆಧಾರದಲ್ಲಿ ಒಂದು ವರ್ಷ ಕಡ್ಡಾಯ ಸೇವೆಯಡಿ 2,050 ವೈದ್ಯರ ನೇಮಕ ನಡೆದಿದೆ.

ಡಾ.ಕೆ. ಸುಧಾಕರ್, ಆರೋಗ್ಯ ಸಚಿವ

ವಿಶ್ವಾಸ ಮೂಡಿಸಲು ಸಾಧ್ಯವೇ?

ರಾಜ್ಯದ ಗ್ರಾಮಾಂತರ ಭಾಗದಲ್ಲಿ ಪ್ರತೀ 35 ಸಾವಿರ ಜನರಿಗೆ ಒಂದರಂತೆ ಸಿಎಚ್‌ಸಿ ಇದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡುತ್ತದೆ. ಆದರೆ, ಪಕ್ಕದ ತಮಿಳುನಾಡು ಹಾಗೂ ಕೇರಳದಲ್ಲಿ ಈ ಸೌಲಭ್ಯ ಪ್ರತೀ ಹತ್ತು ಸಾವಿರ ಜನರಿಗೆ ಒಂದರಂತೆ ಇದೆ. ತಮಿಳುನಾಡಿನ ಸಿಎಚ್‌ಸಿಯಲ್ಲಿ ರೋಗಿಗೆ ಯಾವುದೇ ಔಷಧಿಯನ್ನು ಹೊರಗಿನಿಂದ ಖರೀದಿಸುವಂತೆ ಹೇಳುವುದಿಲ್ಲ. ಹಾಗೊಂದು ವೇಳೆ ಔಷಧಿಯನ್ನು ಹೊರಗಿನಿಂದ ತರಿಸಿರುವುದು ಸರ್ಕಾರದ ಗಮನಕ್ಕೆ ಬಂದರೆ ಅಂಥವರನ್ನು ಕೂಡಲೇ ಕೆಲಸದಿಂದ ತೆಗೆದುಹಾಕಲಾಗುತ್ತದೆ. ನಮ್ಮ ಬಡಾವಣೆಯಲ್ಲಿ ವಾಸಿಸುವ ತಮಿಳುನಾಡು ಮೂಲದ ಮಹಿಳೆಯೊಬ್ಬರು ಹೆರಿಗೆಗಾಗಿ ತಮ್ಮೂರಿನ ಆಸ್ಪತ್ರೆಗೆ ಹೊರಟಿದ್ದರು. ಬೆಂಗಳೂರಿಗಿಂತಲೂ ಆ ಪುಟ್ಟ ಊರಿನಲ್ಲಿ ವೈದ್ಯಕೀಯ ಸೌಲಭ್ಯ ಅಷ್ಟೊಂದು ಚೆನ್ನಾಗಿದೆಯೇ ಎಂದು ಕೇಳಿದಾಗ, ಅಲ್ಲಿನ ಸಿಎಚ್‌ಸಿಯಲ್ಲಿ ಯಾವುದೇ ಖರ್ಚಿಲ್ಲದೆ ಹೆರಿಗೆ ಮಾಡಿಸಿ, ವಾರದವರೆಗೆ ಆರೈಕೆಮಾಡಿ ಕಳಿಸಲಾಗುತ್ತದೆ. ಅಲ್ಲಿನ ಸಿಎಚ್‌ಸಿಗಳಲ್ಲಿ ವೈದ್ಯಕೀಯ ಸೌಲಭ್ಯಗಳೂ ಚೆನ್ನಾಗಿವೆ ಎಂದು ಅವರ ಕುಟುಂಬದವರು ಹೇಳಿದರು. ನಮ್ಮ ಆರೋಗ್ಯ ಕೇಂದ್ರಗಳನ್ನೂ ಜನ ಹೀಗೆ ತುಂಬು ವಿಶ್ವಾಸದಿಂದ ಹುಡುಕಿಕೊಂಡು ಹೋಗುವಂತಹ ವಾತಾವರಣ ನಿರ್ಮಿಸಬೇಕಲ್ಲವೇ?

'ನರ್ಸ್‌ಗಳಿಗೆ ತರಬೇತಿ ಕೊಡಿ'

ವಿಶ್ವ ಆರೋಗ್ಯ ಸಂಸ್ಥೆಯ ಪ್ರಧಾನ ವಿಜ್ಞಾನಿ ಡಾ. ಸ್ವಾಮಿ ವಿಶ್ವನಾಥನ್, ಕೋವಿಡ್‌ನ ಮೊದಲ ಅಲೆ ಎದ್ದಾಗಲೇ ಒಂದು ಮಾತು ಹೇಳಿದ್ದರು. 'ವೈರಾಣುವಿನ ತೀವ್ರತೆ ಹೆಚ್ಚಿದರೆ ಗ್ರಾಮಭಾರತವೆಲ್ಲ ಕೋವಿಡ್‌ನ 'ಹಾಟ್‌ಬೆಡ್' ಆಗಲಿದೆ. ಎದುರಿಗಿರುವ ಈ ಸವಾಲನ್ನೇ ಒಂದು ದೊಡ್ಡ ಅವಕಾಶವನ್ನಾಗಿ ಮಾಡಿಕೊಂಡು ಗ್ರಾಮೀಣ ಭಾಗದಲ್ಲಿ ಕ್ಷಿಪ್ರಗತಿಯಲ್ಲಿ ಆರೋಗ್ಯ ಮೂಲಸೌಕರ್ಯ-ವನ್ನು ಹೆಚ್ಚಿಸಬೇಕು. ಹಾಗೆಯೇ ತರಬೇತಿ ಹೊಂದಿದ ಆರೋಗ್ಯ ಸೇವಕರ ಪಡೆಯನ್ನು ಕಟ್ಟಬೇಕು' ಎಂದು. ಆದರೆ, ಇವರ ಮಾತಾಗಲೀ ಹಳ್ಳಿಗರ ಆಕ್ರಂದನ-ವಾಗಲೀ ಯಾವುದೂ ಸರ್ಕಾರದ ಕಿವಿಗೆ ಬೀಳಲಿಲ್ಲ. 'ಗ್ರಾಮೀಣ ಭಾಗಗಳಲ್ಲಿ ವೈದ್ಯರ ಕೊರತೆ ಇರುವುದು ವಾಸ್ತವ. ಸರ್ಕಾರ ಇದನ್ನು ಒಪ್ಪಿಕೊಳ್ಳಬೇಕು. ಅಲ್ಲಿರುವ ನರ್ಸ್‌ಗಳಿಗೇ ಕೆಲವು ಚಿಕಿತ್ಸೆಗಳನ್ನು ನೀಡುವಂತಹ ತರಬೇತಿ ಕೋರ್ಸ್ ನಡೆಸಿದರೆ ಸಿಬ್ಬಂದಿ ಕೊರತೆಯನ್ನು ಒಂದು ಹಂತದವರೆಗೆ ನೀಗಿಸಬಹುದು' ಎಂದು ಡಾ. ದೇವಿ ಶೆಟ್ಟಿ ಕೂಡ ಈ ಹಿಂದೆ ಸಲಹೆ ನೀಡಿದ್ದರು. ತಜ್ಞರ ಮಾತುಗಳಿಗೆ ಸರ್ಕಾರ ಇನ್ನಾದರೂ ಕಿವಿಗೊಡಬೇಕು. ಹದಗೆಟ್ಟ ಗ್ರಾಮಾರೋಗ್ಯಕ್ಕೆ ಸೂಕ್ತ ಮದ್ದು ಅರೆಯುವ ಕೆಲಸವನ್ನು ಮಾಡಬೇಕು. ಏಕೆಂದರೆ, ಗ್ರಾಮದ ಆರೋಗ್ಯವೇ ಗ್ರಾಮಭಾರತದ ಇಂಧನ ಶಕ್ತಿಯಾಗಿ ಕೆಲಸ ಮಾಡುವುದು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ | ಪ್ರಜಾವಾಣಿ ನೋಡಿಯೊ

ಉತ್ತರ ಪ್ರದೇಶದಲ್ಲಿ ಆರ್‌ಎಸ್‌ಎಸ್ ಮಂಥನ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದ ಮಂದಾಕಿನಿ ನದಿ ತೀರದಲ್ಲಿರುವ ದೇಗುಲಗಳ ಪಟ್ಟಣ ಚಿತ್ರಕೂಟದಲ್ಲಿ ಐದು ದಿನಗಳ ಆರ್‌ಎಸ್‌ಎಸ್ ಚಿಂತನ ಮಂಥನ ಶಿಬಿರದಲ್ಲಿ ಪಾಲ್ಗೊಳ್ಳಲು ಸಂಘಟನೆಯ ಮುಖ್ಯಸ್ಥ ಮೋಹನ್ ಭಾಗವತ್ ಅವರು ಇಲ್ಲಿಗೆ ಬಂದಿದ್ದಾರೆ. ಮುಂಬರುವ ಉತ್ತರ ಪ್ರದೇಶ ಚುನಾವಣೆಗೆ ಕಾರ್ಯತಂತ್ರ ರೂಪಿಸುವುದು ಸಮ್ಮೇಳನದ ಮುಖ್ಯ ಕಾರ್ಯಸೂಚಿ ಎನ್ನಲಾಗಿದೆ.



ಮೋಹನ್ ಭಾಗವತ್

'ದೇಶದ ನಾಗರಿಕರು ಒಂದೇ ಡಿಎನ್‌ಎ ಹಂಚಿಕೊಂಡಿದ್ದಾರೆ ಮತ್ತು ಭಾರತದಲ್ಲಿ ಇಸ್ಲಾಂ ಧರ್ಮ ಅಪಾಯದಲ್ಲಿದೆ ಎಂದು ಮುಸ್ಲಿಮರು ಭಯಪಡಬಾರದು' ಎಂಬುದಾಗಿ ಅವರು ನೀಡಿದ್ದ ಹೇಳಿಕೆಗಳು ವಿವಾದ ಸೃಷ್ಟಿಸಿರುವ ಮಧ್ಯೆಯೇ ಈ ಶಿಬಿರ ಆಯೋಜನೆಗೊಂಡಿದೆ. ಈ ಹೇಳಿಕೆಗಳು ಕಾಂಗ್ರೆಸ್, ಬಿಎಸ್‌ಪಿ ಸೇರಿದಂತೆ ಇತರ ಪಕ್ಷಗಳನ್ನು ಕೆರಳಿಸಿವೆ. ಮುಸ್ಲಿಮರ ಮೇಲೆ ದೌರ್ಜನ್ಯದ-ಲ್ಲಿ ಭಾಗಿಯಾಗಿರುವ ಬಿಜೆಪಿಯ ನಾಯಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪಕ್ಷಗಳು ಆಗ್ರಹಿಸಿವೆ.

ಬಿಜೆಪಿ ಮೂಲಗಳ ಪ್ರಕಾರ, ಸಂಘದ ಅಖಿಲ ಭಾರತ ಕಾರ್ಯಕಾರಿ ಸಮಿತಿಯ 20ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಲಿದ್ದಾರೆ. ಗುರುವಾರದಿಂದ ಆರಂಭವಾಗಲಿ-ರುವ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್‌ನ ನೂರಾರು ಪ್ರಚಾರಕರು ಸೇರಲಿದ್ದಾರೆ.

ಭಾಗವತ್ ಅವರು ಶಿಬಿರ ಪ್ರಾರಂಭವಾಗುವ ಎರಡು ದಿನಗಳ ಮೊದಲೇ ಸಮ್ಮೇಳನ ಸ್ಥಳವನ್ನು ತಲುಪಿರುವುದು ಸಭೆಯ ಮಹತ್ವವನ್ನು ತಿಳಿಸುತ್ತದೆ. 'ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ ವಿಷಯವು ಸಭೆಯ ಕಾರ್ಯಸೂಚಿ-ಯಲ್ಲಿ ಇರಲಿದೆ' ಎಂದು ಹಿರಿಯ ಬಿಜೆಪಿ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಕೋವಿಡ್ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ಎಡವಿದೆ ಎಂಬ ವರದಿಗಳಿದ್ದು, ಅದರ ಪರಿಣಾಮವು ವಿಧಾನಸಭಾ ಚುನಾವಣೆಯ ಮೇಲೆ ಎಷ್ಟರ ಮಟ್ಟಿಗೆ ಆಗಲಿದೆ ಎಂಬುದರ ಕುರಿತೂ ಸಮಾಲೋಚನೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ. ಭಾಗವತ್ ಅವರು ರಾಜ್ಯದ ಹಿರಿಯ ಬಿಜೆಪಿ ಪದಾಧಿಕಾರಿಗಳನ್ನು ಭೇಟಿಯಾಗುವ ಸಾಧ್ಯತೆಯಿದೆ. ರಾಜ್ಯದ ಕೆಲವು ಹಿರಿಯ ಸಚಿವರು ಭಾಗವತ್ ಅವರನ್ನು ಭೇಟಿ ಮಾಡುವ ಸಾಧ್ಯತೆಯಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಎರಡು ತಿಂಗಳ ಹಿಂದೆಯಷ್ಟೇ ಲಖನೌದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಅವರು ಕಾರ್ಯತಂತ್ರ ಸಭೆಗಳನ್ನು ನಡೆಸಿದ ಬೆನ್ನಿಗೇ ಈ ಶಿಬಿರ ನಡೆಯುತ್ತಿರುವುದು ಮಹತ್ವ ಪಡೆದಿದೆ.

ಸೋನಿಯಾ ಭೇಟಿಯಾದ ಅಮರಿಂದರ್ ಸಿಂಗ್

ಪ್ರಜಾವಾಣಿ ವಾರ್ತೆ

ಅಮರಿಂದರ್

ಸಿಧು

ನವದೆಹಲಿ: ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧ ಎಂದು ಪಂಜಾಬ್ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಹೇಳಿದ್ದಾರೆ. ಪಂಜಾಬ್ ಕಾಂಗ್ರೆಸ್ ಘಟಕದಲ್ಲಿನ ಬಣ ರಾಜಕಾರಣದಿಂದಾಗಿ ಈ ಹೇಳಿಕೆ ಮಹತ್ವ ಪಡೆದುಕೊಂಡಿದೆ.

ಸಿಂಗ್ ಅವರು ಸೋನಿಯಾ ಅವರನ್ನು ಮಂಗಳವಾರ ಭೇಟಿಯಾಗಿ 90 ನಿಮಿಷ ಚರ್ಚಿಸಿದ್ದಾರೆ. ಪಂಜಾಬ್ ಘಟಕದಲ್ಲಿನ ಭಿನ್ನಮತ ಶಮನಕ್ಕಾಗಿ ಕಾಂಗ್ರೆಸ್‌ನ ಹಿರಿಯ ಮುಖಂಡ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ. ಈ ಸಮಿತಿಯ ಮುಂದೆ ಸಿಂಗ್ ಅವರು ಹಾಜರಾಗಿ ಬಣ ರಾಜಕಾರಣ ಅಂತ್ಯಗೊಳಿಸಲು ಯೋಜನೆಯೊಂದನ್ನು ಮಂಡಿಸಿದ್ದರು.

'ಸಿಧು ಬಗ್ಗೆ ನನಗೇನೂ ಗೊತ್ತಿಲ್ಲ. ನನ್ನ ಸರ್ಕಾರದ ಕೆಲಸಗಳ ಬಗ್ಗೆ ಚರ್ಚಿಸಿದ್ದೇನೆ. ರಾಜಕೀಯ ವಿಚಾರಗಳೂ ಪ್ರಸ್ತಾಪ ಆಗಿವೆ' ಎಂದು ಸಿಂಗ್ ಹೇಳಿದ್ದಾರೆ. ಸಿಂಗ್ ಅವರ ತೀವ್ರ ಟೀಕಾಕಾರ ನವಜೋತ್ ಸಿಂಗ್ ಸಿಧು ಅವರು ಪಕ್ಷದ ಪುನರ್‌ರಚನೆಯಲ್ಲಿ ಮಹತ್ವದ ಪಾತ್ರ ವಹಿಸಲಿದ್ದಾರೆಯೇ ಎಂಬ ಪ್ರಶ್ನೆಗೆ ಅವರು ಹೀಗೆ ಉತ್ತರಿಸಿದ್ದಾರೆ.

ಮುಖ್ಯಮಂತ್ರಿ ಕಾರ್ಯಶೈಲಿಯ ಬಗ್ಗೆ ಹಲವು ಮುಖಂಡರಲ್ಲಿ ಅಸಮಾಧಾನ ಇದೆ. ಸಿಖ್ಖರ ಪವಿತ್ರ ಗ್ರಂಥಕ್ಕೆ ಅವಮಾನ ಮಾಡಿದ 2015ರ ಪ್ರಕರಣದ ನಿರ್ವಹಣೆ, ಮಾದಕ ಪದಾರ್ಥ ಮತ್ತು ಸಾರಿಗೆ ಮಾಫಿಯಾ ವಿಚಾರದಲ್ಲಿ ಅತೃಪ್ತಿ ಇದೆ ಎನ್ನಲಾಗಿದೆ.

ಸಿಧು ಅವರು ಸಿಂಗ್ ವಿರುದ್ಧ ಬಹಿರಂಗವಾಗಿಯೇ ಟೀಕೆ ಮಾಡುತ್ತಿದ್ದಾರೆ. ಸಿಧು ಅವರಿಗೆ ಪಕ್ಷದಲ್ಲಿ ಪ್ರಮುಖ ಹುದ್ದೆ ಅಥವಾ ಸರ್ಕಾರದಲ್ಲಿ ಸ್ಥಾನ ನೀಡಬೇಕು ಎಂದು ಖರ್ಗೆ ನೇತೃತ್ವದ ಸಮಿತಿಯು ಸಲಹೆ ನೀಡಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣವಾಗಿದೆ. ಇಲ್ಲಿದೆ ನೋಡಿ ಅದ್ಭುತವಾದ ರಾಮ ಮಂದಿರ. ದೇವಾಲಯದ ವಿನ್ಯಾಸವನ್ನು ನೋಡಿ. ಅದ್ಭುತವಾದ ಕೆತ್ತನೆಯನ್ನು ನೋಡಿ' ಎಂಬ ವಿವರ ಇರುವ 3 ನಿಮಿಷಗಳ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಫೇಸ್‌ಬುಕ್‌ನಲ್ಲಿ ಈ ವಿಡಿಯೊವನ್ನು ಹೆಚ್ಚು ಬಾರಿ ಹಂಚಿಕೊಳ್ಳಲಾಗಿದೆ. ಜತೆಗೆ ವಾಟ್ಸ್‌ಆ್ಯಪ್‌ನಲ್ಲಿಯೂ ಈ ವಿಡಿಯೊ ವೈರಲ್ ಆಗಿದೆ. ವಿಡಿಯೊದಲ್ಲಿ ಇರುವ ಮಂದಿರಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ವಿವರ ಇರುವ ಪೋಸ್ಟರ್‌ಗಳೂ ವೈರಲ್ ಆಗಿವೆ.

ಈ ಪೋಸ್ಟರ್ ಮತ್ತು ವಿಡಿಯೊವಿನ ಅಸಲಿಯತ್ತನ್ನು ದಿ ಲಾಜಿಕಲ್ ಇಂಡಿಯನ್ ಪರಿಶೀಲಿಸಿದೆ. 'ವಿಡಿಯೊದಲ್ಲಿ ಇರುವ ದೇವಾಲಯದ ದೃಶ್ಯವನ್ನು ಸ್ಕ್ರೀನ್‌ಶಾಟ್ ಮಾಡಿ, ಗೂಗಲ್ ರಿವರ್ಸ್ ಇಮೇಜ್ ಸರ್ಚ್‌ನಲ್ಲಿ ಹುಡುಕಿದೆವು. ಇದು ಅಯೋಧ್ಯೆಯ ರಾಮ ಮಂದಿರವಾಗಿರದೆ, ಗುಜರಾತ್‌ನ ಜೈನ ತರಂಗ ತೀರ್ಥ ಧಾಮ ಎಂಬುದು ಪತ್ತೆಯಾಯಿತು. ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್, ಮಂದಿರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಆಗಾಗ್ಗೆ ಅಧಿಕೃತ ಮಾಹಿತಿಯನ್ನು ನೀಡುತ್ತಿರುತ್ತದೆ. 2021ರ ಮೇ 30ರಂದು ಈ ಟ್ರಸ್ಟ್ ಟ್ವೀಟ್ ಮಾಡಿದ್ದು, ರಾಮ ಮಂದಿರದ ಅಡಿಪಾಯ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಾಗಿದೆ ಎಂದು ಹೇಳಿದೆ. ಹೀಗಾಗಿ ವಿಡಿಯೊದಲ್ಲಿ ಇರುವ ದೇವಾಲಯ ಅಯೋಧ್ಯೆಯ ರಾಮ ಮಂದಿರ ಅಲ್ಲ ಎಂಬುದು ಸ್ಪಷ್ಟ' ಎಂದು ದಿ ಲಾಜಿಕಲ್ ಇಂಡಿಯನ್ ಹೇಳಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಹೊರಗಿನ ಅನುಭವಕ್ಕೆ ಆಂತರ್ಯದ ಪ್ರತಿಧ್ವನಿ

ಎದೆ ಮಾರುಹೋಗದೊಡೆ, ಕಣ್
ಸೊಬಗನುಂಡರೇಂ ? |
ಹೃದಯ ಮುಯ್ ಕೇಳದೊಡೆ, ನಲವ
ಸೂಸಿದರೇಂ ? ||
ಕದಡದಿರ್ದೊಡೆ ಮನವ, ತನುಸೊಗವ
ಸವಿದೊಡೇಂ ?|
ಮುದ ತಾನೆ ತಪ್ಪಲ್ಲ – ಮಂಕುತಿಮ್ಮ || 436 ||

ಪದ-ಅರ್ಥ: ಎದೆ = ಹೃದಯ, ಮಾರುಹೋಗದೊಡೆ = ಮರುಳಾಗದಿದ್ದರೆ, ಮುಯ್ = ಮುಯ್ಯ (ಪ್ರತಿಸ್ಪಂದನ), ಕದಡದಿರ್ದೊಡೆ = ಕಲಕದಿದ್ದರೆ, ಮುದ = ಸಂತೋಷ, ಸುಖ.

ವಾಚ್ಯಾರ್ಥ: ಕಣ್ಣು ಸುಂದರವಾದದ್ದನ್ನು ಕಂಡಾಗ ಹೃದಯ ಅದಕ್ಕೆ ಮರುಳಾಗದಿದ್ದರೆ, ಪ್ರೀತಿಯನ್ನು ಪಡೆದಾಗ ಹೃದಯ ಪ್ರತಿಸ್ಪಂದಿಸದಿದ್ದರೆ, ದೇಹ ಸುಖವನ್ನು, ತೃಪ್ತಿಯನ್ನು ಪಡೆದಾಗ ಅದು ಮನಸ್ಸನ್ನು ಕದಡದೆ ಹೋದರೆ ಏನು ಸುಖ? ಸುಖಪಡುವುದು ತಪ್ಪಲ್ಲ.

ವಿವರಣೆ: ಬದುಕಿನಲ್ಲಿ ರಸಗ್ರಹಣ ಬಹಳ ಮುಖ್ಯವಾದದ್ದು, ಬದುಕಿನ ಸ್ವಾರಸ್ಯಕ್ಕೆ ಕಾರಣವಾದದ್ದು. ರಸ ಎಂದರೆ ರುಚಿ, ಸವಿ, ಇಂಪು, ಒಲವು ಹೀಗೆ ಅನೇಕ ಅರ್ಥಗಳು ಹೊರಡುತ್ತವೆ. ಯಾವ ಗುಣದಿಂದಾಗಿ ಒಂದು ವಸ್ತು, ಭಾವ ನಮಗೆ ತುಂಬ ಪ್ರಿಯವಾಗುತ್ತದೋ, ಆ ಗುಣ ಅದರ ರಸ, ಅದರ ಸ್ವಾರಸ್ಯ. ಈ ರಸ ಒಂದು ರೀತಿಯಲ್ಲಿ ಎದೆಯೊಳಗಿನ ತುಮುಲ. ಏನನ್ನೋ ಕಂಡಾಗ, ಕೇಳಿದಾಗ, ಅನುಭವಿಸಿದಾಗ ನಮ್ಮ ಹೃದಯದಲ್ಲಿ ಭಾವನೆಗಳ ಏರುಪೇರಾಗುತ್ತದೆ. 'ಆಹಾ' ಎನ್ನಿಸುತ್ತದೆ, 'ಓಹೊ' ಎಂದು ಉದ್ಗಾರ ಬರುತ್ತದೆ. 'ಅಯ್ಯೋ' ಎಂಬ ದುಃಖ ಒತ್ತರಿಸಿ ಬಂದು ಕಣ್ಣು ಆರ್ದ್ರವಾಗುತ್ತದೆ. ಇದು ರಸಾನುಭವದಿಂದ ಬರುವ ಸೂಕ್ಷ್ಮಸಂವೇದನೆ. ಕೇದಾರನಾಥದಲ್ಲಿ ದೇವಸ್ಥಾನದ ಮುಂದೆ ನಿಂತಾಗ ಹಿಂದೆ ಹಿಮ ಪರ್ವತಗಳ ಸಾಲು ಹಿನ್ನೆಲೆಯಾಗಿ ಕಾಣುತ್ತದೆ. ಸೂರ್ಯೋದಯವಾದಾಗ, ಸೂರ್ಯನ ಮೊದಲ ಕಿರಣಗಳು ಪರ್ವತ ಶ್ರೇಣಿಗಳ ಮೇಲೆ ಬಿದ್ದಾಗ, ಥಟ್ಟನೇ ಹಿಮದ ಆಚ್ಛಾದನೆ ಮರೆಯಾಗಿ ಬಂಗಾರದ, ಥಳಥಳನೇ ಹೊಳೆಯುವ ಶಿಖರUಳನ್ನು ಕಂಡಾಗ, ಆದ ಸಂತೋಷವನ್ನು, ಆಶ್ಚರ್ಯವನ್ನು ವರ್ಣಿಸಲು ಶಬ್ದಗಳು ಸಾಲದೆ 'ಆಹ್, ಆಹ್' ಎಂಬ ಉದ್ಗಾರಗಳು ಹೊರಡುತ್ತವೆ. ಧನ್ಯತೆ ಮನದಲ್ಲಿ ಮೂಡುತ್ತದೆ. ಹೀಗೆ ಕಣ್ಣು ಸುಂದರವಾದದ್ದನ್ನು ಕಂಡಾಗ ಹೃದಯ ಸೂರೆಯಾಗುತ್ತದೆ. ಸುಂದರ ಎನ್ನುವ ಪದವೇ ಅದ್ಭುತ. ಇದು 'ಉನ್ದ' ಎಂಬ ಧಾತುವಿನಿಂದ ಬಂದದ್ದು. 'ಉನ್ದ' ಎಂದರೆ ಆರ್ದ್ರವಾಗಿಸುವುದು, ಒದ್ದೆ ಮಾಡುವುದು. ಯಾವುದು ಮನಸ್ಸನ್ನು ಭಾವನೆಗಳಿಂದ ತೋಯಿಸುತ್ತದೋ, ಸರಸವನ್ನಾಗಿಸುತ್ತದೋ, ಅದು ಸುಂದರ.

ನಲಿವು ಅಥವಾ ಪ್ರೀತಿ ಎನ್ನುವುದು ಪ್ರತಿಧ್ವನಿ ಇದ್ದಂತೆ. ಒಂದು ಪ್ರೀತಿಯ ಕೂಗಿಗೆ ಮರುಕೂಗು ಕೇಳಿಸುತ್ತದೆ, ಸಂತಾಪಕ್ಕೆ ಅನುತಾಪ ಬರುತ್ತದೆ, ಸಂತೋಷಕ್ಕೆ ಪ್ರತಿಯಾಗಿ ಪರಿತೋಷ, ಪ್ರಶ್ನೆಗೆ ಉತ್ತರ ದೊರೆಯುತ್ತದೆ. ಹೀಗೆ ಪ್ರೀತಿ ಮನುಷ್ಯನ ಹೃದಯನ್ನು ಕದಲಿಸುವ ಶಕ್ತಿ. ಅದು ಹೃದಯವನ್ನು ಕದಲಿಸದಿದ್ದರೆ ಅದೆಂತಹ ಪ್ರೀತಿ? ಅದಕ್ಕೆ ಯಾವ ಅರ್ಥವೂ ಇಲ್ಲ. ಇದರಂತೆಯೇ ದೇಹಕ್ಕೆ ದೊರೆತ ಸುಖವೂ ಮನವನ್ನು ಅಲುಗಾಡಿಸುತ್ತದೆ. ತಾಯಿಯ ಸ್ಪರ್ಶ, ಪ್ರಿಯೆಯ ಅಥವಾ ಪ್ರಿಯನ ಜೊತೆಗೆ ದೊರೆತ ದೇಹ ಸುಖ, ಮನದಲ್ಲಿ ತರಂಗಗಳನ್ನೇಳಿಸುತ್ತದೆ, ಮುದಗೊಳಿಸುತ್ತದೆ. ದೇಹಕ್ಕೆ ದೊರೆತ ಸಂತೋಷ ಮನಸ್ಸನ್ನು ತಟ್ಟದಿದ್ದರೆ ಅದೆಂತಹ ಸಂತೋಷ.? ಸಂತೋಷಪಡುವುದು ತಪ್ಪಲ್ಲ. ಅದು ನಮ್ಮ ಹಕ್ಕು ಕೂಡ. ಹೀಗೆ ನಮಗೆ ರಸಾನುಭವ ಹೊರಗಿನಿಂದ ದೊರೆತಾಗ ಆಂತರ್ಯದಲ್ಲಿ ಸುಖ ದೊರಕುತ್ತದೆ. ಬಹಿರನುಭವ ಅಂತರನುಭವಕ್ಕೆ ಆಧಾರಪೀಠ. ❖

ಗುಂಡಣ್ಣ

ದಿನ ಭವಿಷ್ಯ

ಬುಧವಾರ ಜುಲೈ 7, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ಜ್ಯೇಷ್ಠ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪುನರ್ವಸು ತ್ರಯೋದಶೀ ಗಂ. 50-25 (ರಾ. 2-17) ಬುಧವಾರ ನಿತ್ಯ ನಕ್ಷತ್ರ ರೋಹಿಣಿ ಗಂ. 30-21 (ಸಾ. 6-16) ಗಂಡ ನಾಮ ಯೋಗ ಗಂ. 25-30 ಉಪರಜ ಕರಣ ಗಂ. 18-0 ವಿಷ ಗಂ. 45-48 ಅಮೃತ ಗಂ. 21-19 ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 6-02 ಸೂರ್ಯಾಸ್ತ: 6-46 ಅದೃಷ್ಟ ಸಂಖ್ಯೆ 1 8

ಮೇಷ: ವ್ಯಾಪಾರ ವ್ಯವಹಾರಗಳಲ್ಲಿ ಹೆಚ್ಚಿನ ಲಾಭ. ರಾಜಕೀಯ ಕ್ಷೇತ್ರದಲ್ಲಿರುವ ಮಹಿಳೆಯರಿಗೆ ಸ್ಥಾನಮಾನಗಳು ಲಭ್ಯ. ಮನೆಯಲ್ಲಿ ಮಹಿಳೆಯರ ನಡುವೆ ಕಿರಿಕಿರಿ ಸಾಧ್ಯತೆ. ಮುಂದಾಲೋಚನೆಯಿಂದಾಗಿ ಸಂಕಷ್ಟಗಳು ಪರಿಹಾರ.

ವೃಷಭ: ಆರ್ಥಿಕ ಸಂಪನ್ಮೂಲಗಳು ಅಭಿವೃದ್ಧಿಯಾಗುವವು. ಮಾತಿನ ಬಗ್ಗೆ ಅತ್ಯಂತ ಜಾಗರೂಕರಾಗಿರುವುದು ಸೂಕ್ತ. ಗೃಹಿಣಿಯರು ಮಾತಿಗಿಂತಲೂ ಮೌನವಾಗಿರುವುದು ಒಳಿತು. ಮಕ್ಕಳ ಆರೋಗ್ಯದ ಕಡೆ ವಿಶೇಷ ಗಮನಹರಿಸಿ.

ಮಿಥುನ: ಸ್ವಂತ ಉದ್ಯಮ ಪ್ರಾರಂಭಿಸುವ ಬಗ್ಗೆ ಆಲೋಚಿಸುವಿರಿ. ಹಲವಾರು ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಯಶಸ್ವಿಯಾಗುವಿರಿ. ಪ್ರಾಪ್ತ ವಯಸ್ಕರಿಗೆ ವಿವಾಹ ಸಂಬಂಧಗಳು ಕೂಡಿಬರುವ ಸಾಧ್ಯತೆ ಕಂಡುಬರುತ್ತಿದೆ.

ಕರ್ಕಾಟಕ: ಮಹಿಳೆಯರೊಂದಿಗೆ ವ್ಯವಹರಿಸುವಾಗ ಜಾಗರೂಕರಾಗಿರಿ. ವಾಹನ ಚಾಲನೆಯಲ್ಲಿ ಅತ್ಯಂತ ಎಚ್ಚರಿಕೆ ಅಗತ್ಯ. ಬಂಧು ಬಾಂಧವರೊಂದಿಗಿನ ಮನಸ್ತಾಪ ದೂರವಾಗಿ ಬಾಂಧವ್ಯ ವೃದ್ಧಿಯಾಗುವ ಸಾಧ್ಯತೆ ಕಂಡುಬರುವುದು.

ಸಿಂಹ: ಮೇಲಾಧಿಕಾರಿಗಳಿಂದ ಕರ್ತವ್ಯದ ಬಗ್ಗೆ ಹೆಚ್ಚಿನ ಪ್ರಶಂಸೆಗೆ ಭಾಜನರಾಗುವಿರಿ. ಕುಟುಂಬದಲ್ಲಿ ನೆಮ್ಮದಿಯ ವಾತಾವರಣ ಮೂಡಲಿದೆ. ಬಂಧು ಮಿತ್ರರೊಡನೆ ಶುಭ ಸಮಾರಂಭಗಳಲ್ಲಿ ಭಾಗವಹಿಸುವಿರಿ.

ಕನ್ಯಾ: ಉದ್ಯೋಗ ಕ್ಷೇತ್ರದಲ್ಲಿ ದಿನದ ಮಟ್ಟಿಗೆ ಹೊಂದಾಣಿಕೆಯಿಂದಿರುವುದು ಸೂಕ್ತ. ಮಿತ್ರರ ಸಹಕಾರದಿಂದ ಧನಾಗಮನ. ಆರೋಗ್ಯದಲ್ಲಿ ಸುಧಾರಣೆ. ಹಿರಿಯರ ಸಲಹೆಗಳನ್ನು ಧಿಕ್ಕರಿಸದೆ ಪಾಲಿಸುವುದರಿಂದ ಶ್ರೇಯಸ್ಸಾಗುವುದು.

ತುಲಾ: ವೃತ್ತಿಯಲ್ಲಿ ಹೊಂದಾಣಿಕೆಯಿಂದಿರುವುದು ಉತ್ತಮ. ವಿಶೇಷ ವ್ಯಕ್ತಿಗಳ ಪರಿಚಯ ಉಂಟಾಗುವ ಸಾಧ್ಯತೆ. ವ್ಯವಹಾರದಲ್ಲಿ ಸಹೋದರರ ಸಹಕಾರ ದೊರಕಲಿದೆ. ನ್ಯಾಯಾಲಯದಲ್ಲಿನ ಕಟ್ಲೆಗಳು ನಿಮ್ಮ ಪರವಾಗುವುದು.

ವೃಶ್ಚಿಕ: ವ್ಯಾಪಾರದಲ್ಲಿ ಸ್ವಲ್ಪ ಮಟ್ಟಿನ ಏರುಪೇರಾಗುವ ಸಾಧ್ಯತೆ. ದೈನಂದಿನ ಕೆಲಸ ಕಾರ್ಯಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವಿರಿ. ದೂರದ ಪ್ರಯಾಣದಲ್ಲಿ ಎಚ್ಚರಿಕೆ ಅಗತ್ಯ. ವಿದ್ಯುತ್, ಬೆಂಕಿ ಮುಂತಾದವುಗಳಿಂದ ಜಾಗೃತರಾಗಿರಿ.

ಧನು: ಅಪರೂಪದ ವಸ್ತು ಒಡವೆಗಳನ್ನು ಖರೀದಿಸುವ ಸಾಧ್ಯತೆ. ದಿನ ನಿತ್ಯದ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಉತ್ಸಾಹ. ಹಿರಿಯರ ಆರೋಗ್ಯದ ಬಗ್ಗೆ ಗಮನ ಅಗತ್ಯ. ಆರ್ಥಿಕ ವಿಷಯದಲ್ಲಿ ಮಿತ್ರರಿಂದ ಸಲಹೆ ಸಹಕಾರಗಳು ಲಭ್ಯವಾಗಲಿವೆ.

ಮಕರ: ಬಟ್ಟೆ, ಹತ್ತಿ ಮುಂತಾದ ವ್ಯಾಪಾರಿಗಳಿಗೆ ವ್ಯವಹಾರದಲ್ಲಿ ಹೆಚ್ಚಳದೊಂದಿಗೆ ಆದಾಯವೂ ಹೆಚ್ಚುವುದು. ಅಮೂಲ್ಯ ವಸ್ತುಗಳನ್ನು ಸಂಗ್ರಹಿಸುವ ಸಾಧ್ಯತೆ.

ಕುಂಭ: ವ್ಯವಹಾರದಲ್ಲಿ ಸಹಜತೆಯಿಂದಿರುವಿರಿ. ಪ್ರಯಾಣ ಮಾಡುವಾಗ ಅತ್ಯಂತ ಜಾಗರೂಕರಾಗಿರುವುದು ಅಗತ್ಯ. ಕೃಷಿ ಕ್ಷೇತ್ರದಲ್ಲಿ ದುಡಿಯುವವರು ಆಯುಧಗಳನ್ನು ಬಳಸುವಾಗ ಎಚ್ಚರಿಕೆಯಿಂದಿರುವುದು ಸೂಕ್ತ.

ಮೀನ: ವ್ಯವಹಾರದ ಜಂಜಡದಿಂದ ಬಿಡುವು ಪಡೆಯಲಿದ್ದೀರಿ. ಇಷ್ಟಾರ್ಥ ಸಿದ್ಧಿಗಾಗಿ ಕುಟುಂಬ ಸಮೇತ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುವ ಸಾಧ್ಯತೆ. ಮನೋರಂಜನಾ ಕಾರ್ಯಗಳಲ್ಲಿ ಭಾಗವಹಿಸಲಿದ್ದೀರಿ.

ನಿಮ್ಮ ಜನ್ಮದಿನ 7-ಜುಲೈ: ಇಂದು ಅತ್ಯಂತ ಶುಭದಾಯಕವಾಗಿದ್ದು, ಹೆಚ್ಚಿನ ನಿರೀಕ್ಷೆಯಿಂದಲೇ ಕೆಲಸ ಕಾರ್ಯಗಳನ್ನು ಕೈಗೊಳ್ಳುವಿರಿ. ಶ್ರದ್ಧೆ ಶ್ರಮಗಳಿಗೆ ಅನುಸಾರವಾಗಿ ಪ್ರತಿಫಲಗಳನ್ನು ಹೊಂದುವಿರಿ. ಆರ್ಥಿಕ ಸಂಪನ್ಮೂಲಗಳು ಕೂಡಿಬಂದು ನಿಮ್ಮ ಯೋಜನೆಗಳು ಸಾಕಾರಗೊಳ್ಳುವವು. ಲೇವಾದೇವಿ ವ್ಯವಹಾರದಲ್ಲಿ ಜಾಗೃತರಾಗಿರುವುದು ಸೂಕ್ತ.

ಪದಬಂಧ 4650

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಾಂತಿಯ ಆವರಣವಿದು (5)
4.ಆಹಾರವನ್ನು ಕುಕ್ಕುತ್ತಿರುವ ಕೋಳಿ (3)
5.ಮಲಯಜದೊಡನಿರುವ ಹೂವು ಕಾಣುತ್ತಿದೆಯೇ? (3)
6.ಧ್ಯೇಯ ಸಾಧನೆಗೆ ತನ್ನ ಪ್ರಾಣವನ್ನೇ ಅರ್ಪಿಸಿದವನು (3)
8.ಮುಖ ನೋಡಿಯೇ ಹಾಕಿದ ಪೀಠ! (2)
9.ತಂಬಾಕು ಕೊಯ್ಯಲು ಬಳಸಿದ ಕಿರುಗತ್ತಿ (2)
10. ಇದು ಒಳ್ಳೆಯ ದಿನ (3)
14.ವಿಷಯ ತಿಳಿಸಿದಾಗ ವ್ಯಕ್ತವಾದ ದುಃಖ (3)
15.ಮನಸ್ಸಿಗೆ ಬಂದಂತೆ ನಡೆಯುವುದು (3)
16.ಕಾರಣವಿತ್ತು ವಿಷಯವನ್ನು ಅಲ್ಲಗಳೆ (5)

ಮೇಲಿಂದ ಕೆಳಕ್ಕೆ
1. ಅತಿಶಯ ಬುದ್ಧಿವಂತಿಕೆ (3)
2.ಮದುವೆ ಗಂಡು ಬೇಡಿರುವ ಕಾಣಿಕೆ (5)
3.ನರಕಾಧಿಪತಿ ಹತ್ತಿರವಿರುವ ಜೋಡಿ (3)
4.ಹುರುಕು ಹತ್ತಿರುವ ಚಿಹ್ನೆ! (3)
7.ತಾರೀಫು ಗಳಿಸಿರುವ ತೇದಿ (3)
8.ಬಿಡದಿಯಲ್ಲಿಯೇ ಪತ್ನಿ ಇದ್ದಾಳೆ! (3)
9.ಈತ ಅನುಯಾಯಿ (5)
11.ಸಂತಸದಿಂದ ನಲಿಯುತ್ತಿರುವ ಕೇಕಿ (3)
12.ದನಿ ಕೇಳಿಸಿಕೊಂಡು ಬಂದಿರುವ ಆನೆ (3)
13.ಮಿಂಚು ಹೊಳೆದಂತೆ ಒಮ್ಮೆಲೇ ಬುದ್ಧಿಗೆ ಗೋಚರಿಸುವಿಕೆ (3)

1		2		3	■	4		
	■		■	5			■	■
	■		■		■	6	7	
■	■		■	■	■	■		■
■	8		■	■	■	9		■
■		■	■	■	■		■	■
10		11	■	12	■		■	13
■	■	14			■		■	
15			■	16				

4649ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರೀಕ್ಷಕ 3.ಮಹಾಕಾಯ 5.ನಜರು 6.ತಿಲೋದಕ 8.ಕನಸು 10.ಅಭಿನೇತ್ರಿ 11.ಕಪಿಚೇಷ್ಟೆ 12.ಮಮತೆ 14.ಅವನತಿ 16.ಪರಶು 17.ಚಮತ್ಕಾರ 18.ಚಿಲಕತ್ತು

ಮೇಲಿಂದ ಕೆಳಕ್ಕೆ: 2.ಕನಕ 3.ಮರುಕ 4.ಯತ್ನ 7.ಲೋಕಾಭಿರಾಮ 9.ಸುಪ್ತಚೇತನ 13.ತೇಪರ 14.ಅಶುಚಿ 15.ಕಚ

ಸುಡೊಕು 5036

	8			9		5		3
6	7	5						
			1		5		7	6
		4					5	
	5					1		9
2				5	9		6	
1			9					
	3					6	4	1
8		6		3			9	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5035 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

IN THE COURT OF THE I ADDITIONAL CITY CIVIL JUDGE AT BENGALURU (CCH-2)
P & SC No. 301/2021

BETWEEN:
Sri. Kiran Balasubramaniam,
Son of A. G. Balasubramaniam,
Aged 54 years,
No. 278, II Main Road,
3rd Phase, J.P. Nagar,
Bengaluru - 560 078
...PETITIONER
AND:
NIL
...RESPONDENTS

PUBLIC NOTICE

Notice is hereby given that a petition has been made to the Hon'ble Court under section 372 of Indian Succession Act for issue of succession certificate in favour of the Petitioner herein being the only son/heir of late Sri. A. G. Balasubramaniam and Smt. Anitha Balasubramaniam who expired on 21-04-2021 and 13-04-2018 respectively in respect of the properties mentioned in the schedule hereunder.

Any person/s who have any objections/claims over the same are hereby called upon to appear in the City Civil Court (CCH-02) in person or by a pleader, duly instructed on 16-8-2021 at 11.00 A. M forenoon to show case against the Petitioner and to answer the claim made by the Petitioner herein with all the necessary documents, failing which the matter will be heard and proceeded with ex-parte.

SCHEDULE

5. The Petitioner submits that his late father and mother owned certain share certificates and the father of the Petitioner was having Bank Accounts at certain Banks, lockers as well as fixed Deposit Receipts, the details of which are as stated as below.

1. SB A/C No. 8698 standing in the name of Sri. A. G. Balasubramaniam and Smt. Anitha Balasubramaniam at Indian Overseas Bank, East End Main Road Branch, Bengaluru. Rs. 6,02,167.49 as on 30 April 2021
2. SB A/c No. 9627 standing in the name of Smt. Anitha Balasubramaniam & Sri. A. G. Balasubramaniam at Indian Overseas Bank, East End Main Road Branch, Bengaluru Rs.2,00,355.95 as on 30 April 2021
3. Share Certificate No. 242029 (Reg. Folio No. CNB071469) standing in the name of A.G. Balasubramaniam & Smt. Anitha Balasubramaniam. 500 equity shares of the value of Rs. 10 each
4. Share Certificate No. 242030 (Reg. Folio No. CNB071469) standing in the name of A.G. Balasubramaniam & Smt. Anitha Balasubramaniam 126 equity shares of the value of Rs. 10 each
5. Share Certificate No. 242017 (Reg. Folio No. CNB071468) standing in the name of Smt. Anitha Bala Subramaniam & Sri. A.G. Balasubramaniam. 500 equity shares of the value of Rs. 10 each
6. Share Certificate No. 242018 (Reg. Folio No. CNB071468) standing in the name of Smt. Anitha Bala Subramaniam & Sri. A.G. Balasubramaniam. 126 equity shares of the value of Rs. 10 each
7. Fixed Deposit Receipt No. 0907315 at Indian Overseas Bank, East End Main Road, Bengaluru standing in the name of A.G. Balasubramaniam Rs.1,00,000=00
8. Fixed Deposit Receipt No. 0907317 at Indian Overseas Bank, East End Main Road, Bengaluru standing in the name of A.G. Balasubramaniam Rs.1,00,000=00
9. Fixed Deposit Receipt No. 0938880 at Indian Overseas Bank, East End Main Road, Bengaluru standing in the name of A.G. Balasubramaniam Rs.1,00,000=00
10. Fixed Deposit Receipt No. 0938881 at Indian Overseas Bank, East End Main Road, Bengaluru standing in the name of A.G. Balasubramaniam Rs.1,00,000=00
11. Fixed Deposit Receipt No. 0938882 at Indian Overseas Bank, East End Main Road, Bengaluru standing in the name of A.G. Balasubramaniam Rs.1,00,000=00
12. Fixed Deposit Receipt No. 0938883 at Indian Overseas Bank, East End Main Road, Bengaluru standing in the name of A.G. Balasubramaniam Rs.1,00,000=00
13. Fixed Deposit Receipt No. 0938884 at Indian Overseas Bank, East End Main Road, Bengaluru standing in the name of A.G. Balasubramaniam. Rs.1,00,000=00
14. Bank Locker bearing No. 613 lying at Indian Overseas Bank, East End Main Road, Bengaluru.

Given under my hand and seal of this court on this 5th day of July 2021 at Bengaluru

By Order of the Court,
Asst. Registrar,
City Civil Court, Bengaluru

ADVOCATE FOR PETITIONER:
S. M. Kulkarni, Advocate,
No. 3/5, Arya Plaza,
Bull Temple Road,
Chamarajapet, Bengaluru-18

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರತಿಷ್ಠಿತ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೊಟದೊಂದಿಗೆ Salary+OT 16,800-45000/-.8792155097, 8792156697

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್‌ಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9141634619

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

TVS ಟ್ರೈನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೊಟವಿರುತ್ತದೆ. ಸಂಪರ್ಕಿಸಿ:7760014526, 9739544856

ಬೆಂಗಳೂರಿನಲ್ಲಿರುವ ಆಯುರ್ವೇದಿಕ್ ಕಂಪನಿಗೆ ಪ್ರತಿ ಜಿಲ್ಲೆಯಿಂದ ಆಯುರ್ವೇದಿಕ್ ವೈದ್ಯರು, ನೇರ ಮಾರಾಟ ಪ್ರತಿನಿಧಿಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ. 8892501007/ 9606701007

Hospital & Medical Jobs

CMS-ED: ALLOPATHY ಕೋರ್ಸ್ ಗೆ ಅರ್ಜಿ ಗ್ರಾಮೀಣ ಭಾಗದಲ್ಲಿ ಮತ್ತು ನಗರ ಪ್ರದೇಶದಲ್ಲಿ ಖಾಸಗಿಯಾಗಿ ವೈದ್ಯಕೀಯ ಸೇವೆ ಸಲ್ಲಿಸುತ್ತಿರುವ RMP ಮತ್ತುBAMS ವೈದ್ಯರು ಅರ್ಜಿಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ: 9686036504/ 9611096435 / 9591725892

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು-56 ಸಂಪರ್ಕಿಸಿ: 9606385001, 9606523337

ಬಂಧ ದಿನವೇ ಕೆಲಸ (ಮಾರ್ಕೆಟಿಂಗ್ಅಲ್ಲ) MNC ಕಂಪನಿಗಳಿಗೆ Primary,SSLC, PUC, ITI, any Degree Pass/Fail. ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI/ PFನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ. 15,000- 86,000. 7259865221, 7204144925

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಭಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9916551457/ 9916544057/ 9900371597/ 6363957317

ಬೆಂಗಳೂರಿನಲ್ಲಿ ಉಳಿದುಕೊಂಡು ಮನೆಗೆಲಸ, ಅಡುಗೆ, ಮಕ್ಕಳು ನೋಡಿಕೊಳ್ಳಲು ಹಿಂದಿ/ ಕನ್ನಡಬಲ್ಲ ಮಹಿಳೆಯರು ಬೇಕಾಗಿದ್ದಾರೆ. ಊಟ, ವಸತಿ ಸಂಬಳ. ಸಂಪರ್ಕಿಸಿ: 7411548115.

ವ್ಯಾಪಾರ

Business to Business

Business

ಮುದ್ರಾ, ಯೋಜನೆಯಲ್ಲಿ ಕೃಷಿ ಸ್ವಿರಾಸ್ತಿ ವೈಯಕ್ತಿಕ ಬಿಸಿನೆಸ್ ವಿದ್ಯಾ, ವಾಹನ ಸಾಲ 4% ವಾರ್ಷಿಕ ಬಡ್ಡಿಯಲ್ಲಿ ಸಾಲ ಲಭ್ಯ. 9172930942, 8095868219

ಭವಿಷ್ಯ

Astrology

★ಮಂತ್ರರ್ಮಿ ಮಾಂತ್ರಿಕರು★ ಕೇರಳ, ಕೊಳ್ಳೆಗಾಲದ ಮಂತ್ರಸಿದ್ದಿ ವಾಕ್ಸಿದ್ದಿಯಿಂದ ಸ್ತ್ರೀಪುರುಷ ವಶೀಕರಣ ಕೆಲಸ, ಗಂಟೆಗಳಲ್ಲಿ ಫೋನಿನ ಮೂಖಾಂತರ ಶಾಶ್ವತ ಪರಿಹಾರ. (ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★||ಶ್ರೀಶಾಕಂಬರಿದೇವಿ||★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ ಇನ್ನೂಯಾವುದೇ ಸಮಸ್ಯೆಗಳಿಗೆ 11ನಿಮಿಷದಲ್ಲಿ ಶಾಶ್ವತ ಪರಿಹಾರ. ಫ್ರಾ|| ವಿಶ್ವನಾಥ ಜೋಶಿ 7899899949

ಶ್ರೀ ರಾಘವೇಂದ್ರ ಸ್ವಾಮಿ ಜ್ಯೋತಿಷಾಲಯ ಪಂಡಿತ್ ರಾಘವೇಂದ್ರ ಗುರೂಜಿ ನಿಮ್ಮಯಾವುದೇ ಸಮಸ್ಯೆಯಿರಲಿ 3ದಿನದಲ್ಲಿ ಫೋನಿನ ಮೂಲಕ ಪರಿಹಾರ ಶತಸಿದ್ಧ ಮತ್ತಾಲಯ 7760909072

★ಅಂಭಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ)ನಿಮ್ಮ ಸಮಸ್ಯೆಗಳನ್ನೆಯರ 2ದಿನದಲ್ಲಿ ಪರಿಹಾರ. 9886755306

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು, ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ವೈಯಕ್ತಿಕ

Change of Name

ಮಂಜು W/O ಮರಿಯಪ್ಪ ಭದ್ರಯ್ಯ ನಂ.2570210M ಶ್ರೇಣಿ: EX NK(TS), ಆದ ನಾನು ನಂ.23/23, ಗುರುಪ್ರಿಯ ಕಲ್ಯಾಣ ಮಂಟಪ ರಸ್ತೆ, ಕಠಿಕಲ್ಲು, ಕಾಮಾಕ್ಷಿಪಾಳ್ಯ, ಬೆಂಗಳೂರು 560079 ರಲ್ಲಿ ವಾಸವಿದ್ದು ನಾನು ನನ್ನ ಹೆಸರನ್ನು 'ಮಂಜು' ನಿಂದ 'ಮಂಜು .ಬಿ' ಎಂದು ಬದಲಾಯಿಸಿ ಕೊಳ್ಳುತ್ತಿದ್ದೇನೆ ಮತ್ತು ನನ್ನ ಸರಿಯಾದ ಜನನ ದಿನಾಂಕ: 01.01.1963 ಆಗಿರುತ್ತದೆ. ಈ ಮೂಲಕ ವಕೀಲರಾದ ಎಸ್.ಕೆ.ಲಕ್ಷ್ಮಣರವರ ಹತ್ತಿರ ದಿನಾಂಕ: 02.07.2021 ರಂದು ಪ್ರಮಾಣ ಮಾಡಿ ನೋಟರಿ ಮಾಡಿಸಿರುತ್ತೇನೆ.

ಸಮಾಜಸೇವೆ

Others

ಅಂಗವಿಕಲರಿಗೆ ಉಚಿತ ತರಬೇತಿ: ಸಮರ್ಥನಂ ಅಂಗವಿಕಲರ ಸಂಸ್ಥೆ ಅಂಗವಿಕಲರಿಗಾಗಿ ವಸತಿಯುತ ವಿಶೇಷ ಕೌಶಲ ತರಬೇತಿ ಹಾಗೂ ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತಿದೆ. ಹತ್ತನೇ ತರಗತಿ ಪೂರ್ಣಗೊಳಿಸಿದ 18 ರಿಂದ 35 ವರ್ಷದೊಳಗಿನ ಆಸಕ್ತ ಅಂಗವಿಕಲರು ತರಬೇತಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 9449864693, 9480812139

For Online Classified Booking
Name Change / Education / Property / Job / Services and many more contact
9880856233
9886213331
dhclassifieds.com



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,834
ಇಂದಿನ ಅಂತ್ಯ	15,818
▼	16
ದಿನದ ಗರಿಷ್ಠ	15,914

ವಿನಿಮಯ ದರ

$ ಡಾಲರ್	74.55
£ ಪೌಂಡ್	103.2
€ ಯುರೊ	88.25
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹500
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹500

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1435 (1400)
ಸೋಯಾ (ರಿಫೈನ್ಡ್)	₹1330 (1340)
ಸೂರ್ಯಕಾಂತಿ (ರಿಫೈನ್ಡ್)	₹1360(1430)
ಪಾಮೋಲಿನ್	₹1175 (1170)

ಕಂಗನಾ, ಅರ್ನಬ್ ವಿರುದ್ಧದ ನೋಟಿಸ್: ವರದಿ ಸಲ್ಲಿಸಲು ಸಮಯ ವಿಸ್ತರಣೆ

ಮುಂಬೈ (ಪಿಟಿಐ): ಪತ್ರಕರ್ತ ಅರ್ನಬ್ ಗೋಸ್ವಾಮಿ ಮತ್ತು ನಟಿ ಕಂಗನಾ ರನೌತ್ ವಿರುದ್ಧ ದಾಖಲಾಗಿರುವ ಹಕ್ಕುಚ್ಯುತಿಗೆ ಸಂಬಂಧಿಸಿದ ವರದಿ ಸಲ್ಲಿಸಲು ಹಕ್ಕು ಬಾಧ್ಯತಾ ಸಮಿತಿಗೆ ನೀಡಿದ್ದ ಅವಧಿಯನ್ನು ವಿಸ್ತರಿಸಲು ಮಹಾರಾಷ್ಟ್ರ ವಿಧಾನಸಭೆ ಮಂಗಳವಾರ ಒಪ್ಪಿಗೆ ನೀಡಿದೆ.

ಕಂಗನಾ

ಅರ್ನಬ್

ಅವಧಿ ವಿಸ್ತರಿಸುವಂತೆ ಕೋರಿ ಹಕ್ಕು ಬಾಧ್ಯತಾ ಸಮಿತಿಯ ಮುಖ್ಯಸ್ಥ ದೀಪಕ್ ಕೇಸರ್ಕರ್ ಅವರು ಮಂಗಳವಾರ ಪ್ರಸ್ತಾವ ಮಂಡಿಸಿದರು. ಇದನ್ನು ಸದನದಲ್ಲಿ ಧ್ವನಿ ಮತದ ಮೂಲಕ ಅಂಗೀಕರಿಸಿದ್ದು, ಮುಂದಿನ ಅಧಿವೇಶನದ ಕೊನೆಯ ದಿನದೊಳಗೆ ವರದಿ ಸಲ್ಲಿಸಲು ಅವಕಾಶ ನೀಡಲಾಗಿದೆ.

'ಬಾಲಿವುಡ್ ನಟ ಸುಶಾಂತ್ ಸಿಂಗ್ ರಜಪೂತ್ ಸಾವಿಗೆ ಸಂಬಂಧಿಸಿದಂತೆ ಸುಳ್ಳು ಹೇಳಿಕೆ ನೀಡುವ ಮೂಲಕ ರನೌತ್ ಮತ್ತು ಗೋಸ್ವಾಮಿ ಅವರು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ಸಚಿವ ಆದಿತ್ಯ ಠಾಕ್ರೆ ಮತ್ತು ಎಂವಿಎ ನಾಯಕರ ಮಾನಹಾನಿಯನ್ನುಂಟುಮಾಡಿದ್ದಾರೆ' ಎಂದು ಆರೋಪಿಸಿ ಶಾಸಕ ಪ್ರತಾಪ್ ಸರ್‌ನಾಯಕ್ ಹಕ್ಕುಚ್ಯುತಿಯ ನಿರ್ಣಯದ ನೋಟಿಸ್ ಅನ್ನು ಸಭಾಧ್ಯಕ್ಷರಿಗೆ ಕಳುಹಿಸಿದ್ದರು.

ಅಕ್ರಮ ಹಣ ವರ್ಗಾವಣೆ: ಅನಿಲ್ ದೇಶಮುಖ್ ಸಹಚರರು ನ್ಯಾಯಾಂಗ ವಶಕ್ಕೆ

ಮುಂಬೈ (ಪಿಟಿಐ): ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರ ಇಬ್ಬರು ಸಹಚರರನ್ನು ಪಿಎಂಎಲ್ಎ ವಿಶೇಷ ನ್ಯಾಯಾಲಯವು ಇದೇ 20ರ ತನಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ದೇಶಮುಖ್ ಅವರ ಆಪ್ತ ಕಾರ್ಯದರ್ಶಿ ಸಂಜೀವ್ ಪಾಲಂಡೆ ಮತ್ತು ಆಪ್ತ ಸಹಾಯಕ ಕುಂದನ್ ಶಿಂಧೆ ಅವರನ್ನು ಜಾರಿ ನಿರ್ದೇಶನಾಲಯವು ಜೂನ್ 26ರಂದು ಬಂಧಿಸಿತ್ತು. ಇವರಿಬ್ಬರ ವಿರುದ್ಧ ಪಿಎಂಎಲ್ಎ ಅಡಿ ಪ್ರಕರಣ ದಾಖಲಿಸಲಾಗಿದೆ.

ಈ ಇಬ್ಬರು ಆರೋಪಿಗಳನ್ನು ನ್ಯಾಯಾಧೀಶರ ಮುಂದೆ ಮಂಗಳವಾರ ಹಾಜರುಪಡಿಸಲಾಗಿತ್ತು. ಆರೋಪಿಗಳು ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಇ.ಡಿ ನ್ಯಾಯಾಲಕ್ಕೆ ತಿಳಿಸಿದೆ. ಈ ಹಿನ್ನೆಲೆಯಲ್ಲಿ ನ್ಯಾಯಾಲಯವು ಇಬ್ಬರು ಆರೋಪಿಗಳನ್ನು ಜು.20ರ ತನಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಸಂಕ್ಷಿಪ್ತ ಸುದ್ದಿ

ಕೆನರಾ ಬ್ಯಾಂಕ್: ಸಾಲದ ಬಡ್ಡಿದರದಲ್ಲಿ ಯಥಾಸ್ಥಿತಿ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್, ಎಂಸಿಎಲ್ಆರ್ ಆಧರಿಸಿದ ಎಲ್ಲ ಅವಧಿಗಳ ಸಾಲಗಳ ಮೇಲಿನ ಬಡ್ಡಿ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ.

ಒಂದು ತಿಂಗಳ ಎಂಸಿಎಲ್ಆರ್ ಶೇಕಡ 6.70ರಷ್ಟು, ಮೂರು ತಿಂಗಳ ಎಂಸಿಎಲ್ಆರ್ ಶೇ 6.95ರಷ್ಟು, ಆರು ತಿಂಗಳ ಎಂಸಿಎಲ್ಆರ್ ಶೇ 7.30ರಷ್ಟು ಹಾಗೂ ಒಂದು ವರ್ಷದ ಎಂಸಿಎಲ್ಆರ್ ಶೇ 7.35ರಷ್ಟೇ ಮುಂದುವರಿಯಲಿದೆ ಎಂದು ಅದು ಪ್ರಕಟಣೆಯಲ್ಲಿ ತಿಳಿಸಿದೆ.

ಬುಧವಾರದಿಂದ ಮುಂದಿನ ಪರಿಷ್ಕರಣೆಯವರೆಗೆ ಇದೇ ದರ ಇರಲಿದೆ.

ಟಿವಿಎಸ್ ಎನ್‌ಟಾರ್ಕ್ 125 ರೇಸ್ ಎಕ್ಸ್‌ಪಿ ಬಿಡುಗಡೆ

ನವದೆಹಲಿ (ಪಿಟಿಐ): ಟಿವಿಎಸ್ ಮೋಟರ್ ಕಂಪನಿಯು ಎನ್‌ಟಾರ್ಕ್ 125 ರೇಸ್ ಎಕ್ಸ್‌ಪಿ ಸ್ಕೂಟರ್ ಬಿಡುಗಡೆ ಮಾಡಿದ್ದು, ದೆಹಲಿಯಲ್ಲಿ ಇದರ ಎಕ್ಸ್ ಷೋರೂಂ ಬೆಲೆ ₹ 83,275 ಇದೆ.

ಈ ಸ್ಕೂಟರ್, ಡ್ಯುಯಲ್ ರೈಡ್ ಮೋಡ್, 10.2 ಎಚ್‌ಪಿ ಪವರ್, ವಾಯ್ಸ್ ಅಸಿಸ್ಟ್ ಹಾಗೂ ಕನೆಕ್ಟೆಡ್ ಟೆಕ್ನಾಲಜಿಯಂತಹ ಹಲವು ವೈಶಿಷ್ಟ್ಯಗಳನ್ನು ಹೊಂದಿದೆ ಎಂದು ಕಂಪನಿಯು ತಿಳಿಸಿದೆ

ಕೋವಿಡ್ ನಿಯಂತ್ರಣಕ್ಕೆ ಲಾಕ್‌ಡೌನ್ ಹೇರಿಕೆಯ ಪರಿಣಾಮ

₹ 1 ಲಕ್ಷ ಕೋಟಿಗಿಂತ ಕೆಳಗಿಳಿದ ಜಿಎಸ್‌ಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಸಂಗ್ರಹ ಆಗಿರುವ ಮಾಸಿಕ ವರಮಾನವು ಎಂಟು ತಿಂಗಳಲ್ಲಿ ಇದೇ ಮೊದಲ ಬಾರಿಗೆ ₹ 1 ಲಕ್ಷ ಕೋಟಿಗಿಂತ ಕೆಳಕ್ಕೆ ಬಂದಿದೆ.

ಕೋವಿಡ್ ಪ್ರಕರಣ ಹೆಚ್ಚಳ ಮತ್ತು ಅದನ್ನು ನಿಯಂತ್ರಿಸಲು ಹೇರಿದ ಲಾಕ್‌ಡೌನ್‌ನಿಂದಾಗಿ ವಾಣಿಜ್ಯ ವಹಿವಾಟುಗಳ ಮೇಲೆ ಪರಿಣಾಮ ಉಂಟಾಗಿದೆ. ಹೀಗಾಗಿ ಜೂನ್‌ನಲ್ಲಿ ₹ 92,849 ಕೋಟಿ ವರಮಾನ ಸಂಗ್ರಹ ಆಗಿದೆ.

2020ರ ಆಗಸ್ಟ್ ಬಳಿಕ ಅತ್ಯಂತ ಕಡಿಮೆ ಮಟ್ಟದ ವರಮಾನ ಸಂಗ್ರಹ ಇದಾಗಿದೆ. ಆದರೆ, ಹಿಂದಿನ ವರ್ಷದ ಇದೇ ತಿಂಗಳಿಗೆ ಹೋಲಿಸಿದರೆ ವರಮಾನ ಸಂಗ್ರಹವು ಶೇಕಡ 2ರಷ್ಟು ಹೆಚ್ಚಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಮಂಗಳವಾರ ತಿಳಿಸಿದೆ.

2020ರ ಜೂನ್‌ನಲ್ಲಿ ₹ 90,917 ಕೋಟಿ ವರಮಾನ ಸಂಗ್ರಹ ಆಗಿತ್ತು. ಈ ವರ್ಷದ ಜೂನ್‌ಗೂ ಮೊದಲು, ಮೇ ತಿಂಗಳವರೆಗೆ ಸತತ ಎಂಟು ತಿಂಗಳಿಂದ ಜಿಎಸ್‌ಟಿ ಸಂಗ್ರಹವು ₹ 1 ಲಕ್ಷ ಕೋಟಿಗಿಂತ ಹೆಚ್ಚು ಇತ್ತು.

ಜೂನ್‌ನಲ್ಲಿ ಆಗಿರುವ ಒಟ್ಟಾರೆ ತೆರಿಗೆ ಸಂಗ್ರಹದಲ್ಲಿ ಕೇಂದ್ರ ಜಿಎಸ್‌ಟಿ ಮೂಲಕ ₹ 16,424 ಕೋಟಿ, ರಾಜ್ಯ ಜಿಎಸ್‌ಟಿ ಮೂಲಕ ₹ 20,397 ಕೋಟಿ, ಸಮಗ್ರ ಜಿಎಸ್‌ಟಿ ಮೂಲಕ ₹ 49,079 ಕೋಟಿ ಹಾಗೂ ಸೆಸ್ ಮೂಲಕ ₹ 6,949 ಕೋಟಿ ಸಂಗ್ರಹ ಆಗಿದೆ ಎಂದು ಸಚಿವಾಲಯ ಹೇಳಿದೆ.

ಜೂನ್‌ನಲ್ಲಿ ಸಂಗ್ರಹ ಆಗಿರುವ ವರಮಾನವು ಮೇ ತಿಂಗಳಿನಲ್ಲಿ ಆಗಿರುವ ವಾಣಿಜ್ಯ-ವಹಿವಾಟುಗಳಿಗೆ ಸಂಬಂಧಿಸಿದ್ದಾಗಿದೆ. ಕೋವಿಡ್‌ನಿಂದಾಗಿ ಮೇ ತಿಂಗಳಿನಲ್ಲಿ ಬಹುತೇಕ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಸಂಪೂರ್ಣ ಅಥವಾ ಭಾಗಶಃ ಲಾಕ್‌ಡೌನ್ ಹೇರಿದ್ದವು ಎಂದು ಸಚಿವಾಲಯವು ತಿಳಿಸಿದೆ.



ಜೂನ್‌ನಲ್ಲಿ ಸೃಷ್ಟಿಯಾಗಿರುವ ಇ–ವೇ ಬಿಲ್ ಅಂಕಿ–ಅಂಶವನ್ನು ಗಮನಿಸಿದರೆ ಮುಂಬರುವ ತಿಂಗಳುಗಳಲ್ಲಿ ವರಮಾನ ಸಂಗ್ರಹವು ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಸಚಿವಾಲಯ ಹೇಳಿದೆ. ಮೇ ತಿಂಗಳಿನಲ್ಲಿ 3.99 ಕೋಟಿ ಇ–ವೇ ಬಿಲ್ ಸೃಷ್ಟಿಯಾಗಿತ್ತು. ಇದು ಜೂನ್‌ನಲ್ಲಿ 5.5 ಕೋಟಿಗೆ ಏರಿಕೆ ಕಂಡಿದೆ.

2020–21ನೇ ಹಣಕಾಸು ವರ್ಷದ ಮೊದಲ ತ್ರೈಮಾಸಿಕಕ್ಕೆ ಹೋಲಿಸಿದರೆ, ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದ ಜಿಎಸ್‌ಟಿ ಸಂಗ್ರಹವು ಎರಡು ಪಟ್ಟು ಹೆಚ್ಚಿಗೆ ಇದೆ. ಕಳೆದ ವರ್ಷದ ಕಠಿಣ ಸ್ವರೂಪದ ಲಾಕ್‌ಡೌನ್‌ಗೆ ಹೋಲಿಸಿದರೆ ಈ ಬಾರಿಯ ಲಾಕ್‌ಡೌನ್ ಪರಿಣಾಮವು ಕಡಿಮೆ ಎನ್ನುವುದನ್ನು ಇದು ಸೂಚಿಸುತ್ತಿದೆ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಆರ್ಥಿಕ ತಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಹೆಸರು, ಊರು ಬೇಡ

• **ಪ್ರಶ್ನೆ: ನಾನು ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಕ್ರೆಡಿಟ್ ಕಾರ್ಡ್‌ನ ಹಣ ತುಂಬಲಾಗದೆ ₹ 60 ಸಾವಿರಕ್ಕೆ ಒ.ಟಿ.ಎಸ್ ಪಡೆದು ತೀರಿಸಿದ್ದೆ. ಇದರಿಂದಾಗಿ ನನಗೆ ಎಲ್ಲಿಯೂ ಸಾಲ ದೊರೆಯುತ್ತಿಲ್ಲ. ಕೆಲವು ದಿನಗಳ ಹಿಂದೆ ನನಗೊಂದು ಇ–ಮೇಲ್ ಬಂದಿದೆ. ನೀವು ₹ 800 ತಕ್ಷಣ ಕಳಿಸಿ, ಸಿಬಿಲ್ ರೇಟಿಂಗ್ ಸರಿಪಡಿಸಲಾಗುತ್ತದೆ ಎಂದು ಅದರಲ್ಲಿ ಹೇಳಲಾಗಿದೆ. ಇದನ್ನು ನಂಬಬಹುದೇ ತಿಳಿಸಿ.**

ಉತ್ತರ: ಇತ್ತೀಚಿನ ದಿನಗಳಲ್ಲಿ ನಮ್ಮ ಮೊಬೈಲ್‌ಗಳಿಗೆ, 'ಲಾಟರಿ ಹೊಡೆದಿದೆ, ಆದಾಯ ತೆರಿಗೆ ರೀಫಂಡ್ ಬಂದಿದೆ' ಹಾಗೂ 'ಬಹುಮಾನ ಬಂದಿದೆ' ಎಂಬ ಹತ್ತು ಹಲವು ಸುಳ್ಳು ಇ–ಮೇಲ್‌ಗಳು, ಎಸ್‌ಎಂಎಸ್‌ಗಳು, ವಾಟ್ಸ್‌ಆ್ಯಪ್ ಸುದ್ದಿಗಳು ಬರುತ್ತಿರುವುದನ್ನು ನೋಡುತ್ತಿದ್ದೇವೆ. ಅದೇ ರೀತಿ ನೀವು ₹ 800 ತುಂಬಿ ಸಿಬಿಲ್ ರೇಟಿಂಗ್ ಉತ್ತಮ ಮಾಡಿಕೊಳ್ಳಲು ಎಂದಿಗೂ ಸಾಧ್ಯವಿಲ್ಲ. ಹಣ ಕಳುಹಿಸಲು ಹೋಗದಿರಿ. ನಮ್ಮ ಓದುಗರಿಗೊಂದು ಕಿವಿಮಾತು. ಸಾಲ ಅಥವಾ ಕ್ರೆಡಿಟ್ ಕಾರ್ಡ್ ತುಂಬಲು ಒ.ಟಿ.ಎಸ್. (ಒನ್ ಟೈಮ್ ಸೆಟಲ್‌ಮೆಂಟ್) ಪಡೆದಿದ್ದರೆ ಸಾಲದ ಕಂತು ಮತ್ತು ಬಡ್ಡಿ (ಇಎಂಐ) ಸರಿಯಾಗಿ ತುಂಬದಿರುವಲ್ಲಿ ಅಥವಾ ಜಾಮೀನು ಹಾಕಿ ಸಾಲಗಾರ ಸಮಯಕ್ಕೆ ಸರಿಯಾಗಿ ಮರುಪಾವತಿಸದೆ ಚೆಕ್ ಬೌನ್ಸ್ ಆದರೆ, ಮುಂದೆ ಯಾವುದೇ ಬ್ಯಾಂಕ್‌ನಲ್ಲಿ ಸಾಲ ದೊರೆಯುವುದಿಲ್ಲ. ಯುವಕರು ಉದ್ಯೋಗ ಹುಡುಕಿ ಹೋಗುವಾಗ ಕೂಡಾ ಸಿಬಿಲ್ ರೇಟಿಂಗ್ಸ್ ನೋಡುತ್ತಾರೆ. ಬಹಳಷ್ಟು ಜನರು ಕ್ರೆಡಿಟ್ ಕಾರ್ಡ್‌ನ ದುರ್ಬಳಕೆ ಮಾಡಿ ತಮ್ಮ ಭವಿಷ್ಯವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಆರ್ಥಿಕ ಶಿಸ್ತು ಹಾಗೂ ಹಾಸಿಗೆ ಇದ್ದಷ್ಟು ಕಾಲು ಚಾಚುವ ಅಭ್ಯಾಸವಿದ್ದರೆ ಜೀವನ ಸುಖಮಯವಾಗುತ್ತದೆ.

ಶಾಂತಾ, ಮೂಡುಬಿದಿರೆ

• **ಪ್ರಶ್ನೆ: ನಾನು ಗೃಹಿಣಿ. ನನಗೆ ನನ್ನ ತಂದೆಯವರಿಂದ 10 ಸೆಂಟ್ಸ್ ಜಾಗ ದಾನ ಪತ್ರ ಮುಖೇನ ಬಂದಿದೆ. ನನ್ನ ವಯಸ್ಸು 56 ವರ್ಷ. ನನಗೆ 28 ವರ್ಷದ ಮಗ, 30 ವರ್ಷದ ಮಗಳು ಇದ್ದಾರೆ. ಇಬ್ಬರಿಗೂ ಮದುವೆ ಆಗಿದೆ. 10 ಸೆಂಟ್ಸ್ ಜಾಗ ಮಾರಾಟ ಮಾಡಬೇಕೆಂದಿದ್ದೇನೆ. ಇದರ ಬೆಲೆ ₹ 75 ಲಕ್ಷ. ನಾನು ₹ 25 ಲಕ್ಷ ಇರಿಸಿಕೊಂಡು ಉಳಿದ ₹ 50 ಲಕ್ಷ ಮಕ್ಕಳಿಗೆ ಸರಿಸಮನಾಗಿ ಹಂಚಬೇಕೆಂದಿದ್ದೇನೆ. ತೆರಿಗೆ ವಿಚಾರದಲ್ಲಿ ಮಾಹಿತಿ ಇಲ್ಲ. ನಿಮ್ಮ ಅಂಕಣವನ್ನು ಪ್ರತೀ ಬುಧವಾರ ಓದುತ್ತಿದ್ದೇನೆ. ನೀವು ಇದೇ ವಿಚಾರದಲ್ಲಿ ಹಲವರಿಗೆ ಸಲಹೆ ನೀಡಿದ್ದನ್ನು ನೋಡಿದ್ದೇನೆ. ನನಗೂ ಸೂಕ್ತ ಸಲಹೆ ನೀಡಿ.**

ಉತ್ತರ: ಸ್ಥಿರ ಆಸ್ತಿ ಮಾರಾಟ ಮಾಡಿದಾಗ ಬಂಡವಾಳ ವೃದ್ಧಿ ತೆರಿಗೆ ಬಂದೇ ಬರುತ್ತದೆ. ತೆರಿಗೆ ಉಳಿಸಲು ಸೆಕ್ಷನ್ 54ಇಸಿ ಆಧಾರದ ಮೇಲೆ ಗರಿಷ್ಠ ₹ 50 ಲಕ್ಷ ಎನ್‌ಎಚ್‌ಎಐ/ಆರ್‌ಇಸಿ ಬಾಂಡ್‌ಗಳಲ್ಲಿ 5 ವರ್ಷಗಳ ಅವಧಿಗೆ ಇಡಬಹುದು ಅಥವಾ ಸಂಪೂರ್ಣ ಹಣದಿಂದ ಬೇರೊಂದು ಮನೆ ಮಾಡಿಕೊಳ್ಳಬಹುದು. ನಿಮಗೆ 10 ಸೆಂಟ್ಸ್ ಜಾಗ, 2000ನೇ ಇಸವಿಗೂ ಮುಂಚೆ ನಿಮ್ಮ ತಂದೆಯವರಿಂದ ಬಂದಂತೆ ಕಾಣುತ್ತದೆ. ಇದು ನಿಜವಾದಲ್ಲಿ 2001ರ ಏಪ್ರಿಲ್ 1ರ ಈ ಜಾಗದ ಸರ್ಕಾರಿ ಬೆಲೆಯನ್ನು ನಿಮ್ಮ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ವಿಚಾರಿಸಿ ತಿಳಿಯಿರಿ. 2001ರಲ್ಲಿ ಕಾಸ್ಟ್ ಆಫ್ ಇನ್‌ಫ್ಲೇಷನ್ ಇಂಡೆಕ್ಸ್ 100 ಇದ್ದು ಈಗ 301 ಆಗಿದೆ. ಅಂದರೆ ನಿಮ್ಮ ಜಾಗದ 2001ರ ಬೆಲೆಯ ಮೂರರಷ್ಟನ್ನು ಈಗ ಮಾರಾಟ ಮಾಡಿ ಬರುವ ಹಣದಿಂದ ಕಳೆದು ಉಳಿದ ಹಣಕ್ಕೆ ಮಾತ್ರ ತೆರಿಗೆ ಕೊಡಬಹುದು ಅಥವಾ ಇಲ್ಲಿ ತಿಳಿಸಿದಂತೆ ಸರ್ಕಾರಿ ಬಾಂಡ್ ಖರೀದಿಸಬಹುದು. ಸರ್ಕಾರಿ ಬಾಂಡ್ ಕೊಳ್ಳುವಾಗ ವಿಂಗಡಿಸಿ ನಿಮ್ಮ ಹೆಸರಿನಲ್ಲಿ ಕೊಂಡು ಮಕ್ಕಳಿಗೆ ನಾಮ ನಿರ್ದೇಶನ ಮಾಡಬಹುದು. ಏನಾದರೂ ಸಂಶಯ ಇದ್ದರೆ ನನಗೆ ಕರೆ ಮಾಡಿ.

ನಾಗರಾಜ, ರಾಜಾಜಿನಗರ, ಬೆಂಗಳೂರು

• **ಪ್ರಶ್ನೆ: ನಾನು ₹ 5 ಲಕ್ಷವನ್ನು ಷೇರು ಮಾರುಕಟ್ಟೆ ಹಾಗೂ ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸಬೇಕೆಂದಿದ್ದೇನೆ. ದಯಮಾಡಿ ಸಲಹೆ ನೀಡಿ.**

ಉತ್ತರ: ಷೇರು ಮಾರುಕಟ್ಟೆಯಲ್ಲಿ 6,800ಕ್ಕೂ ಹೆಚ್ಚಿನ ಕಂಪನಿಗಳ ಷೇರುಗಳ ವಹಿವಾಟು ನಡೆಯುತ್ತಿರುತ್ತದೆ. ಸ್ಮಾಲ್‌ಕ್ಯಾಪ್, ಮಿಡ್‌ಕ್ಯಾಪ್, ಲಾರ್ಜ್ ಕ್ಯಾಪ್ ಷೇರುಗಳು ವ್ಯವಹಾರಕ್ಕೆ ದೊರೆಯುತ್ತವೆ. ನೀವು ಸೂಚ್ಯಂಕದ (ನಿಫ್ಟಿ–50, ಸೆನ್ಸೆಕ್ಸ್–30) ಷೇರುಗಳನ್ನು ಮಾತ್ರ ಆರಿಸಿಕೊಳ್ಳಿ. ಯಾವುದೇ ಕಂಪನಿಯ ಒಂದೇ ಒಂದು ಷೇರು ಕೂಡಾ ಕೊಳ್ಳಬಹುದು ಹಾಗೂ ಮಾರಾಟ ಮಾಡಬಹುದು. ವ್ಯವಹಾರ ಮಾಡುವ ಮುನ್ನ ಬ್ರೋಕರ್ ಮುಖಾಂತರ ಡಿಮ್ಯಾಟ್ ಖಾತೆ ಪ್ರಾರಂಭಿಸಿ. ಸೂಚ್ಯಂಕ ಬಹಳ ಕೆಳಗೆ ಬಂದಾಗ ಕೊಂಡು ಮೇಲೆ ಹೋದಾಗ ಮಾರಾಟ ಮಾಡಿ ಲಾಭ ಗಳಿಸಿರಿ. ಷೇರು ಮಾರುಕಟ್ಟೆ ಹಾಗೂ ಮ್ಯೂಚುವಲ್ ಫಂಡ್ ಹೂಡಿಕೆಯಲ್ಲಿ ಜ್ಞಾನ, ಅನುಭವ, ಅಧ್ಯಯನದ ಅವಶ್ಯಕತೆ ಇದೆ. ಇದೊಂದು ಊಹಾಪೋಹ ಹಾಗೂ ಅನಿಶ್ಚಿತತೆಯ ಹೂಡಿಕೆಯಾದ್ದರಿಂದ ನೀವು ತಜ್ಞರ ಸಲಹೆ ಪಡೆದೇ ಹೂಡಿಕೆ ಮಾಡುವುದು ಲೇಸು.

ಮ್ಯೂಚುವಲ್ ಫಂಡ್ ಹೂಡಿಕೆ ಮಾಡುವಾಗ ಇಂಡೆಕ್ಸ್, ಆರ್ಬಿಟ್ರೇಜ್ ಹಾಗೂ ಡೆಟ್ ಫಂಡ್‌ಗಳನ್ನು ಆರಿಸಿಕೊಳ್ಳುವುದು ಒಳಿತು. ಈ ಮೂರು ಬಗೆಯ ಫಂಡ್‌ಗಳು ನಿಮಗೆ ಹೂಡಿಕೆಗೆ ಸೂಕ್ತ. ಇಲ್ಲಿ ಆಪತ್ತು ಕಡಿಮೆ ಹಾಗೂ ಉತ್ತಮ ವರಮಾನ ನಿರೀಕ್ಷಿಸಬಹುದು. ಯಾವುದಾದರೂ ಒಂದು ಫಂಡ್‌ನಲ್ಲಿ 'ಎಸ್‌ಐಪಿ' ಮೂಲಕ ಹೂಡಿಕೆ ಆರಂಭಿಸಿ. ಷೇರು ಮಾರುಕಟ್ಟೆ ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಏರಿಳಿತ ಇದ್ದೇ ಇರುತ್ತದೆಯಾದರೂ ಆರಿಸಿಕೊಳ್ಳುವಾಗ ಸ್ವಲ್ಪ ಜಾಗರೂಕತೆ ವಹಿಸಬೇಕಾಗುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

'ಹೊಸ ಐ.ಟಿ. ಪೋರ್ಟಲ್: ಗೊಂದಲದ ಗೂಡು'

ನವದೆಹಲಿ (ಪಿಟಿಐ): ಆದಾಯ ತೆರಿಗೆಯ ಹೊಸ ಪೋರ್ಟಲ್(ಜಾಲತಾಣದ) ನ್ಯೂನತೆಗಳಿಂದ ಕೂಡಿದೆ ಎಂದು ಅಸಮಾಧಾನ ವ್ಯಕ್ತಪಡಿಸಿರುವ ಕಾಂಗ್ರೆಸ್‌ನ ಹಿರಿಯ ನಾಯಕ ಶಶಿ ತರೂರ್, ₹4200 ಕೋಟಿ ವೆಚ್ಚ ಮಾಡಿದರೂ ಅದನ್ನು 'ಬಳಕೆದಾರ ಸ್ನೇಹಿ'ಯಾಗಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಶಶಿ ತರೂರ್

'ಅಖಿಲ ಭಾರತ ವೃತ್ತಿಪರ ಕಾಂಗ್ರೆಸ್' ಘಟಕದ ಅಧ್ಯಕ್ಷರಾಗಿರುವ ಶಶಿ ತರೂರ್, 'ಆದಾಯ ತೆರಿಗೆಯ ಹೊಸ ಪೋರ್ಟಲ್‌ನಲ್ಲಿರುವ ಬದಲಾವಣೆಗಳು ತೆರಿಗೆದಾರರಿಗೆ ತುಂಬಾ ಕಿರಿಕಿರಿ ಉಂಟು ಮಾಡುತ್ತಿವೆ. ಪೋರ್ಟಲ್‌ನಲ್ಲಿ ಮಾಹಿತಿ ಹುಡುಕಲು ತುಂಬಾ ಸಮಯ ತೆಗೆದುಕೊಳ್ಳುತ್ತದೆ' ಎಂದು ನಮ್ಮ ಘಟಕದ ಲೆಕ್ಕಪತ್ರ ಪರಿಶೋಧಕರು ತೆರಿಗೆ ಇಲಾಖೆಗೆ ಮಾಹಿತಿ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

ಹೊಸ ಪೋರ್ಟಲ್ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಈ ಕಾರಣದಿಂದಾಗಿ ಐಟಿಆರ್ (ಆದಾಯ ತೆರಿಗೆ ರಿಟರ್ನ್) ಸಲ್ಲಿಕೆ, 15 ಸಿಎ / ಸಿಬಿ ಫಾರ್ಮ್‌ಗಳು, ಡೇಟಾ ತಯಾರಿಕೆ ಪ್ರಕ್ರಿಯೆಯೂ ಸ್ಥಗಿತಗೊಂಡಿದೆ' ಎಂದು ತರೂರ್ ಹೇಳಿದ್ದಾರೆ.

'ಜೂನ್ ತಿಂಗಳಲ್ಲಿ ಆದಾಯ ತೆರಿಗೆ ಪೋರ್ಟಲ್ ಬದಲಾಯಿಸಿರುವುದರ ಉದ್ದೇಶ ಇನ್ನೂ ಸ್ಪಷ್ಟವಾಗಿಲ್ಲ. ಸ್ವಲ್ಪ ಬುದ್ಧಿವಂತಿಕೆ ಉಪಯೋಗಿಸಿ, ಹಣಕಾಸು ವರ್ಷದ ಅಂತ್ಯ ಅಥವಾ ಹೊಸ ಹಣಕಾಸು ವರ್ಷದ ಆರಂಭಕ್ಕೆ ಮುನ್ನವೇ ಈ ಬದಲಾವಣೆ ಮಾಡಿದ್ದರೆ, ಸಂಕಷ್ಟದಲ್ಲಿರುವ ಆದಾಯ-ತೆರಿಗೆ ಮರುಪಾವತಿಗೆ ಅರ್ಹರಾದ ತೆರಿಗೆದಾರರಿಗೆ ಅನುಕೂಲವಾಗುತ್ತಿತ್ತು' ಎಂದು ತರೂರ್ ಅಭಿಪ್ರಾಯಪಟ್ಟಿದ್ದಾರೆ.

'ಆದಾಯ ತೆರಿಗೆಯ ಹಳೆಯ ಪೋರ್ಟಲ್ ಸುಗಮವಾಗಿ ನಡೆಯುತ್ತಿತ್ತು. ತೆರಿಗೆದಾರರು ರಿಟರ್ನ್ಸ್ ಮತ್ತು ಮರುಪಾವತಿಗೆ ಅರ್ಜಿ ಸಲ್ಲಿಸುವಂತಹ ಈ ಸಂದರ್ಭದಲ್ಲಿ ಹೊಸ ಪೋರ್ಟಲ್ ಪರಿಚಯಿಸುವ ಅಗತ್ಯ ಏನಿತ್ತು' ಎಂದು ಶಶಿ ತರೂರ್ ಕೇಂದ್ರದ ವಿರುದ್ಧ ಹರಿಯಾಯ್ದಿದ್ದಾರೆ. ಇದೇ ವೇಳೆ, 'ಹೊಸ ಪೋರ್ಟಲ್‌ಗೆ ಚಾಲನೆ ನೀಡುವ ಮುನ್ನ ಅದನ್ನು ಏಕೆ ಪರೀಕ್ಷಿಸಲಿಲ್ಲ' ಎಂದು ತರೂರ್ ಸರ್ಕಾರವನ್ನು ಪ್ರಶ್ನಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ
6-7-2021

ಜಾವಾ 70/80(ಹೊಸ)	9800-9850
ಜಾವಾ 80/90(ಹೊಸ)	8750-8800
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1445 (1410)
ಒಂದು ವಾರದ ಡೆಲಿವರಿ	1440 (1405)
ಸೋಯಾ ಕಚ್ಚಾ	1290 (1280)
ಪಾಮ್ ವಾರದ ಡೆಲಿವರಿ	1173 (1168)
ಸೂರ್ಯಕಾಂತಿ ಎಣ್ಣೆ ಕಚ್ಚಾ	1280 (1370)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,700 (47,300)
ಬೆಳ್ಳಿ ಕೆ.ಜಿ 69,800 (69,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಹಸ್ತಲಾಘವ ಮಾಡಬೇಡಿ

ಚಿನ್ನ ₹ 389, ಬೆಳ್ಳಿ ₹ 397ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರವು 10 ಗ್ರಾಂಗೆ ₹ 389ರಷ್ಟು ಹೆಚ್ಚಾಗಿ ₹ 46,762ಕ್ಕೆ ತಲುಪಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹ 397ರಷ್ಟು ಏರಿಕೆ ಕಂಡು ₹ 69,105ಕ್ಕೆ ತಲುಪಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಏರಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ	
ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	385

ಅಡಿಕೆ

ಬಂಟ್ವಾಳ	
ಕೋಕ	10000-22500
ಹೊಸತು	23500-43000
ಹಳತು	42500-52000
ಪುತ್ತೂರು	
ಕೋಕ	9500-25000
ಹೊಸತು	29500-43000
ಸಿದ್ದಾಪುರ	
ಬಿಳಿಗೋಟು	26799-33099
ಚಾಲಿ	35090-38899
ಕೋಕ	21999-30399
ಕೆಂಪುಗೋಟು	28999-30199
ರಾಶಿ	38299-40899
ತಟ್ಟಿಬೆಟ್ಟೆ	31099-36159
ಶಿರಸಿ	
ಬೆಟ್ಟೆ	31099-39898
ಬಿಳಿಗೋಟು	24099-34513
ಚಾಲಿ	34399-39501
ರಾಶಿ	38299-42108
ಯಲ್ಲಾಪುರ	
ಬಿಳಿಗೋಟು	28299-33127
ಚಾಲಿ	34012-39389
ಕೋಕ	21899-30969
ಕೆಂಪುಗೋಟು	28299-33127
ರಾಶಿ	39599-44399
ತಟ್ಟಿಬೆಟ್ಟೆ	34499-39019

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ ಮುದ್ರೆಮನೆ	ಹಾಸನ ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11500	10900	10750	153.05 ಸೆಂಟ್ಸ್
ಎಸಿ	4510	4500	4250	
ಆರ್‌ಪಿ	5500	5500	5700	ಲಂಡನ್
ಆರ್‌ಸಿ	3300	3150	3350	1703 ಡಾಲರ್ಸ್

ವಿಶ್ವಸಂಸ್ಥೆ, ಐರೋಪ್ಯ ಒಕ್ಕೂಟದ ಮಾನವ ಹಕ್ಕುಗಳ ಅಧಿಕಾರಿಗಳ ಕಳವಳ

‘ಸ್ಟ್ಯಾನ್ ಸ್ವಾಮಿ ಸಾವು ‘ಮಹಾ ದುರಂತ’’

ಸ್ಟ್ಯಾನ್ ಸ್ವಾಮಿ

ವಿಶ್ವಸಂಸ್ಥೆ (ಪಿಟಿಐ): ಭಾರತದ ಬುಡಕಟ್ಟು ಜನರ ಹಕ್ಕುಗಳ ಹೋರಾಟಗಾರ ಸ್ಟ್ಯಾನ್ ಸ್ವಾಮಿ ಅವರ ಸಾವು ‘ಮಹಾ ದುರಂತ’ ಎಂದು ವಿಶ್ವಸಂಸ್ಥೆ ಹಾಗೂ ಐರೋಪ್ಯ ಒಕ್ಕೂಟದ ಮಾನವ ಹಕ್ಕುಗಳ ಸಂಘಟನೆ ಕಳವಳ ವ್ಯಕ್ತಪಡಿಸಿವೆ.

‘84 ವರ್ಷದ ಅವರ ವಿರುದ್ಧ ಭಯೋತ್ಪಾದನೆಗೆ ಪ್ರಚೋದನೆ ನೀಡಿದ ಸುಳ್ಳು ಆರೋಪಗಳನ್ನು ಹೊರಿಸಿ, ಸೆರೆಯಲ್ಲಿರಿಸಲಾಗಿತ್ತು’ ಎಂದೂ ಈ ಜಾಗತಿಕ ಸಂಸ್ಥೆಗಳು ಹೇಳಿವೆ.

‘ಭಾರತದಲ್ಲಿ ಮಾನವ ಹಕ್ಕುಗಳ ಹೋರಾಟಗಾರ, ಫಾದರ್ ಸ್ಟ್ಯಾನ್ ಸ್ವಾಮಿ ಅವರು ಸೆರೆಯಲ್ಲಿರುವಾಗಲೇ ಮೃತಪಟ್ಟಿದ್ದಾರೆ ಎಂಬ ಸುದ್ದಿ ಬಹಳ ದುಃಖಕರ. ಇದು ಮಹಾದುರಂತವೂ ಹೌದು. ಮಾನವ ಹಕ್ಕುಗಳಿಗಾಗಿ ಹೋರಾಡುವ ವ್ಯಕ್ತಿಯನ್ನು ಜೈಲಿಗೆ ಅಟ್ಟಿದ್ದು ಅಕ್ಷಮ್ಯ’ ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ರಕ್ಷಣೆ ವಿಭಾಗದ ವಿಶೇಷ ವರದಿಗಾರರಾದ ಮೇರಿ ಲಾಲರ್ ಅಸಮಾಧಾನ ಹೊರಹಾಕಿದ್ದಾರೆ.

ಈ ಮೊದಲು ಸಹ ಅವರು ಸ್ಟ್ಯಾನ್ ಸ್ವಾಮಿ ವಿರುದ್ಧದ ಆರೋಪಗಳು ಆಧಾರರಹಿತ ಎಂದು ಹೇಳಿದ್ದರು. ಅವರ ಆರೋಗ್ಯ ಹದಗೆಟ್ಟ ಸಂದರ್ಭದಲ್ಲಿ, ಅವರಿಗೆ ಉತ್ತಮ ಚಿಕಿತ್ಸೆಯ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದ್ದರು.

ಮಾನವ ಹಕ್ಕುಗಳಿಗೆ ಸಂಬಂಧಿಸಿದ ಐರೋಪ್ಯ ಒಕ್ಕೂಟದ ವಿಶೇಷ ಪ್ರತಿನಿಧಿ ಇಮೋನ್ ಗಿಲ್‌ಮೋರ್ ಅವರು, ಲಾಲರ್ ಅವರ ಟ್ವೀಟ್‌ಗಳನ್ನು ಹಂಚಿಕೊಂಡಿದ್ದಾರೆ.

‘ಕಳೆದ ಒಂಬತ್ತು ತಿಂಗಳಿನಿಂದ ಸ್ವಾಮಿ ಅವರನ್ನು ಜೈಲಿನಲ್ಲಿರಿಸಲಾಗಿತ್ತು. ಅವರ ಪರವಾಗಿ ಐರೋಪ್ಯ ಒಕ್ಕೂಟ ಧ್ವನಿ ಎತ್ತುತ್ತಲೇ ಬಂದಿತ್ತು. ಅವರ ಸಾವು ಬಹಳ ದುಃಖ ತರಿಸಿದೆ’ ಎಂದು ಗಿಲ್‌ಮೋರ್ ಟ್ವೀಟ್ ಮಾಡಿದ್ದಾರೆ.

ಪಾರ್ಕಿನ್‌ಸನ್ಸ್ ಕಾಯಿಲೆಯಿಂದ ಬಳಲುತ್ತಿದ್ದ ಸ್ಟ್ಯಾನ್ ಸ್ವಾಮಿ ಅವರ ಆರೋಗ್ಯ ಮತ್ತಷ್ಟೂ ಹದಗೆಟ್ಟ ಕಾರಣ ಅವರನ್ನು ಮೇ 29ರಂದು ಮುಂಬೈನ ಹೋಲಿ ಫ್ಯಾಮಿಲಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ವೆಂಟಿಲೇಟರ್ ಸಹ ಅಳವಡಿಸಲಾಗಿತ್ತು. ಈ ವೇಳೆ ಅವರಿಗೆ ಕೋವಿಡ್–19 ತಗುಲಿತ್ತು. ಆದರೆ, ತೀವ್ರ ಹೃದಯಾಘಾತದಿಂದಾಗಿ ಸೋಮವಾರ ಅವರು ನಿಧನರಾದರು.

ನಿಷೇಧಿತ ಸಿಪಿಎಂ (ಮಾವೊವಾದಿ) ಸಂಘಟನೆಯ ಸದಸ್ಯರಿಗೆ ಬೆಂಬಲ ನೀಡಿದ ಆರೋಪ ಸ್ಟ್ಯಾನ್ ಸ್ವಾಮಿ ಅವರ ಮೇಲಿತ್ತು. ‘ಕೇಂದ್ರದ ಫ್ಯಾಸಿಸ್ಟ್ ಸರ್ಕಾರದ ವಿರುದ್ಧ ದೇಶದ ದಲಿತರು ಮತ್ತು ಮುಸ್ಲಿಮರನ್ನು ಸಂಘಟಿಸಬೇಕು ಎಂದು ಸ್ಟ್ಯಾನ್ ಸ್ವಾಮಿ ಅವರು ಸಿಪಿಎಂ ನಾಯಕರಿಗೆ ಪತ್ರ ಬರೆದಿದ್ದರು’ ಎಂದು ಎನ್‌ಐಎ ಆರೋಪಿಸಿತ್ತು.

ಮಾನವ ಹಕ್ಕುಗಳ ರಕ್ಷಣೆಗೆ ಬದ್ಧ: ಭಾರತ

ನವದೆಹಲಿ: ‘ದೇಶದ ಎಲ್ಲ ಪ್ರಜೆಗಳ ಮಾನವ ಹಕ್ಕಗಳ ರಕ್ಷಣೆಗೆ ಭಾರತ ಬದ್ಧ. ಮಾನವ ಹಕ್ಕುಗಳ ರಕ್ಷಣೆಗೆ ಕೈಗೊಂಡ ಕ್ರಮಗಳನ್ನು ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ನ್ಯಾಯಾಂಗ ವ್ಯವಸ್ಥೆ, ರಾಷ್ಟ್ರ ಮತ್ತು ರಾಜ್ಯಗಳ ಮಟ್ಟದಲ್ಲಿನ ಆಯೋಗಗಳು ಶ್ಲಾಘಿಸಿವೆ’ ಎಂದು ಭಾರತ ಹೇಳಿದೆ.

ಸ್ಟ್ಯಾನ್ ಸ್ವಾಮಿ ಅವರ ವಿರುದ್ಧದ ಪ್ರಕರಣವನ್ನು ನಿಭಾಯಿಸಿದ ಕುರಿತು ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಕ್ತವಾದ ಟೀಕೆಗಳನ್ನು ತಿರಸ್ಕರಿಸಿರುವ ವಿದೇಶಾಂಗ ಸಚಿವಾಲಯ, ಈ ಸ್ಪಷ್ಟನೆ ನೀಡಿದೆ. ‘ಈ ಪ್ರಕರಣದಲ್ಲಿ ಕಾನೂನು ಉಲ್ಲಂಘನೆಯಾಗಿದ್ದಲ್ಲಿ, ಸಂಬಂಧಪಟ್ಟ ಸಂಸ್ಥೆಗಳು ಕ್ರಮ ಕೈಗೊಳ್ಳುವವು’ ಎಂದೂ ಸಚಿವಾಲಯ ಹೇಳಿದೆ.

ರಾಷ್ಟ್ರಪತಿ ಮಧ್ಯಪ್ರವೇಶಕ್ಕೆ ವಿರೋಧ ಪಕ್ಷಗಳ ಒತ್ತಾಯ

ಸೋನಿಯಾ ಗಾಂಧಿ

ನವದೆಹಲಿ (ಪಿಟಿಐ): ಸೆರೆಯಲ್ಲಿ ಇರುವಾಗಲೇ ಫಾದರ್ ಸ್ಟ್ಯಾನ್ ಸ್ವಾಮಿ ಅವರು ಸಾವನ್ನಪ್ಪಿದ ಘಟನೆ ಬಗ್ಗೆ ಕಾಂಗ್ರೆಸ್ ಮುಖ್ಯಸ್ಥೆ ಸೋನಿಯಾ ಗಾಂಧಿ ಸೇರಿ 10 ವಿರೋಧ ಪಕ್ಷಗಳ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶರದ್ ಪವಾರ್

‘ಸ್ವಾಮಿ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿ, ಅವರನ್ನು ಅಮಾನವೀಯ ರೀತಿಯಲ್ಲಿ ನಡೆಸಿಕೊಳ್ಳಲಾಗಿತ್ತು. ಈ ವಿಷಯದಲ್ಲಿ ಕೂಡಲೇ ಮಧ್ಯಪ್ರವೇಶಿಸಿ, ಸಂಬಂಧಪಟ್ಟವರನ್ನು ಹೊಣೆಗಾರರನ್ನಾಗಿ ಮಾಡಬೇಕು’ ಎಂದು ಒತ್ತಾಯಿಸಿ ವಿರೋಧ ಪಕ್ಷಗಳ ಮುಖಂಡರು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಗೆ ಪತ್ರ ಬರೆದಿದ್ದಾರೆ. ಎನ್‌ಸಿಪಿ ವರಿಷ್ಠ ಶರದ್ ಪವಾರ್, ಜೆಡಿಎಸ್ ಮುಖ್ಯಸ್ಥ ಎಚ್.ಡಿ.ದೇವೇಗೌಡ, ನ್ಯಾಷನಲ್ ಕಾನ್ಫರೆನ್ಸ್ ಮುಖಂಡ ಫಾರೂಕ್ ಅಬ್ದುಲ್ಲಾ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮತ್ತಿತರರು ಈ ಪತ್ರಕ್ಕೆ ಸಹಿ ಹಾಕಿದ್ದಾರೆ.


ಎಚ್‌.ಡಿ. ದೇವೇಗೌಡ

ಸ್ಟ್ಯಾನ್ ಸ್ವಾಮಿ ಅವರದ್ದು ‘ಸಾಂಸ್ಥಿಕ ಕೊಲೆ’

ನವದೆಹಲಿ (ಪಿಟಿಐ): ಬುಡಕಟ್ಟು ಜನರ ಹಕ್ಕುಗಳ ಹೋರಾಟಗಾರ ಸ್ಟ್ಯಾನ್ ಸ್ವಾಮಿ ಅವರದ್ದು ‘ಸಾಂಸ್ಥಿಕ ಕೊಲೆ’ ಎಂದು ಎಲ್ಗಾರ್ ಪರಿಷತ್ ಪ್ರಕರಣದಲ್ಲಿ ಬಂಧಿಸಲಾಗಿರುವ ಇತರ ಆರೋಪಿಗಳ ಕುಟುಂಬದ ಸದಸ್ಯರು ಮತ್ತು ಸ್ನೇಹಿತರು ಮಂಗಳವಾರ ಆರೋಪಿಸಿದ್ದಾರೆ.

‘ನಿರ್ಲಕ್ಷ್ಯ ತೋರಿದ ಜೈಲು ಅಧಿಕಾರಿಗಳು, ಅಸಡ್ಡೆ ತೋರಿದ ನ್ಯಾಯಾಲಯಗಳು ಮತ್ತು ದುರುದ್ದೇಶಪೂರಿತ ತನಿಖಾ ಸಂಸ್ಥೆಗಳು ಈ ಸಾವಿಗೆ ಜವಾಬ್ದಾರರು’ ಎಂದು ಅವರು ಪ್ರಕಟಣೆಯಲ್ಲಿ ದೂರಿದ್ದಾರೆ.

ವಯಸ್ಸಾದ ಮತ್ತು ಅನಾರೋಗ್ಯದಿಂದ ಬಳಲುತ್ತಿದ್ದ ಸ್ವಾಮಿ ಅವರನ್ನು ಸಾಂಕ್ರಾಮಿಕ ಪಿಡುಗಿನ ಸಂದರ್ಭದಲ್ಲಿಯೂ ಜೈಲಿನಲ್ಲಿರಿಸಿದ್ದು ನ್ಯಾಯಸಮ್ಮತವಲ್ಲ ಎಂದು ಅವರು ತಿಳಿಸಿದ್ದಾರೆ.

ಜೈಲುಗಳಲ್ಲಿ ಬಂಧಿಯಾಗಿರುವ ತಮ್ಮ ಸಂಬಂಧಿಕರು ಮತ್ತು ಸಹೋದ್ಯೋಗಿಗಳೂ ‘ಇಂತಹದ್ದೇ ಅನ್ಯಾಯ’ ಎದುರಿಸುತ್ತಿರುವ ಸಾಧ್ಯತೆ ಇದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಜೈಲಿನಲ್ಲಿದ್ದಾಗ ಸ್ವಾಮಿ ಅವರಿಗೆ ಕೋವಿಡ್ ಪರೀಕ್ಷೆಯನ್ನೂ ಮಾಡಿರಲಿಲ್ಲ. ಬಾಂಬೆ ಹೈಕೋರ್ಟ್‌ನ ಆದೇಶದ ಮೇರೆಗೆ ಅವರನ್ನು ಆಸ್ಪತ್ರೆಗೆ ಸ್ಥಳಾಂತರಿಸಿದ ಬಳಿಕವಷ್ಟೇ ಅವರಿಗೆ ಕೋವಿಡ್ ಸೋಂಕು ತಗುಲಿರುವುದು ದೃಢಪಟ್ಟಿತ್ತು. ಪಾರ್ಕಿನ್ಸನ್ ಕಾಯಿಲೆಯಿಂದ ಬಳಲುತ್ತಿದ್ದ ಅವರು ಬಂಧಿತರಲ್ಲಿಯೇ ಅತ್ಯಂತ ಹಿರಿಯರು ಮತ್ತು ದುರ್ಬಲರಾಗಿದ್ದರು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

‘ಅಧಿಕಾರ ಇಲ್ಲದಿದ್ದರೂ ಜಾಮೀನು ನಿರಾಕರಣೆ’

ಸುಧಾ ಭಾರದ್ವಾಜ್

ಮುಂಬೈ (ಪಿಟಿಐ): ಪುಣೆಯ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರು ತಮ್ಮನ್ನು ತಾವು ನಿಯೋಜಿತ ವಿಶೇಷ ನ್ಯಾಯಾಧೀಶರಂತೆ ‘ನಟಿಸುವ’ ಮೂಲಕ, ನನ್ನನ್ನು ಮತ್ತು ಇತರ ಸಹ ಆರೋಪಿಗಳನ್ನು ದೀರ್ಘಕಾಲದಿಂದ ಜೈಲಿನಲ್ಲಿ ಇರುವಂತೆ ಮಾಡಿದ್ದಾರೆ ಎಂದು ಎಲ್ಗಾರ್ ಪರಿಷತ್– ಮಾವೊಗಳೊಂದಿಗಿನ ಸಂಪರ್ಕ ಪ್ರಕರಣದ ಆರೋಪಿ ಸುಧಾ ಭಾರದ್ವಾಜ್ ಬಾಂಬೆ ಹೈಕೋರ್ಟ್‌ಗೆ ತಿಳಿಸಿದ್ದಾರೆ.

ಸುಧಾ ಪರ ಹಾಜರಾದ ಹಿರಿಯ ವಕೀಲ ಯುಗ್ ಚೌಧರಿ ಈ ಕುರಿತು ಮಾಹಿತಿಯನ್ನು ಹೈಕೋರ್ಟ್‌ಗೆ ತಿಳಿಸಿದ್ದಾರೆ.

ಪುಣೆಯ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾದ ಕೆ.ಡಿ. ವಡಾನೆ ಅವರು ಸುಧಾ ಮತ್ತು ಇತರ ಎಂಟು ಕಾರ್ಯಕರ್ತರನ್ನು 2018ರಲ್ಲಿ ಪುಣೆ ಪೊಲೀಸರ ವಶಕ್ಕೆ ಕಳುಹಿಸಿ ಆದೇಶಿಸಿದ್ದರು. ವಡಾನೆ ಅವರು ಈ ಪ್ರಕರಣದಲ್ಲಿ ಚಾರ್ಜ್‌ಶೀಟ್ ಸಲ್ಲಿಸಲು ಪೊಲೀಸರಿಗೆ ಸಮಯವನ್ನೂ ವಿಸ್ತರಿಸಿದ್ದರು.

ನಂತರ 2018ರ ಅಕ್ಟೋಬರ್‌ನಲ್ಲಿ ಸುಧಾ ಮತ್ತು ಇತರ ಮೂವರು ಆರೋಪಿಗಳಿಗೆ ಜಾಮೀನು ನಿರಾಕರಿಸಿದರು. ಈ ವೇಳೆ ಆದೇಶ ಹೊರಡಿಸುವಾಗ ವಡಾನೆ ಅವರು ತಮ್ಮನ್ನು ಕಾನೂನುಬಾಹಿರ ಚಟುವಟಿಕೆಗಳ ತಡೆಗಟ್ಟುವಿಕೆ ಕಾಯ್ದೆಯ (ಯುಎಪಿಎ) ವಿಶೇಷ ನ್ಯಾಯಾಧೀಶರು ಎಂದು ಹೇಳಿಕೊಂಡು, ಆದೇಶಕ್ಕೆ ಸಹಿ ಹಾಕಿದ್ದರು ಎಂದು ಅವರು ನ್ಯಾಯಾಲಯದ ಗಮನಕ್ಕೆ ತಂದರು.

ಈ ಕುರಿತು ಆರ್‌ಟಿಐ ಮೂಲಕ ಮಹಾರಾಷ್ಟ್ರ ಸರ್ಕಾರ ಮತ್ತು ಹೈಕೋರ್ಟ್‌ನಿಂದ ಪಡೆದ ಉತ್ತರಗಳು ತಮ್ಮ ಬಳಿಯಿದ್ದು, ಅದರಲ್ಲಿ ವಡಾನೆ ಅವರನ್ನು ವಿಶೇಷ ನ್ಯಾಯಾಧೀಶರಾಗಿ ನೇಮಿಸಲಾಗಿಲ್ಲ ಎಂಬುದು ಸ್ಪಷ್ಟವಾಗಿದೆ ಎಂದು ಚೌದರಿ ತಿಳಿಸಿದರು.

ತನಗೆ ಅಧಿಕಾರ ಇಲ್ಲದೇ ಇದ್ದರೂ ವಡಾನೆ ಅವರು ಜಾಮೀನು ನಿರಾಕರಣೆ, ಅವಧಿ ವಿಸ್ತರಣೆ, ಚಾರ್ಜ್‌ಶೀಟ್ ಸ್ವೀಕಾರ ಮಾಡಿರುವುದು ಸರಿಯಲ್ಲ. ಹಾಗಾಗಿ ವಡಾನೆ ಅವರು ನೀಡಿದ್ದ ಆದೇಶವನ್ನು ರದ್ದುಪಡಿಸಬೇಕು ಎಂದು ಕೋರಿದರು.

ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಸ್.ಎಸ್. ಶಿಂಧೆ ಮತ್ತು ಎನ್.ಜೆ.ಜಾಮದಾರ್ ಅವರ ಪೀಠವು ಈ ವಿಷಯವನ್ನು ಪರಿಶೀಲಿಸುವುದಾಗಿ ತಿಳಿಸಿತು. ಅಲ್ಲದೆ ವಡಾನೆ ಅವರ ನೇಮಕ, ಹುದ್ದೆಗೆ ಸಂಬಂಧಿಸಿದಂತೆ ನೈಜ ದಾಖಲೆಗಳನ್ನು ಸಲ್ಲಿಸುವಂತೆ ಹೈಕೋರ್ಟ್ ರಿಜಿಸ್ಟ್ರಿ ಮತ್ತು ರಾಜ್ಯ ಸರ್ಕಾರಕ್ಕೆ ಸೂಚಿಸಿ, ವಿಚಾರಣೆಯನ್ನು ಇದೇ 8ಕ್ಕೆ ಮುಂದೂಡಿತು.

ಬಿಸಿಲಿನ ಝಳ... ಉತ್ತರ ಪ್ರದೇಶದ ಆಗ್ರಾದಲ್ಲಿ ಬಿಸಿಲಿನ ಝಳ ಹೆಚ್ಚಾಗಿದ್ದು, ತಾಜ್‌ಮಹಲ್ ವೀಕ್ಷಣೆಗೆ ಬಂದಿದ್ದ ಪ್ರವಾಸಿಗರು ಮಂಗಳವಾರ ಛತ್ರಿಗಳ ಮೊರೆ ಹೋಗಿದ್ದರು ಪಿಟಿಐ ಚಿತ್ರ

ಪಶ್ಚಿಮ ಬಂಗಾಳ: ವಿಧಾನ ಪರಿಷತ್ ರಚನೆಯ ನಿರ್ಣಯ ಅಂಗೀಕಾರ

ಕೋಲ್ಕತ್ತ (ಪಿಟಿಐ): ವಿಧಾನ ಪರಿಷತ್ತಿನ ರಚನೆಗೆ ಸಂಬಂಧಿಸಿದಂತೆ ತಾತ್ಕಾಲಿಕ ಸಮಿತಿ ಸಲ್ಲಿಸಿದ್ದ ವರದಿಯನ್ನು ಬೆಂಬಲಿಸುವ ನಿರ್ಣಯವನ್ನು ಪಶ್ಚಿಮ ಬಂಗಾಳದ ವಿಧಾನಸಭೆ ಮಂಗಳವಾರ ಅಂಗೀಕರಿಸಿತು.

ರಾಜ್ಯ ಸಂಸದೀಯ ವ್ಯವಹಾರಗಳ ಸಚಿವ ಪಾರ್ಥಾ ಚಟರ್ಜಿ ಅವರು ಸಮಿತಿಯ ವರದಿಯನ್ನು ಮಂಡಿಸಿದರು.

ಸದನದಲ್ಲಿ ಹಾಜರಿದ್ದ 265 ಸದಸ್ಯರ ಪೈಕಿ 196 ಶಾಸಕರು ವಿಧಾನ ಪರಿಷತ್ತಿನ ರಚನೆಗೆ ಬೆಂಬಲ ನೀಡಿದರು. 69 ಶಾಸಕರು ಇದನ್ನು ವಿರೋಧಿಸಿದರು.

ಈ ನಿರ್ಣಯವನ್ನು ವಿರೋಧಿಸಿದ ಬಿಜೆಪಿ ಶಾಸಕಾಂಗ ಪಕ್ಷ, ವಿಧಾನಸಭಾ ಚುನಾವಣೆಯಲ್ಲಿ ಸೋತವರಿಗೆ ಹಿಂಬಾಗಿಲಿನ ಮೂಲಕ ರಾಜಕೀಯ ಪ್ರವೇಶಕ್ಕೆ ಟಿಎಂಸಿ ಬಯಸಿದೆ ಎಂದು ದೂರಿದೆ.

ರಷ್ಯಾ ವಿಮಾನ ಅವಶೇಷ ಪತ್ತೆ: ಎಲ್ಲಾ 28 ಮಂದಿ ಸಾವು?

ಮಾಸ್ಕೋ (ಎಪಿ): ರಷ್ಯಾದ ಪೂರ್ವ ವಲಯದ ಕಮ್‌ಚಾಟ್ಕಾದಿಂದ ನಾಪತ್ತೆಯಾಗಿದ್ದ ವಿಮಾನದ ಭಗ್ನಾವಶೇಷ ಒಕೋಸ್ಕ್ ಸಮುದ್ರತೀರದ ವಿಮಾನನಿಲ್ದಾಣದ ರನ್‌ವೇಯ ಐದು ಕಿ.ಮೀ.ದೂರದಲ್ಲಿ ಮಂಗಳವಾರ ಪತ್ತೆಯಾಗಿದೆ.

ಆಂಟನಿ ಎಎನ್–26 ವಿಮಾನದಲ್ಲಿ 22 ಪ್ರಯಾಣಿಕರು, ಆರು ಮಂದಿ ಸಿಬ್ಬಂದಿ ಇದ್ದರು. ಸಂಪರ್ಕ ಕಳೆದುಕೊಂಡ ನಂತರ ಸುಳಿವು ಸಿಕ್ಕಿರಲಿಲ್ಲ. ಕಮ್‌ಚಾಟ್ಕಾದ ಗವರ್ನರ್ ವಾಡಿಮಿರ್ ಸೊಲೊಡೊವ್ ಪ್ರಕಾರ, ವಿಮಾನದ ಪ್ರಮುಖ ಭಾಗ ಸಮುದ್ರ ತೀರದಲ್ಲಿ, ಉಳಿದ ಅವಶೇಷಗಳು ಸ್ವಲ್ಪದೂರದಲ್ಲಿ ಪತ್ತೆಯಾಗಿವೆ. ಯಾರೊಬ್ಬರೂ ಬದುಕುಳಿದಿರುವ ಸಂಭವವಿಲ್ಲ ಎಂದು ಹೇಳಲಾಗಿದೆ.

ಜಮ್ಮು–ಕಾಶ್ಮೀರ: ಮರುವಿಂಗಡಣೆ ಆಯೋಗದ ಭೇಟಿಗೆ ಪಕ್ಷಗಳ ನಿರ್ಧಾರ

ಶ್ರೀನಗರ (ಪಿಟಿಐ): ಪಿಡಿಪಿ ಮತ್ತು ಎಎನ್‌ಸಿ ಪಕ್ಷವನ್ನು ಹೊರತುಪಡಿಸಿ, ಕಾಶ್ಮೀರದ ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳು ಇಲ್ಲಿಗೆ ಆಗಮಿಸಿರುವ ಕ್ಷೇತ್ರ ಮರುವಿಂಗಡಣೆ ಆಯೋಗವನ್ನು ಭೇಟಿ ಮಾಡಲು ನಿರ್ಧರಿಸಿವೆ.

ಮಾಜಿ ಮುಖ್ಯಮಂತ್ರಿ ಮೆಹಬೂಬಾ ಮುಫ್ತಿ ನೇತೃತ್ವದ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ಮತ್ತು ಅವಾಮಿ ನ್ಯಾಷನಲ್ ಕಾನ್ಫರೆನ್ಸ್ (ಎಎನ್‌ಸಿ) ಪಕ್ಷಗಳು ಗುಪ್ಕಾರ್ ಕೂಟದಲ್ಲಿವೆ.

‘ಆಯೋಗವು ಸಾಂವಿಧಾನಿಕ ಮತ್ತು ಕಾನೂನಾತ್ಮಕ ಅಧಿಕಾರ ಹೊಂದಿಲ್ಲ. ಇದು ಜಮ್ಮು ಮತ್ತು ಕಾಶ್ಮೀರದ ಜನರ ಒಟ್ಟಾರೆ ರಾಜಕೀಯ ನಿರುತ್ಸಾಹದ ಪ್ರಕ್ರಿಯೆಯ ಭಾಗವಾಗಿದೆ’ ಎಂದು ಆರೋಪಿಸಿರುವ ಪಿಡಿಪಿ, ಆಯೋಗದ ಭೇಟಿಯಿಂದ ದೂರವಿರಲು ನಿರ್ಧರಿಸಿದೆ.

‘ಆಯೋಗದ ವರದಿಯಿಂದ ಹೊರಬರುವ ಅಂಶಗಳು ಪೂರ್ವ ಯೋಜಿತ ಎಂಬ ನಂಬಿಕೆ ಜನರಲ್ಲಿದೆ. ಇದು ಕಾಶ್ಮೀರದ ಜನರ ಹಿತಾಸಕ್ತಿಗೆ ತೊಂದರೆ ನೀಡಲಿವೆ. ಹೀಗಾಗಿ ಈ ಪ್ರಕ್ರಿಯೆಯಿಂದ ಹೊರಗುಳಿಯಲು ಪಕ್ಷದ ನಿರ್ಧರಿಸಿದೆ’ ಎಂದು ಪಿಡಿಪಿ ಪ್ರಧಾನ ಕಾರ್ಯದರ್ಶಿ ಗುಲಾಮ್ ನಬಿ ಲೋನ್ ಹಂಜುರಾ ಅವರು ಹೇಳಿದ್ದಾರೆ. ಸಮಿತಿಯ ಮುಖ್ಯಸ್ಥರಾದ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಾಧೀಶ ರಂಜನಾ ದೇಸಾಯಿ ಅವರಿಗೆ ಬರೆದ ಎರಡು ಪುಟಗಳ ಪತ್ರದಲ್ಲಿ ಪಕ್ಷದ ಅಭಿಪ್ರಾಯವನ್ನು ಉಲ್ಲೇಖಿಸಿದ್ದಾರೆ.

ಈ ಪ್ರಕ್ರಿಯೆಯಲ್ಲಿ ಭಾಗವಹಿಸುವುದಿಲ್ಲ ಎಂದು ಆಯೋಗಕ್ಕೆ ಬರೆದ ಪತ್ರದಲ್ಲಿ ಉಲ್ಲೇಖಿಸಿರುವ ಎಎನ್‌ಸಿ, ಆಯೋಗದ ರಚನೆಯನ್ನು ಸುಪ್ರೀಂ ಕೋರ್ಟ್ ಮುಂದೆ ಪ್ರಶ್ನಿಸಲಾಗಿದೆ ಎಂದು ತಿಳಿಸಿದೆ.

ಆಯೋಗವನ್ನು ಭೇಟಿ ಮಾಡಲು ಮತ್ತು ಸಲಹೆಗಳನ್ನು ಮಂಡಿಸಲು ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಪಕ್ಷವು ಐವರು ಸದಸ್ಯರ ತಂಡವನ್ನು ಹೆಸರಿಸಿದೆ ಎಂದು ಪಕ್ಷದ ಮುಖಂಡರೊಬ್ಬರು ತಿಳಿಸಿದ್ದಾರೆ. ಅಬ್ದುಲ್ ರಹೀಮ್ ರಾಥರ್, ಮೊಹಮ್ಮದ್ ಶಫಿ ಉರಿ, ಮಿಯಾನ್ ಅಲ್ತಾಫ್ ಅಹ್ಮದ್, ನಾಸಿರ್ ಅಸ್ಲಾಮ್ ವಾನಿ ಮತ್ತು ಸಕಿನಾ ಇಟ್ಟೂ ಅವರು ತಂಡದಲ್ಲಿದ್ದಾರೆ.

ಕಾಂಗ್ರೆಸ್ ಪಕ್ಷದ ನಿಯೋಗದಲ್ಲಿ ಜಮ್ಮು ಮತ್ತು ಕಾಶ್ಮೀರ ಘಟಕದ ಅಧ್ಯಕ್ಷ ಜಿ.ಎ. ಮೀರ್, ಪೀರ್‌ಜಾದಾ ಮೊಹಮ್ಮದ್ ಸಯೀದ್, ತಾಜ್ ಮೊಹಿಯುದ್ದೀನ್, ಬಶೀರ್ ಅಹ್ಮದ್ ಮ್ಯಾಗ್ರೆ, ಸುರಿಂದರ್ ಸಿಂಗ್ ಚನ್ನಿ ಮತ್ತು ವಿನೋದ್ ಕೌಲ್ ಇದ್ದಾರೆ ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ.

ಸಜ್ಜದ್ ಲೋನ್ ನೇತೃತ್ವದ ಜಮ್ಮು ಮತ್ತು ಕಾಶ್ಮೀರ ಪೀಪಲ್ಸ್ ಕಾನ್ಫರೆನ್ಸ್‌ನಿಂದ ನಾಲ್ವರು ಸದಸ್ಯರು ನಿಯೋಗವನ್ನು ಭೇಟಿಯಾಗಲಿದ್ದಾರೆ. ಬಶೀರ್ ಅಹ್ಮದ್ ದಾರ್, ಮನ್ಸೂರ್ ಹುಸೇನ್, ಮೊಹಮ್ಮದ್ ಖುರ್ಷಿದ್ ಆಲಂ ಮತ್ತು ಮೊಹಮ್ಮದ್ ಅಶ್ರಫ್ ಮಿರ್ ಅವರು ಈ ನಿಯೋಗದಲ್ಲಿದ್ದಾರೆ.

ಆದಾಗ್ಯೂ, ಇತರ ಪಕ್ಷಗಳ ಪ್ರತಿನಿಧಿಗಳು ಆಯೋಗವನ್ನು ಭೇಟಿ ಮಾಡಲಿದ್ದಾರೆ.

ಗೂಢಚಾರಿಕೆ ಪ್ರಕರಣ: ಕೇರಳ ಮಾಜಿ ಡಿಜಿಪಿ ಮ್ಯಾಥ್ಯೂ ಹೇಳಿಕೆ

ಇಸ್ರೊ ವಿಜ್ಞಾನಿ ನಾರಾಯಣನ್ ಬಂಧಿಸುವಂತೆ ಐಬಿ ಒತ್ತಡ ಇತ್ತು

ತಿರುವನಂತಪುರ (ಪಿಟಿಐ): ‘1984ರಲ್ಲಿ ಸದ್ದು ಮಾಡಿದ್ದ ಗೂಢಚಾರಿಕೆ ಪ್ರಕರಣದಲ್ಲಿ ಇಸ್ರೊ ವಿಜ್ಞಾನಿ ನಂಬಿ ನಾರಾಯಣನ್ ಅವರನ್ನು ಬಂಧಿಸುವಂತೆ ನನ್ನ ಹಾಗೂ ಕೇರಳದ ಹಿರಿಯ ಪೊಲೀಸ್ ಅಧಿಕಾರಿಗಳ ಮೇಲೆ ಇಂಟೆಲಿಜೆನ್ಸ್ ಬ್ಯೂರೊದ (ಐಬಿ) ಒತ್ತಡವಿತ್ತು’ ಎಂದು ಕೇರಳದ ಮಾಜಿ ಡಿಜಿಪಿ ಸಿಬಿ ಮ್ಯಾಥ್ಯೂಸ್ ಹೇಳಿದ್ದಾರೆ.

ತಮ್ಮ ವಿರುದ್ಧ ಸಿಬಿಐ ದಾಖಲಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ಕೋರಿ ಇಲ್ಲಿನ ಪ್ರಧಾನ ಸೆಷನ್ಸ್ ಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿಯಲ್ಲಿ ಅವರು ಈ ಮಾಹಿತಿಯನ್ನು ಉಲ್ಲೇಖಿಸಿದ್ದಾರೆ.

ಮ್ಯಾಥ್ಯೂ ಅವರ ಅರ್ಜಿಯ ವಿಚಾರಣೆ ಬುಧವಾರ ನಡೆಯುವ ಸಾಧ್ಯತೆ ಇದೆ.

ಮ್ಯಾಥ್ಯೂ ಹಾಗೂ ಇತರ 17 ಜನರ ವಿರುದ್ಧ ಕ್ರಿಮಿನಲ್ ಪಿತೂರಿ, ಅಪಹರಣ, ಸಾಕ್ಷ್ಯಗಳ ತಿರುಚುವಿಕೆ ಸೇರಿದಂತೆ ವಿವಿಧ ಅಪರಾಧಗಳಿಗೆ ಸಂಬಂಧಿಸಿದ ಸೆಕ್ಷನ್‌ಗಳಡಿ ಸಿಬಿಐ ಪ್ರಕರಣ ದಾಖಲಿಸಿದೆ.

‘ಗೂಢಚಾರಿಕೆ ಆರೋಪಗಳ ಕುರಿತು ಕೇಂದ್ರೀಯ ಸಂಸ್ಥೆಗಳಿಂದ ಸಮಗ್ರವಾದ ತನಿಖೆ ಅಗತ್ಯ ಇತ್ತು. ಹೀಗಾಗಿ ನಾನೇ ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಶಿಫಾರಸು ಮಾಡಿದ್ದೆ’ ಎಂದು ಮ್ಯಾಥ್ಯೂ ಅವರು ಅರ್ಜಿಯಲ್ಲಿ ಹೇಳಿದ್ದಾರೆ.

ಶ್ರೀಶೈಲದಲ್ಲಿ ಡ್ರೋನ್ ಹಾರಾಟ: ಕಟ್ಟೆಚ್ಚರ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಪ್ರಸಿದ್ಧ ಧಾರ್ಮಿಕ ಕ್ಷೇತ್ರ, ಆಂಧ್ರಪ್ರದೇಶದ ಶ್ರೀಶೈಲದಲ್ಲಿ ದೇವಸ್ಥಾನಗಳಿರುವ ಪ್ರದೇಶದಲ್ಲಿ ರಾತ್ರಿ ವೇಳೆ ಡ್ರೋನ್‌ಗಳ ಹಾರಾಟ ನಡೆದಿದೆ. ಈ ಪ್ರದೇಶ ಕುರಿತು ಸಮೀಕ್ಷೆ ನಡೆಸಿರುವ ಶಂಕೆ ವ್ಯಕ್ತವಾಗಿದ್ದು, ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ.

ಶ್ರೀಶೈಲದಲ್ಲಿ ಭ್ರಮರಾಂಬ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ ಇದೆ. ತಿರುಪತಿ ನಂತರ ಈ ಕ್ಷೇತ್ರ ಹೆಚ್ಚು ಪ್ರಸಿದ್ಧವಾಗಿದ್ದು, ವಿಶೇಷವಾಗಿ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಿಂದ ಪ್ರತಿ ವರ್ಷ ಲಕ್ಷಾಂತರ ಜನ ಭಕ್ತರು ಇಲ್ಲಿಗೆ ಭೇಟಿ ನೀಡುತ್ತಾರೆ.

‘ಕಳೆದ ಕೆಲ ದಿನಗಳಿಂದ ಡ್ರೋನ್‌ಗಳ ಹಾರಾಟ ನಡೆದಿರುವ ದೂರುಗಳಿವೆ. ಈ ಸಂಬಂಧ ಹಲವರನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಯಾವ ಉದ್ದೇಶಕ್ಕೆ ಹಾಗೂ ಯಾರು ಈ ಡ್ರೋನ್‌ಗಳ ಹಾರಾಟ ನಡೆಸುತ್ತಿದ್ದಾರೆ ಎಂಬ ಬಗ್ಗೆ ತನಿಖೆಯನ್ನು ಕೈಗೊಂಡಿದ್ದೇವೆ’ ಎಂದು ಕರ್ನೂಲು ಜಿಲ್ಲೆಯ ಆತ್ಮಕೂರು ಡಿಎಸ್‌ಪಿ ಶ್ರುತಿ ಯೆರ್ರಗುಂಟ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಬೇಹುಗಾರಿಕೆ: ಇಬ್ಬರು ಸೈನಿಕರ ಬಂಧನ

ಚಂಡಿಗಡ (ಪಿಟಿಐ): ಪಾಕಿಸ್ತಾನದ ಐಎಸ್‌ಐಗಾಗಿ ಬೇಹುಗಾರಿಕೆ ನಡೆಸುತ್ತಿದ್ದ ಇಬ್ಬರು ಸೈನಿಕರನ್ನು ಬಂಧಿಸಲಾಗಿದೆ ಎಂದು ಪಂಜಾಬ್ ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಅನಂತ್ ನಾಗ್‌ನಲ್ಲಿ ನೇಮಕಗೊಂಡಿದ್ದ ಹರ್ಪ್ರೀತ್ ಸಿಂಗ್ (23) ಮತ್ತು ಕಾರ್ಗಿಲ್‌ನಲ್ಲಿ ಗುಮಾಸ್ತರಾಗಿದ್ದ ಗುರ್ಬೇಜ್ ಸಿಂಗ್ (23) ಗೂಢಾಚಾರ್ಯೆಯಲ್ಲಿ ತೊಡಗಿದ್ದವರು. ಈ ಇಬ್ಬರೂ ಈಗಾಗಲೇ ದೇಶದ ರಕ್ಷಣೆ ಮತ್ತು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ 900ಕ್ಕೂ ಹೆಚ್ಚು ದಾಖಲೆಗಳ ಚಿತ್ರಗಳನ್ನು ಹಂಚಿಕೊಂಡಿದ್ದಾರೆ ಎಂದು ಪಂಜಾಬ್‌ನ ಪೊಲೀಸ್ ಮಹಾ ನಿರ್ದೇಶಕ ರಣವೀರ್ ಸಿಂಗ್ ತಿಳಿಸಿದ್ದಾರೆ.

ಆಡಳಿತ ಪಕ್ಷದ ನಾಯಕರ ಆಕ್ಷೇಪ

‘ಸಮನಾಂತರ ಅಧಿವೇಶನ’ ನಡೆಸಿದ ಬಿಜೆಪಿ

ದೇವೇಂದ್ರ ಫಡಣವೀಸ್

ಮುಂಬೈ (ಪಿಟಿಐ): ವಿಧಾನಸಭೆಯಲ್ಲಿ ತಮ್ಮ ಪಕ್ಷದ 12 ಶಾಸಕರನ್ನು ಅಮಾನತುಗೊಳಿಸಿರುವುದನ್ನು ವಿರೋಧಿಸಿ ವಿರೋಧ ಪಕ್ಷದ (ಬಿಜೆಪಿ) ಶಾಸಕರು ಮಂಗಳವಾರ ಸದನದ ಹೊರ ಭಾಗದಲ್ಲಿ ‘ಸಮಾನಾಂತರ ಅಧಿವೇಶನ’ ನಡೆಸಿದರು.

ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್ ಅವರು ಶಾಸಕ ಕಾಳಿದಾಸ್ ಕೋಲಮ್‌ಕರ್ ಅವರನ್ನು ಸಮಾನಾಂತರ ಅಧಿವೇಶನದ ಸಭಾಧ್ಯಕ್ಷ ಎಂದು ಘೋಷಿಸಿ, ಚರ್ಚೆ ನಡೆಸುವಂತೆ ಪ್ರಸ್ತಾವನೆಯೊಂದನ್ನು ಸಲ್ಲಿಸಿದರು. ‘ನಾನು ಈಗ ಸರ್ಕಾರದ ವಿರುದ್ಧ ನಿರ್ಣಯ ಮಂಡಿಸುತ್ತಿದ್ದೇನೆ. ಸದಸ್ಯರು ಈ ನಿರ್ಣಯದ ಮೇಲೆ ಚರ್ಚೆ ಆರಂಭಿಸಬಹುದು’ ಎಂದು ತಿಳಿಸಿದರು.

ಸದನದ ಹೊರ ಭಾಗದಲ್ಲಿ ಧ್ವನಿವರ್ಧಕಗಳೊಂದಿಗೆ ಘೋಷಣೆ ಕೂಗುತ್ತಾ, ಸಮಾನಾಂತರ ಅಧಿವೇಶನ ನಡೆಸುತ್ತಿರುವ ಬಿಜೆಪಿಯವರ ನಡೆಯನ್ನು ಆಡಳಿತ ಪಕ್ಷದ ನಾಯಕರು ಆಕ್ಷೇಪಿಸಿದರು.

ಸಮಾನಾಂತರ ಅಧಿವೇಶನದಲ್ಲಿ ಬಿಜೆಪಿಯ ಕೆಲವು ಮಾಜಿ ಶಾಸಕರನ್ನೂ ಕಂಡ ಆಡಳಿತ ಪಕ್ಷದ ವಿಧಾನ ಪರಿಷತ್ ಸದಸ್ಯರು, ‘ಕೋವಿಡ್–19 ನಿರ್ಬಂಧಗಳ ನಡುವೆ ಮಾಜಿ ಶಾಸಕರು ಹೇಗೆ ವಿಧಾನ ಭವನ ಪ್ರವೇಶಿಸಿದರು’ ಎಂದು ಭದ್ರತಾ ವಿಭಾಗದವರನ್ನು ಪ್ರಶ್ನಿಸಿದ್ದಾರೆ. ಈ ಬಗ್ಗೆ ವರದಿ ನೀಡುವಂತೆ ಸೂಚಿಸಿದ್ದಾರೆ. ಈ ಘಟನೆ ನಂತರ, ಧ್ವನಿವರ್ಧಕಗಳೊಂದಿಗೆ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ, ವಿಧಾನ ಭವನದ ಆವರಣ ಪ್ರವೇಶಿಸಲು ಮುಂದಾದ ಬಿಜೆಪಿ ಶಾಸಕರನ್ನು ಭದ್ರತಾ ಸಿಬ್ಬಂದಿ ತಡೆದರು.

ಇತ್ತ ಹೊರಗಡೆ ಸಮಾನಾಂತರ ಅಧಿವೇಶನ ನಡೆಯುವಾಗ, ಅತ್ತ ಸದನದ ಒಳಗೆ ಮುಂಗಾರು ಅಧಿವೇಶನದಲ್ಲಿ ಎನ್‌ಸಿಪಿ ನಾಯಕ ಮತ್ತು ರಾಜ್ಯ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ನವಾಬ್ ಮಲಿಕ್ ಅವರು, ‘ಸ್ಪೀಕರ್ ಭಾಸ್ಕರ್ ಜಾಧವ್ ಅವರಿಗೆ ಸಾಮಾಜಿಕ ಜಾಲತಾಣಗಳಲ್ಲಿ ಬೆದರಿಕೆ ಹಾಕಲಾಗುತ್ತಿದೆ. ಅವರಿಗೆ ಭದ್ರತೆ ಒದಗಿಸುವಂತೆ ಕೇಳಿದರು. ಇದೇ ವೇಳೆ ಮಾಜಿ ಶಾಸಕ ರಾಜ್ ಪುರೋಹಿತ್ ವಿಧಾನ ಭವನದಲ್ಲಿ ಹೇಗೆ ಕರಪತ್ರ ಹಂಚುತ್ತಾರೆ? ಎಂದು ಪ್ರಶ್ನಿಸಿದರು.

ಉದ್ಯೋಗ ವಾಣಿ

WE ARE HIRING
URGENT REQUIREMENT JOB POSITIONS
Prathibha Biotech

SALES OFFICER
SALES REPRESENTATIVE | TERRITORY MANAGER

Work Experience: Min. 2 to 7 years in Agrichemical

Work Location: Bijapur, Gulbarga, Shahapur, Bagalkot, Dharwad, Davanagere, Chitradurga, Shivamogga, Hassan, Mandya, Mysore, Chikkaballapura, Haveri, Hosakote.

Interest candidates can send Resume Before 11-07-2021 to:
e-mail: trivendra9@gmail.com | www.prathibhabiotech.com

Contact: 7829284172-Mr.Trivendra Reddy

Prathibha Biotech Pvt. Ltd.
Corp. Office: 5-36/249, Plot No.148, 1st Floor, Mythri Nagar, Kukatpally, Hyderabad - 500 072. T.S.
Phone No: 040 2372 0329 | Email: prathibha_biotech@yahoo.co.in | www.prathibhabiotech.com

NITTE EDUCATION TRUST | DR NSAM FIRST GRADE COLLEGE

(Affiliated to Bengaluru City University)
Sy.No.21, Krishnarajapura Village, Shivakote Post, Hesaraghatta Hobli, Bengaluru-560 089 | Tel: 080- 22178405 /407 /403 | Web: www.nsam.ac.in

The Nitte Education Trust (NET) is a premier institution that manages a Deemed University and 43 reputed institutions in three campuses at Nitte, Mangaluru and Bengaluru. Dr. N.S.A.M. First Grade College, Bengaluru invites applications for the following posts:

NAME & NO. OF POSTS	QUALIFICATION & EXPERIENCE
Professor / HOD -Department of Arts (One post)	Ph.D in Psychology & UGC NET/SLET plus 5+ years as HOD Or 10+ Years as Associate Professor with research experience
Assistant Professor for Journalism | English | Political Science | Economics | Sociology (One post for each subject)	1) PG with First class /Distinction and with UGC NET/SLET plus 5+ years Teaching as Assistant Professor and Research experience 2) Ph.D in respective subjects

SC/ST candidates will be preferred. Interested candidates may e-mail their resume to nsamfgcyel@gmail.com within 21 days from the date of this advertisement.



ಕಾರ್ಮಿಕರ ರಾಜ್ಯ ವಿಮಾ ನಿಗಮ कर्मचारी राज्य बीमा निगम
EMPLOYEES' STATE INSURANCE CORPORATION
Ministry of Labour & Employment, Government of India
Regional Office Karnataka
No.10, Tank Bund Road, Near Binny Mill, Next to ETA Mall,Binnypet, Bengaluru- 560023, Ph: 080-26742485 Fax: 080-26741307 E-mail: rd-karnataka@esic.in

WALK-IN-INTERVIEW FOR APPOINTMENT OF PART TIME MEDICAL REFEREE

Eligible candidates are invited for walk in interview for appointment as Part time Medical referee on contract basis for the following places in Karnataka:-

SL No	Place of Duty	No of vacant post
1	Malleshwaram (Bangalore)	1
2	Bommasandra	1
3	Shivamogga/Bhadravathi	1
4	Gulbarga	1
5	Mangaluru	1
6	Belagavi	1
7	Tumkur	1
8	Bijapur	1
9	Mysore & Nanjangud	1
10	Shahabad	1
11	Karwar	1
12	Hubli	1
13	Torangallu	1
14	Hassan	1

Date of Interview:- 30.07.2021

Registration for interview from 10:00 AM to 11: 00 AM at nearest Branch Office or Sub Regional Office.

Place of Interview :- The following are the respective places of interview for the candidates opting to above places of duty.

Sl. No	Place of Interview
1 & 2	Regional Office, ESI Corporation, Binnypet, Bangalore.
3	Branch office, ESI Corporation, Shivamogga
4	Sub Regional office, ESI Corporation, Gulbarga
5	Sub Regional office, ESI Corporation, Mangalore
6	Branch office, ESI Corporation ,Belagavi.
7	Branch Office, ESI Corporation, Tumkur
8	Branch Office, ESI Corporation, Bijapur
9	Sub Regional Office,ESI Corporation, Mysore
10	Branch Office, ESI Corporation, Shahabad
11	Dispensary Cum Branch Office, ESI Corporation, Karwar
12	Sub Regional Office, ESI Corporation, Hubli
13	Branch Office, ESI Corporation, Torangallu
14	Branch Office, ESI Corporation, Hassan.

QUALIFICATION REQUIRED: MBBS degree included in schedule Part I of Medical Council of India. Only retired Central/State Government doctors need to apply.

AGE LIMIT : Upper age limit is 64 years as on 30.07.2021.

FOR OTHER TERMS AND CONDITIONS AND APPLICATION FORMAT PLEASE REFER OUR WEBSITE: https://www.esic.nic.in

Place: Bengaluru
Dated: 05.07.2021

Sd/-
Regional Director

ಜಯದ ಅಂತರ 7-5, 6-4, 6-2

ವಿಂಬಲ್ಡನ್ ಟೆನಿಸ್ ಟೂರ್ನಿ: ಡ್ಯಾನಿಲ್ ಮೆಡ್ವೆಡೆವ್‌ಗೆ ಸೋಲುಣಿಸಿದ ಹುಬರ್ಟ್ ಹರ್ಕಾಜ್

ರೋಜರ್ 'ಹಿರಿಯ' ಸಾಧನೆ

ಲಂಡನ್ (ಎಎಫ್‌ಪಿ/ರಾಯಿಟರ್ಸ್): ನಲವತ್ತರ ಹೊಸ್ತಿಲಲ್ಲಿಯೂ ರೋಜರ್ ಫೆಡರರ್ ಆಟದ ಸೊಬಗು ಒಂಚೂರೂ ಕುಂದಿಲ್ಲ. ತಮ್ಮ ಎಂದಿನ ನವೋತ್ಸಾಹದೊಂದಿಗೇ ವಿಂಬಲ್ಡನ್ ಟೂರ್ನಿಯ ಎಂಟರಘಟ್ಟಕ್ಕೆ ಲಗ್ಗೆಯಿಟ್ಟಿದ್ದಾರೆ.

1968ರಲ್ಲಿ ಆರಂಭವಾದ 'ಓಪನ್ ಟೆನಿಸ್ ಯುಗ'ದಲ್ಲಿ ಈ ಸಾಧನೆ ಮಾಡಿದ ಅತ್ಯಂತ ಹಿರಿಯ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಆಗಸ್ಟ್ 8ಕ್ಕೆ ತಮ್ಮ ನಲ್ವತ್ತನೇ ಜನ್ಮದಿನವನ್ನು ಆಚರಿಸಿಕೊಳ್ಳಲಿರುವ ಸ್ವಿಟ್ಜರ್ಲೆಂಡ್ ದಿಗ್ಗಜ, 16ರ ಘಟ್ಟದ ಹಣಾಹಣಿಯಲ್ಲಿ ಮಂಗಳವಾರ ರಾತ್ರಿ 7–5, 6-4, 6-2ರಿಂದ ಇಟಲಿಯ ಲೊರೆಂಜೊ ಸೊನೆಗೊ ಅವರನ್ನು ಸೋಲಿಸಿದರು. ಇದರೊಂದಿಗೆ ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ 18ನೇ ಬಾರಿ ಕ್ವಾರ್ಟರ್‌ಫೈನಲ್ ತಲುಪಿದ ಹಿರಿಮೆ ಅವರದಾಯಿತು.

ಎಂಟು ಬಾರಿ ವಿಂಬಲ್ಡನ್ ಟ್ರೋಫಿ ವಿಜೇತ ಫೆಡರರ್ ಅವರಿಗೆ ಇದು ಒಟ್ಟಾರೆ 58ನೇ ಗ್ರ್ಯಾನ್‌ಸ್ಲಾಮ್ ಕ್ವಾರ್ಟರ್‌ಫೈನಲ್ ಪ್ರವೇಶ. ಎಂಟರ ಘಟ್ಟದಲ್ಲಿ ಅವರಿಗೆ ಪೋಲೆಂಡ್‌ನ ಹುಬರ್ಟ್ ಹರ್ಕಾಜ್ ಸವಾಲು ಎದುರಾಗಿದೆ.

ಮಂಗಳವಾರ ನಡೆದ ಪಂದ್ಯದಲ್ಲಿ ಹುಬರ್ಟ್, ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ಡ್ಯಾನಿಲ್ ಮೆಡ್ವೆಡೆವ್ ಸವಾಲು ಮೀರಿದರು. ಸೋಮವಾರ ರಾತ್ರಿ ಆರಂಭವಾಗಿದ್ದ ಈ ಪಂದ್ಯವನ್ನು ಮಳೆಯಿಂದಾಗಿ ಸ್ಥಗಿತಗೊಳಿಸಿ ಮಂಗಳವಾರ ನಡೆಸಲಾಯಿತು. 24 ವರ್ಷದ ಹುಬರ್ಟ್ 2-6, 7-6, 3-6, 6-3, 6-3ರಿಂದ ಮೆಡ್ವೆಡೆವ್ ಅವರಿಗೆ ಸೋಲುಣಿಸಿದರು. 14ನೇ ಶ್ರೇಯಾಂಕದ ಆಟಗಾರ, ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರಲ್ಲಿ ಮೊದಲ ಬಾರಿ ಎಂಟರಘಟ್ಟ ತಲುಪಿದರು.

ಮಹಿಳೆಯರ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಮಂಗಳವಾರ ಆಸ್ಟ್ರೇಲಿಯಾದ ಆ್ಯಷ್ಲಿ ಬಾರ್ಟಿ 6-1, 6-3ರಿಂದ ತಮ್ಮದೇ ದೇಶದ ಅಜ್ಲಾ ತಮ್ಲಾನೊವಿಕ್ ಎದುರು, ಜರ್ಮನಿಯ ಆ್ಯಂಜೆಲಿಕ್ ಕರ್ಬರ್ 6-2, 6-3ರಿಂದ ಜೆಕ್ ಗಣರಾಜ್ಯದ ಕರೋಲಿನಾ ಮುಚೊವಾ ಎದುರು ಜಯ ಸಾಧಿಸಿದರು.

ಸೋಮವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ 16ರ ಘಟ್ಟದ ಹಣಾಹಣಿಯಲ್ಲಿ ಹಂಗರಿಯ ಮಾರ್ಟನ್ ಫುಕೊವಿಕ್ಸ್ 6-3, 4-6, 4-6, 6-0, 6-3ರಿಂದ ರಷ್ಯಾದ ಆ್ಯಂಡಿ ರುಬ್ಲೆವ್ ಅವರನ್ನು ಸೋಲಿಸಿದ್ದರು.

ರೋಜರ್ ಫೆಡರರ್ –ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- ಫೈನಲ್‌ನಲ್ಲಿ ಫೆಡರರ್–ಜೊಕೊವಿಚ್ ಹಣಾಹಣಿಯ ನಿರೀಕ್ಷೆ
- ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯ-ಕ್ವಾರ್ಟರ್‌ಗೆ ಹುಬರ್ಟ್

ನಾಲ್ಕರ ಘಟ್ಟಕ್ಕೆ ಪ್ಲಿಸ್ಕೊವಾ

ಕರೋಲಿನಾ ಪ್ಲಿಸ್ಕೊವಾ

ಜೆಕ್ ಗಣರಾಜ್ಯದ ಕರೋಲಿನಾ ಪ್ಲಿಸ್ಕೊವಾ ಅವರು ವಿಂಬಲ್ಡನ್ ಟೂರ್ನಿಯಲ್ಲಿ ಮೊದಲ ಬಾರಿ ಸೆಮಿಫೈನಲ್ ತಲುಪಿದ ಸಾಧನೆ ಮಾಡಿದರು. ಮಂಗಳವಾರ ನಡೆದ ಎಂಟರಘಟ್ಟದ ಹಣಾಹಣಿಯಲ್ಲಿ ಅವರು 6-2, 6-2ರಿಂದ ಸ್ವಿಟ್ಜರ್ಲೆಂಡ್‌ನ ವಿಕ್ಟೊರಿಯಾ ಗೋಲುಬಿಚ್ ಅವರನ್ನು ಮಣಿಸಿದರು.

ವಿಶ್ವದ ಮಾಜಿ ಅಗ್ರ ರ‍್ಯಾಂಕಿನ ಆಟಗಾರ್ತಿ, ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಬೆಲಾರಸ್‌ನ ಅರಿನಾ ಸಬಲೆಂಕಾ ಅವರನ್ನು ಎದುರಿಸುವರು.

ಸಬಲೆಂಕಾ ಇನ್ನೊಂದು ಪಂದ್ಯದಲ್ಲಿ ಟ್ಯೂನಿಷಿಯಾದ ಆನ್ಸ್ ಜಬೆವುರ್ ಅವರನ್ನು 6-4, 6-3ರಿಂದ ಮಣಿಸಿದರು.

ಯೂರೊ ಕಪ್ ಫುಟ್‌ಬಾಲ್ ಟೂರ್ನಿ ಸೆಮಿಫೈನಲ್

ಇಂಗ್ಲೆಂಡ್‌ಗೆ ಡೆನ್ಮಾರ್ಕ್ ಸವಾಲು

ಲಂಡನ್ (ಎಎಫ್‌ಪಿ): 55 ವರ್ಷಗಳ ಬಳಿಕ ಪ್ರಮುಖ ಟೂರ್ನಿಯೊಂದರ ಫೈನಲ್ ತಲುಪುವ ಹಂಬಲದಲ್ಲಿರುವ ಇಂಗ್ಲೆಂಡ್ ತಂಡವು ಯೂರೊ ಕಪ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಬುಧವಾರ ತಡರಾತ್ರಿ ಡೆನ್ಮಾರ್ಕ್ ತಂಡವನ್ನು ಎದುರಿಸಲಿದೆ.

ತವರಿನಲ್ಲಿ ನಡೆದ 1966ರ ವಿಶ್ವಕಪ್ ಟೂರ್ನಿಯಲ್ಲಿ ಇಂಗ್ಲೆಂಡ್ ಚಾಂಪಿಯನ್ ಪಟ್ಟ ಅಲಂಕರಿಸಿತ್ತು. ಫೈನಲ್ ಪಂದ್ಯದಲ್ಲಿ ಪಶ್ಚಿಮ ಜರ್ಮನಿಯನ್ನು ಪರಾಭವಗೊಳಿಸಿತ್ತು.

ಈ ಬಾರಿ ತವರಿನ ಪ್ರೇಕ್ಷಕರ ಅಪಾರ ಬೆಂಬಲದೊಂದಿಗೆ ವೆಂಬ್ಲಿ ಕ್ರೀಡಾಂಗಣದಲ್ಲಿ ಕಣಕ್ಕಿಳಿಯಲಿರುವ ತಂಡವು ಎದುರಾಳಿಗೆ ಸೋಲುಣಿಸುವ ಹಂಬಲದಲ್ಲಿದೆ. ಟೂರ್ನಿಯಲ್ಲಿ ನಿಧಾನಗತಿಯ ಆರಂಭ ಮಾಡಿದ್ದ ಹ್ಯಾರಿ ಕೇನ್ ನಾಯಕತ್ವದ ತಂಡವು ಬಳಿಕ ವೇಗದ ಆಟದ ಮೂಲಕ ಗಮನಸೆಳೆದಿದೆ.

ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 2-0ಯಿಂದ ಜರ್ಮನಿಯನ್ನು ಮಣಿಸಿದ್ದ ತಂಡವು, ಎಂಟರ ಘಟ್ಟದಲ್ಲಿ ಉಕ್ರೇನ್‌ಅನ್ನು 4–0ಯಿಂದ ಪರಾಭವಗೊಳಿಸಿತ್ತು.


ಅಭ್ಯಾಸದ ಸಂದರ್ಭದಲ್ಲಿ ಇಂಗ್ಲೆಂಡ್ ತಂಡದ ನಾಯಕ ಹ್ಯಾರಿ ಕೇನ್ (ಬಲ) ಮತ್ತು ಸಹ ಆಟಗಾರ ರಹೀಮ್ ಸ್ಟರ್ಲಿಂಗ್ –ರಾಯಿಟರ್ಸ್ ಚಿತ್ರ

ಇನ್ನೊಂದೆಡೆ 16ರ ಘಟ್ಟದ ಹಣಾಹಣಿಯಲ್ಲಿ ವೇಲ್ಸ್ ಎದುರು 4-0ಯಿಂದ ಜಯಿಸಿದ್ದ ಡೆನ್ಮಾರ್ಕ್, ಬಳಿಕ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 2–1ರಿಂದ ಜೆಕ್ ಗಣರಾಜ್ಯ ತಂಡವನ್ನು ಸೋಲಿಸಿ ನಾಲ್ಕರ ಘಟ್ಟ ತಲುಪಿದೆ.

ಆತಿಥೇಯ ತಂಡವನ್ನು ಮಣಿಸಿ ಪ್ರಶಸ್ತಿ ಸುತ್ತು ತಲುಪುವ ಕನಸಿನಲ್ಲಿ ಸೈಮನ್ ಜಾರ್ ಸಾರಥ್ಯದ ಡೆನ್ಮಾರ್ಕ್ ತಂಡವಿದೆ.

ಪಂದ್ಯ ಆರಂಭ: ರಾತ್ರಿ 12.30 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸೋನಿ ನೆಟ್‌ವರ್ಕ್

ಟೋಕಿಯೊಗೆ ತೆರಳದಿರಲು

ಗೋಪಿಚಂದ್ ನಿರ್ಧಾರ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ಗೆ ತೆರಳಲಿರುವ ಭಾರತ ಬ್ಯಾಡ್ಮಿಂಟನ್ ತಂಡದೊಂದಿಗೆ ಪ್ರಯಾಣ ಮಾಡದಿರಲು ರಾಷ್ಟ್ರೀಯ ಮುಖ್ಯ ಕೋಚ್ ಪಿ. ಗೋಪಿಚಂದ್ ನಿರ್ಧರಿಸಿದ್ದಾರೆ.

ಆಟಗಾರ ಬಿ. ಸಾಯಿ ಪ್ರಣೀತ್ ಅವರ ಸಿಂಗಲ್ಸ್ ಬ್ಯಾಡ್ಮಿಂಟನ್ ಟ್ರೇನರ್, ಇಂಡೋನೇಷ್ಯಾದ ಏಗಸ್ ದ್ವಿ ಸಂತೊಸಾಗೆ ತಂಡದೊಂದಿಗೆ ತೆರಳುವ ಅವಕಾಶ ಮಾಡಿಕೊಡಲು ಗೋಪಿ ಈ ನಿರ್ಧಾರ ತೆಗೆದುಕೊಂಡಿದ್ದಾರೆ.

2012ರಲ್ಲಿ ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗಳಿಸಿದ್ದ ಸೈನಾ ನೆಹ್ವಾಲ್ ಮತ್ತು ರಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದ ಪಿ.ವಿ. ಸಿಂಧು ಅವರಿಗೆ ಗೋಪಿ ಮಾರ್ಗದರ್ಶನ ನೀಡಿದ್ದರು.

ಪಿ. ಗೋಪಿಚಂದ್

ಈ ಬಾರಿ ಬ್ಯಾಡ್ಮಿಂಟನ್ ತಂಡದೊಂದಿಗೆ ತೆರಳಲು ನೆರವು ಸಿಬ್ಬಂದಿಯಲ್ಲಿ ಐದು ಜನಕ್ಕೆ ಮಾತ್ರ ಅವಕಾಶ ನೀಡಲು ಭಾರತ ಒಲಿಂಪಿಕ್ ಸಂಸ್ಥೆ (ಐಒಸಿ) ನಿರ್ಧರಿಸಿದೆ. ಅದರಿಂದಾಗಿ ತಂಡದಲ್ಲಿ ಮೂವರು ಕೋಚ್ ಮತ್ತು ಇಬ್ಬರು ಫಿಸಿಯೊ ಇದ್ದಾರೆ.

ಗಾಲ್ಫ್: ಮಾನೆಗೆ ಒಲಿಂಪಿಕ್ಸ್ ಟಿಕೆಟ್

ನವದೆಹಲಿ (ಪಿಟಿಐ): ಭಾರತದ ಗಾಲ್ಫ್ ಆಟಗಾರ ಉದಯನ್ ಮಾನೆ ಅವರು ಮೊದಲ ಬಾರಿ ಒಲಿಂಪಿಕ್ಸ್ ಅರ್ಹತೆ ಗಳಿಸಿದ್ದಾರೆ. ರ‍್ಯಾಂಕಿಂಗ್ ಆಧಾರದಲ್ಲಿ ಅವರಿಗೆ ಮಂಗಳವಾರ ಟೋಕಿಯೊ ಟಿಕೆಟ್ ಒಲಿಯಿತು.

ಉದಯನ್ ಅವರು ದೇಶದ ಎರಡನೇ ಗರಿಷ್ಠ ರ‍್ಯಾಂಕಿನ ಆಟಗಾರ. ಅರ್ಜೆಂಟೀನಾದ ಎಮಿಲಿಯಾನೊ ಗ್ರಿಲ್ಲೊ ಅವರು ಒಲಿಂಪಿಕ್ ಕೂಟದಿಂದ ಹಿಂದೆ ಸರಿದ ಕಾರಣ ಉದಯನ್ ಅವರಿಗೆ ಅದೃಷ್ಟ ಒಲಿಯಿತು. ಭಾರತದ ಅನಿರ್ಬನ್ ಲಹಿರಿ ಕೂಡ ಈಗಾಗಲೇ ಟೋಕಿಯೊ ಟಿಕೆಟ್ ಖಚಿತಪಡಿಸಿದ್ದಾರೆ.

ಇಂಗ್ಲೆಂಡ್ ತಂಡದಲ್ಲಿ ಮೂವರು ಆಟಗಾರರು, ನಾಲ್ವರು ಸಿಬ್ಬಂದಿಗೆ ಸೋಂಕು

ಪಾಕ್ ವಿರುದ್ಧದ ಸರಣಿಗೆ ಹೊಸ ತಂಡ

ಲಂಡನ್ (ಎಪಿ): ಪಾಕಿಸ್ತಾನ ತಂಡದೆದುರು ಗುರುವಾರದಿಂದ ಆರಂಭವಾಗಲಿರುವ ಏಕದಿನ ಕ್ರಿಕೆಟ್ ಸರಣಿಗೆ ಆತಿಥೇಯ ಇಂಗ್ಲೆಂಡ್ ಮಂಗಳವಾರ 'ಪರಿಷ್ಕೃತ' ತಂಡವನ್ನು ರಚಿಸಿತು.

ಎರಡು ದಿನಗಳ ಹಿಂದಷ್ಟೇ ಶ್ರೀಲಂಕಾ ವಿರುದ್ಧದ ಸೀಮಿತ ಓವರ್‌ಗಳ ಸರಣಿಯಲ್ಲಿ ಇಂಗ್ಲೆಂಡ್ ತಂಡವು ಆಡಿತ್ತು. ಅದೇ ತಂಡವು ಪಾಕ್ ವಿರುದ್ಧವೂ ಕಣಕ್ಕಿಳಿಯಬೇಕಿತ್ತು. ಆದರೆ ಸೋಮವಾರ ಕೋವಿಡ್ ಪರೀಕ್ಷೆಯಲ್ಲಿ ತಂಡದ ಮೂವರು ಆಟಗಾರರು ಮತ್ತು ನಾಲ್ವರು ನೆರವು ಸಿಬ್ಬಂದಿಗೆ ಸೋಂಕು ದೃಢಪಟ್ಟಿತ್ತು. ಆದ್ದರಿಂದ ತಂಡವನ್ನು ಪ್ರತ್ಯೇಕವಾಸಕ್ಕೆ ಒಳಪಡಿಸಲಾಗಿದೆ.

ಸೋಂಕಿಗೊಳಗಾದವರ ಹೆಸರುಗಳನ್ನು ಬಹಿರಂಗಪಡಿಸಿಲ್ಲ. ಅವರೊಂದಿಗಿದ್ದ ಉಳಿದ ಆಟಗಾರರನ್ನು ಪ್ರಾಥಮಿಕ ಸಂಪರ್ಕಿತರು ಎಂದು ಪರಿಗಣಿಸಲಾಗಿದೆ.

ಇದೇ ಗುರುವಾರ ಪಾಕ್ ವಿರುದ್ಧ ಕಾರ್ಡಿಫ್‌ನಲ್ಲಿ ಮೊದಲ ಏಕದಿನ ಪಂದ್ಯವನ್ನು ಹೊಸ ತಂಡವು ಆಡಲಿದ್ದು, ಆಲ್‌ರೌಂಡರ್ ಬೆನ್ ಸ್ಟೋಕ್ಸ್ ನಾಯಕತ್ವ ವಹಿಸಲಿದೆ. ಕ್ರಿಸ್ ಸಿಲ್ವರ್ ಹುಡ್ ಕೋಚ್ ಆಗಿದ್ದಾರೆ.

ಜುಲೈ 16ರಂದು ಪಾಕ್ ಎದುರು ಆರಂಭವಾಗುವ ಟಿ20 ಸರಣಿಗೆ ಮೊದಲಿನ ತಂಡವೇ ಕಣಕ್ಕೆ ಮರಳಲಿದೆ ಎಂದು ತಿಳಿಸಲಾಗಿದೆ.

'ಇದೊಂದು ಅನಿರೀಕ್ಷಿತ ಸಂದರ್ಭ. ಆದರೆ ಈ ವೇಳೆ ಎಲ್ಲರೂ ಒಂದಾಗಿ ಪರಿಸ್ಥಿತಿಯನ್ನು ಎದುರಿಸಲು ಮುಂದಾಗಿರುವುದು ಹೆಮ್ಮೆ ಮೂಡಿಸಿದೆ' ಎಂದು ಇಂಗ್ಲೆಂಡ್ ಪುರುಷರ ತಂಡದ ನಿರ್ದೇಶಕ ಆ್ಯಷ್ಲೆ ಗೈಲ್ಸ್ ಹೇಳಿದ್ದಾರೆ.

ಹೊಸ ತಂಡದಲ್ಲಿ 18 ಆಟಗಾರರು ಮತ್ತು ಸಿಬ್ಬಂದಿ ಇದ್ದಾರೆ. ಕಾರ್ಡಿಫ್‌ಗೆ ತೆರಳುವ ಮುನ್ನ ಅವರೆಲ್ಲರೂ ಕೋವಿಡ್ ತಪಾಸಣೆಗೆ ಒಳಗಾಗಲಿದ್ದಾರೆ. ನೆಗೆಟಿವ್ ವರದಿ ನಂತರವಷ್ಟೇ ಬಯೋಬಬಲ್ ಪ್ರವೇಶಿಸುವರು. ಈ ಪಂದ್ಯದಲ್ಲಿ ಕ್ರೀಡಾಂಗಣದ ಶೇ 50ರಷ್ಟು ಪ್ರೇಕ್ಷಕರ ಪ್ರವೇಶಕ್ಕೆ ಅವಕಾಶ ನೀಡಲಾಗಿದೆ.

ತಂಡ: ಬೆನ್ ಸ್ಟೋಕ್ಸ್ (ನಾಯಕ), ಜೇಕ್ ಬಾಲ್, ಡ್ಯಾನಿ ಬ್ರಿಗ್ಸ್, ಬ್ರೈಡನ್ ಕಾರ್ಸ್, ಜ್ಯಾಕ್ ಕ್ರಾಲಿ, ಬೆನ್ ಡಕೆಟ್, ಲೂಯಿಸ್ ಗ್ರೆಗರಿ, ಟಾಮ್ ಹೆಲ್ಮ್, ವಿಲ್ ಜ್ಯಾಕ್ಸ್, ಡ್ಯಾನ್ ಲಾರೆನ್ಸ್, ಸಕೀಬ್ ಮೆಹಮೂದ್, ಡೇವಿಡ್ ಮಲಾನ್, ಕ್ರೆಗ್ ಓವರ್ಟನ್, ಮ್ಯಾಟ್ ಪಾರ್ಕಿನ್ಸನ್, ಡೇವಿಡ್ ಪೈನಿ, ಫಿಲ್ ಸಾಲ್ಟ್, ಜಾನ್ ಸಿಮ್ಸನ್, ಜೇಮ್ಸ್ ವಿನ್ಸ್.

ಭಾರತ ತಂಡದ ವಿಹಾರಕ್ಕಿಲ್ಲ ಅಡೆ ತಡೆ

ಲಂಡನ್ (ಪಿಟಿಐ): ಇಂಗ್ಲೆಂಡ್ ಏಕದಿನ ಕ್ರಿಕೆಟ್ ತಂಡದಲ್ಲಿ ಕೋರೊನಾ ಸೋಂಕಿನ ಪ್ರಕರಣಗಳು ವರದಿಯಾಗಿವೆ. ಆದರೆ, ಮುಂದಿನ ತಿಂಗಳು ನಡೆಯಲಿರುವ ಟೆಸ್ಟ್ ಸರಣಿಯಲ್ಲಿ ಆಡಲಿರುವ ವಿರಾಟ್ ಕೊಹ್ಲಿ ನಾಯಕತ್ವದ ಭಾರತ ತಂಡದ ರಜೆ ಮುಂದುವರೆಯಲಿದೆ ಎಂದು ಬಿಸಿಸಿಐ ತಿಳಿಸಿದೆ.

ಜುಲೈ 14ರವರೆಗೂ ಭಾರತ ತಂಡದ ಆಟಗಾರರು ಬಯೋಬಬಲ್‌ನಿಂದ ಹೊರಗಿದ್ದು ವಿಹಾರ ನಡೆಸಲು ಅವಕಾಶ ನೀಡಲಾಗಿದೆ. ಆಮೇಲೆ ಅಭ್ಯಾಸ ಪಂದ್ಯಗಳನ್ನು ಆಡಲು ತಂಡವು ಲಂಡನ್‌ನಲ್ಲಿ ಜೊತೆಗೂಡಲಿದೆ.

'ಪರಿಸ್ಥಿತಿಯನ್ನು ಅವಲೋಕಿಸಲಾಗುತ್ತಿದೆ. ಇಸಿಬಿ ಮತ್ತು ಸ್ಥಳೀಯ ಆರೋಗ್ಯ ಸಿಬ್ಬಂದಿಯ ಸಂಪರ್ಕದಲ್ಲಿದ್ದೇವೆ. ಹೊಸದಾಗಿ ಶಿಷ್ಟಾಚಾರ ಜಾರಿಗೆ ತರುವುದಾದರೆ ಅವರು ತಿಳಿಸುತ್ತಾರೆ. ಕೂಡಲೇ ಪಾಲಿಸಲಾಗುವುದು. ಅಲ್ಲಿಯವರೆಗೂ ಯಥಾಸ್ಥಿತಿ ಮುಂದುವರಿಯುವುದು' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಟೆನಿಸ್: ವಿಶ್ವ ಜೂನಿಯರ್ ಫೈನಲ್ಸ್‌ಗೆ ಕರ್ನಾಟಕದ ಕ್ರಿಶ್

ಪ್ರಜಾವಾಣಿ ವಾರ್ತೆ

ಕ್ರಿಶ್ ತ್ಯಾಗಿ

ಬೆಂಗಳೂರು: ಕರ್ನಾಟಕದ ಕ್ರಿಶ್ ತ್ಯಾಗಿ ಅವರು ಐಟಿಎಫ್ ವಿಶ್ವ ಜೂನಿಯರ್ 14 ವರ್ಷದೊಳಗಿನವರ ಟೆನಿಸ್ ಫೈನಲ್ಸ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಲಿದ್ದಾರೆ. ಜೆಕ್ ಗಣರಾಜ್ಯದ ಪ್ರೊಸ್ಟೆಜೊವ್‌ನಲ್ಲಿ ಆಗಸ್ಟ್ 2ರಿಂದ 7ರವರೆಗೆ ಈ ಟೂರ್ನಿ ನಿಗದಿಯಾಗಿದೆ.

ಸೋಲ್ ಸ್ಪೋರ್ಟ್ಸ್ ಅಕಾಡೆಮಿಯ ಕ್ರಿಶ್, ಇತ್ತೀಚೆಗೆ ಮುಂಬೈನಲ್ಲಿ ನಡೆದ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ 14 ವರ್ಷದೊಳಗಿನವರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದರು. ಅಹಮದಾಬಾದ್‌ನಲ್ಲಿ ನಡೆದ ಏಷ್ಯನ್ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಸಿಂಗಲ್ಸ್ ಮತ್ತು ಡಬಲ್ಸ್ ವಿಭಾಗದ ಪ್ರಶಸ್ತಿಗಳೂ ಅವರಿಗೆ ಒಲಿದಿವೆ.

ಸಂಕ್ಷಿಪ್ತ ಸುದ್ದಿ

ಏಕದಿನ ರ‍್ಯಾಂಕಿಂಗ್: ಅಗ್ರಸ್ಥಾನಕ್ಕೆ ಮರಳಿದ ಮಿಥಾಲಿ ರಾಜ್

ಮಿಥಾಲಿ ರಾಜ್

ದುಬೈ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಮಿಥಾಲಿ ರಾಜ್ ಐಸಿಸಿ ಏಕದಿನ ಬ್ಯಾಟರ್‌ಗಳ ರ‍್ಯಾಂಕಿಂಗ್‌ನಲ್ಲಿ ಮಂಗಳವಾರ ಅಗ್ರಸ್ಥಾನಕ್ಕೆ ಮರಳಿದ್ದಾರೆ. ಇಂಗ್ಲೆಂಡ್ ಎದುರಿನ ಮೂರು ಪಂದ್ಯಗಳ ಸರಣಿಯಲ್ಲಿ ತೋರಿದ ಭರ್ಜರಿ ಸಾಮರ್ಥ್ಯವು ಅವರ ಕ್ರಮಾಂಕದಲ್ಲಿ ಬಡ್ತಿಗೆ ಕಾರಣವಾಗಿದೆ.

ಭಾರತ ತಂಡವು ಸರಣಿಯನ್ನು 1–2ರಿಂದ ಕೈಚೆಲ್ಲಿದರೂ, 38 ವರ್ಷದ ಮಿಥಾಲಿ, ಮೂರು ಪಂದ್ಯಗಳಲ್ಲೂ ಅರ್ಧಶತಕ ಸಿಡಿಸಿದ್ದರು.

ಮೊದಲ ಎರಡು ಪಂದ್ಯಗಳಲ್ಲಿ ಕ್ರಮವಾಗಿ 72 ಮತ್ತು 59 ರನ್, ಮೂರನೇ ಹಾಗೂ ಅಂತಿಮ ಹಣಾಹಣಿಯಲ್ಲಿ ಔಟಾಗದೆ 75 ರನ್ ಗಳಿಸಿದ್ದರು. ಸದ್ಯ ಅವರಿಗೆ ರ‍್ಯಾಂಕಿಂಗ್‌ನಲ್ಲಿ ನಾಲ್ಕು ಸ್ಥಾನಗಳ ಬಡ್ತಿ ಸಿಕ್ಕಿದೆ

ಬ್ಯಾಸ್ಕೆಟ್‌ಬಾಲ್: ಐಬಿಬಿಸಿ ಶುಭಾರಂಭ

ಬೆಂಗಳೂರು: ಇಂದಿರಾನಗರ ಬ್ಯಾಸ್ಕೆಟ್‌ಬಾಲ್ ಕ್ಲಬ್ (ಐಬಿಬಿಸಿ) ತಂಡವು ಇಲ್ಲಿ ಆರಂಭವಾದ ಪ್ರೊ. ಪರಪ್ಪ ಸ್ಮಾರಕ ರಾಜ್ಯ 'ಎ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಜಯದ ಆರಂಭ ಮಾಡಿತು.

ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಐಬಿಬಿಸಿ 70–68ರಿಂದ ಕಸ್ಟಮ್ಸ್ ಆ್ಯಂಡ್ ಜಿಎಸ್‌ಟಿ ತಂಡವನ್ನು ಸೋಲಿಸಿತು.

ಇನ್ನುಳಿದ ಪಂದ್ಯಗಳಲ್ಲಿ ಜೆಎಸ್‌ಸಿ 82–69ರಿಂದ ಬಿಎಸ್‌ಎನ್‌ಎಲ್ ಎದುರು, ಬ್ಯಾಂಕ್ ಆಫ್ ಬರೋಡಾ 89–52ರಿಂದ ಸಿಎಂಪಿ ವಿರುದ್ಧ, ಎಎಸ್‌ಸಿ 51–40ರಿಂದ ಬೀಗಲ್ಸ್ ಎದುರು ಗೆದ್ದವು.

ವೆಬ್‌ಸಿರೀಸ್‌ನಲ್ಲಿ ಪೇಸ್–ಭೂಪತಿ

ಮುಂಬೈ (ಪಿಟಿಐ): ಭಾರತದ ಟೆನಿಸ್ ದಿಗ್ಗಜರಾದ ಲಿಯಾಂಡರ್ ಪೇಸ್ ಮತ್ತು ಮಹೇಶ್ ಭೂಪತಿ ಅವರು ವೆಬ್‌ಸಿರೀಸ್ ಒಂದರಲ್ಲಿ ಜೊತೆಯಾಗಲಿದ್ದಾರೆ. ಇವರಿಬ್ಬರು ಆಟಗಾರರಾಗಿ ಖ್ಯಾತಿ ಗಳಿಸಿದ ಪಯಣ ಮತ್ತು ಆಸಕ್ತಿದಾಯಕ ಕಥೆಗಳನ್ನು ಈ ಸರಣಿಯು ಒಳಗೊಂಡಿರಲಿದೆ.

ನಿರ್ದೇಶಕ ದಂಪತಿ ಅಶ್ವಿನಿ ಅಯ್ಯರ್ ತಿವಾರಿ ಮತ್ತು ನಿತೇಶ್ ತಿವಾರಿ ಈ ಸಿರೀಸ್‌ಅನ್ನು ನಿರ್ದೇಶಿಸಲಿದ್ದು, ಪೇಸ್ ಮತ್ತು ಭೂಪತಿ ತಮ್ಮ ಬಾಂಧವ್ಯ ಮತ್ತು ಟೆನಿಸ್ ಪಯಣದ ಕುರಿತು ನಿರೂಪಣೆ ಮಾಡಲಿದ್ದಾರೆ.

ಭೂಪತಿ ಮತ್ತು ಪೇಸ್ 1999ರ ವಿಂಬಲ್ಡನ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದರು. ಈ ಸಾಧನೆ ಮಾಡಿದ ಭಾರತದ ಮೊದಲ ಜೋಡಿ ಎನಿಸಿಕೊಂಡಿತ್ತು. ಈ ಸಂಭ್ರಮದ 22ನೇ ವರ್ಷಾಚರಣೆಯ ಹಿನ್ನೆಲೆಯಲ್ಲಿ ಪೇಸ್ ಅವರು ಟ್ರೋಫಿ ಹಿಡಿದ ಚಿತ್ರವನ್ನು ಭಾನುವಾರ ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದರು. ಹೀಗಾಗಿ ಅವರಿಬ್ಬರು ಮತ್ತೆ ಒಂದಾಗುವ ಕುರಿತು ಊಹಾಪೋಹಗಳು ಗರಿಗೆದರಿದ್ದವು.

ವಿಂಬಲ್ಡನ್ ಟ್ರೋಫಿ ಗೆದ್ದ ಸಂದರ್ಭದಲ್ಲಿ ಲಿಯಾಂಡರ್ ಪೇಸ್ (ಎಡ) ಮತ್ತು ಮಹೇಶ್ ಭೂಪತಿ– ಟ್ವಿಟರ್ ಚಿತ್ರ

'ಯುವಕರಾಗಿದ್ದ ನಾವು ಭಾರತ ದೇಶ ಹೆಮ್ಮೆ ಪಡುವಂತೆ ಮಾಡುವ ಕನಸು ಕಂಡಿದ್ದೆವು' ಎಂದು ಪೇಸ್ ಬರೆದುಕೊಂಡಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಭೂಪತಿ 'ಹೌದು. ಆಗಳಿಗೆ ವಿಶೇಷವಾದದ್ದು, ಮತ್ತೊಂದು ಅಧ್ಯಾಯ ಬರೆಯುವ ಸಮಯವಿದು ಎಂದು ನಿಮಗನಿಸುವುದಿಲ್ಲವೇ' ಎಂದಿದ್ದರು.

'ಭಾರತ ಎಕ್ಸ್‌ಪ್ರೆಸ್' ಎಂದು ಕರೆಯಲಾಗುತ್ತಿದ್ದ ಈ ಜೋಡಿಯು, 1994ರಿಂದ 2006ರವರೆಗೆ ಜೊತೆಯಾಗಿ ಆಡಿದ್ದರು. ಬಳಿಕ ಬೇರೆಯಾಗಿದ್ದ ಅವರು 2008ರಿಂದ 2011ರವರೆಗೆ ಮತ್ತೆ ಒಂದಾಗಿದ್ದರು. ಅವರಿಬ್ಬರ ನಡುವೆ ತಲೆದೋರಿದ್ದ ವೈಮನಸ್ಸು ಕೂಡ ಸುದ್ದಿ ಮಾಡಿತ್ತು. ಆದರೆ ಅದೆಲ್ಲವನ್ನೂ ಈಗ ಅವರು ಮರೆತಿದ್ದಾರೆ.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ